ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ, ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿರತಕ್ಕ ವಿಚಾರದಲ್ಲಿ ಹೇಳಬೇಕೆಂದರೆ, ಹೆದ್ದಾರಿಗಳಲ್ಲಿ ಟ್ರಾಫಿಕ್ ಪೋಲೀಸ್ ವ್ಯವಸ್ಥೆ ಇದೆ.

ಅಧ್ಯಕ್ಷರು.—ಎಲ್ಲಿದೆ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಅಧ್ಯಕ್ಷರೇ, ಈಗಾಗಲೇ ಇದೆ. ಆದರೆ ಟ್ರಾಫಿಕ್ ಪೋಲೀಸ್‌ನ್ನು ಮತೀಯ ಗಲಭೆಗಳು ಆಗಿರುವುದರಿಂದ ಕೆಲವು ಕಡೆ ಅದನ್ನು ವಿತ್‌ಡ್ರಾ ಮಾಡಿದೆ. ಇದು ಸಾಕಷ್ಟು ಮಟ್ಟಿಗೆ ಇದೆಯೆಂದು ಹೇಳುವಂತಿಲ್ಲ. ಆದರೆ ಈ ವ್ಯವಸ್ಥೆಯನ್ನು ಇಂಟ್ರಡ್ಯೂಸ್ ಮಾಡಿದ್ದೇವೆ ಇದನ್ನು ಪರಿಪಕ್ವವಾಗಿ ಮಾಡಬೇಕು. ಮತ್ತು ಮತೀಯ ಗಲಭೆಗಳ ಸಂಬಂಧವಾಗಿ ಕಳಿಸಿಕೊಟ್ಟ ಪೋಲೀಸ್ ಸಿಬ್ಬಂದಿಯನ್ನು ವಿನಃ ಹಿಂದಕ್ಕೆ ತೆಗೆದುಕೊಂಡಿದ್ದೇವೆ, ಅದನ್ನು ಪುನಃ ತಿಳಿಸುವಂತಹ ಏರ್ಪಾಡನ್ನು ಮಾಡುತ್ತೇವೆ.

ಶ್ರೀ ಕೆ. ಲಕ್ಕಪ್ಪ.—ಟೆಲಿಫೋನ್ ಬಗ್ಗೆ ಪರಿಶೀಲನೆ ಹೇಳಲಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈ ಬಗ್ಗೆ ಪರಿಶೀಲನೆ ಮಾಡಲಾಗುವುದು. We will consider this matter.

(ಮಾನ್ಯ ಸದಸ್ಯರಾದ ಶ್ರೀ ಬಿ. ಎಂ. ಇದಿನಬ್ಬ, ಎಂ. ವಿ. ಗುತ್ತೇದಾರ್ ಅವರುಗಳು ಗೈರುಹಾಜರಿದ್ದರು).

ಶ್ರೀ ಎನ್. ಚಿಕ್ಕೇಗೌಡ.—ಹೆದ್ದಾರಿಗಳಲ್ಲಿ ಪೆಟ್ರೋಲಿಂಗ್ ಇದೆಯೆಂದು ಹೇಳಿದರು......

ಅಧ್ಯಕ್ಷರು.—ನ್ಯಾಶನಲ್ ಹೈವೇಯಲ್ಲಿ ಪೆಟ್ರೋಲಿಂಗೂ ಇಲ್ಲ, ಪೆಟ್ರೋಲೂ ಇಲ್ಲ. ಆದ್ದರಿಂದ......

(ಸಭೆಯಲ್ಲಿ ನಗು)

ಶ್ರೀ ಎನ್. ಚಿಕ್ಕೇಗೌಡ.—ಮಾನ್ಯ ಸದಸ್ಯರಾದ ಶ್ರೀ ಲಕ್ಕಪ್ಪನವರು ಸೂಚಿಸಿದಂತೆ ಎಲ್ಲಿ ಡಕಾಯಿತಿ ಆಗುತ್ತದೆ ಅಲ್ಲಿ ಪೋಲೀಸಿನವರು ಇರುವುದಿಲ್ಲ. ಆ ಏರಿಯಾವನ್ನು ಅವರಿಗೆ ಬಿಟ್ಟುಕೊಟ್ಟು ಪೋಲೀಸರು ಬೇರೆ ಕಡೆಗೆ ಹೋಗಿ ಬಿಡುತ್ತಾರೆ.

(ಮಂತ್ರಿಗಳಿಂದ ಉತ್ತರ ಇಲ್ಲ)

ನಿಯಮ ೬೯ರ ಮೇರೆಗೆ ಅಲ್ಪ ಕಾಲಾವಧಿ ಚರ್ಚೆ

ರಾಜ್ಯದಲ್ಲಿ ಉಂಟಾಗಿರುವ ಮತೀಯ ಗಲಭೆಗಳ ಬಗ್ಗೆ

ಅಧ್ಯಕ್ಷರು.—ಮಾನ್ಯ ಕಾಗೋಡು ತಿಮ್ಮಪ್ಪನವರು ಪ್ರಾರಂಭ ಮಾಡುವುದಕ್ಕೆ ಮುನ್ನ ಇವತ್ತು ಈ ಕೋಮು ಗಲಭೆಗಳ ಬಗ್ಗೆ ಚರ್ಚೆ ಮುಗಿಯಬೇಕು. ೪ ಗಂಟೆಗೆ ಸರ್ಕಾರದಿಂದ ಉತ್ತರವನ್ನು ನಾವು ನಿರೀಕ್ಷೆ ಮಾಡಬಹುದು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು ಇಷ್ಟೆ. ಈ ಸದನದಲ್ಲಿ ಕೋಮುಗಲಭೆ ಮತ್ತು ಬರಗಾಲದ ವಿಚಾರ ಬಿಟ್ಟರೆ ಇದಕ್ಕಿಂತ ಮಹತ್ತರವಾದುದು ಇಲ್ಲ. ಅನೇಕ ಜನ ಸದಸ್ಯರಿಗೆ ಇದರ ಬಗ್ಗೆ ಮಾತನಾಡಬೇಕೆಂದು ಅಪೇಕ್ಷೆ ಇದೆ. ಆದ್ದರಿಂದ ದಯಮಾಡಿ ಇದರ ಬಗ್ಗೆ ಇನ್ನೂ ೪ ಗಂಟೆಗಳು ಅಂದರೆ, ನಾಳೆಯವರೆಗೆ ವಿಸ್ತರಣೆ ಮಾಡಿದರೆ ಇಡೀ ರಾಜ್ಯದಲ್ಲಿರತಕ್ಕಂಥ ಪರಿಸ್ಥಿತಿ ಬಗ್ಗೆ ದೀರ್ಘವಾಗಿ ಚರ್ಚೆ ಮಾಡಿದರೆ ಸರ್ಕಾರದವರು ಸೂಕ್ತವಾದ ಕ್ರಮ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ತಾವು ಅನುಕೂಲ ಮಾಡಿಕೊಟ್ಟರೆ ಒಳ್ಳೆಯದು.

ಅಧ್ಯಕ್ಷರು.—ಮಾನ್ಯ ಸಂಸದೀಯ ಸಚಿವರು ಇದಕ್ಕೆ ಏನು ಹೇಳುತ್ತಾರೆ ?

ಶ್ರೀ ಬಿ. ಎಸ್. ಯಡಿಯೂರಪ್ಪ.—ಸನ್ಮಾನ್ಯ ಅಧ್ಯಕ್ಷರಲ್ಲಿ ನಾನು ವಿನಂತಿ ಮಾಡುತ್ತೇನೆ. ಈ ಲಾ ಅಂಡ್ ಆರ್ಡರ್ ಪರಿಸ್ಥಿತಿಯ ಬಗ್ಗೆ ನಾವು ಎರಡು ದಿವಸ ಚರ್ಚೆ ಮಾಡಬೇಕೆಂದು ಬಿ.ಎ.ಸಿ.ಯಲ್ಲಿ ಚರ್ಚೆ ಮಾಡಿದ್ದು ನಿಜ, ಒಂದು ತೀರ್ಮಾನಕ್ಕೆ ಬಂದಿದ್ದೂ ನಿಜ. ಆದರೆ ೧೨ ಗಂಟೆಯಿಂದ ೧ ಗಂಟೆಯವರೆಗೆ ಬೇರೆ ಪ್ರಮುಖವಾದ ವಿಷಯಗಳು ಚರ್ಚೆಯಾಗುವುದರಿಂದ, ಅನೇಕ ಜನ ಶಾಸಕರು

ತಮ್ಮ ಕ್ಷೇತ್ರದ ಬಗ್ಗೆ ಸಹಜವಾಗಿ, ಅಲ್ಲಿ ನಡೆದಿರುವ ಘಟನೆಗಳ ಬಗ್ಗೆ ಸರ್ಕಾರದ ಗಮನಕ್ಕೆ ತಂದು. ಅದು ಮತ್ತೆ ಆ ರೀತಿ ಮರುಕಳಿಸದಂತೆ ಆಗಬೇಕೆಂದು ಹೇಳತಕ್ಕ ಕಳಕಳಿ ಇರುವುದು ಸ್ವಾಭಾವಿಕ, ಮತ್ತೆ ಈ ಸದನದಲ್ಲಿ ಈ ೫-೬ ದಿವಸಗಳಲ್ಲಿ ಬರುವುದು ಎರಡೇ ಅಂಶಗಳು, ಒಂದು ಬರಗಾಲದ ಪರಿಸ್ಥಿತಿ ಮತ್ತು ರೈತರ ಸ್ಥಿತಿ, ಇದಕ್ಕಿಂತ ಮಹತ್ತರವಾದುದು ಬೇರೆ ಏನೂ ಇಲ್ಲ. ಆದ್ದರಿಂದ ಈ ಚರ್ಚೆಯನ್ನು ನಾಳೆ ಸಾಯಂಕಾಲದವರೆಗೆ ವಿಸ್ತರಣೆ ಮಾಡಿದರೆ, ಎಲ್ಲರೂ ಮಾತನಾಡುವುದಕ್ಕೆ ಅನುಕೂಲವಾಗುತ್ತದೆ. ಸರ್ಕಾರದವರೂ ಕೂಡ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಮಾನ್ಯ ಅಧ್ಯಕ್ಷರು, ಇದರ ಬಗ್ಗೆ ಅನುಕೂಲ ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೇ, ಬಿ.ಎ.ಸಿ.ನಲ್ಲಿ ಆದ ತೀರ್ಮಾನದ ಪ್ರಕಾರ ನಾವು ಒಂದು ದಿವಸ ಈಗಾಗಲೇ ಹಿಂದೆ ಇದ್ದೇವೆ. ಇವತ್ತು ಬೇಕಾದರೆ ಸ್ವಲ್ಪ ಜಾಸ್ತಿ ಹೊತ್ತು ಕುಳಿತುಕೊಳ್ಳೋಣ. ೨ ಗಂಟೆ ಜಾಸ್ತಿ ಕುಳಿತುಕೊಂಡರೂ ಪರವಾಯಿಲ್ಲ. ಇವತ್ತು ಮುಗಿಸಿದರೆ, ನಾಳೆ ಬರಗಾಲದ ಬಗ್ಗೆ ಚರ್ಚೆ ಮಾಡಬಹುದು. ಅನೇಕ ಮಸೂದೆಗಳಿವೆ. ಈ ಮಸೂದೆಗಳಿಗೇ ೩-೪ ದಿವಸಗಳು ಬೇಕಾಗುತ್ತದೆ. ಆದ್ದರಿಂದ ಇವತ್ತು ಎಷ್ಟು ಹೊತ್ತಾದರೂ ಕುಳಿತು, ಈ ವಿಚಾರವನ್ನು ಮುಗಿಸಿದರೆ, ನಾಳೆ ಬರಗಾಲದ ವಿಷಯವನ್ನು ತೆಗೆದುಕೊಂಡರೆ, ಶುಕ್ರವಾರ ಮಸೂದೆಗಳನ್ನು ತೆಗೆದುಕೊಳ್ಳಬಹುದು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸದನ ನವೆಂಬರ್ ೩೦ಕ್ಕೆ ಮುಗಿಯುವ ಬದಲು ಬೇಕಾದರೆ ೪ ದಿವಸ ಸದನ ಮುಂದುವರಿಯಲಿ ರಾಜ್ಯದಲ್ಲಿ ನಾಯಕತ್ವ ಬದಲಾಗಿರತಕ್ಕ ಸಂದರ್ಭದಲ್ಲಿ ಅನೇಕ ವಿಚಾರಗಳು ಚರ್ಚೆಯಾಗಬೇಕಾಗಿವೆ ನಾಲ್ಕಾರು ದಿನಗಳಲ್ಲಿಯೇ ಮುಗಿಸಬೇಕೆಂಬ ಅರ್ಜೆನ್ಸಿ ಏನು ? ದಯಮಾಡಿ ನಾಳೆಯವರೆಗೆ ಚರ್ಚೆ ಮುಂದುವರಿಯುವುದಕ್ಕೆ ಅವಕಾಶ ಕೊಡಿ. ನಾಳೆ ಮುಖ್ಯಮಂತ್ರಿಗಳು ಉತ್ತರ ಕೊಡಲಿ. ಇದಕ್ಕೆ ತಾವು ಅವಕಾಶ ಮಾಡಿಕೊಡಬೇಕು. ದಯಮಾಡಿ ತಾವು ನಮ್ಮ ಸಹಾಯಕ್ಕೆ ಬರಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಚರ್ಚೆ ಯಾವ ಘಟ್ಟ ಮುಟ್ಟುತ್ತದೆ ಎಂಬುದನ್ನು ನೋಡೋಣ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಚರ್ಚೆ ಇವತ್ತು ಮುಗಿಯಲಿ, ನಾಳೆ ಬೆಳಿಗ್ಗೆ ಉತ್ತರ ಕೊಡೋಣ.

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ, ಅಧ್ಯಕ್ಷರೇ ನಿನ್ನೆ ನಾನು ಮಾತನಾಡುತ್ತಿರತಕ್ಕ ಕಾಲದಲ್ಲಿ ಮನುಷ್ಯನ ನಂಬಿಕೆಯನ್ನು ಪ್ರಸ್ತಾಪ ಮಾಡುತ್ತಿದ್ದೆ. ಏಕೆಂದರೆ, ಪ್ರತಿಯೊಬ್ಬ ಮನುಷ್ಯನೂ ನಾಗರೀಕನೂ ತನ್ನ ಧರ್ಮದ ಬಗ್ಗೆ, ತನಗೆ ಇಷ್ಟಬಂದ ದೇವರ ಬಗ್ಗೆ, ತನ್ನ ಭಾಷೆಯ ಬಗ್ಗೆ, ತನ್ನ ಸಂಸ್ಕೃತಿಯ ಬಗ್ಗೆ ತನ್ನದೇ ಆದಂಥ ನಂಬಿಕೆಯನ್ನು ವಿಶ್ವಾಸವನ್ನು ಇಟ್ಟುಕೊಂಡು ಬಂದಿದ್ದಾನೆ. ಇದು ತಲೆತಲಾಂತರದಿಂದ ಬಂದಿದೆ. ಒಬ್ಬರಿಗೆ ರಾಮನ ಬಗ್ಗೆ ನಂಬಿಕೆ ಇದೆ ಒಬ್ಬರಿಗೆ ಏಸುಕ್ರಿಸ್ತನ ಬಗ್ಗೆ ನಂಬಿಕೆ ಇದೆ, ಇನ್ನೊಬ್ಬರಿಗೆ ಮಹಮದ್ ಪೈಗಂಬರ್ ಬಗ್ಗೆ ನಂಬಿಕೆ ಇದೆ, ಮತ್ತೊಬ್ಬರಿಗೆ ಬುದ್ಧನ ಬಗ್ಗೆ ಹೀಗೆ ಹಲವಾರು ವಿಧಗಳಿವೆ. ಇವತ್ತು ಅವನ ಹೃದಯದಲ್ಲಿರತಕ್ಕ ನಂಬಿಕೆಯನ್ನು ತಲತಲಾಂತರದಿಂದ ಬಂದಂತಹ ವಿಶ್ವಾಸವನ್ನು ಕಲಕುತ್ತಾ ಹೋದರೆ, ಇದಕ್ಕೆ ಪ್ರತಿಯಾಗಿ ಆತನು ಸರ್ವತ್ಯಾಗವನ್ನು ಮಾಡುವುದಕ್ಕೂ ಅವರು ಸಿದ್ಧರಾಗಿದ್ದಾರೆ. ತಾವು ನೋಡಿದ್ದೀರಿ, ಇವತ್ತು ವ್ಯವಸ್ಥೆಯಲ್ಲಿ ಮನುಷ್ಯ ಎಲ್ಲಾ ತ್ಯಾಗಕ್ಕೂ ಪ್ರಾಣದ ತ್ಯಾಗಕ್ಕೂ ಸಿದ್ಧನಾಗುತ್ತಾನೆ. ತಾನು ನಂಬಿದ ಧರ್ಮವನ್ನು ಬಿಡಬೇಕು ಎಂಬ ಪ್ರಶ್ನೆ ಬಂದಾಗ, ಅದಕ್ಕೆ ಬಾಧಕವಾಗದಿರಲಿ ಎಂದು ಹೇಳುವಂತಾದ್ದನ್ನು ಇತಿಹಾಸದಿಂದ ನೋಡಿದ್ದೇವೆ. ಆದ್ದರಿಂದ ನಾನು ಹೇಳುತ್ತೇನೆ. ಇವತ್ತು ಏಕೆ ಮತೀಯ ಗಲಭೆ ನಡೆಯಿತು ಎಂದರೆ, ತನ್ನ ಧರ್ಮಕ್ಕೆ ಕಿಂಚಿತ್ ತೊಂದರೆಯಾಗಿದೆ, ಬಾಧಕವಾಗುತ್ತದೆ ಎಂಬ ಭಾವನೆ ಹುಟ್ಟಿದಾಗ, ಪರಸ್ಪರ ದ್ವೇಷ ಉಂಟಾಗುತ್ತದೆ ಈ ದ್ವೇಷದಿಂದ ಇವತ್ತು ಕಲಹ ಉಂಟಾಗುತ್ತದೆ, ಕಲಹದಿಂದ ಬೀದಿ ಬೀದಿಯಲ್ಲಿ ಊರು ಊರುಗಳಲ್ಲಿ ವೈಮನಸ್ಸು ಬೆಳೆದು, ಪರಸ್ಪರ ವಿರೋಧ ಮಾಡತಕ್ಕಂಥ ಪರಸ್ಪರ ದ್ವೇಷವನ್ನು ಮಾಡತಕ್ಕಂಥ ಪರಿಸ್ಥಿತಿ ಉಂಟಾಗಿದೆ. ಇದನ್ನು ಶಮನಗೊಳಿಸಬೇಕು ಇದಕ್ಕೆ ಶಾಂತಿಯನ್ನು ತರಬೇಕು. ಪರಸ್ಪರ ಒಂದಾಗಿ ಬದುಕಬೇಕು, ಜೀವನ ನಡೆಸಬೇಕು ಎನ್ನುವ ಸಂಕಲ್ಪವನ್ನು ದೀಕ್ಷೆಯನ್ನು ಈ ದೇಶಕ್ಕೆ ಕೊಟ್ಟಂಥ ಮಹಾತ್ಮರು ಇದ್ದಾರೆ. ಇದನ್ನು ನಾವು ಇವೊತ್ತು ನೆನೆಸಿಕೊಳ್ಳಬೇಕಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಮತ್ತೆ ಇತ್ತೀಚೆಗೆ ಶ್ರೀಮಾನ್ ಆದ್ವಾನಿಯಂತಹವರು ರಾಮಜನ್ಮಭೂಮಿಗೆ ಅಥವಾ ಬಾಬರಿ ಮಸೀದಿಗೆ ಪ್ರವೇಶ

ಮಾಡತಕ್ಕಂಥ ವಿಷಯ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಶ್ರೀಮಾನ್ ಯಡಿಯೂರಪ್ಪನವರು ಹೇಳುತ್ತಿದ್ದರು, ಮಸೀದಿಯನ್ನು ಒಡೆಯುವುದಕ್ಕೆ ಹೇಳಿಲ್ಲ ಎಂದು ಆದರೆ ಇವತ್ತು ಪತ್ರಿಕೆಯಲ್ಲಿ ಏನು ಬಂದಿದೆ. Addressing a Ramayan Mela ground on the banks of the Saryu on his first visit to Ayodhya Mr. Advani, said the existing structure Babri Masjid could be shifted in its entirety to a Place 5 k.m. away if this could pacify the aggrieved group' ಇದರ ಅರ್ಥ ಏನು ? ಈ ಜಗತ್ತಿನಲ್ಲಿ ಮತ್ತೊಬ್ಬ ಆಂಜನೇಯ ಸೃಷ್ಟಿಯಾಗಿಲ್ಲ. ಆ ಕಾಲದಲ್ಲಿ ಆಂಜನೇಯ ಇದ್ದ ಇಡೀ ಸಂಜೀವಿನಿ ಪರ್ವತವನ್ನೇ ತನ್ನ ಹತ್ತಿದಿಂದ ಎತ್ತಿ ಲಂಕೆಗೆ ತೆಗೆದುಕೊಂಡು ಹೋದ. ನಿಮ್ಮಲ್ಲಿ ಅಂತಹ ಅಸ್ತ್ರ ಇದೆಯೇ, ಅಂತಹವರು ಹುಟ್ಟಿ ಆಗಿದ್ದಾರೆಯೇ ಹೇಳಿ. ಅದರ ಅರ್ಥ ಏನು? ನಿಮ್ಮ ಅರ್ಥಗರ್ಭಿತವಾದ ಮಾತಿನಿಂದ ಜನರನ್ನು ರಂಜಿಸಬಹುದು. ಆದರೆ ತಿಳಿದುಕೊಳ್ಳಿ ಇದರಿಂದ ನಿಮಗೆ ರಾಜಕೀಯ ಲಾಭ ಪಡೆಯಬೇಕೆಂಬ ಅಪೇಕ್ಷೆ ಇದ್ದರೆ ನಮಗೆ ಇಲ್ಲ. ನಮ್ಮ ಹೃದಯ ಬತ್ತಿಹೋಗಿದೆ ಎಂದು ತಪ್ಪು ಕಲ್ಪನೆ ಇಟ್ಟುಕೊಳ್ಳಬೇಡಿ. ಏಕೆಂದರೆ ಮುಂದುವರೆದು ನಿಮ್ಮ ನಾಯಕರು ಏನು ಹೇಳಿದ್ದಾರೆ, ಏತಕ್ಕೆಂದರೆ, ಇದರ ಹಿಂದೆ ಅಧಿಕಾರದ ಗದ್ದುಗೆಗೆ ಏರಬೇಕೆಂಬ ಆಸೆ ನಿಮಗೆ ಇಲ್ಲ ಎಂದು ಹೇಳುವುದಾದರೆ, ನಿಮ್ಮ ನಾಯಕನ ಮಾತಿನಿಂದ ಇದೆ ಎನ್ನುವುದು ಸಾಬೀತಾಗುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾವು ಸನ್ಯಾಸಿಗಳು, ಅಧಿಕಾರಕ್ಕೆ ಬರುವುದಿಲ್ಲ ಎಂದು ಹೇಳಿದ್ದೇವೆಯೇ ?

ಶ್ರೀ ಕಾಗೋಡು ತಿಮ್ಮಪ್ಪ.—ಏನು ಹೇಳಿದ್ದಾರೆ ಎಂದರೆ ''ಜಹಾ ರಾಮ್ ಜನಮ್ ಭೂಮಿ ಹೈ ಉದರ್ ರಾಮ್ ಮಂದಿರ್ ಬನಾಯೇಂಗೆ'' We will construct the temple where Rama was born. ಮುಂದೆ ಹೋಗಿ ಏನು ಹೇಳಿದ್ದಾರೆಂದರೆ.

''ಇಸ್ ದೇಶ್‌ಮೆ ರಾಮಮಂದಿರ್ ಆಧಾರ್ ಕರ್‌ನ್‌ವಾಲಿಕಾ ಸರಕಾರ್ ಹಿ ಚಲೇಗಾ

ನಿರಾಧಾರ್ ಕರ್‌ನೆವಾಲೆಕಾ ನಹೀ ಚಲೆಗಾ''

(Only the Government which can function will be one which respects Rama)

What is your thinking then ?

ಮುಂದೆ ಹೋಗಿ ಏನು ಹೇಳುತ್ತಾರೆ ಅಂದರೆ, The Leaders of Various Hindu Organisations present here went to the extent of declaring that Mr. Advani was destined to be the coun ry's next Prime Minister.

ಶ್ರೀ ಎ. ರುಕ್ಮಯ್ಯ ಪೂಜಾರಿ.—ಏತಕ್ಕೆ ಆಗಬಾರದು ?

ಶ್ರೀ ಕಾಗೋಡು ತಿಮ್ಮಪ್ಪ.—ಆಗಿ, ಆದರೆ ರಾಮನ ಹೆಸರನ್ನು ದುರುಪಯೋಗಪಡಿಸಿಕೊಂಡು ಆಗುವುದಕ್ಕೆ ಹೋಗುತ್ತಿದ್ದೀರಲ್ಲ ಅದು ಸರಿಯಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ, ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ ಏನೆಂದರೆ ಮಾನ್ಯ ಕಾಗೋಡು ತಿಮ್ಮಪ್ಪನವರು ಮಾತನಾಡುತ್ತಾ ಏನು ವಿಚಾರಗಳನ್ನು ಹೇಳುತ್ತಿದ್ದಾರೆ ಅದನ್ನು ನೋಡಿದರೆ ಅವರೇನು ಯಡಿಯೂರಪ್ಪನವರಿಗೆ ಉತ್ತರ ಕೊಡುತ್ತಿದ್ದಾರೋ ಏನೋ ನನಗೆ ಅರ್ಥ ಆಗುತ್ತಿಲ್ಲ. ಅದೇನು ಇರಲಿ ಈಗ ನಾವು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ತೀರ್ಮಾನ ಮಾಡಿದಂತೆ, ಒಂದೆರಡು ದಿನಗಳ ಕಾಲ ರಾಜ್ಯದಲ್ಲಿ ಕೋಮು ಗಲಭೆಗಳು ಏನು ನಡೆದಿವೆ, ಮತ್ತೆ ಅವು ಮರುಕಳಿಸದಹಾಗೆ ನಾವು ಏನು ಕ್ರಮ ತೆಗೆದುಕೊಳ್ಳಬೇಕೆಂಬ ಬಗ್ಗೆ ಚರ್ಚೆ ಮಾಡಬೇಕೆಂಬ ದೃಷ್ಟಿಯಿಂದ ನಿನ್ನೆಯಿಂದ ಚರ್ಚೆ ಪ್ರಾರಂಭವಾಗಿದೆ. ಈ ಚರ್ಚೆ ಪ್ರಾರಂಭವಾದಮೇಲೆ ನಾವು ಏನು ಅಭಿಪ್ರಾಯಗಳನ್ನು ಆ ಕಡೆ ಸದಸ್ಯರು ಈ ಕಡೆ ಸದಸ್ಯರು ಕೊಡುತ್ತೇವೆ ಅದನ್ನು ಸರಕಾರ ಗಮನಕ್ಕೆ ತೆಗೆದುಕೊಂಡು ಏನಾದರೂ ಕ್ರಮ ತೆಗೆದುಕೊಳ್ಳಬೇಕಲ್ಲ. ಯಾರು ತೆಗೆದುಕೊಳ್ಳಬೇಕು ? ಯಾರು ಮಾಡಬೇಕು ಇದನ್ನು ? ಇದು ಬಹಳ ಮಹತ್ವದ ಪ್ರಶ್ನೆ ಇದೆ. ಇಡೀ ರಾಜ್ಯ ಇವತ್ತು ಏನು ಅಲ್ಲೋಲಕಲ್ಲೋಲವಾಗಿದೆ ಇದರ ಬಗ್ಗೆ ನಿಜವಾಗಿಯೂ ಮಾನ್ಯ ಮುಖ್ಯಮಂತ್ರಿಗಳಿಗೆ ಕಳಕಳಿ ಇದ್ದರೆ ಅವರು ಇಲ್ಲಿ ಕುಳಿತುಕೊಂಡು ಕೇಳಬೇಕು. ಅವರು ವಿಧಾನ ಪರಿಷತ್ತಿನಲ್ಲಿ ಹೊಸ ಮಂತ್ರಿಗಳನ್ನು ಪರಿಚಯ ಮಾಡಿ ಕೊಡುವುದಕ್ಕೆ ಹೋಗಿದ್ದಾರೆ. ಆದರೆ ಗೃಹ ಮಂತ್ರಿಗಳಾದರೂ ಈ ಸದನದಲ್ಲಿ ಇರಬೇಕಾಗಿತ್ತು.

ಅವರೂ ಇಲ್ಲ. ನಮ್ಮದು ಅರಣ್ಯ ರೋದನ ಅಥವಾ ತಮಾಶೆ ಆಗಬಹುದು. ಇಲ್ಲಿ ಕುಳಿತುಕೊಂಡು ನೋಡುವವರು, ಪತ್ರಿಕೆಗಳವರು ನಮ್ಮ ಬಗ್ಗೆ ಏನು ಅಂದುಕೊಳ್ಳುತ್ತಾರೆ ? ಇದು ಒಂದಾಯಿತು. ಇನ್ನು ನಮ್ಮ ಡಿ.ಜಿ.ಪಿ. ರವರು ಕಾನೂನನ್ನು ಕಂಟ್ರೋಲ್ ಮಾಡುವುದಕ್ಕೆ ಹೋಗಿದ್ದಾರೋ ಏನೋ ಗೊತ್ತಿಲ್ಲ. ಆದರೆ ಇಲ್ಲಿ ಹೋಮ್ ಸೆಕ್ರೆಟರಿಯವರೂ ಇಲ್ಲ. ಅಂದರೆ ಅಧಿಕಾರಿಗಳು ನಿಮ್ಮ ಸರಕಾರಕ್ಕೆ ಎಷ್ಟು ಮಹತ್ವ ಕೊಟ್ಟಿದ್ದಾರೆ ಎಂಬುದನ್ನು ಆಡಳಿತ ಪಕ್ಷದ ಸದಸ್ಯರು ಯೋಚನೆ ಮಾಡಬೇಕು. ನಮ್ಮ ಜವಾಬ್ದಾರಿ ಏನಿದೆ ಅದನ್ನು ನಾವು ಮಾಡಿಬಿಟ್ಟು ಹೋಗುತ್ತೇವೆ. ಆದರೆ ಮಾನ್ಯ ಮುಖ್ಯ ಮಂತ್ರಿಗಳು ಇಂತಹ ಬಹಳ ಪ್ರಮುಖವಾದ ವಿಷಯವನ್ನು ಚರ್ಚೆಗೆ ತೆಗೆದುಕೊಂಡಾಗ ಅವರು ಇಲ್ಲಿ ಇರಬೇಕು. ಅವರು ಇಲ್ಲದೇ ಹೋದರೆ ಸಂಬಂಧಪಟ್ಟ ಮಂತ್ರಿಗಳಾದರೂ ಇರಬೇಕು. ಹಾಗೂ ಅಧಿಕಾರಿಗಳಾದರೂ ಇರಬೇಕು.

ಅಧ್ಯಕ್ಷರು.—ಇದು ಪಾಯಿಂಟ್ ಆಫ್ ಆರ್ಡರ್ ಚೌಕಟ್ಟಿಗೆ ಬರುವುದಿಲ್ಲ. ಆದರೆ ಅಂದ ಮಾತ್ರಕ್ಕೆ ಈ ವಿಷಯದ ಮಹತ್ವವೇನು ಕಳೆದುಕೊಳ್ಳುವುದಿಲ್ಲ. ಇದು ಬಹಳ ಗಂಭೀರವಾದ ಚರ್ಚೆ ಮಹತ್ವವಾದ ಚರ್ಚೆ ಆದುದರಿಂದಲೇ ಇದಕ್ಕೆ ಆದ್ಯತೆ ಕೊಟ್ಟು ನಾವು ಅಧಿವೇಶನ ಪ್ರಾರಂಭವಾದಾಗ ಇದರ ಬಗ್ಗೆ ಚರ್ಚೆ ಮಾಡಬೇಕೆಂದು ಹೇಳಿದ್ದು. ಮಾನ್ಯ ಮುಖ್ಯಮಂತ್ರಿಗಳಾಗಲೀ, ಗೃಹಮಂತ್ರಿಗಳಾಗಲೀ, ಇಬ್ಬರೂ ಇದ್ದರೆ ಸಂತೋಷ. ಇಲ್ಲದಿದ್ದರೆ ಯಾರಾದರೂ ಒಬ್ಬರು ಇರಬೇಕು. ಈ ಸೂಚನೆಯನ್ನು ಸರ್ಕಾರಕ್ಕೆ ಕೊಡಬಯಸುತ್ತೇನೆ. ಈಗ ಒಂದು ಘಂಟೆಯಾಗಿದೆ. ಆದ್ದರಿಂದ ಈಗ ಸದನ ಮುಂದುವರೆದು ಮತ್ತೆ ಎರಡು ಘಂಟೆಗೆ ಪುನ: ಸೇರುತ್ತದೆ.

(ಸದನವು ಮಧ್ಯಾಹ್ನ ೧ ಘಂಟೆಗೆ ಭೋಜನ ವಿರಾಮಕ್ಕೆ ಮುಕ್ತಾಯವಾಗಿ ಪುನ: ಮಧ್ಯಾಹ್ನ ೨ ಘಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು).

(ಸದನವು ಪುನಃ ೨ ಗಂಟೆ ೧೦ ನಿಮಿಷಗಳಿಗೆ ಸಮಾವೇಶಗೊಂಡಿತು)

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀ ಕಾಗೋಡುತಿಮ್ಮಪ್ಪ.—ಮಾನ್ಯ ಅಧ್ಯಕ್ಷರೆ, ಅಯೋಧ್ಯೆಯಲ್ಲಿ ರಾಮ ಮಂದಿರ ಕಟ್ಟುವ ಮೂಲಕ ಅಧಿಕಾರಕ್ಕೆ ಬರಲು ರಾಮನ ಹೆಸರನ್ನು ಕೆಲವರು ದುರುಪಯೋಗ ಪಡಿಸಿಕೊಳ್ಳುತ್ತಿರುವುದನ್ನು ನಾವು ನೋಡುತ್ತಿದ್ದೇವೆ ಭಾರತ ವಿಭಾಗವಾದಾಗ ಯಾವ ಪರಿಸ್ಥಿತಿ ರಾಷ್ಟ್ರದಲ್ಲಿ ಉಂಟಾಗಿತ್ತು ? ಆದರೆ ಆ ಪರಿಸ್ಥಿತಿಯನ್ನು ಮತ್ತೆ ಹತೋಟಿಗೆ ತಂದು ಈ ದೇಶದಲ್ಲಿ ಮತ್ತೆ ಶಾಂತಿ ಸ್ಥಾಪನೆ ಮಾಡಬೇಕಾದರೆ ಅಂದು ಜವಹರಲಾಲ್ ನೆಹರೂರವರಂತಹ ದೊಡ್ಡ ವ್ಯಕ್ತಿತ್ವ ಇತ್ತು. ಮತ್ತೆ ಈಗ ಇದು ಪುನರಾರಂಭವಾಯಿತು. ಶಕ್ತಿಗಳು ರಾಮನ ಹೆಸರಿನಲ್ಲಿ ಅಧಿಕಾರಕ್ಕೆ ಬರುವುದಕ್ಕೆ ಪ್ರಯತ್ನ ಪಡುವುದಾದರೆ ಪರ್ಯಾಯವಾಗಿ ಬೇರೆ ಬೇರೆ ರಾಜಕೀಯ ಪಕ್ಷಗಳು ತಮ್ಮದೇ ಆದ ಧೋರಣೆಗಳನ್ನು ತಮ್ಮದೇ ಆದ ಕಾರ್ಯಕ್ರಮಗಳನ್ನು ರೂಪಿಸಿಕೊಂಡರೆ ಘರ್ಷಣೆ ಬರುವುದು ಸ್ವಾಭಾವಿಕ. ಅದಕ್ಕೆ ಅವಕಾಶ ಕೊಡಬಾರದು. ಇಂತಹ ಘಟನೆಗಳು ನಡೆಯುವುದಕ್ಕೆ ಅವಕಾಶ ಕೊಡಬಾರದು. ಅಧಿಕಾರಕ್ಕೆ ಬರುವುದಕ್ಕೆ ಸರ್ವ ಸ್ವಾತಂತ್ರ್ಯವಿದೆ. ಯಾರೂ ಬೇಕಾದರೂ ಅಧಿಕಾರಕ್ಕೆ ಬರಬಹುದು. ನಮ್ಮ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ತತ್ವ ಸಿದ್ಧಾಂತಗಳನ್ನು ಇಟ್ಟುಕೊಂಡು ಕೆಲಸ ಮಾಡಿದರೆ ಜನರು ಯಾರು ಬೇಕೋ ಅವರನ್ನು ಆರಿಸಿ ಕಳುಹಿಸುತ್ತಾರೆ. ಜನರಿಗೆ ಯಾರು ಬೇಕೋ ಅವರನ್ನು ಆರಿಸಿಕೊಳ್ಳುವುದಕ್ಕೆ ಸ್ವಾತಂತ್ರ್ಯವಿದೆ. ನಿಮ್ಮ ಕಾರ್ಯಕ್ರಮಗಳ ಆಧಾರದ ಮೇಲೆ ತತ್ವಸಿದ್ಧಾಂತಗಳ ಮೇಲೆ ಅಧಿಕಾರಕ್ಕೆ ಬರುವುದಾದರೆ ಯಾರೂ ಬೇಡ ಅನ್ನುವುದಿಲ್ಲ. ನಮ್ಮ ಭಾರತೀಯ ಜನಾಂಗದಲ್ಲಿ ಅಷ್ಟೇ ಅಲ್ಲ ವಿಶ್ವದಲ್ಲಿ ಹಲವಾರು ವರ್ಗದ ಜನರಿಗೆ ಹಲವಾರು ಜನರಿಗೆ ಯಾವುದೋ ಒಂದು ಭಾವನೆಗೆ ನಂಬಿಕೆಗೆ ಸೆಳೆದು ಹೋಗಿದ್ದಾರೆ. ಅದನ್ನೇ ಬಂಡವಾಳವನ್ನಾಗಿ ಮಾಡಿಕೊಂಡು ನಾವು ಅಧಿಕಾರಕ್ಕೆ ಬರಬೇಕೆಂದರೆ ನಮ್ಮ ರಾಷ್ಟ್ರ ಛಿದ್ರ ಛಿದ್ರ ಆದೀತು ನಮ್ಮ ಐಕ್ಯತೆ ಒಡೆದು ಹೋದೀತು, ನಮ್ಮ ಭಾವೈಕ್ಯತೆ ಕೆಟ್ಟು ಹೋದೀತು, ಅದಕ್ಕೆ ಅವಕಾಶ ಕೊಡದ ರೀತಿಯಲ್ಲಿ ನಡೆದುಕೊಳ್ಳಬೇಕು. ಇವತ್ತು ರಾಮಾಯಣ ಮತ್ತು ಮಹಾಭಾರತ ಗ್ರಂಥಗಳು ಜೀವಂತವಾಗಿ ಉಳಿದಿವೆ. ರಾಮಾಯಣವನ್ನು ಓದಿದರೆ ಭಗವದ್ಗೀತೆಯನ್ನು ಓದಿದರೆ ತುಳಸಿ ರಾಮಾಯಣವನ್ನು ಓದಿದರೆ ಹಿಂದೂ ಎನ್ನತಕ್ಕ ಒಂದೇ ಒಂದು ಪದವನ್ನು ಎಲ್ಲೂ ಬಳಸಿಲ್ಲ. ವಾಲ್ಮೀಕಿ ರಾಮಾಯಣ ಇದೆ. ರಾಮಾಯಣವನ್ನು ಒಬ್ಬ ಬೇಡ ಬರೆದಿದ್ದಾನೆ. ಆತ ತಪಸ್ಸು ಮಾಡಿ ಜ್ಞಾನವನ್ನು ಪಡೆದು ಬರೆದಿದ್ದಾನೆ. ಇತ್ತೀಚಿಗೆ ಉತ್ತರಭಾರತದ ವ್ಯಕ್ತಿ ತುಳಸಿ ರಾಮಾಯಣ ಬರೆದ. ಆ ಕ್ಷೇತ್ರಕ್ಕೆ ಸೇರಿದ ವ್ಯಕ್ತಿ, ರಾಮ ಹುಟ್ಟಿದ ಜಾಗವನ್ನು ಉಲ್ಲೇಖ ಮಾಡಿಲ್ಲ. ರಾಮ ಅಥವಾ ರಾಮಾಯಣ ಒಂದು ಧರ್ಮಕ್ಕೆ ಒಂದು ವರ್ಗಕ್ಕೆ ಸೀಮಿತವಾಗಿದೆಯೆಂದು ಎಲ್ಲಿಯೂ ಹೇಳಿಲ್ಲ. ಅದು

ಜಗತ್ತಿಗೆ ಬಿಟ್ಟಂತಹ ವಸ್ತು. ಮಾನವ ಕುಲಕ್ಕೆ ಬಿಟ್ಟ ವಸ್ತು. ಆದ್ದರಿಂದ ಶ್ರೀರಾಮನ ಪಾತ್ರದ ವ್ಯಕ್ತಿ ಹಿಂದೆಯೂ ಉಳಿದಿದ್ದಾನೆ. ಈಗಲೂ ಉಳಿದಿದ್ದಾನೆ. ಮುಂದೆಯೂ ಉಳಿಯುತ್ತಾನೆ. ಏಕೆಂದರೆ, ಆತನ ವ್ಯಕ್ತಿತ್ವ ಪರಿಪೂರ್ಣ ಹಾಗೂ ಕಳಂಕರಹಿತ ವ್ಯಕ್ತಿತ್ವ. ಅಂತಹ ವ್ಯಕ್ತಿತ್ವ ಇದ್ದುದರಿಂದ ಇನ್ನೂ ಶ್ರೀರಾಮಚಂದ್ರ ಉಳಿದಿದ್ದಾನೆ. ಅವನ ಆದರ್ಶ ಮತ್ತು ವ್ಯಕ್ತಿತ್ವವನ್ನು ನಮ್ಮ ಸಂಸ್ಕೃತಿಗೋಸ್ಕರ ನಾವು ಇಟ್ಟುಕೊಳ್ಳಬೇಕು. ಆದರೆ ಅದು ನಮ್ಮ ರಾಜಕಾರಣಕ್ಕಾಗಿ ಅಲ್ಲ ಏಕೆಂದರೆ, ಶ್ರೀರಾಮಚಂದ್ರ ತಂದೆಗೆ ಕೊಟ್ಟ ಭಾಷೆಯನ್ನು ಉಳಿಸಿಕೊಳ್ಳುವುದಕ್ಕೋಸ್ಕರ ಅವನು ಅಧಿಕಾರವನ್ನು ತ್ಯಾಗ ಮಾಡಿದ್ದು ಕಾಡಿಗೆ ಹೋದ, ರಾಮ ರಾವಣನನ್ನು ಶತೃವಾಗಿ ನೋಡಲಿಲ್ಲ. ಆಂಜನೇಯನನ್ನು ತನ್ನ ರಾಯಭಾರಿಯಾಗಿ ಕಳುಹಿಸುತ್ತಾನೆ. ಅವರಿಗೆ ರಾಜಕೀಯದ ಎಲ್ಲ ಮೌಲ್ಯಗಳು ಗೊತ್ತಿತ್ತು. ಅದನ್ನು ಆಚರಿಸಿದ್ದಾನೆ. ಒಬ್ಬ ಪ್ರಜೆಯ ನಿಂದನೆಗೆ ತನ್ನ ಹೆಂಡತಿಯಾದ ಸೀತೆಯನ್ನು ಕಾಡಿಗೆ ಕಳುಹಿಸುತ್ತಾನೆ ರಾಮ–ರಾವಣರ ಯುದ್ಧವಾದ ಮೇಲೆ ಸೀತೆಯನ್ನು ಸ್ವೀಕಾರ ಮಾಡಬೇಕಾದರೆ ಸೀತೆಯನ್ನು ಅಗ್ನಿಪರೀಕ್ಷೆಗೆ ಒಳಪಡಿಸುತ್ತಾನೆ. ಅಂತಹ ಒಬ್ಬ ರಾಮ ನಮ್ಮ ಸಂಸ್ಕೃತಿಯ ಒಂದು ಭಾಗವಾಗಿದ್ದಾನೆ. ಅವನು ಅಧಿಕಾರ ತ್ಯಾಗ ಮಾಡಿದ್ದಾನೆ. ಏತಕ್ಕೆ ? ಮೌಲ್ಯಗಳನ್ನು ಎತ್ತಿ ಹಿಡಿಯಲ್ಲಿಕ್ಕೆ ತಂದೆಗೆ ಕೊಟ್ಟ ಭಾಷೆಯನ್ನು ಉಳಿಸಿಕೊಳ್ಳುವುದಕ್ಕೆ, ಇವೊತ್ತು ಆತ ಅಧಿಕಾರ ತ್ಯಾಗ ಮಾಡಿ ತ್ಯಾಗಮೂರ್ತಿಯಾಗಿ ನಮ್ಮ ಮುಂದೆ ಉಳಿದಿದ್ದರೆ ಇವತ್ತು ರಾಮನನ್ನು ಬಳಸಿಕೊಂಡು ಅಧಿಕಾರಗ್ರಹಣ ಮಾಡಲು ಹೊರಟಿರತಕ್ಕಂಥ ಏನು ಶಕ್ತಿಗಳು ಇವೆಯಲ್ಲ ಈ ಶಕ್ತಿಗಳನ್ನು ನಾವು ಯಾವ ಭಾಷೆಯಿಂದ ಕರೆಯಬೇಕು ? ಇದು ನಿಜವಾಗಿ ರಾಮನಿಗೆ ಕೊಡ ತಕ್ಕಂಥ ಗೌರವವೋ ಅಧ್ಯಕ್ಷರೇ, ಮಹಾತ್ಮಾಗಾಂಧಿಯವರು ಈ ನೆಲದಿಂದ ಹುಟ್ಟಿದ್ದಾರೆ, ಈ ನೆಲ ದಲ್ಲೇ ಸತ್ತಿದ್ದಾರೆ. ಅವರು ಕೊಟ್ಟಂಥ ಕಾಣಿಕೆ ಕೇವಲ ಈ ರಾಷ್ಟ್ರಕ್ಕೆ ಅಷ್ಟೇ ಅಲ್ಲ, ಇಡೀ ವಿಶ್ವಕ್ಕೇ ಕೊಟ್ಟಿದ್ದಾರೆ, ಆದರೆ ಏನು ಆಯಿತು ? ಮಹಾತ್ಮಾಗಾಂಧೀಜಿಯವರಿಗೆ ರಾಮನಲ್ಲಿ ಇಟ್ಟಂಥ ವಿಶ್ವಾಸವನ್ನು ಬೇರೆ ಯಾರಲ್ಲೂ ಇಟ್ಟಿರಲಿಲ್ಲ. ಗುಂಡೇಟಿನಿಂದ ಸಾಯುವಾಗಲೂ 'ಹೇ ರಾಮ್' ಎಂದು ಹೇಳಿ ಸತ್ತರು. ಅವರನ್ನು ಗುಂಡೇಟಿನಿಂದ ಹೊಡೆದರು. ಯಾವ ಕಾರಣಕ್ಕಾಗಿ ? ಇದೇ ಕಾರಣದಿಂದ ಅಲ್ಲವೇ ? ಮತೀಯ ಗಲಭೆಗಳ ಕಾರಣದಿಂದಾಗಿ ಅವರು ಆಹುತಿಯಾದರು. ಅವರು ಸಾಯುವಾಗಲೂ ಕೂಡ 'ಹೇ ರಾಮ್' ಎಂದರು. ಮತ್ತು ಅವರ ಸಮಾಧಿಯ ಮೇಲೆ ಹೇರಾಮ್' ಎಂದು ಬರೆದಿಲ್ಲವೋ ? ಒಬ್ಬ ರಾಮನನ್ನು ಆಧಾರವಾಗಿಟ್ಟುಕೊಂಡು, ಅವರು ಪ್ರತಿಯೊಂದು ಪ್ರಾರ್ಥನಾ ಸಭೆಯಲ್ಲೂ ರಾಮಭಜನೆ ಸ್ತುತಿಸಿ ಕೊನೆಗೂ ಈ ನೆಲದಲ್ಲಿ ಗುಂಡಿಗೆ ಸಿಕ್ಕಿ ಆಹುತಿ ಯಾದರಲ್ಲ, ಇದನ್ನು ನೋಡಿಯಾದರೂ ಪಾಠ ಕಲಿಯಬಾರದಾ ? ಇವತ್ತು ನಾವು ತಿಳಿದು ಕೊಂಡಿದ್ದೇವೆ. ಗಾಂಧೀಜಿಯವರ ಕೊಲೆಯಿಂದ ಯಾವ್ಯಾವ ಶಕ್ತಿಗಳು ಭೂಗತವಾಗಿದ್ದವೋ ಈಗ ಅವುಗಳು ಮತ್ತೆ ತಲೆಯೆತ್ತುವುದಕ್ಕೆ ಪ್ರಾರಂಭವಾಗಿವೆ. ಅವರು ತಿಳಿದುಕೊಂಡಿರಬಹುದು, ಏನೆಂದರೆ ಈ ಭಾರತದ ನೆಲದಲ್ಲಿಯೇ ಮತ್ತೆ ನಮಗೆ ಶಕ್ತಿ ಸಿಗುತ್ತದೆ ಅಂತ ಅದು ಸಿಗುವುದು ಬೇಡ. ನೀವು ಕಲಿತುಕೊಳ್ಳಿರಿ. ಮಹಾತ್ಮಾಗಾಂಧಿಯವರ ಕೊಲೆಯಿಂದ ಯಾವ ಶಕ್ತಿಗಳು ಭೂಗತವಾಗಿದ್ದವು, ಈಗ ಮತ್ತೆ ಆ ಮಂತ್ರದಿಂದ ಮುಂದೆ ಬರಬೇಕೆಂದಿದ್ದರೆ ಅದು ಭ್ರಮೆ. ಆದ್ದರಿಂದ ಇವತ್ತು ರಾಜಕಾರಣಕ್ಕೆ ಶ್ರೀರಾಮ ಒಂದು ವಸ್ತು ಆಗಬಾರದು. ಅವನನ್ನು ನಮ್ಮ ಸಂಸ್ಕೃತಿಯ ಒಂದು ಅವಿಭಾಜ್ಯ ಅಂಗವಾಗಿ ಹಾಗೆಯೇ ಇಟ್ಟುಕೊಳ್ಳೋಣ. ಅದು ಎಲ್ಲರಿಗೂ ಸೇರಿರತಕ್ಕದ್ದು. ಆದ್ದರಿಂದ ಈ ಅಂಶವನ್ನು ಮೂಲವಾಗಿ ನಾವು ಇಟ್ಟುಕೊಂಡಿದ್ದರೆ ಇವತ್ತು ನಮ್ಮಲ್ಲಿ ಶ್ರೀರಾಮನ ಯಾತ್ರೆ ಮಾಡುವುದು. ಅಥವಾ ಇನ್ನೊಬ್ಬರು ಮೆರವಣಿಗೆ ಮಾಡಬಹುದು. ಅಥವಾ ಮತ್ತೊಬ್ಬರು ಭಜನೆ ಮಾಡಬಹುದು. ಆ ಕಾಲಕ್ಕೆ ಕೇರಿಮೇಲೆ ಹೋಗಬೇಕಾದರೆ, ಇನ್ನೊಬ್ಬರ ಮನೆ ಮೇಲೆ ಕಲ್ಲು ಏಕೆ ಬೀಳುತ್ತವೆ ? ಇನ್ನೊಬ್ಬರ ಅಂಗಡಿಗೆ ಬೆಂಕಿ ಬೀಳುತ್ತದೆ. ಇನ್ನೊಬ್ಬರನ್ನು ಕೊಲೆ ಮಾಡುತ್ತಾರೆ. ಮತ್ತೊಬ್ಬರನ್ನು ಚಾಕುವಿನಿಂದ ತಿವಿದು ಸಾಯಿಸುತ್ತಾರೆ. ಏಕೆ ಸ್ವಾಮಿ ? ಇದನ್ನು ಶ್ರೀರಾಮ ಹೇಳಿದ್ದೇನೆ ? ಅವನೇನಾದರೂ ಅಂಥ ರಾವಣನಾಗಿದ್ದರೆ ಆತ ಶ್ರೀರಾಮನಾಗಿ ಉಳಿಯುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಅದಕ್ಕೇ ನಾನು ಹೇಳಿದ್ದು, ಏನೆಂದರೆ ಶ್ರೀರಾಮಚಂದ್ರ ಒಬ್ಬ ಪರಿಪೂರ್ಣ ನಾದಂಥ ವ್ಯಕ್ತಿ, ನಮ್ಮ ಸಂಸ್ಕೃತಿಯ ಒಂದು ಅವಿಭಾಜ್ಯ ಅಂಗ. ಇದಕ್ಕೆ ಧಕ್ಕೆ ಬಾರದ ರೀತಿಯಲ್ಲಿ ಬಾಧಕ ಆಗದ ರೀತಿಯಲ್ಲಿ, ಕಳಂಕ ಉಂಟಾಗದ ರೀತಿಯಲ್ಲಿ ಅವನ ವ್ಯಕ್ತಿತ್ವವನ್ನು, ಆ ಸಂಸ್ಕೃತಿ ಯನ್ನು ಉಳಿಸಿಕೊಂಡು ಹೋಗಬೇಕಾದದ್ದೇ ಭಾರತೀಯ ನಾಗರೀಕತೆಯ ಲಕ್ಷಣ. ಆದರೆ ಇವತ್ತಿನ ಲಕ್ಷಣ ಅದಲ್ಲ. ಏತಕ್ಕೆ ? ಏಕೆಂದರೆ, ಶ್ರೀರಾಮ ಜನ್ಮವೆತ್ತಿದಂಥ ಈ ನಾಡು, ಬುದ್ಧ ಹುಟ್ಟಿದಂಥ ಈ ಬೀಡು ಏನಾಗಿದೆ ? ಎಷ್ಟೊಂದು ರೀತಿಯಲ್ಲಿ ನಮ್ಮ ಸಮಾಜ ಬೇರೆ ಬೇರೆಯಾಗಿ ಇವತ್ತು ಇದೆ ಎಂಬುದನ್ನು ನಾವು ನೋಡುತ್ತಿದ್ದೇವೆ. ಇದನ್ನು ಒಂದು ಮಾಡಬೇಕಾಗಿದೆ. ಒಂದು ಮಾಡಿ ನಾವು

ಅಣ್ಣತಮ್ಮಂದಿರಂತೆ ಬದುಕು ಮಾಡಬೇಕಾಗಿದೆ. ಇಂಥ ಕಾಲದಲ್ಲಿ ನಾವು ಇವತ್ತು ರಾಮನನ್ನು ಉಪಯೋಗಿಸಿಕೊಂಡು ಸಮಾಜದಲ್ಲಿ ಒಡಕನ್ನು ಉಂಟು ಮಾಡಿ ವಿಷ ಬೀಜವನ್ನು ಬಿತ್ತುತ್ತಿದ್ದೇವೆ. ಅಧ್ಯಕ್ಷರೇ, ತಮಗೆ ಗೊತ್ತಿದೆ, ನಮ್ಮ ರಾಜ್ಯಾಂಗ ಇದೆ. ಅದರಲ್ಲಿ ಒಂದು ಅಂಶ ಕೂಡ ಇದೆ. ಸೈಂಟಿಫಿಕ್ ಟೆಂಪರ್‌ಮೆಂಟ್ ಬೆಳೆಸಬೇಕು ಅಂತ ಇದೆ. ಇವತ್ತು ಎಲ್ಲರೂ ರಾಜ್ಯಾಂಗವನ್ನು ಒಪ್ಪಿದ್ದಾರೆ. ಏಕೆಂದರೆ ಮಾನ್ಯ ಶ್ರೀ ಅಡ್ವಾನಿಯವರು ಮತ್ತು ಶ್ರೀ ವಾಜಪೇಯಿ ಅಂಥವರು ೭೭ರಲ್ಲಿ ಜನತಾಪಾರ್ಟಿ ಅಧಿಕಾರಕ್ಕೆ ಬಂದಾಗ ಪ್ರಮುಖವಾದಂಥ ಅಧಿಕಾರದಲ್ಲಿದ್ದರು. ಆವಾಗ ನಿಮಗೆ ರಾಮನ ಕಲ್ಪನೆ ಬರಲಿಲ್ಲವೇ? ರಾಮನ ದೇವಸ್ಥಾನ ಕಟ್ಟುವುದಕ್ಕೆ ಆವಾಗ ನಿಮಗೆ ಪ್ರಜ್ಞೆ ಬರಲಿಲ್ಲವೆ? ಈ ಆಲೋಚನೆ ನಿಮಗೆ ಬರಲಿಲ್ಲವೆ? ಬೆಳಕು ಹರಿಯಲಿಲ್ವಾ? ಆಗ ಕತ್ತಲೆಯಲ್ಲಿದ್ದೀರಾ?

ಶ್ರೀ ಬಿ. ಎಸ್. ಯಡಿಯೂರಪ್ಪ.—ಸನ್ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಹೇಳುತ್ತಿರುವಂಥಾದ್ದು, ಭಾರತೀಯ ಜನತಾ ಪಾರ್ಟಿ ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರವನ್ನು ಮಸೀದಿಯನ್ನು ಕೆಡವಿ ಕಟ್ಟುವುದಕ್ಕೆ ಹೊರಟಿದೆ ಎನ್ನುವ ಹಿನ್ನಲೆಯಲ್ಲಿ ಮಾತನಾಡುತ್ತಿದ್ದಾರೆ. ಒಂದು ಮಾತನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಸಾವಿರಾರು ಜನ ಸಾಧುಸಂತರು, ವಿಶ್ವಹಿಂದುಪರಿಷತ್ತಿನ ಮುಖಂಡರು ಎಲ್ಲಿ ಶ್ರೀರಾಮ ಮಂದಿರವನ್ನು ಶ್ರೀರಾಮ ಹುಟ್ಟಿದಂಥ ಜನ್ಮ ಸ್ಥಾನದಲ್ಲಿ ನಿರ್ಮಾಣ ಮಾಡಬೇಕು, ಎಂದು ತೀರ್ಮಾನ ಮಾಡಿದ ಮೇಲೆ ಭಾರತೀಯ ಜನತಾ ಪಕ್ಷ ಒಂದು ರಾಜಕೀಯ ಪಕ್ಷವಾಗಿ, ಈ ದೇಶದ ಧರ್ಮ, ಸಂಸ್ಕೃತಿ ಬಗ್ಗೆ ಗೌರವ ಕೊಡುವಂಥ ಒಂದು ಸಂಸ್ಥೆಯಾಗಿ ನಾವು ಅಲ್ಲಿ ಮಂದಿರ ಕಟ್ಟುವುದಕ್ಕೆ ಸಂಪೂರ್ಣವಾದ ಬೆಂಬಲವನ್ನು ಕೊಟ್ಟೆವು.

ವಿಶ್ವಹಿಂದೂಪರಿಷತ್‌ನವರು ಮತ್ತು ಸಾಧುಸಂತರು ಈ ರೀತಿ ಅಲ್ಲಿಯೇ ಕಟ್ಟಬೇಕೆಂದು ಹೇಳಿದಾಗ, ಕಾಗೋಡು ತಿಮ್ಮಪ್ಪನಂಥ ರಾಮನ ಬಗ್ಗೆ ಕಳಕಳಿ ಇರುವಂಥ ಕಾಂಗ್ರೆಸ್ಸಿನ ಮುಖಂಡರು ಇವತ್ತು ಅಲ್ಲಿ ಆ ಜನ್ಮಸ್ಥಾನದಲ್ಲಿ ಮಂದಿರವನ್ನು ಕಟ್ಟುವ ಅಗತ್ಯವಿದೆಯೆಂದು ತಾವು ಮುಂದೆ ಬಂದಿದ್ದರೆ, ಇಲ್ಲಿ ರಾಜಕೀಯ ಲಾಭ ಮಾಡಿಕೊಳ್ಳುವಂತಹ ಪ್ರಶ್ನೆ ಎಲ್ಲಿ ಉದ್ಭವವಾಗುತ್ತಿತ್ತು? ಇವತ್ತು ನೀವು ಕೇವಲ ಯಾವುದೋ ಒಂದು ಅಲ್ಪಸಂಖ್ಯಾತರ ಓಟು ಪಡೆಯುವುದಕ್ಕೋಸ್ಕರ ಧೈರ್ಯವಾಗಿ ಈ ಕೆಲಸಕ್ಕೆ ಮುಂದೆ ಬರದೇ ಇರತಕ್ಕ ಸಂದರ್ಭದಲ್ಲಿ ಒಂದು ರಾಜಕೀಯ ಪಕ್ಷವಾಗಿ ನಮಗೆ ಸತ್ಯವೆಂದು ಕಂಡುಬಂದ ದೇಶದ ಕೋಟ್ಯಾಂತರ ಹಿಂದೂ ಜನಗಳ ಭಾವನೆಗೆ ತಕ್ಕಂತೆ, ನಾವು ಒಂದು ಕೆಲಸ ಮಾಡುವುದಕ್ಕೆ ಬೆಂಬಲ ಕೊಟ್ಟಿದ್ದಕ್ಕೋಸ್ಕರ ನಾವು ರಾಜಕಾರಣ ಮಾಡುತ್ತೇವೆಂದು ಹೇಳಿ. ತಾವು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದಾದರೆ, ನಾನು ಯಾವ ರೀತಿಯಾಗಿ ಉತ್ತರ ಹೇಳಬೇಕೋ ನನಗೆ ಅರ್ಥವಾಗುತ್ತಿಲ್ಲ. ತಾವು ಸ್ಪಷ್ಟವಾಗಿ ಈ ಸದನದಲ್ಲಿ ಹೇಳಿ, ಏಕೆ ಸುತ್ತಿಬಳಸಿ ಮಾತನಾಡುತ್ತೀರಿ. ರಾಮನ ಜನ್ಮಸ್ಥಾನ ಯಾವುದು, ಅಲ್ಲಿ ಕಟ್ಟುವಂಥ ಅಗತ್ಯವಿಲ್ಲವೆಂದು ಹೇಳುವುದಾದರೆ, ನೀವು ಮುಸ್ಲಿಂ ಬಂಧುಗಳಿಗೆ ಹೇಳುವಂಥ ಧೈರ್ಯ ಮಾಡುತ್ತೀರಾ? ಯಾವ ಸ್ಥಳದಲ್ಲಿ, ಜನ್ಮ ಸ್ಥಾನದಲ್ಲಿ ಪೂಜೆಯಾಗುತ್ತಿದೆಯೋ ಅಲ್ಲಿ ಈಗಲೂ ಆ ಕಂಬಗಳು, ಆಕಾರ ಪೂರ್ಣವಾಗಿ ಅದೇ ರೀತಿಯಾಗಿರಬೇಕಾದರೆ, ನಾಲ್ಕೈದು ಅಡಿ ದೂರದಲ್ಲಿ ಇದಕ್ಕೆ ಸಂಬಂಧಪಟ್ಟ ತಜ್ಞರು ಭೂಮಿಯನ್ನು ಅಗೆದಾಗ ಒಳಗಡೆ ಮಾದರಿ ಕಂಬಗಳು ಸಿಕ್ಕಿವೆ ಎಂದು ನಿನ್ನೆ ಕನ್ನಡಪ್ರಭಾ ಪತ್ರಿಕೆಯಲ್ಲಿ ಬಂದಿದೆ, ಅಲ್ಲಿ ಮೊಲ್ಭಾಗದಲ್ಲಿ ಮಸೀದಿ ಇರಬೇಕಾದರೆ, ಅದನ್ನು ಶಿಫ್ಟ್ ಮಾಡುವುದಕ್ಕೆ ಬೇಕಾದಷ್ಟು ತಜ್ಞರು ಇದ್ದಾರೆ. ಅದನ್ನು ಮಾಡೋಣ. ನೀವು ನಮಾಜ್ ಮಾಡದೇ ಇರುವಂಥ ಆ ಸ್ಥಳದಲ್ಲಿ ಏತಕ್ಕೋಸ್ಕರ ಅಡ್ಡಿ ಆತಂಕ ಮಾಡುತ್ತೀರಿ ಎಂದು ಮುಸ್ಲಿಂ ಬಂಧುಗಳನ್ನು ಕರೆದು, ಅವರಿಗೆ ಕನ್‌ವೀನ್ಸ್ ಮಾಡುವ ಪ್ರಾಮಾಣಿಕ ಪ್ರಯತ್ನ ನಾವು ನೀವು ಸೇರಿ ಮಾಡಬೇಕಾಗಿತ್ತಲ್ಲ, ಅದು ಅಲ್ಲದೇ ಇದ್ದರೆ ಹೇಳಿ. ರಾಮ ಹುಟ್ಟಿದ್ದು ಎಲ್ಲಿ, ಎಲ್ಲಿ ಆಗಬೇಕು ಎಂದು ತಮ್ಮ ಸ್ಪಷ್ಟ ಅಭಿಪ್ರಾಯ ಕೊಡಿ. ರಾಮನ ಮಂದಿರ ಕಟ್ಟುವುದು ಏನು, ಲಕ್ಷಾಂತರ ಮಂದಿರಗಳನ್ನು ಈ ನಾಡಿನಲ್ಲಿ ಕಟ್ಟುವುದಿದೆ. ಇವತ್ತು ಜನ್ಮಸ್ಥಾನದಲ್ಲಿ ಮಾಡುವುದಕ್ಕೆ ಹೊರಟ್ಟಿದ್ದೇವೆ. ನಾವು ಹೊರಟಿರುವುದು ಸರಿಯಲ್ಲವೆಂದು ಆದರೆ, ಮತ್ತೆ ರಾಮನ ಜನ್ಮಸ್ಥಾನ ಯಾವುದು ಎಂಬುದನ್ನೂ ಸ್ಪಷ್ಟವಾಗಿ ಹೇಳಿ. ಹಿಂದೆ ಮುಂದೆ ಏಕೆ ನೋಡುತ್ತೀರಿ?

SRI QUMURUL ISLAM.—Sir, I have a point of Order. There is a dispute even on the birth place of Rama. The Puri Shankaracharya says that this is the 7th birth place. There are Six other places in

order of preference. This is not my statement. This is the statement of Puri Shankaracharya. The disputed site is the birth place of Rama is not the opinion of all the Hindus. This is a opinion of a section of Hindus who want to demolish that Mosque and construct the Rama Temple because they say the idol of Rama was placed there in 1949. It was not there before that period. Now the Hon'ble Member is saying that it is the birth place of Rama. I just request the Hon'ble Member. don't try to say that this is the opinion of almost all the Hindu brothers. It is the opinion of a section of Hindu brothers. That is the 7th birth place as per the Hindu religious leader Puri Shankaracharya.

ಅಧ್ಯಕ್ಷರು.—ನನಗೆ ಈಗ ಅನುಮಾನ ಬರುತ್ತಿದೆ. ನಾವೇನು ಉತ್ತರ ಪ್ರದೇಶದಲ್ಲಿ ಕುಳಿತಿದ್ದೇವೆಯೋ ಎಂದು ಇಲ್ಲಿ ಚರ್ಚೆ ಮತೀಯ ಗಲಭೆ ಬಗ್ಗೆಯೋ ಅಥವಾ ಬಾಬರಿ ಮಸೀದಿ, ಶ್ರೀರಾಮ ಟೆಂಪಲ್ ಎಲ್ಲಿ ಮಾಡಬೇಕೆಂದು ಇಲ್ಲಿಯೇ ತೀರ್ಮಾನ ತೆಗೆದುಕೊಳ್ಳಬೇಕೆಂದಿದ್ದೀರಾ ಹೇಗೆ? ದಯಮಾಡಿ ವಿಷಯಕ್ಕೆ ಬನ್ನಿ.

ಶ್ರೀ ಪಾಟಾಳ್ ನಾಗರಾಜ್.—ಶಾಂತ ವಾತಾವರಣ ಮೂಡಿಸಲು ಎರಡೂ ಕಡೆಯವರು ಮಾತನಾಡಬೇಕೆಂದು ಒಂದು ವಾದ ಇದೆ. ಆದರೆ ಇಲ್ಲಿ ಪ್ರಚೋದನೆಯಾಗುತ್ತಿದೆ. ರಾಮ, ಕೃಷ್ಣ ಎಲ್ಲಾ ಬರುತ್ತಿದ್ದಾರೆ, ಇದು ಏನೆಂದು ನನಗೆ ಅರ್ಥವಾಗುತ್ತಿಲ್ಲ.

ಅಧ್ಯಕ್ಷರು.—ಪ್ರಚೋದನೆ ಅಲ್ಲ. ಇದು ಅಪ್ರಕೃತ, ಇದರ ಬಗ್ಗೆ ಅರ್ಥ ಮಾಡಿಕೊಳ್ಳದೇ. ನಿನ್ನೆಯಿಂದ ಬರೀ ಇದೇ ಚರ್ಚೆಯಾಗುತ್ತಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಈಗ ಅಲ್ಲಿ ಒಂದು ಮಸೀದಿ ಇದೆ. ಮಾನ್ಯ ಯಡಿಯೂರಪ್ಪನವರು ಏನೋ ಹೇಳುತ್ತಿದ್ದಾರೆ. ನಾನು ಏನನ್ನು ಕೇಳುತ್ತಿದ್ದೇನೆಂದರೆ. ಮಸೀದಿ ಒಂದು ಜಾಗದಲ್ಲಿ ಇರಬಹುದು. ಮಂದಿರ ಒಂದು ಜಾಗದಲ್ಲಿ ಇರಬಹುದು. ಚರ್ಚ್ ಒಂದು ಜಾಗದಲ್ಲಿ ಇರಬಹುದು. ಅವು ಯಾವ ಕಾರಣಕ್ಕಾಗಿ, ಯಾರು ಕಟ್ಟಿದ್ದಾರೆ ಎಂಬುದು ನಮಗೆ ಅಪ್ರಕೃತ. ಅವು ಇದ್ದರೆ, ಅವನ್ನು ಹಾಗೆಯೇ ಉಳಿಸೋಣ, ಇವತ್ತು ಮಂದಿರ ಕಟ್ಟುವುದಾದರೆ ಖಾಲಿ ಇರುವ ಜಾಗದಲ್ಲಿ ಕಟ್ಟೋಣ. ಬೇಡ ಎಂದು ಹೇಳುವುದಿಲ್ಲ. ಏಕೆ ಘರ್ಷಣೆಗಳಾಗಬೇಕು. ಇಲ್ಲದೇ ಹೋಗಿದ್ದರೆ, ಅಲ್ಲಿ ಏನೂ ಇರಲಿಲ್ಲ, ಆಗ ಅದೇ ಜಾಗದಲ್ಲಿ ಕಟ್ಟಬೇಕೆಂದು ಅವರು ಹೊರಟಿದ್ದರೆ, ಅದಕ್ಕೆ ನಾವು ಅಡ್ಡ ಬಂದಿದ್ದರೆ ಅದರ ಬಗ್ಗೆ ಆಕ್ಷೇಪಣೆ ಮಾಡಲಿ. ಆದರೆ ಇದು ಅಲ್ಲ. ಅದಕ್ಕೆ ನಾನು ಮೊದಲೇ ಹೇಳಿದೆ. ಪ್ರತಿಯೊಬ್ಬನಿಗೂ ಕೂಡ, ನಮ್ಮ ಬೈರೇಗೌಡರು ಇಲ್ಲಿಯೇ ಇದ್ದಾರೆ. ಅವರ ಊರಿನಲ್ಲಿ ಒಂದು ಘರ್ಷಣೆ ನಡೆಯಿತು. ಪ್ರತಿ ವರ್ಷ ಚೌಡೇಶ್ವರಿ ಉತ್ಸವ ನಡೆಯುತ್ತಿತ್ತು. ಒಂದು ವರ್ಷ ಈ ಉತ್ಸವ ಯಾವುದೋ ಒಂದು ಕೇರಿಗೆ ಹೋಗಲಿಲ್ಲ. ಉತ್ಸವವನ್ನು ತೆಗೆದುಕೊಂಡು ಹೋಗಬೇಕೆಂದು ಒಬ್ಬರು, ತೆಗೆದುಕೊಂಡು ಹೋಗಬಾರದೆಂದು ಮತ್ತೊಬ್ಬರು ಇದೇ ಘರ್ಷಣೆಯಾಗಿ, ಅದರಿಂದ ಆಗಬಾರದ ಅನಾಹುತವಾಯಿತು. ಆಗ ಈ ಸಭೆಯಲ್ಲಿ ತಾವು ಸಚಿವರಾಗಿದ್ದಿರಿ. ನಾನು ಈ ಕಡೆ ಕುಳಿತುಕೊಂಡು ಅವರ ಪರವಾಗಿ ಮಾತನಾಡಿದ್ದೆ. ದೇವರಾಜ ಅರಸು ಅವರು ಮುಖ್ಯಮಂತ್ರಿಗಳಾಗಿ ಈ ವಿಚಾರ ಪ್ರಸ್ತಾಪ ಮಾಡಿದ್ದರು. ಆದುದರಿಂದ ಈ ನಂಬಿಕೆಗಳು ಜ್ವಲಂತವಾಗಿ ನಮ್ಮ ತಲೆಯನ್ನು ಹಿಡಿದುಕೊಂಡು ಕುಳಿತಿವೆ. ಆದುದರಿಂದ ಇವತ್ತು ಅದನ್ನು ಕೆಡವಿದರೆ ಈ ರೀತಿ ಆಗುತ್ತದೆ. ಸ್ವಾಭಾವಿಕವಾಗಿ ನಮ್ಮ ಊರಿನಲ್ಲಿರತಕ್ಕಂಥ ಒಂದು ಸಣ್ಣಗುಡಿಯನ್ನು ಕೆಡವಿದರೆ ಜನರ ಮನಸ್ಸು ಹಾಗೂ ನಂಬಿಕೆ ಕೆಡುವುದಿಲ್ಲವೇ? ಇದಕ್ಕೆ ಏನು ಸಂಬಂಧ ಇದೆಯೋ ಮಸೀದಿ ಕೆಡುವುದಕ್ಕೂ ಅದೇ ಸಂಬಂಧ ಇದೆ. ಎಷ್ಟೋ ಸಾವಿರಾರು ಹಿಂದಿನ ರಾಜಮಹಾರಾಜರುಗಳು, ಅನೇಕ ಜನ ಪಾಳೆಯಗಾರರು, ಕಟ್ಟಿದ ಅನೇಕ ದೇವಸ್ಥಾನಗಳು ಈಗ ಇಲ್ಲವೇ? ಅದನ್ನು ರಾಷ್ಟ್ರೀಯ ಸ್ಮಾರಕ ಎಂದು ನಾವು ಉಳಿಸಿಕೊಂಡು ಬಂದಿಲ್ಲವೇ? ಇವತ್ತು ಅದನ್ನು ಕೆಡವಿ ಅದೇ ಜಾಗದಲ್ಲಿ ಮಂದಿರ ಕಟ್ಟಬೇಕೆನ್ನತಕ್ಕಂಥಾದ್ದು ಏನು ಇದೆ? ಅದು ಸರಿಯಲ್ಲ. ರಾಮಾಯಣ ಮಹಾಭಾರತದಲ್ಲಿನತಕ್ಕಂಥಾದ್ದಕ್ಕೆ ಚರಿತ್ರೆಯ ದಾಖಲೆಗಳು ಅಲ್ಲ. ಆದರೆ ಬಾಬರ್ ಬಂದಿರತಕ್ಕಂಥಾದ್ದಕ್ಕೆ ಚರಿತ್ರೆಯಲ್ಲಿ ದಾಖಲೆ ಸಿಗುತ್ತದೆ. ಒಂದು ವೇಳೆ ಏನಾದರೂ ಇನ್ನೊಂದು ಅಲ್ಪಸಂಖ್ಯಾತರು ಪ್ರಬಲವಾಗಿರತಕ್ಕಂಥ ರಾಷ್ಟ್ರವಾಗಿದ್ದು ಅದೇ ಜಾಗದಲ್ಲಿ ಯಾವುದಾದರೂ ಒಂದು ರಾಮ-

ಮಂದಿರವನ್ನೋ ಅಥವಾ ಇನ್ಯಾವುದಾದರೂ ಮಂದಿರವನ್ನೋ ಕೆಡವಿ, ಮತ್ತೊಂದು ಪ್ರಾರ್ಥನಾ ಮಂದಿರವನ್ನು ಕಟ್ಟಬೇಕೆಂದು ಹೇಳಿದರೆ ನನಗೆ ಏನನ್ನಿಸುತ್ತದೆ? ನನ್ನ ಮನಸ್ಸು ಎಷ್ಟು ನೋಯುತ್ತದೆ, ಅಷ್ಟೇ ಅವರ ಮನಸ್ಸೂ ನೋಯುವುದಿಲ್ಲವೇ? ಇಲ್ಲಿ ಅಲ್ಪಸಂಖ್ಯಾತರ ಮತ ಕೇಳಬೇಕೆಂಬ ದೃಷ್ಟಿಯಿಂದ ಅಲ್ಲ. ನಮ್ಮ ಸಂಸ್ಕೃತಿ ಏನು? ಧರ್ಮೋ ರಕ್ಷತಿ ರಕ್ಷಿತ:—ಎಂದರೆ ಯಾರು ಧರ್ಮವನ್ನು ರಕ್ಷಣೆ ಮಾಡುತ್ತಾರೋ, ಅವನನ್ನು ಧರ್ಮ ರಕ್ಷಣೆ ಮಾಡುತ್ತದೆ.

ಶ್ರೀ ವಾಟಾಳ್ ನಾಗರಾಜ್.—ತಾವು ಸಂಸ್ಕೃತದಲ್ಲಿ ಹೇಳಿಬಿಟ್ಟರಲ್ಲ, ಕನ್ನಡದಲ್ಲಿ ಹೇಳಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ಅವರೂ ಭಾರತೀಯರು. ಈ ನಾಡಿನಲ್ಲಿ ಇರತಕ್ಕಂಥವರು. ಮಸೀದಿಯನ್ನು ಕೆಡವಿದರೆ ಅದಕ್ಕೆ ಸಂಬಂಧಪಟ್ಟಂತೆ ಅದರಲ್ಲಿ ನಂಬಿಕೆ ಇರುವಂತಹ ಜನರ ಮೇಲೆ ಏನು ದುಷ್ಪರಿಣಾಮ ಆದೀತು, ಅವರ ಮನಸ್ಸನ್ನು ನಾವು ಎಷ್ಟರ ಮಟ್ಟಿಗೆ ಕೆಡಿಸಬಹುದು ಎಂದು ನಮಗೆ ಅನ್ನಿಸುವುದಿಲ್ಲವೇ? ಶ್ರೀರಾಮಚಂದ್ರ ಇದನ್ನೇ ಹೇಳಿದ್ದಾನೆಯೇ? ಮಹಾತ್ಮ ಗಾಂಧಿಯವರು ಏನು ಹೇಳಿದರು, ಅವರು ನಮಗೆ ಏನು ಉಪದೇಶ ಕೊಟ್ಟಿದ್ದಾರೆ. ಸುಳ್ಳನ್ನು ಹೇಳಬೇಡ, ಸುಳ್ಳನ್ನು ಕೇಳಬೇಡ, ಸುಳ್ಳನ್ನು ಅಥವಾ ಕೆಟ್ಟದ್ದನ್ನು ನೋಡಬೇಡ. ಈ ಮೂರೂ ಮಂತ್ರಗಳನ್ನು ಹೇಳಿದ್ದಾರೆ. ಇವತ್ತು ಇದನ್ನು ಏತಕ್ಕೆ ಹೇಳಿದ್ದಾರೆ? ಇದು ಏತಕ್ಕೆ ನಮ್ಮ ಸಂಸ್ಕೃತಿ ಆಗಿದೆ? ಮಹಾತ್ಮ ಗಾಂಧಿಯವರು ಪದೇ ಪದೇ ರಾಮಮಂತ್ರವನ್ನು ಜಪಿಸಿದರು. ಏತಕ್ಕೆಂದರೆ, ಶ್ರೀರಾಮ ಈ ನಾಡಿನಲ್ಲಿ ಒಬ್ಬ ಪರಿಪೂರ್ಣ ವ್ಯಕ್ತಿ ಎಂದು ಜಪಿಸುತ್ತಿದ್ದರು. ಆದುದರಿಂದ ಇವತ್ತು ಇನ್ನೊಂದು ಸಮಾಜದ ನಂಬಿಕೆಗೆ ಘಾಸಿ ಆಗತಕ್ಕಂಥ ಕೆಲಸ ನಮ್ಮಿಂದ ನಡೆದರೆ, ನಾವು ರಾಷ್ಟ್ರವನ್ನು ಕಟ್ಟುತ್ತೇವೆಯೇ? ಇವತ್ತು ಅಲ್ಲಿರತಕ್ಕಂಥ ಮಸೀದಿ ಕೆಡವಬೇಕು, ರಾಮಮಂದಿರ ಕಟ್ಟಬಹುದು, ನಾಳೆ ಇನ್ನೊಂದು ಊರಿನಲ್ಲಿ ಯಾವುದೋ ಕಾಲದಲ್ಲಿ ದೇವಸ್ಥಾನವನ್ನು ಮಣ್ಣಿನಲ್ಲಿ ಕಟ್ಟಿದ್ದಾರೆ, ಎಂಬ ಕಾರಣದಿಂದ ಅಲ್ಲಿ ಮತ್ತೊಂದು ದೇವಸ್ಥಾನವನ್ನು ಕಟ್ಟಿಸಿ ಎಂದರೆ ಅದನ್ನು ಕೆಡವಿ ಕಟ್ಟುವುದಕ್ಕೆ ಆಗುತ್ತದೆಯೇ? ಇವತ್ತು ಸಾವಿರಾರು ಎಕರೆ ಭೂಮಿಯನ್ನು ಇಟ್ಟುಕೊಂಡಿರುವಂತಹ ಅನೇಕ ಜಮೀನುದಾರರು ಇದ್ದಾರೆ. ಅವರೇನೂ ದುಡಿಮೆ ಮಾಡಿ ಸಂಪಾದನೆ ಮಾಡಿದ್ದಾರೇ? ಯಾವುದೋ ಕಾರಣಕ್ಕಾಗಿ ಯಾರೋ ಅಡವು ಹಾಕಿದ್ದನ್ನು ಹೊಡೆದುಕೊಂಡು ಸಂಪಾದನೆ ಮಾಡಿದ್ದಾರೆ. ಈಗ ನಾವು ಅದನ್ನು ಕಿತ್ತುಕೊಂಡು ಬರುವುದಕ್ಕೆ ಆಗುತ್ತದೆಯೇ? ಇವೊತ್ತು ಬೆಂಗಳೂರು ಪ್ಯಾಲೇಸ್ ಇದೆ. ಇಷ್ಟೊಂದು ಎಕರೆ ಭೂಮಿ ಇದೆ. ಇವತ್ತು ಅದನ್ನು ಸರಕಾರದ ಸ್ವಾಧೀನಕ್ಕೆ ತೆಗೆದುಕೊಳ್ಳುವುದಕ್ಕೆ ಹೋರಾಟ ಮಾಡೋಣ. ಅದು ಇವತ್ತು ಇದೆಯೇ? ಅದನ್ನು ಬಿಟ್ಟು ಈ ರೀತಿ ಮಾಡುವುದರಿಂದ ಇವತ್ತು ಒಂದು ವರ್ಗದ ಜನರ ಮೇಲೆ ಏನು ಪರಿಣಾಮ ಆಗಬಹುದೆಂಬುದನ್ನು ನೋಡಬೇಕು. ಈ ವಾದಕ್ಕೆ ಅವಕಾಶ ಕೊಟ್ಟರೆ, ನೀವು ಯಾವ ರಾಜಕಾರಣದ ಉದ್ದೇಶ ಇಟ್ಟುಕೊಂಡು ಈ ಒಂದು ಚಳುವಳಿಯನ್ನು ಪ್ರಾರಂಭ ಮಾಡಿದ್ದೀರಿ, ಅದೇ ರೀತಿ ಬೇರೆ ಪಕ್ಷಗಳು, ಬೇರೆ ಶಕ್ತಿಗಳು ಕೂಡಾ ಅದೇ ರೀತಿಯಲ್ಲಿ, ಇದೇ ಮಜಲಿಗೆ ಇಳಿದರೆ, ನಾಳೆ ಯಾವರೀತಿ ಆದೀತು ಎನ್ನತಕ್ಕಂಥ ಅರಿವು, ಆ ಶಕ್ತಿಗಳಿಗೆ, ಈ ರಥ ಯಾತ್ರೆ ಮಾಡತಕ್ಕಂಥ ಶಕ್ತಿಗಳಿಗೆ, ರಾಮಮಂದಿರವನ್ನು ಕಟ್ಟತಕ್ಕಂಥ ಶಕ್ತಿಗಳಿಗೆ ಬರಬೇಕು. ಜ್ಞಾನೋದಯ ಆಗಬೇಕು. ಒಂದು ಪರಿಜ್ಞಾನ ಉಂಟಾಗಬೇಕೆಂದು ಹೇಳುತ್ತೇನೆ. ಕಾರಣ, ಮೊನ್ನೆ ಕರ್ನಾಟಕ ರಾಜ್ಯದಲ್ಲಿ ನಡೆದಿರತಕ್ಕಂಥ ಹಿಂಸೆಯಿಂದ ಏನಾಯಿತು? ನಾನೂ ಕೂಡಾ ಚನ್ನರಾಯಪಟ್ಟಣಕ್ಕೆ ಹೋಗಿ ಬಂದೆ. ಅಲ್ಲಿ ಕಾರಣಗಳನ್ನು ಹುಡುಕಿದರೆ ಏನೂ ಇಲ್ಲ. ಇವತ್ತು ಅನಾವಶ್ಯಕವಾಗಿ ಕೆಲವರು ಮೆರವಣಿಗೆ ಮಾಡುತ್ತಾ ಹೋಗುತ್ತಾರೆ. ಮಸೀದಿ ಸಿಕ್ಕಿದ ಕೂಡಲೇ ಅಲ್ಲಿಗೆ ಕಲ್ಲು ಹೊಡೆಯುತ್ತಾರೆ. ಅಲ್ಪಸಂಖ್ಯಾತರ ಒಂದು ಮೆರವಣಿಗೆ ಬರುತ್ತದೆ. ಅವರು ಎಲ್ಲಾದರೂ ದೇವಸ್ಥಾನ ಕಂಡಕೂಡಲೇ ಕಲ್ಲು ಹೊಡೆಯುತ್ತಾರೆ. ಹೀಗೆ ಎರಡೂ ಕಡೆಯಲ್ಲಿ ಇಂತಹ ಜನ ಇದ್ದಾರೆ.

ಅಲ್ಪಸಂಖ್ಯಾತರಲ್ಲೂ ಇಂತಹ ಕೆಲವರು ಇದ್ದಾರೆ. ಬಹು ಸಂಖ್ಯಾತರಲ್ಲೂ ಸಹ ಇಂತಹ ಕೆಲವರು ಇದ್ದಾರೆ. ಮತೀಯ ಫೆನಾಟಿಕ್ಸ್ ಎಂದು ಏನು ನಾವು ಹೇಳುತ್ತೇವೆ, ಅವರಿಗೆ ಇದೇ ಕೆಲಸ ವಿಶೇಷವಾಗಿ ಅವರಿಗೆ ಬಲಿಯಾಗಬೇಕಾಗುತ್ತದೆ. ಇದರಲ್ಲಿ ಕೆಲವು ಕಿಡಿಗೇಡಿಗಳು ಇದ್ದಾರೆ. ಅವರು ವಾತಾವರಣವನ್ನು ಕೆಡಿಸಬೇಕು; ಅಶಾಂತಿ ಪರಿಸ್ಥಿತಿ ತರಬೇಕು, ಅದರ ಲಾಭವನ್ನು ನಾವು ಮಾಡಿಕೊಳ್ಳಬೇಕು ಎನ್ನತಕ್ಕಂಥ ಕೆಲವು ಶಕ್ತಿಗಳು ಇವತ್ತು ಇದ್ದಾರೆ. ಆ ಶಕ್ತಿಗಳು ಅನೇಕ ಸಲ ಪ್ರಬಲವಾಗಿ ಇವತ್ತು ನಿರಪರಾಧಿಗಳನ್ನು ಅವರ ಒಂದು ವಶಕ್ಕೆ ಒಲಿಸಿಕೊಳ್ಳುತ್ತಾರೆ. ಇವತ್ತು ಹೀಗಾಗಿ ಮೊನ್ನೆ ನಡೆದಂತಹ ಗಲಭೆಗಳಲ್ಲಿ ರಾಮ ರಥ ಹೊರಟ ನೆಪದಲ್ಲಿ ಅಲ್ಲಲ್ಲಿ ಹೆಚ್ಚು ಕಡಿಮೆ ಸತ್ಯಕ್ಕೆ ದೂರವಾದ ವಿಷಯಗಳನ್ನು ತಲೆಗೆ ತುಂಬಿ ಇವತ್ತು ಒಂದು ವರ್ಗದ ಜನರ ಮೇಲೆ ಇನ್ನೊಂದು ವರ್ಗದ ಜನರನ್ನು ಎತ್ತಿ ಕಟ್ಟಿದ್ದಾರೆ. ಇದು ಒಂದೇ ತರಹದ ಕಥೆ. ಬೆಂಗಳೂರಿನಲ್ಲಿ

ಏನು ಕಥೆ ಊದಿದ್ದಾರೋ, ಅದೇ ಕಥೆ ಚನ್ನರಾಯಪಟ್ಟಣದಲ್ಲಿ ಅದೇ ಕಥೆ ಕೋಲಾರದಲ್ಲಿಯೂ ಅದೇ ಕಥೆ ನಮ್ಮ ಬೈರೇಗೌಡರು ಹೇಳುತ್ತಿದ್ದರು. ಯಾವುದೋ ಒಂದು ದೇಶದಲ್ಲಿ ಕ್ರಿಕೆಟ್ ಆಟದಲ್ಲಿ ಗೆದ್ದರೆ ಇಲ್ಲಿ ಸಕ್ಕರೆ ಹಂಚುತ್ತಾರೆಂದು ಹೇಳುವುದು; ಅಥವಾ ಬಾಬರ್ ಬಂದು ದೇವಸ್ಥಾನ ಕೆಡವಿದ ಎಂದು ಹೇಳುವುದು. ಇದೇ ಕಥೆಗಳು ಎಲ್ಲ ಕಡೆಯೂ ಹುಟ್ಟಿಕೊಳ್ಳುತ್ತವೆ, ಇದೇ ಕಥೆಗಳು ಶಿವಮೊಗ್ಗದಲ್ಲಿ ಪ್ರಚಾರವಾಗುತ್ತವೆ. ಚನ್ನರಾಯಪಟ್ಟಣದಲ್ಲಿ ಪ್ರಚಾರವಾಗುತ್ತವೆ. ಕುಣಿಗಲ್‌ನಲ್ಲಿ ಪ್ರಚಾರವಾಗುತ್ತದೆ. ರಾಮನಗರದಲ್ಲಿ ಪ್ರಚಾರವಾಗುತ್ತದೆ. ಚನ್ನಪಟ್ಟಣದಲ್ಲಿ ಪ್ರಚಾರವಾಗುತ್ತದೆ; ಎಲ್ಲಾ ಕಡೆ ಒಂದೇ ತರಹ. ಇದನ್ನು ಒಂದೇ ಶಕ್ತಿ ಮಾಡುತ್ತಿದೆ. ಇದು ಬಹಳ ನಿಗೂಢವಾಗಿದೆ. ವ್ಯವಸ್ಥಿತವಾಗಿದೆ. ಸತ್ಯಕ್ಕೆ ದೂರವಾದಂಥ ವಿಚಾರಗಳನ್ನು ಪ್ರಚಾರ ಮಾಡುತ್ತಾರೆ. ಇದನ್ನು ಕೆಲವು ಅಲ್ಪಸಂಖ್ಯಾತರು ಮಾಡುತ್ತಾರೆ ಇದೇ ರೀತಿಯಲ್ಲಿ ಕೆಲವು ಬಹುಸಂಖ್ಯಾತರು ಇದೇ ರೀತಿ ಪ್ರಚಾರ ಮಾಡುತ್ತಾರೆ. ಆದರೆ ಈ ಎರಡೂ ಶಕ್ತಿಗಳು ತಮ್ಮ ಸ್ವಂತ ಲಾಭಕ್ಕಾಗಿ ಪ್ರಚೋದನೆ ಮಾಡಿ ಕಲಹಗಳನ್ನು ಹುಟ್ಟಿಸಿ ಇವೊತ್ತು ಸಮಾಜದಲ್ಲಿ ಅಶಾಂತಿ ಪರಿಸ್ಥಿತಿ ಉಂಟಾಗಲು ಕಾರಣವಾಗಿದ್ದಾರೆ. ಅನೇಕ ಜನರು ಅದಕ್ಕೆ ಬಲಿಯಾಗತಕ್ಕಂಥ ಪರಿಸ್ಥಿತಿ ಇದೆ, ಆದ್ದರಿಂದ ದೇಶ ವಿಭಾಗ ಆದಂತಹ ಸನ್ನಿವೇಶದಲ್ಲಿ ಯಾವ ಒಂದು ಅಶಾಂತಿ ರಾಷ್ಟ್ರದಲ್ಲಿ ಮೂಡಿತ್ತು, ಅದೇ ಒಂದು ಪರಿಸ್ಥಿತಿ ಇವತ್ತು ಇದೆ. ಕಳೆದ ಒಂದು ತಿಂಗಳಿಂದ ಸ್ವಲ್ಪ ಸಮಾಧಾನವಾಗಿರಬಹುದು. ಮತ್ತೆ 6ನೇ ತಾರೀಖು ಕರ ಸೇವೆ ಮಾಡಬೇಕೆಂದು ಸಿದ್ಧತೆಗಳನ್ನು ನಡೆಸುತ್ತಿದ್ದಾರೆ. ಕರ ಸೇವೆ ಮಾಡಿದರೆ ದೇಶದಲ್ಲಿ ಅದೇ ತರಹದ ವಾತಾವರಣ ಉಂಟಾಗುತ್ತದೆ. ಆದ್ದರಿಂದ ದಯಮಾಡಿ ಎಲ್ಲರೂ ಒಂದು ಕಡೆ ಕುಳಿತುಕೊಂಡು ಆಲೋಚನೆ ಮಾಡತಕ್ಕಂಥಾದ್ದು ಇದೆ. ಆ ಪ್ರಯತ್ನ ಮಾಡಬೇಕಾಗಿದೆ. ಎಲ್ಲಾ ರಾಜಕೀಯ ಪಕ್ಷಗಳು ಈ ಬಗ್ಗೆ ಯೋಚನೆ ಮಾಡಬೇಕಾಗಿದೆ. ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದರೂ ಕೂಡ ಇದೇ ರಾಜ್ಯಾಂಗವನ್ನು ಇಟ್ಟುಕೊಳ್ಳಬೇಕಾಗುತ್ತದೆ. ಎಲ್ಲರನ್ನೂ ಒಟ್ಟಿಗೆ ತೆಗೆದುಕೊಂಡು ಹೋಗಬೇಕಾಗುತ್ತದೆ. ಎಲ್ಲಾ ರಾಜಕೀಯ ಪಕ್ಷಗಳಿಗೂ ಜವಾಬ್ದಾರಿ ಇದೆ. ತಮ್ಮ ಜವಾಬ್ದಾರಿ ನಿರ್ವಹಣೆ ಮಾಡಬೇಕಾದರೆ ಇವತ್ತು ಎಲ್ಲಾ ವರ್ಗದ ಜನರನ್ನು ಎಲ್ಲಾ ಧರ್ಮದ ಜನರನ್ನು ಒಟ್ಟಿಗೆ ತೆಗೆದುಕೊಂಡು ಹೋಗತಕ್ಕಂಥಾದ್ದು ಇದೆ. ಏಕೆಂದರೆ ಈ ರಾಷ್ಟ್ರ ಎಂದರೆ ಹಲವು ಧರ್ಮ ಭಾಷೆ ಪ್ರಾಂತ್ಯದಿಂದ ಕೂಡಿದೆ. ಈ ದೇಶ ಒಂದು ಸಮಗ್ರ ನೆಲೆಗಟ್ಟಿನ ಮೇಲೆ ನಿಲ್ಲಬೇಕಾಗಿದೆ ನೀತಿದೆ. ಮುಂದೆ ಸಹ ಇರುತ್ತದೆ, ಆದ್ದರಿಂದ ಎಲ್ಲಾ ರಾಜಕೀಯ ಪಕ್ಷಗಳು ಕೂಡ ಯಾವ ಒಂದು ಮತದ ಧರ್ಮದ ಆಧಾರದ ಮೇಲೆ ಯಾವ ಒಂದು ವರ್ಗದ ಆಧಾರದ ಮೇಲೆ ಅಧಿಕಾರಕ್ಕೆ ಬರುತ್ತೇವೆ ಅನ್ನತಕ್ಕಂತ ಭ್ರಮೆಗಳನ್ನು ಇಟ್ಟುಕೊಂಡು ಈ ದೇಶದಲ್ಲಿ ಅಶಾಂತಿ ಪರಿಸ್ಥಿತಿಯನ್ನುಂಟು ಮಾಡಿ ಅಧಿಕಾರಕ್ಕೆ ಬರುತ್ತೇವೆ ಎಂದು ಪ್ರಯತ್ನ ಮಾಡುವುದಾದರೆ ಅದನ್ನು ನಾವು ಖಂಡಿಸಲೇಬೇಕು. ಅದಕ್ಕೆ ರಾಜ್ಯದಲ್ಲಿ ನಡೆದಂತಹ ಘಟನೆಗಳು ಏನಿವೆ, ಅದನ್ನು ಮರೆಯಬೇಕಾದರೆ ಎಲ್ಲಾ ರಾಜಕೀಯ ಪಕ್ಷಗಳು ಒಂದು ಕಡೆ ಕುಳಿತು ಶಾಂತವಾತಾವರಣ ಉಂಟು ಮಾಡಬೇಕು ದಯಮಾಡಿ ಪ್ರಚೋದನೆ ಮಾಡಿ ಒಂದು ಮತವನ್ನು ಅವಹೇಳನ ಮಾಡಿ ಮಾತನಾಡತಕ್ಕಂಥಾದ್ದನ್ನು ಸಂಪೂರ್ಣವಾಗಿ ಬಿಟ್ಟು ನಾವು ಒಂದು ಪ್ರತಿಜ್ಞೆಯನ್ನು ಮಾಡಿದರೆ ಖಂಡಿತವಾಗಿಯೂ ಕೂಡ ನಮ್ಮ ಈ ರಾಷ್ಟ್ರಕ್ಕೆ ನಮ್ಮ ಸಮಾಜಕ್ಕೆ ಮಾರ್ಗದರ್ಶನವಾಗುತ್ತದೆಂದು ಹೇಳಿ ಇನ್ನು ನಮ್ಮ ಮಹಾತ್ಮ ಗಾಂಧೀಜಿಯವರು ಏನು ಹೇಳಿದ್ದಾರೆ, ಅವರು ರಾಮ ಭಜನೆಯನ್ನು ವಿಶೇಷವಾಗಿ ಸ್ತುತಿ ಮಾಡುತ್ತಿದ್ದರು. ಅವರು ರಾಮ ಭಜನೆ ಮಾಡಿ ಎಲ್ಲರಿಗೂ ಸುಖ ಶಾಂತಿ ನೆಮ್ಮದಿ ಕೇಳಿಕೊಂಡಿದ್ದಾರೆ. ಅವರ ಮಂತ್ರ ನಾವು ನೆನಪಿಸಿಕೊಂಡು ಹೋದರೆ ನಿಜವಾಗಿಯೂ ಈ ಗಾಂಧೀಜಿ ಹುಟ್ಟಿದಂತಹ ರಾಷ್ಟ್ರದಲ್ಲಿ ನಾವು ಹುಟ್ಟಿದ್ದಕ್ಕೂ ಸಾರ್ಥಕವಾಗುತ್ತದೆ. ಅವರನ್ನು ಉಳಿಸಿಕೊಳ್ಳಬೇಕು ಈ ನಾಡಿನಲ್ಲಿ ನಮಗೆ ಬೇರೆ ಅಪಪ್ರಚಾರಗಳು ಆಗಬಾರದು; ಅವರ ನಾಡಿನಲ್ಲಿ ಹುಟ್ಟಿದಂತಹ ನಾವು ಅವರ ಪರಂಪರೆಯನ್ನು ಗಳಿಸಿಕೊಳ್ಳಬೇಕು ಅನ್ನುವುದಾದರೆ, ಅವರು ಏನು ಹೇಳಿದ್ದಾರೆ. ಅದರಂತೆ ಎಲ್ಲಾ ವರ್ಗದ ಜನರನ್ನು ಒಟ್ಟಿಗೆ ತೆಗೆದುಕೊಂಡು ಹೋಗತಕ್ಕಂಥ ಕೆಲಸ ಮಾಡಬೇಕು: ಆ ಶ್ರೀ ರಾಮಚಂದ್ರ ಎಲ್ಲರಿಗೂ ಸನ್ಮತಿಗಳನ್ನುಂಟು ಮಾಡಲಿ ಒಳ್ಳೆಯ ಮನಶಾಂತಿಯನ್ನು ಕೊಡಲಿ ಅದರಲ್ಲೂ ವಿಶೇಷವಾಗಿ ನಮ್ಮ ಆರ್.ಎಸ್.ಎಸ್. ನವರಿಗೆ ಕೊಡಲಿ ಎಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).— ಮಾನ್ಯ ಅಧ್ಯಕ್ಷರೇ, ಕಳೆದ ಎರಡು ತಿಂಗಳಿಂದ ರಾಜ್ಯದಲ್ಲಿ ನಡೆದಿರುವಂಥ ಗಲಭೆಗಳು, ಕೊಲೆ-ಸುಲಿಗೆಗಳು ಈ ಸದನದಲ್ಲಿರುವಂಥ

---

† ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ನಮಗೆ ಯಾರಿಗೂ ಸಹಾ ಗೌರವ ತರುವಂಥಾ ಸಂಗತಿಗಳಲ್ಲ ಬಹುಶಃ ತುಂಬಾ ಗಂಭೀರವಾಗಿ. ಶಾಂತಿ-ಸುವ್ಯವಸ್ಥೆ ಇದ್ದಂಥ ನಮ್ಮ ರಾಜ್ಯದಲ್ಲಿ ಈ ವಿಷಮ ಪರಿಸ್ಥಿತಿಗೆ ಬಂದದ್ದಕ್ಕೆ ಕಾರಣ ಏನು ? ಇದರ ಬಗ್ಗೆ ಚಿಂತನೆ ಮಾಡುವಂಥಾ ಅಗತ್ಯ ಇದೆಯೆಂದು ನಾನು ತಿಳಿದುಕೊಂಡಿದ್ದೇನೆ ಕಳೆದ ಎರಡು ತಿಂಗಳಿಂದ ಅನೇಕ ಜನ ಏನೂ ಗೊತ್ತಿಲ್ಲದ ನಿರಪರಾಧಿಗಳು ಈ ಒಂದು ಆಘಾತಕ್ಕೆ ತುತ್ತಾಗಿದ್ದಾರೆ. ಈ ಗಲಭೆಗೆ ಅನೇಕ ಕಾರಣಗಳನ್ನು ಜನ ಹೇಳುತ್ತಿದ್ದಾರೆ ಇಲ್ಲಿ ಸದನದಲ್ಲಿರತಕ್ಕಂಥ ಸ್ನೇಹಿತರೂ ಹೇಳಿದರು. ಹೊರಗಡೆ ಇರುವಂಥ ಜನ ಮಾತನಾಡು ತ್ತಿದ್ದಾರೆ ಪ್ರಾರಂಭದಲ್ಲಿ ಇಲ್ಲಿ ಗಲಭೆ ಪ್ರಾರಂಭವಾದಾಗ ಹಿಂದೆ ಇದ್ದಂಥ ಮುಖ್ಯ ಮಂತ್ರಿಗಳಾದ ಶ್ರೀ ವೀರೇಂದ್ರಪಾಟೀಲರನ್ನು ಅಧಿಕಾರದಿಂದ ಇಳಿಸುವಂಥಾ ಒಂದು ಸಂದರ್ಭಕ್ಕಾಗಿ ಹಾಗೂ ರಾಜ್ಯದಲ್ಲಿ ಶಾಂತಿ, ಸುವ್ಯವಸ್ಥೆ ಕಾಪಾಡುವುದರಲ್ಲಿ ವೀರೇಂದ್ರಪಾಟೀಲರು ಸಂಪೂರ್ಣ ವಿಫಲರಾದಂಥ ನೆಪವೊಡ್ಡಿ ಆ ಒಂದು ವಾತಾವರಣವನ್ನು ನಿರ್ಮಾಣ ಮಾಡಬೇಕೆಂದು ಹೇಳಿ ಪ್ರಯತ್ನ ಮಾಡಿದರು ಎನ್ನುವಂಥ ಆರೋಪವನ್ನು ಅನೇಕ ಜನ ಮಾಡಿದ್ದಾರೆ. ಸ್ವತಃ ಅವತ್ತಿನ ಮಾಜಿ ಮುಖ್ಯ ಮಂತ್ರಿ ವೀರೇಂದ್ರಪಾಟೀಲರೂ ಸಹಾ ಹೇಳಿದ್ದರು. ನಾವೂ ಅನೇಕ ಸಂದರ್ಭದಲ್ಲಿ ಹೇಳಿದ್ದೇವೆ. ಈ ಗಲಭೆಗಳಿಗೆ ಕಾಂಗ್ರೆಸ್‌ನ ಭಿನ್ನಮತೀಯರ ವ್ಯವಸ್ಥಿತವಾದಂಥ ತಂತ್ರ ಇತ್ತು ಅಂಥಾ; ಅವರೂ ಹೇಳಿದ್ದಾರೆ ಬಹಳ ಸ್ಪಷ್ಟವಾಗಿ; ಇಲ್ಲಾ, ಇತ್ತೀಚಿಗೆ ನಡೆದಂಥ ಎಲ್ಲಾ ಗಲಭೆಗಳಿಗೂ ಆರ್.ಎಸ್.ಎಸ್ ವಿಶ್ವ ಹಿಂದೂ ಪರಿಷದ್. ಅದಕ್ಕೆ ಬೆಂಬಲ ಕೊಡುತ್ತಿರುವಂಥ ಭಾರತೀಯ ಜನತಾ ಪಾರ್ಟಿ ಇದಕ್ಕೆ ಕಾರಣ ಅನ್ನುವಂಥಾ ಮಾತನ್ನು ನಮ್ಮ ಮುಸ್ಲಿಮ್ ಲೀಗ್‌ನ ಶಾಸಕ ಸ್ನೇಹಿತರು ಹೇಳಿದ್ದಾರೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಸಹಾ ಅದನ್ನು ಹೇಳುವಂಥಾ ಪ್ರಯತ್ನ ಮಾಡಿದ್ದಾರೆ. ತಮ್ಮಲ್ಲಿ ನಾನು ಈ ಸಂದರ್ಭದಲ್ಲಿ ಒಂದು ವಿನಂತಿಯನ್ನು ಮಾಡುತ್ತೇನೆ. ಸತ್ಯ ಹೊರಗೆ ಬರಬೇಕು. ಅದಕ್ಕಾಗಿ ನಾನು ತಮಗೆ ಒತ್ತಾಯ ಮಾಡುವಂತಾದ್ದು ಏನೆಂದರೆ ನಮ್ಮ ಹೋಮ್ ಮಿನಿಸ್ಟರ್ ಅವರ ಅಧ್ಯಕ್ಷತೆಯಲ್ಲಿ ಎಲ್ಲಾ ವಿರೋಧ ಪಕ್ಷದ ಸದಸ್ಯರ ಒಂದು ಹೌಸ್ ಕಮಿಟಿಯನ್ನು ತಾವು ರಚನೆ ಮಾಡಬೇಕು. ಆ ಹೌಸ್ ಕಮಿಟಿ ಸತ್ಯಾಸತ್ಯತೆಗಳನ್ನು ಪರಿಶೀಲನೆ ಮಾಡುವುದಕ್ಕೆ ಗಲಭೆ ನಡೆದಂಥ ಸ್ಥಳಗಳಿಗೆ ಹೋದಾಗ, ಈ ರಾಜ್ಯದಲ್ಲಿರುವಂಥ ಹಿರಿಯ ಪತ್ರಿಕೆಯ ಪತ್ರಿಕೋದ್ಯಮಿಗಳು, ಸಂಪಾದಕರು ಸಹಾ ಆ ಒಂದು ಸ್ಥಳಗಳಿಗೆ ಭೇಟಿಕೊಟ್ಟು ಅಲ್ಲಿರುವಂಥ ಘಟನೆಗಳ ಸತ್ಯಾಸತ್ಯತೆಗಳನ್ನು ಪರಿಶೀಲನೆ ಮಾಡುವುದಕ್ಕೆ ತನಿಖೆಗಾಗಿ ಹೋದಾಗ, ಅವರ ಜೊತೆಗೆ ಇದ್ದಾಗ, ಈ ರಾಜ್ಯದಲ್ಲಿ ಆದಂಥ ಗಲಭೆಗೆ ಯಾರು ಕಾರಣ ಅನ್ನುವುದನ್ನು ಕೇಳಿದಾಗ ಸತ್ಯ ಸಂಗತಿ ಹೊರಗೆ ಬಂತು. ನನಗೆ ಗೊತ್ತಿರುವ ಹಾಗೆ ಕೆಲವರನ್ನು ಬಿಟ್ಟರೆ ಎಲ್ಲಾ ನಮ್ಮ ಶಾಸಕ ಸ್ನೇಹಿತರ ಮನಸ್ಸಿನಲ್ಲಿ ಈ ಗಲಭೆಗೆ ಬಿ.ಜೆ.ಪಿ. ವಿಶ್ವ ಹಿಂದೂ ಪರಿಷದ್, ಆರ್.ಎಸ್.ಎಸ್.ಕಾರಣ ಅನ್ನುವಂಥಾದ್ದನ್ನು ತಾವು ಅದೇ ಮೇಲೆ ಮಾತನಾಡು ವವರು ಹೇಳುತ್ತೀರಿ ಹಾಗೂ ಹೇಳುವವರಿದ್ದೀರಿ, ಈಗಾಗಲೇ ಅನೇಕ ಜನ ತಾವು ಹೇಳಿದ್ದೀರಿ. ನಿಮಗೆ ಏಕೆ ಭಯ ? ಈ ರೀತಿ ಇಲ್ಲಿರುವಂಥಾ ಒಬ್ಬಿಬ್ಬರು ವಿರೋಧ ಪಕ್ಷದವರನ್ನು ಬಿಟ್ಟು ಉಳಿದೆಲ್ಲರೂ ಸಹಾ ಈ ಗಲಭೆಗೆ ನಾವು ಕಾರಣ ಅಂಥ ನಿಮಗೆ ಮನದಟ್ಟಾದ ಮೇಲೆ, ಹೋಮ್ ಮಿನಿಸ್ಟರ್ ಅಧ್ಯಕ್ಷತೆಯಲ್ಲಿ ಸದನದ ಸಮಿತಿ ಮಾಡಿ. ಆ ಸಮಿತಿ ಗಲಭೆನಡೆದಂಥ ಸ್ಥಳಗಳಿಗೆ ಹೋಗಿ ಯಾರು ಇದಕ್ಕೆ ಅಪರಾಧ ಮಾಡಿದಂಥ ಜನ ಎಂದು ಕಂಡುಹಿಡಿದು ಅವರಿಗೆ ಶಿಕ್ಷೆ ಮಾಡುವಂತಾದ್ದು ಅಗತ್ಯ ಇದೆ. ಭಾರತೀಯ ಜನತಾ ಪಾರ್ಟಿ ಇರಲಿ, ಕಾಂಗ್ರೆಸ್ ಪಕ್ಷ ಇರಲಿ, ಯಾವುದೇ ಪಕ್ಷ ಇರಲಿ. ಆ ಕರ್ತವ್ಯವನ್ನು ಈ ಸದನದಲ್ಲಿರುವಂಥ ನಾವು ಮಾಡಬೇಕಾಗಿದೆ. ನಮ್ಮ ಮುಸ್ಲಿಮ್ ಲೀಗ್‌ನ ಶಾಸಕ ಸ್ನೇಹಿತರು ಹೇಳಿದರು; ಅನೇಕ ಕಡೆ ಮದ್ದು ಗುಂಡುಗಳನ್ನು ಇಟ್ಟಿದ್ದಾರೆ, ಮಾರಕಾಸ್ತ್ರ ಗಳನ್ನು ಇಟ್ಟಿದ್ದಾರೆ, ನಾಡ ಬಾಂಬ್ ತಯಾರಾಗುತ್ತಿದೆ. ಸೊಫೆಸ್ಟಿಕೇಟೆಡ್ ಬಾಂಬುಗಳನ್ನು ಹೊರಗಡೆಯಿಂದ ತರಿಸಿದ್ದಾರೆಂದು ಹೇಳಿದ್ದಾರೆ. ಇದು ತುಂಬಾ ಕಳವಳಕಾರಿಯಾದಂಥ ಸಂಗತಿ ಎಂದು ನಾನು ಹೇಳುತ್ತೇನೆ. ಇದಕ್ಕೆ ನಾನು ಒಂದು ಸಲಹೆಯನ್ನು ತಮಗೆ ಕೊಡುತ್ತೇನೆ.

೨-೪೦ ಪಿ.ಎಂ.

ಏನೆಂದರೆ ಮೊದಲು ಹಿಂದುಗಳ ದೇವಸ್ಥಾನಗಳು ಅನಂತರ ಮಸೀದಿಗಳನ್ನು ಸರ್ಚ್ ಮಾಡಿರಿ. ಎಲ್ಲಿ ಮದ್ದುಗುಂಡುಗಳು ಇದ್ದಾವೆ, ಎಲ್ಲಿ ಕ್ರೈಬಾಂಬ್‌ಗಳು ಇದ್ದಾವೆ. ಎಲ್ಲಿ ಸ್ಫೋಟಕ ವಸ್ತುಗಳು ಇದ್ದಾವೆ, ಎಲ್ಲಿ ಈ ರೀತಿಯಾಗಿ ಪಾಕಿಸ್ಥಾನದಿಂದ ಬಂದಿರತಕ್ಕಂಥ ಬಾಂಬ್‌ಗಳು ಇವೆ, ಅವುಗಳನ್ನು ಪತ್ತೆ ಹಚ್ಚಿ. ಅಂಥವುಗಳು ಎಲ್ಲೇ ಸಿಕ್ಕಲಿ, ಯಾರೇ ಇರಲಿ, ಅಂಥವರ ಮೇಲೆ ತೀವ್ರವಾದಂಥ ಕ್ರಮವನ್ನು ತೆಗೆದುಕೊಳ್ಳಿ.

SRI QUMURAL ISLAM.—I fully support my hon. friend. If they find any bomb, then we can find out from which country it has come.

ಶ್ರೀ ಬಿ. ಎಸ್. ಯಡಿಯೂರಪ್ಪ.—ಇನ್ನೊಂದು ಸಂಗತಿಯನ್ನು ತಮಗೆ ಕೇಳುವುದಕ್ಕೆ ಇಷ್ಟಪಡುತ್ತೇನೆ......

SRI QUMURAL ISLAM.—The other day, I have also demanded to set up a House Committee to go into the matter. Therefore, I fully support my hon. friend.

ಶ್ರೀ ಬಿ. ಎಸ್. ಯಡಿಯೂರಪ್ಪ.—ಕಳೆದ ಎರಡು ತಿಂಗಳುಗಳಿಂದ ನಮ್ಮ ರಾಜ್ಯದಲ್ಲಿ ಒಂದು ತರಹ ಪೋಲೀಸ್ ರಾಜ್ಯ ಕರ್ನಾಟಕದಲ್ಲಿ ನಡೆಯುತ್ತಾ ಇದೆ. ಈ ಒಂದು ಗಲಭೆಗಳನ್ನು ನೆಪ ಮಾಡಿಕೊಂಡು ಬಿಜೆಪಿಯವರನ್ನು ಮತ್ತಿತರರ ಕಾರ್ಯಕರ್ತರನ್ನು ಹಿಡಿಯತಕ್ಕಂಥ ಪ್ರಯತ್ನವನ್ನು ಮಾಡುತ್ತಿದ್ದಾರೆ, ಬಂಧಿಸತಕ್ಕಂಥ ಪ್ರಯತ್ನವನ್ನು ಮಾಡುತ್ತಿದ್ದಾರೆ. ಹೀಗೆ ಅವರನ್ನು ಹಿಡಿದು ಪೋಲೀಸ್ ಸ್ಟೇಶನ್‌ಗೆ ಕರೆದುಕೊಂಡು ಹೋಗಿ ಅವರ ಮೇಲೆ ಹೀನಾಯವಾಗಿ ವರ್ತನೆ ಮಾಡಿ, ಬಂಧನ ಮಾಡಿ, ಅವರನ್ನು ಜೈಲಿಗೆ ಕಳುಹಿಸುವಂಥ ಪ್ರಯತ್ನವನ್ನು ಪೋಲೀಸ್ ಅಧಿಕಾರಿಗಳು ಮಾಡುತ್ತಿದ್ದಾರೆ. ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕನಿಷ್ಠಪಕ್ಷ ಉನ್ನತ ಅಧಿಕಾರಿಗಳು ಇಂತಹ ಕೆಲವೊಂದು ವಿಶೇಷ ಸಂದರ್ಭಗಳಲ್ಲಿ ಸ್ವತಂತ್ರವಾಗಿ, ನ್ಯಾಯಸಮ್ಮತವಾಗಿ, ನಿಷ್ಪಕ್ಷಪಾತವಾಗಿ ನಡೆದುಕೊಳ್ಳುವಂಥ ಒಂದು ಕರ್ತವ್ಯ ಇದೆ ಎಂದು ನಾನು ಭಾವಿಸುತ್ತೇನೆ. ಅನೇಕ ಅಧಿಕಾರಿಗಳು ಆ ರೀತಿಯಲ್ಲಿ ನಡೆದುಕೊಂಡಿದ್ದಾರೆ. ಮತ್ತು ಅವರ ಜವಾಬ್ದಾರಿಯನ್ನು ಸೂಕ್ತವಾಗಿ ನಿರ್ವಹಿಸಿದ್ದಾರೆ. ಆದರೆ ಇನ್ನೂ ಕೆಲವು ಉನ್ನತ ಮಟ್ಟದ ಅಧಿಕಾರಿಗಳು ಮಂತ್ರಿಗಳನ್ನು ತೃಪ್ತಿಪಡಿಸುವುದಕ್ಕೋಸ್ಕರವಾಗಿ, ಶಾಸಕರನ್ನು ತೃಪ್ತಿಪಡಿಸುವುದಕ್ಕೋಸ್ಕರವಾಗಿ, ರಾಜಕೀಯ ಪಕ್ಷದ ಮುಖಂಡರುಗಳನ್ನು ತೃಪ್ತಿಪಡಿಸುವುದಕ್ಕೋಸ್ಕರವಾಗಿ ಕಾನೂನು ಬಾಹಿರವಾಗಿ ಅಧಿಕಾರವನ್ನು ತಮ್ಮ ಕೈಗೆ ತೆಗೆದುಕೊಂಡು, ಆ ಮೂಲಕ ಆ ಒಂದು ಉನ್ನತ ಸ್ಥಾನದಲ್ಲಿ ಉಳಿದುಕೊಳ್ಳುವ ಪ್ರಯತ್ನಕ್ಕೋಸ್ಕರವಾಗಿ ಅಂಥ ಒಂದು ವರ್ತನೆಯನ್ನು ಎರಡು ತಿಂಗಳುಗಳಿಂದ ಇಂಥ ಒಂದು ವರ್ತನೆಯನ್ನು ಮಾಡಿಕೊಂಡು ಬಂದಿದ್ದಾರೆ. ಅದನ್ನು ಈ ರಾಜ್ಯದ ಜನತೆಯು ಎಂದೂ ಕ್ಷಮಿಸುವುದಿಲ್ಲ. ಆ ಬಗ್ಗೆ ವಿವರವನ್ನು ನಾನು ಮುಂದಕ್ಕೆ ಹೇಳುತ್ತೇನೆ. ಮಾನ್ಯ ಸಚಿವರಾದ ಬಸವಲಿಂಗಪ್ಪನವರು ಬಹಿರಂಗವಾಗಿ ಹೇಳಿದ್ದಾರೆ. ಏನೆಂದರೆ ಈ ಗಲಭೆಗಳಿಗೆ ಬಿಜೆಪಿಯವರು ಕಾರಣರು ಎಂದು ಹೇಳಿದ್ದಾರೆ. ಈ ಮಾತನ್ನು ಯಾವ ಆಧಾರದ ಮೇಲೆ ಹೇಳಿದ್ದೀರಿ ? ಈ ಬಗ್ಗೆ ಏನಾದರೂ ತನಿಖೆ ಮಾಡಿಸಿದ್ದೀರಾ ? ನ್ಯಾಯಾಲಯ ತೀರ್ಪು ಕೊಟ್ಟಿದೆಯೇ ? ಇದೇನು ಕೋರ್ಟಿನ ತೀರ್ಮಾನವೇ ? ನೀವು ಪೋಲೀಸ್ ಅಧಿಕಾರಿಗಳು ನೀವು ಹೇಳಿದಂತೆ ಬಂಧನ ಮಾಡಿದ ತಕ್ಷಣವೇ ಅದಕ್ಕೆ ಬಿಜೆಪಿಯವರು ಜವಾಬ್ದಾರರಾಗುತ್ತಾರೆಯೇ ?

ಶ್ರೀ ಕೆ. ಸೋಮಪ್ಪ ಸುವರ್ಣ.—ಈ ರೀತಿಯ ಗಲಭೆಗಳು ಇಡೀ ದೇಶದಲ್ಲಿ ನಡೆದಿವೆ. ಕರ್ನಾಟಕದಲ್ಲಿ ಮಾತ್ರ ಇದು ಸೀಮಿತವಾಗಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಇಡೀ ದೇಶದಲ್ಲಿ ಶ್ರೀ ರಾಮಜ್ಯೋತಿ ಮೆರವಣಿಗೆ ನಡೆಯಿತು. ಕರ್ನಾಟಕ ರಾಜ್ಯದಲ್ಲಿ ಸುಮಾರು ೬–೭ ಸಾವಿರ ಹಳ್ಳಿಗಳಲ್ಲಿ, ನಗರಗಳಲ್ಲಿ ಮೆರವಣಿಗೆ ನಡೆಯಿತು. ಆಗ ಲಕ್ಷಾಂತರ ಜನ ಸೇರಿದ್ದರು. ಅಂಥ ಕಾಲದಲ್ಲಿ ಗಲಭೆ ನಡೆದಿರತಕ್ಕಂಥಾದ್ದು ೧೮–೨೦ ಕಡೆಗಳಲ್ಲಿ ಮಾತ್ರ. ಏತಕ್ಕಾಗಿ ಈ ಗಲಭೆ ಆಯಿತು ? ಈ ಬಗ್ಗೆ ಯೋಚನೆ ಮಾಡುವ ಅಗತ್ಯ ಇದೆ ಎಂದು ನಾನು ಭಾವಿಸುತ್ತೇನೆ. ಈ ಗಲಭೆಗಳು ಪ್ರಾರಂಭವಾಗುವುದಕ್ಕೆ ಎರಡು ಮೂರು ಪ್ರಮುಖವಾದ ಕಾರಣಗಳು ಇವೆ.

ಶ್ರೀ ಸಿ. ಬೈರೇಗೌಡ.—ಮಾನ್ಯ ಸದಸ್ಯರು ಮಾತನಾಡುತ್ತಿದ್ದಾರೆ, ಅಂಥ ಸಂದರ್ಭದಲ್ಲಿ ಇತರರಾರೂ ಅವರಿಗೆ ಅಡ್ಡಿ ಮಾಡಬಾರದು —ಮಧ್ಯೆ ಮಾತನಾಡಬಾರದು ಎಂದು ನಾನು ವಿನಂತಿಸಿಕೊಳ್ಳುತ್ತೇನೆ. ಅವರಿಗೆ ಹೇಳತಕ್ಕಂಥ ಸ್ವಾತಂತ್ರ್ಯ ಇದ್ದೇ ಇದೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಸಂಸದೀಯ ವ್ಯವಸ್ಥೆಯಲ್ಲಿ ಹೀಗೆ ಮಾತನಾಡುವಾಗ ಸಕಾಲದಲ್ಲಿ ಮಧ್ಯೆ ಮಾತನಾಡತಕ್ಕಂಥಾದ್ದು ಇದ್ದೇ ಇದೆ.

ಶ್ರೀ ಸಿ. ಬೈರೇಗೌಡ.—ಮಾನ್ಯ ಶಿವರಾಮೇಗೌಡರಿಂದ ನಾನು ಸಂಸದೀಯ ವ್ಯವಸ್ಥೆಯ ಬಗ್ಗೆ ಪಾಠ ಕಲಿಯಬೇಕಾಗಿಲ್ಲ. ಅವರು ಸುಮ್ಮನೆ ಗೌರವವಾಗಿ ಕುಳಿತರೆ ಅದು ಈ ಸಭೆಗೆ ಉಪಕಾರ ಮಾಡಿದಂತಾಗುತ್ತದೆ. ದಯಮಾಡಿ ಆ ಕೆಲಸ ಮಾಡಿ.

ಮಾನ್ಯ ಯಡಿಯೂರಪ್ಪನವರು ಮಾತನಾಡುವಾಗ ಮಧ್ಯದಲ್ಲಿ ಬೇರೆಯವರು ಬಾಯಿ ಹಾಕದ ಹಾಗೆ ಅವರಿಗೆ ರಕ್ಷಣೆ ಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ,

ಶ್ರೀ ಬಿ. ಎಸ್. ಯಡಿಯೂರಪ್ಪ —ಗಲಭೆಗಳು ಪ್ರಾರಂಭವಾಗುವುದಕ್ಕೆ ಅನೇಕ ಕಾರಣಗಳಿವೆ. ಆದರೆ ಇಲ್ಲಿರುವ ಕೆಲವರ ಮನಸ್ಸಿನಲ್ಲಿ ಕೆಲವರು ಹೇಳಬೇಕೆಂದು ಇರಬಹುದು ಅಥವಾ ಕೆಲವರು ಹೇಳಬಾರದು ಎಂದೂ ಇರಬಹುದು. ಆದರೆ ಪ್ರಾಮುಖ್ಯವಾಗಿ ಶ್ರೀರಾಮಜ್ಯೋತಿ ಮೆರವಣಿಗೆ ಸಮಯದಲ್ಲಿ ಗಲಭೆಗಳು ಪ್ರಾರಂಭವಾದುವು. ನಾನು ಕೇಳುತ್ತೇನೆ. ಈ ದೇಶದಲ್ಲಿ ಧಾರ್ಮಿಕ ಸ್ವಾತಂತ್ರ್ಯ ಇಲ್ಲವೆ? ನಮಗೆ ಸರಿಕಂಡ ಕಡೆ ಅದು ಹಿಂದುಗಳಿರಬಹುದು, ಮುಸ್ಲಿಮರಿರಬಹುದು, ಅವರು ಮೆರವಣಿಗೆ ಮಾಡುವಂತಹ ಅಧಿಕಾರ ಇಲ್ಲವೆ? ಯಾವುದೋ ಒಂದು ದಾರಿಯಲ್ಲಿ ರಾಮಜ್ಯೋತಿ ಮೆರವಣಿಗೆ ಹೋಗುವುದಕ್ಕೆ ಸರ್ಕಾರ ಅನುಮತಿ ಕೊಡಲಿಲ್ಲವೆಂದು ಕೊಡಗು ಜಿಲ್ಲೆಯಲ್ಲಿ ದೊಡ್ಡ ಗಲಾಟೆಯಾಯಿತು. ಅಲ್ಲಿನ ಡಿಸಿಯವರು ಅನುಮತಿ ನಿರಾಕರಿಸಿದಾಗ ಇಡೀ ಕೊಡಗು ೩-೪ ದಿನ ಬಂದ್ ಆಯಿತು. ಆಗ ಡಿಸ್ಟ್ರಿಕ್ಟ್ ಕೋರ್ಟ್‌ಗೆ ಹೋಗಿ, ಕೋರ್ಟಿನಿಂದ ಆದೇಶ ಕೊಟ್ಟು ಅನುಮತಿ ಕೊಡಬೇಕೆಂದು ಸೂಚನೆ ಕೊಟ್ಟಾಗ, ಅದರ ವಿರುದ್ಧ ಅಲ್ಲಿನ ಡಿಸಿಯವರು ರಾಜ್ಯದ ಹೈಕೋರ್ಟ್‌ಗೆ ಅಪೀಲ್ ಹೋಗುತ್ತಾರೆ. ಇದಕ್ಕಾಗಿ ಗಲಾಟೆ ಆಯಿತು. ನಾನು ಕೇಳುವುದು ಸಾರ್ವಜನಿಕ ಮೆರವಣಿಗೆ ಹೋಗುವ ಸಮಯದಲ್ಲಿ ಕಲ್ಲು ಏಕೆ ತೂರಲಾಗುತ್ತದೆ? ಒಂದು ಪಂಗಡದ ಜನರಿಗೆ ಏಕೆ ಕಿರಿಕಿರಿ ಆಗುತ್ತದೆ? ಮೆರವಣಿಗೆ ಸಮಯದಲ್ಲಿ ಶಾಂತಿ ಭಂಗ ಬೆದರಿಕೆ ಹಾಕುವವರು ಹಿಂದೂಗಳಿರಲಿ ಮುಸ್ಲಿಮರಿರಲಿ ಅವರ ವಿರುದ್ಧ ತೀವ್ರ ಕ್ರಮ ತೆಗೆದುಕೊಳ್ಳಿ; ಬೇಡ ಎನ್ನುವುದಿಲ್ಲ. ಸ್ವಾಮಿ, ಬೆಂಗಳೂರಿನ ನ್ಯಾಷನಲ್ ಹೈಸ್ಕೂಲ್ ಗ್ರೌಂಡ್‌ನಲ್ಲಿ ನಾಳೆ ಸಂಜೆಗೆ ಎಲ್. ಕೆ. ಅಡ್ವಾನಿಯವರ ಸಾರ್ವಜನಿಕ ಸಭೆ ಇದೆ. ಬರೀ ಮೈಕ್ ಹಾಕಲು ಪರ್ಮಿಷನ್‌ಗಾಗಿ ಚೀಫ್ ಮಿನಿಸ್ಟರ್, ಹೋಂ ಮಿನಿಸ್ಟರ್ ಹತ್ತಿರವೆಲ್ಲ ಸುತ್ತಿದ ಮೇಲೆ ಕಾಡಿ ಬೇಡಿದ ಮೇಲೆ ಕೊನೆಗೆ ಇವತ್ತು ಪರ್ಮಿಷನ್ ಕೊಟ್ಟರು. ಇವತ್ತು ಬೆಳಿಗ್ಗೆ ಕಾರ್ಪೊರೇಷನ್ ಕಚೇರಿ ಮುಂದೆ ಅಡ್ವಾನಿಯವರ ಸಭೆಯ ಭಿತ್ತಿಪತ್ರಗಳನ್ನು ಕಾರ್ಪೊರೇಷನ್ನಿನ ಅಧಿಕಾರಿಗಳು ನಿಂತು ಕಿತ್ತುಹಾಕಿಸುತ್ತಿದ್ದುದನ್ನು ಕಣ್ಣಾರೆ ನೋಡಿ ಬಂದೆ. ಇದು ಪ್ರಜಾಪ್ರಭುತ್ವದ ದೇಶ ಏಕೆ? ನೀವು ಹೇಳಬೇಕಾದ್ದನ್ನು ಜನತೆಗೆ ಹೇಳಿ, ನಾವೂ ಹೇಳುತ್ತೇವೆ. ನೀವು ೪೦ ವರ್ಷದಿಂದ ಹೇಳುತ್ತಿದ್ದೀರಿ, ನಾವು ಅಡ್ಡಿ ಮಾಡಲಿಲ್ಲವಲ್ಲ. ನಿಮಗೆ ಈಗ ಏಕೆ ಸಿಟ್ಟು? ರಾಮಜ್ಯೋತಿ ಮೆರವಣಿಗೆ ಸಂದರ್ಭದಲ್ಲಿ ಲಕ್ಷಾಂತರ ಜನ ಹಿಂದೂಗಳು ಭಿನ್ನಭಾವ ಬಿಟ್ಟು ಒಂದಾದರು; ಅದಕ್ಕಾಗಿ ನಿಮಗೆ ಸಿಟ್ಟೆ? ನಾನು ಮುಸ್ಲಿಮ್ ಸ್ನೇಹಿತರನ್ನು ಹಾಗೂ ಕಾಂಗ್ರೆಸ್ಸಿನ ಸ್ನೇಹಿತರನ್ನು ಕೇಳುತ್ತೇನೆ. ಅಕ್ಟೋಬರ್ ೩ನೇ ತಾರೀಖು ದೇಶದಲ್ಲೆಲ್ಲ ಮಹಮದ್ ಪೈಗಂಬರ್ ಜಯಂತಿ ಆಚರಿಸಲಾಯಿತು. ಕರ್ನಾಟಕ ರಾಜ್ಯದಲ್ಲಿಯೂ ನಡೆಯಿತು. ಸಾವಿರಾರು ಜನ ಊರನ್ನೆಲ್ಲ ಅಲಂಕಾರ ಮಾಡಿದರು. ಆಗ ತುಂಬಾ ಒಳ್ಳೆಯ ರೀತಿಯಲ್ಲಿ ಮೆರವಣಿಗೆ ಆಗಲಿಲ್ಲವೆ? ಯಾರಾದರೂ ಸರಿ, ಒಂದು ಉದಾಹರಣೆ ಕೊಡಿ, ಈ ರೀತಿ ಮಹಮದ್ ಪೈಗಂಬರ್ ದಿನಾಚರಣೆ ದಿವಸ ಹಿಂದೂಗಳು, ತಡೆದರು ಕಲ್ಲು ತೂರಿ ಗಲಾಟೆಯಾಯಿತು ಅಡ್ಡಿ ಮಾಡಿದರು ಎಂದು. ಯಾವುದೇ ಗಲಾಟೆ ಇಲ್ಲದೆ ಮುಸ್ಲಿಮರು ನಾವು ಅಣ್ಣತಮ್ಮಂದಿರಂತೆ ಇಲ್ಲೇ ಬದುಕಿ ಬಾಳುತ್ತಿರ ಬೇಕಾದರೆ ಪೋಲೀಸ್ ಅಧಿಕಾರಿಗಳು ಹೇಳುತ್ತಾರೆ, ಅಲ್ಲಿ ಮಸೀದಿ ಇದೆ, ಗಲಾಟೆ ಆಗಬಹುದು, ಮೆರವಣಿಗೆ ಇಲ್ಲಿ ಹೋಗಬಾರದು ಎಂದು. ಏಕೆ ಗಲಾಟೆ ಆಗುತ್ತದೆ? ಮುಸ್ಲಿಂ ಬಂಧುಗಳಿಗೆ ನಾವು ಹೇಳೋಣ, ಯಾವುದೋ ದೇವರ ಮೆರವಣಿಗೆ ಹೋದರೆ ನಿಮಗೇಕೆ ಸಿಟ್ಟು ಬರಬೇಕು ಎಂದು? ಶೇಕಡಾ ೯೦ರಷ್ಟು ಮುಸ್ಲಿಂ ಜನಕ್ಕೆ ಈ ಭಾವನೆಯೇ ಇಲ್ಲ. ಈ ದೇಶದಲ್ಲೇ ಅವರು ಬಾಳಿ ಬದುಕ ಬೇಕಾಗಿದೆ. ಅಣ್ಣತಮ್ಮಂದಿರಂತೆ ಅವರು ಬಾಳಬೇಕಾಗಿದೆ; ಆದರೆ ಅವರನ್ನು ಪ್ರತ್ಯೇಕವಾಗಿಟ್ಟು ವೋಟ್‌ಗೋಸ್ಕರ ನಾವು ರಾಜಕಾರಣ ಮಾಡುತ್ತಿದ್ದೇವಲ್ಲ, ಅದರ ಬಗ್ಗೆ ಚಿಂತನೆ ಮಾಡುವಂತಹ ಕಾಲ ಹತ್ತಿರ ಬಂದಿದೆ.

ನಮ್ಮ ಕಾಗೋಡು ತಿಮ್ಮಪ್ಪನವರು ಹೇಳಿದರು, ಯಡಿಯೂರಪ್ಪನವರೇ, ನಿಮ್ಮವರು ಪಾರ್ಲಿಮೆಂಟ್‌ನಲ್ಲಿ ಇದ್ದಾರೆ. ನಿಮ್ಮವರು ಅಧಿಕಾರದಲ್ಲಿ ಇದ್ದರು. ಏತಕ್ಕೆ ಆಗ ಮಂದಿರವನ್ನು ಕಟ್ಟುವಂಥ ಪ್ರಯತ್ನವನ್ನು ಮಾಡಲಿಲ್ಲ ಎಂದು ಕೇಳಿದರು. ಕಾಗೋಡು ತಿಮ್ಮಪ್ಪನವರೇ, ಯಾವುದೇ ಕೆಲಸ ಆಗಬೇಕಾದರೆ ಒಂದು ಕಾಲ ಬರಬೇಕಾಗುತ್ತದೆ. ಜನರಲ್ಲಿ ಜಾಗೃತಿ ಉಂಟಾಗ ಬೇಕಾಗುತ್ತದೆ. ಇವತ್ತು ಹಿಂದೂಗಳಲ್ಲ ಸ್ವಾತಂತ್ರ್ಯ ಬಂದು ೪೩ ವರ್ಷಗಳಿಂದ ರಾಜಕೀಯ ಸ್ವಾತಂತ್ರ್ಯ ಸಿಕ್ಕಿದ್ದರೂ ಧಾರ್ಮಿಕ ಸ್ವಾತಂತ್ರ್ಯ ಸಿಕ್ಕದೇ ತಲೆ ತಗ್ಗಿಸಿ ಬಾಳುವಂಥ ಒಂದು ವಿಚಿತ್ರವಾದ ಪರಿಸ್ಥಿತಿಯಿಂದ ಮೇಲೆ ಎದ್ದಿದ್ದಾನೆ, ಜಾಗೃತನಾಗಿದ್ದಾನೆ. ಇದರ ಬಗ್ಗೆ ನಾವು ಸಂತೋಷಪಡಬೇಕಲ್ಲವೆ. ನಾನು ಸನ್ಮಾನ್ಯ ಕಾಗೋಡು ತಿಮ್ಮಪ್ಪನವರಲ್ಲಿ ಕೇಳುವುದಕ್ಕೆ ಇಚ್ಛೆಪಡುತ್ತೇನೆ, ಈ ದೇಶಕ್ಕೆ ಸ್ವಾತಂತ್ರ್ಯ ಬಂದ ತಕ್ಷಣ ಸೋಮನಾಥ ದೇವಾಲಯವನ್ನು ಕಟ್ಟುವಂಥ ಕೆಲಸವನ್ನು ಸರ್‌ದಾರ್ ವಲ್ಲಭಭಾಯಿ ಪಟೇಲರು ಮಾಡಿದರು. ಅದು ಯಾವ ಕಾಲದ್ದು ಸ್ವಾಮಿ? ೨೦೦ ವರ್ಷಗಳ ಹಿಂದೆ ಘಜನಿ ಮಹಮ್ಮದ್ ಭಾರತದ ಮೇಲೆ ಆಕ್ರಮಣ ಮಾಡಿದಾಗ ಪವಿತ್ರವಾದ ಸೋಮನಾಥ ದೇವಾಲಯವನ್ನು ಕೆಡವಿದ್ದ,

ಅದೇ ಪ್ರದೇಶದಲ್ಲಿ ಮಸೀದಿಯನ್ನು ಕಟ್ಟಿ ಅದರ ಹಿಂಭಾಗದ ಜಾಗವನ್ನು ಖಬರ್‌ಸ್ಥಾನವನ್ನಾಗಿ ಮಾಡಿಕೊಂಡರು, ಇದನ್ನು ೮೦೦ ವರ್ಷಗಳ ನಂತರ ಇದು ಒಂದು ಖಬರಸ್ಥಾನ, ಇದು ಒಂದು ರಾಷ್ಟ್ರೀಯ ಅಪಮಾನ ಎಂದು ಕೊಂಡು ಸರ್ದಾರ್ ವಲ್ಲಭಬಾಯಿಪಟೇಲರು ಮುಂದೆ ನಿಂತುಕೊಂಡು ಸೋಮನಾಥ ದೇವಸ್ಥಾನವನ್ನು ಕಟ್ಟಿಸಿದ್ದರು, ಆವತ್ತಿನ ರಾಷ್ಟ್ರಪತಿ ಬಾಬು ರಾಜೇಂದ್ರಪ್ರಸಾದರವರು ಎರಡು ದಿವಸಗಳು ಅಲ್ಲಿ ಒಂದು ಗುಡಿಸಲಲ್ಲಿ ಇದ್ದು ಪೂಜೆ ಮಾಡಿ ಪ್ರಾರ್ಥನೆ ಮಾಡಿ ಭಾರತದ ೮೦೦ ವರ್ಷದ ಈ ಗುಲಾಮಗಿರಿ ಸಂಕೇತವನ್ನು ತೆಗೆದುಹಾಕಿದ್ದಕ್ಕೆ ಆನಂದಪಟ್ಟರು; ಈ ದೇಶದ ಜನ ಹಾಡಿ ಹೊಗಳಿದರು. ಇದನ್ನು ಯಾರು ವಿರೋಧ ಮಾಡಲಿಲ್ಲ. ಅವತ್ತು ಕೂಡಾ ಮುಸ್ಲಿಂ ಮುಖಂಡರುಗಳು ಇದನ್ನು ವಿರೋಧ ಮಾಡಲಿಲ್ಲವಲ್ಲ ಸ್ವಾಮಿ. ಅಂದರೆ ಪ್ರಶ್ನೆ ಏನು ಎಂದರೆ ಅಪಾರ್ಥ ಮಾಡುವಂಥ ಪ್ರಯತ್ನ ನಡೆಯುತ್ತಿದೆ,

ಶ್ರೀ ಕಾಗೋಡು ತಿಮ್ಮಪ್ಪ:— ಸೋಮನಾಥ ದೇವಸ್ಥಾನ ಪುನರ್ ನಿರ್ಮಾಣ ಮಾಡುವಾಗ ಅಲ್ಲಿ ಮೊದಲು ಯಾವುದೇ ಮಸೀದಿ ಇರಲಿಲ್ಲ ಹಾಳಾಗಿದ್ದ ದೇವಸ್ಥಾನವನ್ನು ಮಾತ್ರ ಸರ್ದಾರ್ ವಲ್ಲಭಬಾಯಿಪಟೇಲರು ನಿರ್ಮಾಣ ಮಾಡಿದರು. ಆದರೆ ಇಲ್ಲಿ ಮಸೀದಿ ಇದೆ. ಅದನ್ನು ಕೆಡವಿ ಅದರ ಜಾಗದಲ್ಲಿ ನೀವು ದೇವಸ್ಥಾನವನ್ನು ಕಟ್ಟಬೇಕು ಎಂದು ಹೊರಟಿದ್ದೀರಿ,

ಶ್ರೀ ಬಿ.ಎಸ್. ಯಡಿಯೂರಪ್ಪ:— ತಿಮ್ಮಪ್ಪನವರೇ ಒಳ್ಳೆಯದು. ಬಹುಶ: ಕಾಗೋಡು ತಿಮ್ಮಪ್ಪನವರ ಮುಂದೆ ಆ ರೀತಿ ಚರಿತ್ರೆಯಲ್ಲಿ ವಿಚಾರಗಳ ಬಗ್ಗೆ ಗೊತ್ತಿಲ್ಲ ನನಗೆ ನಾನು ಬಹಳ ಸಣ್ಣವನು ಇದ್ದೇನೆ. ಆದರೆ ದಯಮಾಡಿ ಸದನವನ್ನು ತಪ್ಪುದಾರಿಗೆ ಎಳೆಯುವುದು ಬೇಡ. ರೆಕಾರ್ಡನ್ನು ತರಿಸಿ ನೋಡೋಣ. ಆದರೆ ಪ್ರಶ್ನೆ ಇರುವಂಥದ್ದು ೧೯೫೧ ರಲ್ಲಿ ಸನ್ಮಾನ್ಯ ವೈ. ಎನ್. ಕೃಷ್ಣಮೂರ್ತಿಯವರು ಪ್ರಜಾವಾಣಿಯಲ್ಲಿ ಒಂದು ಲೇಖನವನ್ನು ಬರೆದರು. ಅವರು ಬರೆಯುತ್ತಾರೆ, "ಸೋಮನಾಥ ದೇವಾಲಯ ನಿರ್ಮಾಣವಾದಂಥ ಸಂದರ್ಭದಲ್ಲಿ ಅವರ ಲೇಖನ "ಸೌರಾಷ್ಟ್ರದ ಸಮುದ್ರ ತೀರದಲ್ಲಿ ಭೋರೆಂದು ದಡಕ್ಕೆ ಅಪ್ಪಳಿಸುತ್ತಿರುವ ಭವ್ಯ ಮನೋಹರ ಜಲ ರಾಶಿಯ ಹಿನ್ನೆಲೆಯಲ್ಲಿ ಸೋಮನಾಥ ದೇವಾಲಯ ಕಂಗೊಳಿಸುತ್ತಿದೆ. ಐದು ಸಾರಿ ನಾಶವಾದರೂ ಮತ್ತೆ ಅದೇ ಸ್ಥಳದಲ್ಲಿ ನಮ್ಮ ಸಂಸ್ಕೃತಿಯ ಪ್ರತೀಕವಾಗಿ ಪರಕೀಯರ ಧಾಳಿಗೆ ಸಿಕ್ಕದೆ ನಮ್ಮ ಜನರ ದೃಢ ಪ್ರಜ್ಞೆಯ ಸಂಕೇತವಾಗಿ ಸೋಮನಾಥ ದೇವಾಲಯ ಎದ್ದು ನಿಂತಿದೆ. ಪಾಶ್ಚಿಮಾತ್ಯ ಪುರಾಣದಲ್ಲಿರುವ ಫೀನಿಕ್ಸ್ ಪಕ್ಷಿಯಂತೆ ಪ್ರತಿ ನಾಶದ ಬೂದಿಯಲ್ಲಿ ಮತ್ತೆ ಎದ್ದು ಬದುಕಿದೆ.'' ಇದನ್ನು ಅವರದೇ ಆದ ರೀತಿಯಲ್ಲಿ ಬರೆದಿದ್ದಾರೆ. ಅವರು ಈಗಿನ ಕನ್ನಡ ಪ್ರಭ ಪತ್ರಿಕೆಯ ಚೀಫ್ ಎಡಿಟರ್‌ರವರಾದ ವೈ.ಎನ್. ಕೃಷ್ಣಮೂರ್ತಿಯವರು ಬರೆದಂಥ ಲೇಖನ ಇದು. ಅದನ್ನು ತರಿಸಿ ಓದೋಣ. ಅದರಲ್ಲಿ ತುಂಬಾ ವಿವರಗಳು ಇದೆ. ನಾನು ವಿವರಕ್ಕೆ ಹೋಗುವುದಕ್ಕೆ ಇಚ್ಛೆಪಡುವುದಿಲ್ಲ. ಇಷ್ಟಂತೂ ನಿಜ.

ಶ್ರೀ ಕಾಗೋಡು ತಿಮ್ಮಪ್ಪ:— ವೈ. ಎನ್. ಕೃಷ್ಣಮೂರ್ತಿಯವರು ಅಲ್ಲಿ ಮಸೀದಿ ಇದೆ ಎಂದು ಎಲ್ಲಿ ಬರೆದಿದ್ದಾರೆ? ನೀವು ಓದಿದ್ದರಲ್ಲಿ ಅದು ಇಲ್ಲವಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ:—ಇಷ್ಟು ಮಾತ್ರ ನಿಜ. ಘಜನಿ ಮಹಮದ್ ಸೋಮನಾಥ ದೇವಾಲಯಕ್ಕೆ ಬಂದು ಇದ್ದಂಥ ಮಂದಿರವನ್ನು ಕೆಡವಿ ಅಲ್ಲಿ ಮಸೀದಿಯನ್ನು ಕಟ್ಟುವಂಥ ಪ್ರಯತ್ನ ಮಾಡಿ ಅದನ್ನು ಕಟ್ಟಿ, ಅದರ ಪಕ್ಕದಲ್ಲಿಯೇ ಖಬರ್ ಸ್ಥಾನವನ್ನು ಮಾಡಿದಂಥ ಸತ್ಯಸಂಗತಿ ಚರಿತ್ರೆಯಲ್ಲಿದೆ.

SRI QUMARUL ISLAM:—I differ with his opinion This should also be recorded.

ಶ್ರೀ ಬಿ. ಎಸ್. ಯಡಿಯೂರಪ್ಪ:— ಮತ್ತೆ ಸನ್ಮಾನ್ಯ ಕಾಗೋಡು ತಿಮ್ಮಪ್ಪನವರು ಒಂದು ಪ್ರಶ್ನೆಯನ್ನು ಕೇಳಿದರು. ರಾಮ ಅಲ್ಲಿಯೇ ಹುಟ್ಟಿದ್ದಾನೆ ಎನ್ನುವುದಕ್ಕೆ ಸಾಕ್ಷಿ ಏನು, ಪುರಾವೆ ಏನು ಎಂಬ ಮಾತನ್ನು ಕೇಳಿದರು. ನಾನು ಕಾಗೋಡು ತಿಮ್ಮಪ್ಪನವರಿಗೆ ಒಂದು ಮಾತನ್ನು ಕೇಳುವುದಕ್ಕೆ ಬಯಸುತ್ತೇನೆ. ಇದು ಒಂದು ನಂಬಿಕೆಯ ಪ್ರಶ್ನೆ. ಕಾನೂನು ಚೌಕಟ್ಟಿನಲ್ಲಿ ತಾವು ಕೇಳುವುದಾದರೆ ರಾಮಜನ್ಮ ಸ್ಥಳ ಅದೇ ಎಂದು ಒಪ್ಪಲಾಗಿರುವುದಕ್ಕೆ ಕಾರಣ, ಆರ್ಕಿಯಾಲಜಿಕಲ್ ಡಿಪಾರ್ಟ್‌ಮೆಂಟ್‌ನವರು ಈಗ ಕೆಲವೇ ದಿವಸಗಳ ಹಿಂದೆ ಅಲ್ಲಿ ನಾಲ್ಕೈದು ಕಿಲೋ ಮೀಟರ್ ಅಷ್ಟು ದೂರದಲ್ಲಿ ನೆಲವನ್ನು ಅಗೆದು ನೋಡಿದಾಗ ಶ್ರೀರಾಮನ ಜನ್ಮ ಸ್ಥಳದ ಒಳಗಡೆ ಇರತಕ್ಕಂಥ ಕಂಬಗಳ ಆಕೃತಿಗಳು ಸಿಕ್ಕಿವೆ, ಫೋಟೋಗಳು ಸಿಕ್ಕಿವೆ, ಈ ಕಂಬಗಳು ೧೧ನೇ ಶತಮಾನಕ್ಕೆ ಸೇರಿದ್ದು ಎಂದು ಅಲ್ಲಿಯ ಯೋಜನಾ ತಂಡದ ನಿರ್ದೇಶಕ ಪ್ರೊಫೆಸರ್ ಬಿ.ಬಿ.ಲಾಲ್ ರವರು ಹೇಳಿದ್ದಾರೆ. ಮತ್ತೆ ಎರಡನೆಯದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇಲ್ಲಿ ಅಪಾರ್ಥ ಕಲ್ಪನೆ ಮಾಡುವುದಕ್ಕೆ ಹೊರಟಿರುವುದು ಏನೆಂದರೆ ಇದು ನಂಬಿಕೆಯ ಪ್ರಶ್ನೆ. ನನ್ನ ತಾಯಿ ಹೇಳಿದಳು ಇವನು ನಿಮ್ಮ ಅಪ್ಪ ಎಂದು ಅದನ್ನು ನಾವು

ಒಪ್ಪಿಕೊಂಡಿದ್ದೇವೆ. ಆದ್ದರಿಂದ ಈ ನಂಬಿಕೆಯ ಪ್ರಶ್ನೆಗಳಿಗೆ, ಶ್ರದ್ಧೆಯ ಪ್ರಶ್ನೆಗಳಿಗೆ ಅನೇಕ ಸಂದರ್ಭದಲ್ಲಿ ಉತ್ತರಗಳು ಸಿಗುವುದಿಲ್ಲ. ಮತ್ತೊಂದು ಸತ್ಯ ಸಂಗತಿ ಈ ರಾಜ್ಯದಿಂದ ಈ ದೇಶದಿಂದ ನಾವು ಕೇಳಬೇಕಾದುದು ಏನು ಅಂದರೆ ದಯಮಾಡಿ ಅಪಾರ್ಥ ಕಲ್ಪನೆ ಮಾಡಬೇಡಿ ಎಂದು, ಮಸೀದಿಯನ್ನು ತೆಗೆದು ಮಂದಿರವನ್ನು ಕಟ್ಟುತ್ತಾ ಇಲ್ಲ. ಈಗ ಮಂದಿರದ ಮೇಲೆ ಮಸೀದಿ ಇದೆ, ನನ್ನ ಮುಸ್ಲಿಮ್ ಬಂಧುಗಳು ಕಳೆದ ೪೦ ವರ್ಷಗಳಿಂದೀಚೆಗೆ ಅಲ್ಲಿ ನಮಾಜ್ ಮಾಡುತ್ತಾ ಇಲ್ಲ.

ಶ್ರೀ ಕೆ. ಹೆಚ್. ರಂಗನಾಥ್:—ಬ್ಲಿಡ್ಜ್ ಪತ್ರಿಕೆಯಲ್ಲಿ ಕಳೆದ ಎರಡು ವಾರದ ಹಿಂದೆ ಒಂದು ವಿಷಯ ವರದಿ ಆಗಿತ್ತು. ದಿವಂಗತ ವಲ್ಲಭಭಾಯಿ ಪಟೇಲ್‌ರವರು ದಿವಂಗತ ಗೋವಿಂದ ವಲ್ಲಭ ಪಂಥ್ ರವರಿಗೆ ಬರೆದ ಪತ್ರ ಉಲ್ಲೇಖ ಮಾಡಿ ೧೯೫೧ರಲ್ಲಿ ಇದ್ದಕ್ಕಿದ್ದಂತೆ ಅಲ್ಲಿ ಬಂದು ಇಡಲ್ಪಟ್ಟಿದೆ; ಇದರ ಬಗ್ಗೆ ಸರ್ಕಾರ ತೀವ್ರವಾಗಿ ಗಮನಿಸಬೇಕು ಹಾಗೆ ಎಂದು ಪತ್ರ ಬರೆದಿದ್ದುದು ವರದಿ ಆಗಿದೆ. ಮಾನ್ಯ ಯಡಿಯೂರಪ್ಪನವರು ನೋಡಿದ್ದಾರೋ ಇಲ್ಲವೋ ಗೊತ್ತಿಲ್ಲ. ನೋಡಿದ್ದರೆ ಅದರ ಬಗ್ಗೆ ತಮ್ಮ ಉಲ್ಲೇಖ ಏನು? ತಮ್ಮ ವಿಚಾರ ಏನು?

ಶ್ರೀ ಬಿ. ಎಸ್. ಯಡಿಯೂರಪ್ಪ:—ನಾನು ಅನೇಕ ಸಂಗತಿಗಳನ್ನು ಹೇಳಿದೆ; ನಾನು ನೋಡಿಲ್ಲ. ನಾನು ವಿದ್ಯಾವಂತ ಅಲ್ಲ. ನಾನು ಸ್ವಲ್ಪ ಮೂಢ ನಂಬಿಕೆ ಮೇಲೆ ಬೆಳೆದವನು.

ಶ್ರೀ ಕೆ.ಹೆಚ್. ರಂಗನಾಥ್:—ಸರ್ದಾರ್ ವಲ್ಲಭಭಾಯಿ ಪಟೇಲರು ಭಾರತದ ಹೋಮ್ ಮಿನಿಸ್ಟರ್ ಆಗಿದ್ದರು.

ಶ್ರೀ ಬಿ.ಯಸ್. ಯಡಿಯೂರಪ್ಪ:—ನಿಮ್ಮ ಮಾತಿನ ಬಗ್ಗೆ ಗೌರವ ಇದೆ. ಆದರೆ ನಾನು ನೋಡಿಲ್ಲವೆಂದು ಹೇಳಿದೆ. ಈ ರಾಜ್ಯದಲ್ಲಿ ನಡೆದಂತಹ ಎಲ್ಲ ಗಲಭೆಗಳಿಗೆ ರಾಮ ಜ್ಯೋತಿ ಮೆರವಣಿಗೆ ಕಾರಣ ಮತ್ತೆ ಸೋಮನಾಥ ದೇವಾಲಯದಿಂದ ಆಯೋಧ್ಯೆವರೆಗೆ ರಥ ಯಾತ್ರೆ ಹೊರಟಿದ್ದು ಕಾರಣ. ನಾನು ಬೇರೆ ಮಾನ್ಯ ಸದಸ್ಯರು ಮಾತನಾಡತಕ್ಕ ಸಂದರ್ಭದಲ್ಲಿ ಮಾಹಿತಿಗೋಸ್ಕರ ವಿನಂತಿ ಮಾಡಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಸನ್ಮಾನ್ಯ ಲಾಲ್ ಕೃಷ್ಣ ಅಧ್ವಾನಿಯವರು ಸೋಮನಾಥ ದಿಂದ ಉತ್ತರ ಪ್ರದೇಶದವರೆಗೆ ರಥ ಯಾತ್ರೆ ಹೊರಟಾಗ ಸುಮಾರು ೧೦೦ ಕಡೆ ಒಂದು ಲಕ್ಷದಿಂದ ಎರಡು ಎರಡೂವರೆ ಲಕ್ಷದವರೆಗೆ ಜನ ಸೇರಿದ್ದರು. ಸ್ವತಃ ಬೀದರ್‌ನಲ್ಲಿ, ಹುಮ್ನಾಬಾದ್‌ನಲ್ಲಿ ಅಕ್ಟೋಬರ್ ೩ನೇ ತಾರೀಖು ರಥ ಯಾತ್ರೆ ಬಂದಾಗ ಒಂದು ವಾರ ನಾವು ನೂರಾರು ಸಭೆಗಳನ್ನು ಮಾಡಿದ್ದೇವೆ. ಆಗ ಒಂದೇ ಒಂದು ಸಣ್ಣ ಘಟನೆ ನಡೆಯಲಿಲ್ಲ. ಹುಮ್ನಾಬಾದ್‌ನಲ್ಲಿ ಬೆಳಿಗ್ಗೆ ೧೦ ವರೆಗೆ ಬಂದಾಗ ೨೦-೩೦ ಸಾವಿರ ಜನ ಸೇರಿದ್ದರು ಅನೇಕ ಮುಸ್ಲಿಂ ಮುಖಂಡರು ಸಹ ಬಂದಿದ್ದರು, ಸ್ವಾಗತ ಮಾಡಿದ್ದಾರೆ ಹಾಗೂ ಆ ಕಾರ್ಯಕ್ರಮದಲ್ಲಿ ಮಾಲಾರ್ಪಣೆ ಮಾಡಿದ್ದಾರೆ, ಸನ್ಮಾನ್ಯ ಲಾಲ್ ಕೃಷ್ಣ ಅಧ್ವಾನಿಯವರು ಸೋಮನಾಥದಿಂದ ಅಯೋಧ್ಯೆವರೆಗೆ ಹೊರಟಂತಹ ಸಂದರ್ಭದಲ್ಲಿ ಗಲಭೆ ಆದಂತಹ ಒಂದೇ ಒಂದು ಉದಾಹರಣೆಯನ್ನು ತಾವು ಕೊಡಿ ಆದರೆ ಅಧಿಕಾರದಲ್ಲಿ ಇದ್ದಂತಹ ಜನರ ಉದ್ದೇಶ ಏನಿತ್ತು? ಹೇಗಾದರೂ ಮಾಡಿ ರಥ ಯಾತ್ರೆ ಮೂಲಕ ಶ್ರೀಮಾನ್ ಲಾಲ್ ಕೃಷ್ಣ ಅಧ್ವಾನಿ ಅವರು ಶ್ರೀರಾಮಚಂದ್ರನ ಜನ್ಮ ಸ್ಥಳದಲ್ಲಿ ದೇವಸ್ಥಾನವನ್ನು ಕಟ್ಟುವಂತಹ ಉದ್ದೇಶ ಏನಿತ್ತು. ಅಗತ್ಯ ಇದ್ದರೆ ನಾವೆಲ್ಲಾ ಸೇರಿ ಅದನ್ನು ಬೇರೆ ಕಡೆ ಶಿಫ್ಟ್ ಮಾಡುವುದಕ್ಕೆ ತಜ್ಞರು ಅಭಿಪ್ರಾಯ ಕೊಡುತ್ತಿದ್ದರು ಅನೇಕ ರೀತಿಯ ಕಟ್ಟಡಗಳು ಶಿಫ್ಟ್ ಮಾಡಿದ್ದೇವೆ. ಮಸೀದಿಯನ್ನು ಒಡೆಯಬೇಕು ಎನ್ನುವ ಉದ್ದೇಶ ಅಲ್ಲ. ಅಲ್ಪಸಂಖ್ಯಾತರಲ್ಲಿ ಉದ್ದೇಶ ಪೂರ್ವಕವಾಗಿ ಈ ರೀತಿಯಾಗಿ ಕೆಟ್ಟ ಭಾವನೆಯನ್ನು ಮೂಡಿಸುವುದರ ಬಗ್ಗೆ ಜಾಗೃತಿಯನ್ನು ಉಂಟು ಮಾಡುವುದಕ್ಕೆ ರಥ ಯಾತ್ರೆ ಹೊರಟಾಗ ವ್ಯವಸ್ಥಿತವಾದಂತಹ ಗಲಭೆಯನ್ನು ಮಾಡಿಸುವುದಕ್ಕೆ ಅನೇಕ ರಾಜಕೀಯ ಪಕ್ಷಗಳು ಪ್ರಯತ್ನ ಮಾಡಿದರು ಆದರೆ ಗಲಭೆ ಆಗಲಿಲ್ಲ. ಆದರೆ ಸಂಕಟ ಆಗುತ್ತಿರುವುದು. ಇವೊತ್ತು ಲಕ್ಷಾಂತರ ಜನರು ಈ ಮೆರವಣಿಗೆಯಲ್ಲಿ ಸೇರುತ್ತಿದ್ದಾರಲ್ಲ ಎಂದು. ಹಿಂದೂಗಳು ಜಾಗೃತ ರಾಗುತ್ತಿದ್ದಾರೆ ಭಿನ್ನ ಭಾವವನ್ನು ಮರೆಯುತ್ತಿದ್ದಾರೆ. ಈ ಒಂದು ಭಾವನೆಯಿಂದ ತಾವು ಏನು ಮಾತ ನಾಡುವುದಕ್ಕೆ ಪ್ರಯತ್ನ ಮಾಡಿ ಆರೋಪ ಮಾಡುತ್ತಿದ್ದೀರಿ ಅದಕ್ಕೆ ನಾನು ಪ್ರಾರಂಭದಲ್ಲಿ ಹೇಳಿದೆ. ನಾನು ಹೇಳಿದುದರಲ್ಲಿ ಸತ್ಯ ಇಷ್ಟೇ. ಈ ಸತ್ಯ ಏನು ಇದೆ ಅದು ಹೊರಗೆ ಬರಬೇಕಾಗಿದೆ. ಕೊನೆಯ ಪಕ್ಷ ಕರ್ನಾಟಕ ರಾಜ್ಯದ ಹಿತದೃಷ್ಟಿಯಿಂದ ಸತ್ಯ ಹೊರಗಡೆ ಬರಬೇಕಾಗುತ್ತದೆ. ದಯಮಾಡಿ ನಾನು ಹೇಳಿದಂತೆ ಸದನ ಸಮಿತಿ ಮಾಡಿ, ಇದರ ವಿವರವನ್ನು ತಂದು ಈ ಶಾಸನಸಭೆಯ ಮುಂದೆ ಇಟ್ಟು ಯಾರು ಈ ರೀತಿಯ ವರ್ತನೆಯನ್ನು ಮಾಡಿದ್ದಾರೆ, ಮತ್ತೊಮ್ಮೆ ಈ ರಾಜ್ಯದಲ್ಲಿ ಗಲಭೆ ಆಗದೇ ಇರುವ ದೃಷ್ಟಿಯಿಂದ, ಅವರ ಮೇಲೆ ಕ್ರಮ ತೆಗೆದುಕೊಳ್ಳುವುದು ಅತ್ಯಂತ ಅಗತ್ಯ ಇದೆ. ಈ ಕೆಲಸವನ್ನು ಸರ್ಕಾರ ಮಾಡಬೇಕು. ನಮ್ಮ ಪೂರ್ಣ ಸಹಕಾರ ಉಂಟು. ಇರಬಹುದು ನಮ್ಮ ಪಕ್ಷದಲ್ಲಿ ಕೆಲವು ಕಿಡಿಗೇಡಿಗಳು ಇರಬಹುದು, ಕಾಂಗ್ರೆಸ್ ಪಕ್ಷದಲ್ಲಿ ಇರಬಹುದು, ಬೇರೆ ಮುಸ್ಲಿಂ ಲೀಗ್‌ನಲ್ಲಿ

ಇರಬಹುದು ಅನೇಕ ಸಂಘ ಸಂಸ್ಥೆಗಳಲ್ಲಿ ಕೆಲವು ತಿಳಿಗೇಡಿಗಳು ಇರಬಹುದು. ನಾನು ಇಲ್ಲವೆಂದು ಹೇಳುವುದಿಲ್ಲ. ಅವನು ಮಾಡಿದ ತಪ್ಪನ್ನು ನಾನು ಮುಚ್ಚಿ ಹಾಕುವುದಕ್ಕೆ ಸಾಧ್ಯ ಇಲ್ಲ.

ಯಾರು ಎಷ್ಟೇ ದೊಡ್ಡ ಪರಾಗಿರಲಿ ಅವರ ಮೇಲೆ ಕ್ರಮ ಕೈಗೊಳ್ಳಬೇಕು. ಅಜೀಜ್‌ಸೇಟ್‌ರವರ ವಿರುದ್ಧ ಬಾಬರಿ ಸಮಿತಿ ಹೇಳಿಕೆ ಎಂದು ೬-೧೧-೯೦ರ ಪ್ರಜಾವಾಣಿ ಪತ್ರಿಕೆಯಲ್ಲಿ ಒಂದು ಸ್ಟೇಟ್‌ಮೆಂಟ್ ಬಂದಿದೆ. ರಾಜ್ಯದಲ್ಲಿ ನಡೆದ ಕೋಮುಗಲಭೆಯ ಬಗ್ಗೆ ಪ್ರಚೋದನಕಾರಿ ಹೇಳಿಕೆ ನೀಡಿ, ಪ್ರಕ್ಷುಬ್ಧ ಸ್ಥಿತಿ ಉಲ್ಬಣಕ್ಕೆ ಕಾರಣವೆನ್ನಲಾದ ಸಚಿವ ಅಜೀಜ್‌ಸೇಟ್ ಅವರನ್ನು ಸಚಿವ ಸಂಪುಟದಿಂದ ವಜಾ ಮಾಡುವಂತೆ ಮುಖ್ಯಮಂತ್ರಿಯವರನ್ನು ಅಖಿಲ ಭಾರತ ಬಾಬರಿ ಮಸೀದಿ ಕ್ರಿಯಾ ಸಮಿತಿಯ ಕರ್ನಾಟಕ ಘಟಕ ಆಗ್ರಹಪಡಿಸಿದೆ. ಗಲಭೆ ಪೀಡಿತ ಕುಣಿಗಲ್ ತಾಲ್ಲೂಕಿಗೆ ಭೇಟಿ ನೀಡಿದ ಅಜೀಜ್ ಸೇಠ್ ಅನಂತರ ಪತ್ರಿಕಾಗೋಷ್ಠಿಯಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯದಿಂದ ರಾಜ್ಯದ ಚನ್ನಪಟ್ಟಣ ಮತ್ತು ರಾಮನಗರಗಳಲ್ಲಿ ಅಶಾಂತಿ ಮರುಕಳಿಸಲು ಕಾರಣವಾಯಿತು ಎಂದು ಸಮಿತಿಯ ಕಾರ್ಯದರ್ಶಿ ಎಂ.ಜೆ. ಅಲಿ ಹೇಳಿಕೆನೀಡಿ ಆರ್ಪಿಸಿದ್ದಾರೆ. ನಾನು ಹೇಳುತ್ತೇನೆ, ಇದು ಸತ್ಯವಿಲ್ಲದೆ ಇರಬಹುದು, ನಾನು ಮುಖ್ಯಮಂತ್ರಿಯವರನ್ನು ಹಾಗೂ ಗೃಹ ಸಚಿವರನ್ನು ಕೇಳುತ್ತೇನೆ. ಈ ಬಾಬರಿ ಮಸೀದಿ ಸಮಿತಿಯವರು ಮಂತ್ರಿ ಸ್ಥಾನದಲ್ಲಿರುವಂತಹ ಹಿರಿಯರ ಬಗ್ಗೆ ಈ ರೀತಿ ಆರೋಪ ಮಾಡಿದಾಗ, ಈ ಸದನದ ಸಮಿತಿ ಹೋಗಿ ವರದಿ ಬರುವವರೆಗೆ ಅಧಿಕಾರಿಗಳ ಮೇಲೆ ಅವರು ಇನ್‌ಫ್ಲೂಯೆನ್ಸ್ ಆಗದಂತೆ ಪ್ರಮಾಣಿಕ ತನಿಖೆಯಾಗಬೇಕೆನ್ನುವ ಇಚ್ಛೆ ತಮಗೆ ಇದ್ದರೆ, ದಯಮಾಡಿ ಈ ತನಿಖೆ ವರದಿ ಬರುವವರೆಗೆ ಅವರನ್ನು ಮಂತ್ರಿಮಂಡಲದಿಂದ ಬಿಡಿಸಿ; ಕೊನೆಗೆ ಮಂತ್ರಿಮಂಡಲದಿಂದ ಅವರನ್ನು ಕೈಬಿಡಿ. ಅವರು ಈ ಇನ್‌ಫ್ಲೂಯೆನ್ಸ್ ಮಾಡುವುದು ತಪ್ಪಲಿ ಎನ್ನುವ ಕಾರಣಕ್ಕೋಸ್ಕರ ಈ ಸಲಹೆ ಕೊಡುತ್ತಿದ್ದೇನೆ. ಸ್ವೀಕಾರ ಮಾಡುವುದು ಬಿಡುವುದು ನಿಮಗೆ ಬಿಟ್ಟಿದ್ದು, ನಾನು ಬಲವಂತ ಮಾಡುವುದಿಲ್ಲ. ಇದು ಕೇವಲ ನನ್ನ ಸಲಹೆ ಮಾತ್ರ, ಸನ್ಮಾನ್ಯ ನಮ್ಮ ಸ್ನೇಹಿತರಾದ ಮುಸ್ಲಿಂಲೀಗ್ ಶಾಸಕರು ಹೇಳಿದರು, ಏನೆಂದರೆ ಅನೇಕ ಕಡೆ ನಿರಾಪರಾಧಿ ಜನರ ತೋಟಗಳನ್ನು ಹಾಳು ಮಾಡಿದ್ದಾರೆ ಕೋಟ್ಯಾಂತರ ರೂಪಾಯಿ ಲಾಸ್ ಆಗಿದೆ. ಇದು ನಮಗೆ ಯಾರಿಗೂ ಗೌರವ ತರುವಂತಹ ಸಂಗತಿ ಅಲ್ಲ. ಅವರ ಮೇಲೆ ಉಗ್ರವಾದ ಕ್ರಮ ತೆಗೆದುಕೊಳ್ಳಬೇಕು. ಕನ್ನಡಪ್ರಭಾ ಪತ್ರಿಕೆಯ ಮುಖಪುಟದಲ್ಲಿ ರಾಜಕೀಯ ದ್ವೇಷಕ್ಕೆ ಮಾವಿನ ತೋಪು ಬಲಿ ಇದು ನಾಟಕೀಯ ಎಂದು ಅದರಲ್ಲಿ ಹೇಳಿದ್ದಾರೆ.

> ''ಜ್ಯೋತಿಗೆ ಪ್ರವೇಶನೀಡಲು ಅವಕಾಶ ನೀಡಲಿಲ್ಲವೆಂದು ಕೆಲವು ದುಷ್ಕರ್ಮಿಗಳು ಪೂರ್ವಾಗ್ರಹಪೀಡಿತರಾಗಿ ಅಕ್ಟೋಬರ್ ೧ ರಂದು ದಾಂಧಲೆ ನಡೆಸಿದರು. ಇದು ಒಂದು ಭಾಗ. ಅನಂತರ ನಡೆದ ಘಟನೆಗಳು ನಾಟಕೀಯ ತಿರುವು ಪಡೆದವು. ಶ್ರೀನಿವಾಸಪುರದ ಅಲ್ಪಸಂಖ್ಯಾತರು ಜನತಾದಳದ ಕಟ್ಟಾಬೆಂಬಲಿಗರು ಮಾಜಿ ಶಾಸಕ ರಮೇಶ್ ಕುಮಾರ್‌ರವರ ಅನುಯಾಯಿಗಳು. ಇದರಿಂದಾಗಿ ಕಾಂಗ್ರೆಸ್ (ಐ) ಮುಖಂಡತ್ವ ಅಲ್ಪಸಂಖ್ಯಾಂತರ ವಿರುದ್ಧ ಈರ್ಷೆ ಹೊಂದಿತ್ತು ಮಾವಿನ ತೋಪುಗಳ ನಾಶದ ಹಿನ್ನೆಲೆಯಲ್ಲಿ ಆರ್.ಎಸ್.ಎಸ್ ಅಥವಾ ಭಾರತೀಯ ಜನತಾಪಕ್ಷದ ಕೈವಾಡವಿಲ್ಲ. ಇದೆಲ್ಲ ಹತಾಶೆಗೊಂಡ ಕಾಂಗ್ರೆಸ್ (ಐ)ನ ಮುಖಂಡತ್ವದ ದುಷ್ಕೃತ್ಯವೆಂದು ಅಲ್ಪಸಂಖ್ಯಾತರ ಅಭಿಪ್ರಾಯ ಪಟ್ಟಿದ್ದಾರೆ.
>
> ಮಾವಿನ ತೋಪುಗಳು ಅನೇಕರ ಜೀವನಕ್ಕೆ ಆಧಾರವಾಗಿರುವುದರಿಂದ ಅವುಗಳನ್ನು ನಾಶ ಮಾಡಿದಲ್ಲಿ ಅಲ್ಪಸಂಖ್ಯಾತರು ತಮ್ಮ ತೆಕ್ಕೆಗೆ ಬರಬಹುದೆಂದು ಕಾಂಗ್ರೆ ಲೆಕ್ಕಾಚಾರ. ಮಾವಿನ ತೋಪುಗಳ ನಾಶದ ಹಿನ್ನೆಲೆಯಲ್ಲಿ ಕಾಂಗ್ರೆ ಕೈವಾಡವಿದೆ ಎಂಬುದಕ್ಕೆ ಆಧಾರ ನಾಶವಾಗಿರುವ ಬಹುತೇಕ ತೋಪುಗಳು ಜನತಾದಳಕ್ಕೆ ಸೇರಿದ ಅಲ್ಪಸಂಖ್ಯಾತರದು. ಕಾಂಗ್ರೆಸವರಿಗೆ ಸೇರಿದ ಒಂದೆರಡು ತೋಪುಗಳನ್ನು ನಾಶಮಾಡಲಾಗಿದೆ. ಇತರರಿಗೆ ಅನುಮಾನ ಬಾರದಿರಲ್ಲಿ ಎಂದು ಅಲ್ಲಲ್ಲಿ ರೆಂಬೆಗಳನ್ನು ಮಾತ್ರ ಕತ್ತರಿಸಲಾಗಿದೆ. ನಾನೂರು ಎಕರೆಯಲ್ಲಿ ಸಮೃದವಾಗಿ ಬೆಳೆದಿದ್ದ ಹತ್ತು ಸಾವಿರಕ್ಕೂ ಹೆಚ್ಚು ಮರಗಳನ್ನು ಕತ್ತರಿಸಲಾಗಿದೆ.

ನಾವು ಈ ವರದಿಯ ಆಧಾರದ ಮೇಲೆ ಕೆಲಸ ಮಾಡುವುದಕ್ಕಾಗುವುದಿಲ್ಲ. ಆದರೆ ಸತ್ಯವನ್ನು ಪರಿಶೋಧನೆ ಮಾಡಿ. ಸತ್ಯವನ್ನು ತಿಳಿಯುವುದಕ್ಕೆ ಮುಂಚೆ ವಿಶ್ವಹಿಂದೂ ಪರಿಷತ್ ಎಂದು ಹೇಳುತ್ತೀರಿ ಮಾನ್ಯ ಹಿರಿಯಸಚಿವರಾದಂತಹ ಮಾನ್ಯ ಬಸವಲಿಂಗಪ್ಪನವರು ಪ್ರಮುಖ ಸ್ಥಾನದಲ್ಲಿರತಕ್ಕವರು ಎಲ್ಲಿಯವರೆಗೂ ಹೋದರು ಸ್ವಾಮಿ ? ಶಾಂತಿ ಸಮಿತಿಯ ಸಭೆಯಲ್ಲಿ ಮಂಡ್ಯಜಿಲ್ಲೆಯ ಡೆಪ್ಯೂಟಿ ಕಮಿಷನರ್‌ರವರು ಶ್ರೀರಂಗಪಟ್ಟಣದಲ್ಲಿ ಬಿ.ಜೆ ಪಿ. ಯವರು ಹೊರಗಡೆಎಂದುಹೋಗಿ, ಶಾಂತಿ ಸಮಿತಿಯಲ್ಲಿಇರುವ ಹಾಗಿಲ್ಲವೆಂದು, ಮಾನ್ಯ ಬಸವಲಿಂಗಪ್ಪನವರು ಶಾಂತಿ ಸಭೆಯಲ್ಲಿ ಹೇಳುತ್ತಾರೆ. ಬಿ.ಜೆ.ಪಿ. ಯವರು ಹೊರಗೆ ಹೋಗಿ ಎಂದು, ಯಾರ ಬಗ್ಗೆ ಮಾತನಾಡುತ್ತೀದ್ದೀರಿ ಸ್ವಾಮಿ ? ಒಂದು ರಾಜಕೀಯ ಪಕ್ಷವಾಗಿ

ಅಧಿಕಾರ ಸಿಕ್ಕಿದ ತಕ್ಷಣ ನಿಮ್ಮ ಬಾಯಿಂದ ಬೇರೆ ರಾಜಕೀಯ ಪಕ್ಷದ ಕಾರ್ಯಕರ್ತರ ಮೇಲೆ ಈ ಮಾತು ಬಂದಾಗ, ನಿಮ್ಮನ್ನು ತೃಪ್ತಿಪಡಿಸುವುದಕ್ಕೆ ಅಧಿಕಾರ ನಡೆಸುತ್ತಿರುವ ಕೆಲವು ಅಧಿಕಾರಿಗಳು ಯಾವ ರೀತಿ ರಾಜಕೀಯ ಪಕ್ಷದ ಕಾರ್ಯಕರ್ತರ ಮೇಲೆ ವರ್ತನೆ ಮಾಡಬಹುದೆಂದು ಆರೋಪ ಮಾಡುವುದಕ್ಕೆ ಮುಂಚೆ ಯೋಚನೆ ಮಾಡಿದ್ದೀರಾ ? ಈ ರೀತಿ ಎಲ್ಲಾ ಘಟನೆಗಳನ್ನು ತಮ್ಮ ಅನುಕೂಲಕ್ಕೆ ಉಪಯೋಗ ಮಾಡಿಕೊಂಡಿದ್ದೀರಿ ? ಮತ್ತೊಂದು ಆಶ್ಚರ್ಯ ಪಡುವ ಉದಾಹರಣೆ ಕೊಡುತ್ತೇನೆ.

ಶ್ರೀನಿವಾಸಪುರ ತಾಲ್ಲೂಕು ರಾಯಲ್ಪಾಡು ಹೋಬಳಿ, ರಾಜಸ್ವ ನಿರೀಕ್ಷಕರ ರೂಬು ರೂಬು ಗೌನಪಲ್ಲಿ, ಸೋಡಿಪಲ್ಲಿ, ರೆಡ್ಡಿ ಮಾರಿಪಲ್ಲಿ, ಬೈಕೊತ್ತೂರು, ಗುಡ್ರಾಜಪಲ್ಲಿ ಇವರುಗಳು ಹೇಳಿ ಬರೆಯಿಸಿದ ಮಹಜರ್ ಇದರಲ್ಲಿ ಏನಿದೆ ಅಂದರೆ ಗೌನಪಲ್ಲಿ ಗ್ರಾಮದ ವಾಸಿ ಪಿ. ಮಾದರ್‌ಸಾಬ್ ಬಿನ್ ಪೂಲು ಪೀರೊ ಸಾಬ್ ಇವರು ನನ್ನ ಸರ್ವೆ ನಂ. ೨೬೦ ರಲ್ಲಿ ೩ ಎಕರೆ ೧೪,೫ ಗುಂಟೆಯಲ್ಲಿ ಹಾಕಿದ್ದ ೧೦೦ ಮಾವಿನ ಮರಗಳನ್ನು ಈಗ ನಡೆಯುತ್ತಿರುವ ಕೋಮುಗಲಭೆಯಲ್ಲಿ ಯಾರೋ ದುಷ್ಕರ್ಮಿಗಳು ಸಂಪೂರ್ಣವಾಗಿ ಹಾಳುಮಾಡಿದ್ದಾರೆಂದು ಹೇಳಿ ಪರಿಹಾರಕ್ಕಾಗಿ ಕಂಪ್ಲೇಂಟ್ ಕೊಟ್ಟರು. ರಾಜಸ್ವ ನಿರೀಕ್ಷಕರು ತನಿಖೆಗೆ ಹೋದರು. ತನಿಖೆಗೆ ಹೋದಾಗ ಅಲ್ಲಿ ಜನ ಸೇರಿ ದುಡ್ಡಿನ ಸಲುವಾಗಿ ಈ ರೀತಿಯ ಸುಳ್ಳು ವದಂತಿಯನ್ನು ಹರಡಿದ್ದು ಅವರೇ ಈ ಕೆಲಸವನ್ನು ಮಾಡಿದ್ದಾರೆ. ಹಾಗೂ ಕೋಮು ಗಲಭೆಗೆ ಮಾಡಲು ಪ್ರಚೋದನೆ ಮಾಡುತ್ತಿದ್ದಾರೆ, ಈ ಬಗ್ಗೆ ಸರ್ಕಾರದ ವತಿಯಿಂದ ಯಾವುದೇ ರೀತಿ ಪರಿಹಾರ ಮಂಜೂರುಮಾಡಬಾರದೆಂದು ಹಾಗೂ ಈ ಅರ್ಜಿ ಕೊಟ್ಟ ಬಗ್ಗೆ ಯಾವುದೇ ಕೋಮು ಗಲಭೆ ಆಗದಂತೆ ವ್ಯವಸ್ಥೆ ಮಾಡಬೇಕೆಂದು ಜನಗಳಲ್ಲಿ ಒಳ್ಳೆಯ ಭಾವನೆ ಇಟ್ಟುಕೊಂಡು ಮುಂದೆ ಅವನು ಬಾಳ್ವೆ ಮಾಡಬೇಕೆಂದು ಮಹಜರ್ ಮಾಡಲಾಯಿತು. ಈ ಮಹಜರ್‌ಗೆ ಸ್ವತಃ ಈ ಮೇಲ್ಕಂಡ ಸಂಗತಿ ಸರಿಯಾಗಿದ್ದು, ನಾನು ಕೊಟ್ಟಿರುವ ಅರ್ಜಿಯನ್ನು ನಾನು ವಾಪಸ್ ಪಡೆದುಕೊಳ್ಳುತ್ತಿದ್ದೇನೆಂದು ಹೇಳಿ ಮಾದರಸಾಬ್ ಸಹಿ ಮಾಡಿದ್ದಾರೆ ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಈ ರೀತಿ ಸಾವಿರಾರು ಎಕರೆ ತೋಟ ಮಾವಿನಗಿಡಗಳನ್ನು ಹಾಳು ಮಾಡುವ ಸಂದರ್ಭದಲ್ಲಿ ದುಷ್ಕರ್ಮಿಗಳ ಕೈವಾಡ ಇರಬಹುದೆಂದು.

ಶ್ರೀ ವಾಟಾಳ್ ನಾಗರಾಜ್.—ಮಾದರಸ ಬಸವೇಶ್ವರರ ಕಾಲದಲ್ಲಿ ಇವರು ಮಾದರ್ ಸಾಬ್.

ಶ್ರೀ ಬಿ. ಎಸ್. ಯಡಿಯೂರಪ್ಪ.—ಕ್ಷಮಿಸಬೇಕು. ನಾನು ರೆಕಾರ್ಡ್‌ನಲ್ಲಿ ಬರೆದುದನ್ನು ನಾನು ಓದಿದೆ. ಅದಕ್ಕೋಸ್ಕರ ನಾನು ಏನು ಹೇಳುತ್ತೇನೆಂದರೆ, ಮಾದರ್ ಸಾಬ್‌ರವರೇ ಹೇಳಿಕೆಯನ್ನು ಕೊಟ್ಟಿದ್ದಾರೆ. ಇದು ಒಂದು ಸಣ್ಣ ಉದಾಹರಣೆ ಯಾವುದೋ ಪುಕ್ಕಟೆ ದುಡ್ಡು ಬರುತ್ತದೆ ಯಾರ್ಯಾರು ಏನೇನು ಬೇಕಾದರೂ ಮಾಡಿಕೊಂಡಿರುವ ಸಂದರ್ಭ ಇರಬಹುದು, ಸತ್ಯ ಸಂಗತಿಗಳೂ ಇರಬಹುದು. ಒಂದು ಕಡೆ ಕಾಂಗ್ರೆಸ್ ಕೈವಾಡ ಇದೆಯೆಂದು ಹೇಳುತ್ತಾರೆ. ಮತ್ತೊಂದು ಕಡೆ ಹೇಳುತ್ತಾರೆ, ಇವತ್ತು ಸ್ವತಃ ಅವರೇ ಮಾವಿನ ಗಿಡಗಳನ್ನು ಕಡಿದು ಅದರ ದುರುಪಯೋಗ ಮಾಡಿಕೊಳ್ಳುವುದಕ್ಕೆ ಹೊರಟಿದ್ದಾರೆಂದು, ಮಗದೊಂದು ಕಡೆ ವಿಶ್ವ ಹಿಂದೂ ಪರಿಷತ್ ಆರ್. ಎಸ್. ಎಸ್. ಕಾರಣವೆಂದು ಹೇಳುತ್ತಾರೆ ಆದ್ದರಿಂದ ಇಲ್ಲಿ ಕುಳಿತಿರತಕ್ಕಂಥ ಪೋಲೀಸ್ ಅಧಿಕಾರಿಗಳನ್ನು ಕೇಳುತ್ತೇನೆ, ನಿಮ್ಮ ಇಂಟೆಲಿಜೆನ್ಸ್ ಸತ್ತಿತ್ತೇ. ಅವರು ಏನು ಮಾಡುತ್ತಿದ್ದರು ಸ್ವಾಮಿ ಬಿಗಿಯಾಗಿ, ಏನೂ ಗಲಭೆಯಾಗದ ಹಾಗೆ ನೋಡಿಕೊಳ್ಳುವ ವ್ಯವಸ್ಥೆ ನಿಮಗೆ ಇರಲಿಲ್ಲವೇ ? ರಾಮ ಜ್ಯೋತಿ ಮೆರವಣಿಗೆ ಹೋದಂಥ ಸಂದರ್ಭದಲ್ಲಿ ಅದನ್ನು ತಡೆಯುವಂಥ ಪ್ರಯತ್ನ ಮಾಡಿದವರಿಗೆ ಹುಷಾರ್ ತಡೆಯುವುದಕ್ಕೆ ಬಿಡುವುದಿಲ್ಲ ಎನ್ನುವ ಶಕ್ತಿ ಅಧಿಕಾರಿಗಳಿಗೆ ಬರಲಿಲ್ಲವೇ ? ಆ ರೀತಿ ಹೇಳಿ ಎನ್ನುವ ಧೈರ್ಯ ಸರ್ಕಾರಕ್ಕೆ ಬರಲಿಲ್ಲವೇ ? ಲೋಕ ನಾಯಕ ಶ್ರೀ ಜಯಪ್ರಕಾಶ್ ನಾರಾಯಣ್ ಏನು ಕರೆ ಕೊಟ್ಟಿದ್ದರು ? ಯಾವುದೇ ಸರ್ಕಾರವೇ ಅಧಿಕಾರದಲ್ಲಿ ಇರಲಿ, ಕಾನೂನು ಬಾಹಿರ ಕ್ರಮವನ್ನು ಮಾಡಿ ಎಂದು ಅಧಿಕಾರಿಗಳಿಗೆ ಹೇಳಿದಾಗ, ಅದನ್ನು ಧಿಕ್ಕರಿಸುವ ಈ ಸ್ವತಂತ್ರ ಭಾರತದಲ್ಲಿ ಹೊರಬರುವ ಧೈರ್ಯ ಅಧಿಕಾರಿಗಳಿಗೆ ಬರಬೇಕೆಂದು ಹೇಳಿದರು. ಆದರೆ ಕೇವಲ ಕುರ್ಚಿಯಲ್ಲಿ ಉಳಿಯಬೇಕೆಂಬ ಸ್ವಾರ್ಥಕ್ಕೋಸ್ಕರ ಕೆಲವರು, ಪ್ರೊಮೋಷನ್ ಸಿಗುತ್ತದೆಂದು ಮತ್ತೆ ಕೆಲವರು ಯಾರದೋ ಹಿಂದೆ ಹೋದರೆ, ಕೆಲವು ಅಧಿಕಾರಿಗಳು ತಾನು ಮಾಡಿದ ಹಣ ಉಳಿಯಬಹುದು ಎನ್ನುವುದಕ್ಕೋಸ್ಕರ ಮನಬಂದಂತೆ ನಡೆದುಕೊಂಡಿದ್ದಾರೆ. ಇದರ ಬ್ಲಾಕ್ ಲಿಸ್ಟ್ ನಾವು ಮಾಡುತ್ತಿದ್ದೇವೆ. ಸುಲಭವಲ್ಲ. ಇದನ್ನು ನಾವು ಇಷ್ಟಕ್ಕೇ ಬಿಡುವುದಿಲ್ಲ.

(ಗೊಂದಲ)

ಮಾನ್ಯ ಸದಸ್ಯರೊಬ್ಬರು.—ಮಾನ್ಯ ಅಧ್ಯಕ್ಷಣಿಯವರೇ. ಇವರು ಏನು ಹೇಳುತ್ತಿದ್ದಾರೆ ಅಂದರೆ ರಾಮ ರಥ ಯಾತ್ರೆಗೆ ಅವಕಾಶ ಕೊಟ್ಟಿದ್ದು ತಪ್ಪು ಅಧಿಕಾರಿಗಳು ಮೊದಲು ರಥ ಯಾತ್ರೆಯನ್ನು

ತಡೆದು ಅವರನ್ನು ಅರೆಸ್ಟ್ ಮಾಡಿ ಒಳಗೆ ಹಾಕಿದ್ದರೆ ಸರಿಹೋಗುತ್ತಿತ್ತು. ಅದನ್ನು ಮಾಡಲಿಲ್ಲ. ಅದಕ್ಕೆ ಅಧಿಕಾರಿಗಳನ್ನು ಸರಿಯಿಲ್ಲವೆಂದು ಹೇಳುತ್ತಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷಿಣಿಯವರೇ, ನಾನು ನಿಮ್ಮನ್ನು ಕೇಳುತ್ತೇನೆ. ಯಾರು ನಿಮಗೆ ಅಧಿಕಾರ ಕೊಟ್ಟಿದ್ದರು. ಈ ದೇಶದಲ್ಲಿ, ಸ್ವತಂತ್ರ ಭಾರತದಲ್ಲಿ ಲಕ್ಷಾಂತರ ಜನ ಪ್ರಾಣ ಕೊಟ್ಟು ಈ ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ, ನಮ್ಮ ಧರ್ಮಕ್ಕೆ ಅನುಕೂಲಕರವಾಗಿ ನಾವು ಮೆರವಣಿಗೆ ಮಾಡಲು ಬಿಡುವುದಿಲ್ಲ ಎನ್ನುವ ಬಾಯಿಗಳು ಯಾವುದು ಆ ಸರ್ಕಾರ ಯಾವುದು ಇದನ್ನು ಜನ ಸಹಿಸುವುದಿಲ್ಲ. ತುರ್ತು ಪರಿಸ್ಥಿತಿಯಲ್ಲಿ ಏನಾಯಿತು ? ಜನ ಮಾತನಾಡಲಿಲ್ಲ. ಜೈಲಿನೊಳಗಿದ್ದಂಥವರು ಚುನಾವಣೆಗೆ ನಿಂತಾಗ, ೨-೩ ಲಕ್ಷ ಮತಗಳ ಅಂತರದಿಂದ ಗೆದ್ದರು. ಭಯ ಏಕೆ ? ನಾನು ಇದನ್ನು ರಾಜಕೀಯ ಮಾಡುವ ಪ್ರಯತ್ನ ಮಾಡುತ್ತಿಲ್ಲ. ನಾನು ಮಾಡುತ್ತಿರುವುದು ಸದನಕ್ಕೆ ಮತ್ತು ನಮ್ಮ ಮಾನ್ಯ ಶಾಸಕ ಸ್ನೇಹಿತರ ಗಮನಕ್ಕೆ ತರುತ್ತಿರುವ ಪ್ರಯತ್ನ ಮಾಡುತ್ತಿದ್ದೇನೆ. ದಯಮಾಡಿ ಎಲ್ಲದ್ದಕ್ಕೂ ರಾಜಕೀಯ ಬೆರಸಬೇಡಿ. ನಾವು ರಾಜಕೀಯ ಮಾಡುತ್ತಿದ್ದೇವೆಂದು ನಿಮಗೆ ಅನಿಸಿದರೆ, ನಾನು ಪ್ರಾರಂಭದಲ್ಲೇ ಸನ್ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರಿಗೆ ಹೇಳಿದೆ, ನಮ್ಮ ಶಾಂತಿಪ್ರಿಯ ಶ್ರೀರಾಮ ಮಂದಿರವನ್ನು ಜನ್ಮಸ್ಥಾನದಲ್ಲಿ ಕಟ್ಟಬೇಕೆಂದು ಹೇಳಿದಾಗ, ನಾವೆಲ್ಲಾ ಸೇರಿ ಕಟ್ಟೋಣ, ನಿಮ್ಮದು ಏನು ಎಂದು ಹೇಳಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು. ವಿಶ್ವ ಹಿಂದೂ ಪರಿಷತ್‌ರವರನ್ನು ಕರೆಯಿರಿ, ಸಾಧು ಸಂತರನ್ನು ಕರೆಸಿ, ಎಲ್ಲಾ ರಾಜಕೀಯ ಪಕ್ಷಗಳವರೂ ಸೇರೋಣ. ಯಾವ ಸ್ಥಳದಲ್ಲಿ ಮಂದಿರವಿದೆ, ಅಲ್ಲಿ ಭವ್ಯ ಮಂದಿರ ಕಟ್ಟುವುದಕ್ಕೆ ಹೊರಟಿರುವಾಗ, ಇದನ್ನು ಮಾಡೋಣ. ಇದರ ಬಗ್ಗೆ ಬಿಗಿ ಹಿಡಿಯುವ ಅಗತ್ಯವಿಲ್ಲ ನಮ್ಮ ಮುಸ್ಲಿಮ್ ಸ್ನೇಹಿತರಿಗೆ ತಿಳಿಹೇಳುವ ಪ್ರಯತ್ನ ಮಾಡಿದ್ದರೆ ಅವರು ಬೇಡವೆಂದು ಹೇಳುತ್ತಿರಲಿಲ್ಲ. ಆ ಪ್ರಯತ್ನ ನಮ್ಮಿಂದ ಆಗದೇ ಇರುವುದರಿಂದ, ಇವೊತ್ತು ಮಸೀದಿಯನ್ನು ಶಿಫ್ಟ್ ಮಾಡಿ.........

(ಗೊಂದಲ)

SRI QUMARULISLAMM.—I am on a Point of Order.

(Interruption)

ಶ್ರೀ ಬಿ. ಎಸ್. ಯಡಿಯೂರಪ್ಪ.—ಇಲ್ಲಿ ಪಾಯಿಂಟ್ ಆಫ್ ಆರ್ಡರ್ ಪ್ರಶ್ನೆ ಇಲ್ಲ. ನನಗೆ ಅಡ್ಡಿಪಡಿಸಲು ನೀವು ಯಾರು ?

SRI QAMARUL ISLAM.— I am on a point of order.

SRI B,S.YEDIYURAPPA-— I am sorry; you cannot disturb me.

MADAM CHAIRMAN.— Let us hear what the Point of Order of the Hon'ble Member is.

SRI QAMARUL ISLAM.— I have not understood what is the meaning of shifting of Babri Masjid. How it is to be shifted and after shifting how it remains, where will it be shifted. Let the Hon'ble Member explain where he will shift it.

(Interruptions)

SRI B.S. YEDIYURAPPA.— Is it a Point of Order?

SRI QAMARUL ISLAM.— I wanted to say that this matter is pending in the Court. Here the discussion on Law and order is going on. No sentence should be uttered regarding the significance of Mosque. If my friend wants to say something regarding Masjid. I have to be given the time to explain because, there was not at all Mandir there, No Mandir was existing there.

(At this stage. the Hon'ble Member spoke in Urdu)

MADAM CHAIRMAN.— There is no Point of order. Please sit down.

೩.೧೦ ಪಿ.ಎಂ.

ಶ್ರೀ ಬಿ.ಎಸ್. ಯಡಿಯೂರಪ್ಪ.— ಮಾನ್ಯ ಉಪಾಧ್ಯಕ್ಷಿಣಿಯವರೇ, ಮಾನ್ಯ ಸ್ನೇಹಿತರಾದಂಥ ಕರ್ನಲ್ ಇಸ್ಮಾಂ ಅವರಲ್ಲಿ ನಾನು ವಿನಂತಿ ಮಾಡುತ್ತೇನೆ. ನೆನ್ನೆ ತಾವು ಒಂದು ಮಾತನ್ನು ಹೇಳಿದಿರಿ. ತಾವು ಮಾತನಾಡತಕ್ಕ ಕಾಲದಲ್ಲಿ ನಾನು ಎದ್ದು ಕ್ಲಾರಿಫಿಕೇಷನ್ ಕೊಡಲಿಕ್ಕೆ ನಿಂತಾಗ ಯಡಿಯೂರಪ್ಪನವರೆ, ದಯಮಾಡಿ ಡಿಸ್ಟರ್ಬ್ ಮಾಡಬೇಡಿ, ನಾನು ಏನು ಹೇಳಬೇಕೋ ಅದನ್ನು ಹೇಳುತ್ತೇನೆ. ನೀವು ಮಾತನಾಡಬೇಕಾದರೆ ಏನು ಬೇಕೋ ಹೇಳಿ ನಿಮಗೆ ಸ್ವಾತಂತ್ರ್ಯ ಇದೆ ಎಂದು ಹೇಳಿದಿರಿ. ಆದರೂ ನೀವು ಅನಿವಾರ್ಯವಾಗಿ ಕೆಲವು ಪಾಯಿಂಟ್ ಹೇಳುವುದಾದರೆ, ಒಂದು ಪಾರ್ಲಿಮೆಂಟರಿ ಸಿಸ್ಟಮ್‌ನಲ್ಲಿ ನೀವು ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬಾರದೆಂದು ಅಲ್ಲ. ಆದರೆ ಅದು ಒಂದು ಪಾಯಿಂಟ್ ಆಫ್ ಆರ್ಡರ್ ಅಲ್ಲ. ನೀವು ಕೇಳಿದಂಥ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಕೊಡಲಿಕ್ಕೆ ನಾನು ನಿಂತಿಲ್ಲ. ತಾವು ಸರ್ಕಾರದ ಕಡೆಯಿಂದ ಉತ್ತರವನ್ನು ತೆಗೆದುಕೊಳ್ಳಿ ಎಂದು ಮಾತ್ರ ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಸನ್ಮಾನ್ಯ ಅಧ್ಯಕ್ಷಣಿಯವರೆ, ಒಂದು ಕಾಲದಲ್ಲಿ ಬ್ರಿಟಿಷರು ಈ ದೇಶವನ್ನು ಒಡೆದರು. ಅಧಿಕಾರದ ಆಸೆಗಾಗಿ ಬ್ರಿಟಿಷರು ಈ ದೇಶದ ಜನಸಮುದಾಯವನ್ನು ಒಡೆದರು. ಆದರೆ ಇವೊತ್ತು ದುರ್ದೈವ ಸ್ವಾತಂತ್ರ್ಯ ಬಂದು ೪೩ ವರ್ಷಗಳ ನಂತರವೂ ಸಹಾ ಅಧಿಕಾರಕ್ಕಾಗಿ ಜನರೇ ಜನರ ಮನಸನ್ನು ಒಡೆಯುವಂಥ ಪ್ರಯತ್ನ ಇವೊತ್ತು ಸಹ ಮುಂದುವರೆಯುತ್ತಿದೆ. ರಾಜಕಾರಣದಲ್ಲಿ ಧರ್ಮವನ್ನು ಬೆರೆಸುವಂಥ ಪ್ರಯತ್ನ ಮಾಡುತ್ತಿದ್ದಾರೆಂದು ಬಿ.ಜೆ.ಪಿ. ಮೇಲೆ ಹೇಳಿದ್ದಾರೆ. ಈ ಮಾತನ್ನು ಅನೇಕ ಸಾರಿ ಹೇಳುವಂಥ ಪ್ರಯತ್ನ ಮಾಡಿದ್ದಾರೆ. ಬಿ.ಜೆ.ಪಿ. ರಾಜಕಾರಣದಲ್ಲಿ ಧರ್ಮವನ್ನು ಬೆರೆಸುವಂಥ ಪ್ರಯತ್ನವನ್ನು ಮಾಡುತ್ತಿಲ್ಲ. ನಾನು ನನ್ನ ಕಾಂಗ್ರೆಸ್ ಸದಸ್ಯರಿಗೆ ಎದೆಮುಟ್ಟಿ ಪ್ರಶ್ನೆ ಹಾಕಿಕೊಳ್ಳಿ ಎಂದು ಕೇಳುತ್ತೇನೆ. ಚುನಾವಣೆಯಲ್ಲಿ ಜಾತಿ ಧರ್ಮದ ಹೆಸರನ್ನು ಎತ್ತದೆ ಚುನಾವಣೆಯಲ್ಲಿ ಗೆದ್ದಿರುವವರ ಸಂಖ್ಯೆ ಎಷ್ಟು ಎಂದು ನಮಗೆ ನಾವು ಪ್ರಶ್ನೆ ಹಾಕಿಕೊಳ್ಳಬೇಕಾಗಿದೆ. ಈ ಬ್ಯಾಲಟ್ ಪೆಟ್ಟಿಗೆಯ ನಾಟಕವನ್ನು ಆಡುವುದರಿಂದ ನಾವು ಇರಬಹುದು ನೀವು ಇರಬಹುದು ಆದರೆ ಜನ ನಂಬುವಂಥ ಕಾಲ ಅಲ್ಲ. ಜನರು ಇಂದು ಜಾಗೃತರಾಗಿದ್ದಾರೆ, ಚುನಾವಣೆಯಲ್ಲಿ ಸೀಟು ಹಂಚುವುದು ಜಾತಿಯ ಆಧಾರದ ಮೇಲೆ ಮಂತ್ರಿಮಂಡಲದಲ್ಲಿ ಮಂತ್ರಿಗಳನ್ನು ನೇಮಕ ಮಾಡುವಂಥಾದ್ದು ಜಾತಿ ಆಧಾರದ ಮೇಲೆ, ಈ ರೀತಿಯ ಒಂದು ವಾತಾವರಣ ಇರುವ ಈ ಸಂದರ್ಭದಲ್ಲಿ ದಯಮಾಡಿ ಇನ್ನಾದರೂ ಈ ರೀತಿ ಬಿ.ಜೆ.ಪಿ. ಮೇಲೆ ಅನಗತ್ಯವಾದಂಥ ಆರೋಪ ಮಾಡುವುದನ್ನು ಕೈಬಿಡಿ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಬಿ.ಜೆ.ಪಿ. ತನ್ನ ನೀತಿಯ ಕ್ರಮವನ್ನು ಬಹಿರಂಗವಾಗಿ ಚರ್ಚೆ ಮಾಡಿ ನಿಶ್ಚಿತ ಮಾಡುತ್ತದೆ. ಇದರಲ್ಲಿ ಗುಟ್ಟೇನೂ ಇಲ್ಲ. ನಮ್ಮ ನೀತಿ ನಿಲುವು ಸ್ಪಷ್ಟ ಇದೆ. ಈ ದೇಶದಲ್ಲಿ ಡೋಂಗಿ ಜಾತೀಯತೆ ಇದೆಯಲ್ಲಾ, ಇದು ಇನ್ನೂ...

ಶ್ರೀ ಜಿ. ರಾಜುಗೌಡ.— ತಾವು ಮಾತನಾಡುವಾಗ ರಾಜಕೀಯಕ್ಕೂ ಧರ್ಮ ಬೆರೆಸುತ್ತೀರಾ ಎಂದು ಕೇಳಿದರು. ಆ ರೀತಿ ಇದ್ದಮೇಲೆ ತಾವು ರಾಮಂಥ ಯಾತ್ರೆ ಹೊರಡಿಸಿದಿರಲ್ಲಾ, ಅದರಲ್ಲಿ ತಾವು ಚುನಾವಣೆ ಚಿಹ್ನೆ ಕಮಲ ಎತ್ತಿಕ್ಕೆ ಹಾಕಿದಿರಿ. ತಾವು ಧರ್ಮವನ್ನು ರಾಜಕೀಯಕ್ಕೆ ಬೆರೆಸಿದಂತೆ ಆಗಲಿಲ್ಲವೇ? ದಯಮಾಡಿ ಇದನ್ನು ತಾವು ಒಪ್ಪಿಕೊಳ್ಳುತ್ತೀರಾ?

ಶ್ರೀ ಬಿ.ಎಸ್. ಯಡಿಯೂರಪ್ಪ.— ನಮ್ಮ ಬಿ.ಜೆ.ಪಿ. ಸಿದ್ಧಾಂತ ಬಹಳ ಸ್ಪಷ್ಟವಾಗಿದೆ. ಎಲ್ಲರಿಗೂ ಸಮಾನವಾದಂಥ ನ್ಯಾಯ ಸಿಕ್ಕಬೇಕು. ಸಮಾನವಾದ ಕಾನೂನು ಇರಬೇಕು; ಒಬ್ಬರಿಗೆ ಒಂದು ಕಾನೂನು ಮಾಡಲಿಕ್ಕೆ ಈ ದೇಶದಲ್ಲಿ ಬರುವುದಿಲ್ಲ.

ಶ್ರೀ ಜಿ. ರಾಜುಗೌಡ.— ನಾನು ಹೇಳಿದ್ದರ ಬಗ್ಗೆ ಪ್ರತಿಕ್ರಿಯೆ ಏನು?

ಶ್ರೀ ಬಿ.ಎಸ್. ಯಡಿಯೂರಪ್ಪ.— ನಾನು ಹೇಳುತ್ತೇನೆ, ಹೇಳುವುದು ಬಹಳ ಇದೆ. ನಾವು ಓಟಿನ ಆಸೆಗೋಸ್ಕರ ಅಲ್ಪಸಂಖ್ಯಾತರನ್ನು ಓಲೈಸುವಂಥ ದರಿದ್ರ ರಾಜಕಾರಣ ಮಾಡುವುದರಲ್ಲಿ ನಮಗೆ ನಂಬಿಕೆ ಇಲ್ಲ. ಓಟಿನ ಆಸೆಗೋಸ್ಕರ ತಮಗೆ ತಾವೇ ದ್ರೋಹ ಮಾಡಿಕೊಳ್ಳುತ್ತಾ ಅಲ್ಪಸಂಖ್ಯಾತ ಬಂಧುಗಳನ್ನು ಕರೆದು ಸರಿಯಾದ ತಿಳುವಳಿಕೆ ಕೊಡದೆ ಸ್ವಾರ್ಥಕ್ಕಾಗಿ ಅವರನ್ನು ಉಪಯೋಗ ಮಾಡಿಕೊಳ್ಳುವಂಥ ರಾಜಕಾರಣ, ಸ್ವಾತಂತ್ರ್ಯ ನಮ್ಮ ದೇಶದಲ್ಲಿ ಏನು ನಡೆಯುತ್ತಿದೆ ಅದರ ಬಗ್ಗೆ ನಮ್ಮ ಮುಸ್ಲಿಂ ಬಂಧುಗಳು ಜಾಗೃತರಾಗಬೇಕು. ಯಾವುದೇ ಪಕ್ಷ ಅಧಿಕಾರದಲ್ಲಿರಲಿ, ಬಹು ಸಂಖ್ಯಾತ ಹಿಂದೂಗಳ ಮನಸ್ಸಿನಲ್ಲಿರತಕ್ಕ ಭಾವನೆಗಳನ್ನು ಅರ್ಥಮಾಡಿಕೊಂಡು ಶಾಂತಿಯಿಂದ ಗೌರವದಿಂದ, ನೆಮ್ಮದಿಯಿಂದ ಬಾಳುವುದಕ್ಕೆ ಅವಕಾಶವಿದೆ. ಈ ರೀತಿಯಲ್ಲಿ ಅವರಿಗೆ ಸರಿಯಾದಂಥ

ವಿಚಾರವನ್ನು ತಿಳಿಸುವಂಥ ಪ್ರಯತ್ನವನ್ನು ಸ್ವಾತಂತ್ರ್ಯ ಬಂದ ೪೩ ವರ್ಷಗಳಲ್ಲಿ ನಡೆಯಲಿಲ್ಲ. ಇವತ್ತು ನಮ್ಮ ಸ್ನೇಹಿತರನ್ನು ನಾನು ಕೇಳುತ್ತಿದ್ದೇನೆ, ರಾಜಾಸ್ಥಾನದಲ್ಲಿ ನಮ್ಮ ಪಕ್ಷದ ಮುಖ್ಯ ಮಂತ್ರಿಗಳಿದ್ದಾರೆ, ಅಧಿಕಾರವನ್ನು ನಡೆಸುತ್ತಿದ್ದಾರೆ, ಮಧ್ಯ ಪ್ರದೇಶದಲ್ಲಿ ನಮ್ಮ ಪಕ್ಷದ ಸರ್ಕಾರ ಇದೆ. ಹಿಮಾಚಲ ಪ್ರದೇಶದಲ್ಲಿ ನಮ್ಮ ಸರ್ಕಾರ ಇದೆ ಅಲ್ಲಿರತಕ್ಕ ನಮ್ಮ ಮುಸ್ಲಿಂ ಬಂಧುಗಳು ನೆಮ್ಮದಿಯಿಂದ ಇವತ್ತು ವಾಸಮಾಡುತ್ತಿಲ್ಲವೇನು? ಬಿ.ಜೆ.ಪಿ. ಯವರು ಇಡೀ ಮುಸ್ಲಿಂರನ್ನು ಈ ದೇಶವನ್ನು ಬಿಟ್ಟು ಕಳುಹಿಸಬೇಕೆಂದಿದ್ದೀರಾ ಯಡಿಯೂರಪ್ಪನವರೇ ಎಂದು ಮಾನ್ಯ ಕಾಗೋಡು ತಿಮ್ಮಪ್ಪನವರು ಕೇಳಿದರಲ್ಲಾ ನಾನೊದರೂ ಕೇಳುತ್ತೇನೆ, ತಾವೇ ಏತಕ್ಕೆ ಈ ರೀತಿಯ ಕಲ್ಪನೆ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಿ? ನಮ್ಮ ಉದ್ದೇಶ ಅದಲ್ಲ ಇಲ್ಲಿ ಗೌರವದಿಂದ, ನೆಮ್ಮದಿಯಿಂದ ಎಲ್ಲರೂ ಒಟ್ಟಾಗಿ ಬಾಳಬೇಕೆಂದು ಅಪೇಕ್ಷೆಯನ್ನು ಹೊಂದಿರುವಂಥ ಜನರು ನಾವು. ಆದ್ದರಿಂದ ನಾವು ಏನನ್ನು ಹೇಳಬಾರದೋ, ಆ ಮಾತನ್ನು ತಾವು ನನ್ನ ಬಾಯಿಯಿಂದ ಹೇಳಿಸತಕ್ಕ ಪ್ರಯತ್ನವನ್ನು ತಾವು ಏನು ಮಾಡುತ್ತಿದ್ದೀರಿ ದಯಮಾಡಿ ಆ ಪ್ರಯತ್ನವನ್ನು ತಾವು ದಯವಿಟ್ಟು ಮಾಡಬಾರದೆಂದು ಹೇಳಲಿಕ್ಕೆ ಬಯಸುತ್ತೇನೆ. ನಮ್ಮ ಮುಸ್ಲಿಂ ಲೀಗ್‌ನ ಶಾಸಕ ಮಿತ್ರರು ಹೇಳಿದರು, ಇಲ್ಲಿ ಮುಸ್ಲಿಂ ಜನರು ಗೌರವದಿಂದ ಬಾಳಬೇಕೆಂದಿದ್ದರೂ ನಮಗೆ ಸರಿಯಾದ ರಕ್ಷಣೆ ಇಲ್ಲ, ಅಲ್ಪ ಸಂಖ್ಯಾತರ ರಕ್ಷಣೆಗೆ ಬಂದೂಕನ್ನು ಕೊಡಿ, ಆ ಬಂದೂಕನ್ನು ಉಪಯೋಗ ಮಾಡತಕ್ಕ ಶಿಕ್ಷಣವನ್ನೂ ಸರ್ಕಾರದವರೇ ಕೊಡಿ ಎಂದು ಹೇಳಿದರು...

SRI QAMARUL ISLAM.—The Madhya Pradesh Chief Minister, Sri Patwa and the Rajasthan Chief Minister have recommended. Sri Patwa in an answer to the question has said this...

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ಏನನ್ನು ಹೇಳುತ್ತಿದ್ದೇನೆಂದರೆ, ನೀವು ಬಂದೂಕನ್ನು ಕೇಳುತ್ತಿದ್ದೀರಿ, ಆದರೆ ಯಾರ ಮೇಲೆ ನೀವು ಯುದ್ಧವನ್ನು ಮಾಡಬೇಕೆಂದು ಹೊರಟಿದ್ದೀರಿ ?

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ನಮ್ಮ ಮುಸ್ಲೀಮ್ ಬಂಧುಗಳಿಗೆ ಭಾರತದ ಒಂದು ಸಂಸ್ಕೃತಿಗೆ ತಕ್ಕಂತೆ, ಪರಂಪರೆಗೆ ತಕ್ಕಂತೆ, ಆದರ್ಶಗಳಿಗೆ ತಕ್ಕಂತೆ, ಗೌರವವನ್ನು ಕೊಟ್ಟು ಜೀವನ ಮಾಡಿ ಎಂದು ಹೇಳಬೇಕಾಗಿದೆ. ಇಲ್ಲಿ ಮಸೀದಿಯನ್ನು ಕಟ್ಟಬಹುದು ; ಪೂಜೆ ಮಾಡಬಹುದು, ಈಶ್ವರನ ದೇವಸ್ಥಾನವನ್ನು ಕಟ್ಟಿ ಪೂಜೆ ಮಾಡಬಹುದು ಈ ದೇಶದಲ್ಲಿ ಮಾತ್ರ ದೇಶದ ವಿಭಜನೆ ಆದಮೇಲೂ ಕೂಡ ಹಿಂದೂಗಳಾಗಲಿ, ಕ್ರಿಶ್ಚಿಯನರಾಗಲಿ, ಮುಸ್ಲಿಮರಾಗಲಿ ಸರಿಸಮಾನವಾಗಿ ಬಾಳುವಂಥ ಅವಕಾಶ ಸಿಕ್ಕಿರತಕ್ಕುದ್ದು ಈ ಭಾರತ ದೇಶದಲ್ಲಿ ಮಾತ್ರ ಎಂಬುವನ್ನು ಮರೆಯಬಾರದು. ಇದು ಹಿಂದುತ್ವದ ವಿಶೇಷ. ಮಸೀದಿಯನ್ನು ಒಡೆದಿರುವುದು ನಮಗೆ ಗೊತ್ತಿಲ್ಲ. ಆದರೆ ದೇವಸ್ಥಾನವನ್ನು ಒಡೆದು ಮಸೀದಿಯನ್ನು ಕಟ್ಟಿದ್ದಾರೆ. ಇದು ನಮ್ಮ ಭಾವನೆಗಳಿಗೆ ಧಕ್ಕೆಯನ್ನು ತರತಕ್ಕ ಕೆಲಸವಾಗಿದೆ. ಸ್ವಾತಂತ್ರ್ಯ ಬಂದು ೪೩ ವರ್ಷಗಳಾದ ಮೇಲೂ ಕೂಡ ಈ ಅಪಮಾನವನ್ನು ಸಹಿಸುವುದಿಲ್ಲ ಎಂದು ಇಂದು ಹಿಂದೂ ಎದ್ದು ನಿಂತಿದ್ದಾನೆ. ಅಲ್ಲಿ ಬಿ.ಜೆ.ಪಿ. ಹಿಂದೂ, ಆರ್.ಎಸ್.ಎಸ್. ಹಿಂದೂ, ಕಾಂಗ್ರೆಸ್ ಹಿಂದೂ ಎಂದು ಇಲ್ಲ. ಈಗ ನಡೆದಂಥ ವೈಭವಪೂರಿತ ರಥ ಯಾತ್ರೆ ಮೆರವಣಿಗೆಗೆ ಲಕ್ಷಾಂತರ ಜನರು ಏನು ಸೇರಿದ್ದಾರೆ, ಅದು ಬಿ.ಜೆ.ಪಿ.ಯವರ ಶಕ್ತಿಯಿಂದ ಅಲ್ಲ. ನಾವು ಇನ್ನೂ ಅಷ್ಟೊಂದು ಬೆಳೆದಿಲ್ಲ. ಅಲ್ಲಿ ಕಾರ್ಯಕ್ರಮವನ್ನು ಹಾಕಿದವರು ನಮ್ಮ ಕಾಂಗ್ರೆಸ್‌ನ ಸ್ನೇಹಿತರು. ಹುಬ್ಬಳ್ಳಿಯಲ್ಲಿನ ಮೇಯರ್‌ರವರ ಹೆಂಡತಿ ೪೦ ಸಾವಿರ ಜನರು ಸೇರಿದ್ದಂಥ ಮೆರವಣಿಗೆಯಲ್ಲಿ ಮುಂದೆ ಬಂದು, ಮುಂಚಿತವಾಗಿ ಪೂಜೆಯನ್ನು ಮಾಡಿ ರಥವನ್ನು ಕಳುಹಿಸಿಕೊಟ್ಟರು. ಆದರೆ ಅಲ್ಲಿ ನಡೆದಂಥ ರಾಮಜ್ಯೋತಿ ಮೆರವಣಿಗೆ ಬಿ.ಜೆ.ಪಿ.ಯವರಿಂದ ಎಂದು ಹೇಳಿದರೆ ನಾನು ಅಲ್ಲ ನಾಗುತ್ತೇನೆ. ಸಮಸ್ತ ಹಿಂದೂಗಳೂ ಸೇರಿ ಮೆರವಣಿಗೆಯನ್ನು ಮಾಡಿದರು ; ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು......

ಶ್ರೀ ಕಾಗೋಡು ತಿಮ್ಮಪ್ಪ.—ಹಾಗಿದ್ದರೆ ಆ ರಥ ಯಾತ್ರೆಯಲ್ಲಿ ಬಿ.ಜೆ.ಪಿ.ಯವರ ಸಿಂಬಲ್ ಅದ ಹೂವಿನ (ಕಮಲ) ಸಿಂಬಲ್‌ನ್ನು ಏತಕ್ಕೆ ಹಾಕಿದಿರಿ ?

ಶ್ರೀ ಬಿ. ಎಸ್. ಯಡಿಯೂರಪ್ಪ.—ಏಕೆಂದರೆ ನೀನು ಯಾರ ಮಗ ಎಂದು ಕೇಳಿದರೆ, ಆತ ತನ್ನ ಅಪ್ಪನ ವಿಳಾಸವನ್ನು ಹೇಳುತ್ತಾನೆ. ಸಿದ್ದಲಿಂಗಪ್ಪನ ಮಗ ಎಂದು ನಮ್ಮ ಅಪ್ಪನ ಅಡ್ರೆಸ್ ಹೇಳುತ್ತೇನೆ. ಇನ್ನೊಬ್ಬನ ಹೆಸರನ್ನು ಹೇಳುವುದಿಲ್ಲ. ಲಾಲ್‌ಕೃಷ್ಣ ಆಡ್ವಾನಿಯವರು ಒಂದು ರಾಜಕೀಯ ಪಕ್ಷದ ಅಧ್ಯಕ್ಷರಾಗಿ ಹೊರಟಾಗ ನಮ್ಮ ರಾಜಕೀಯ ಪಕ್ಷವಾದ ಬಿ.ಜೆ.ಪಿ. ಕಮಲದ

ಗುರುತನ್ನು ಹೊಂದಿದೆ. ಆ ಪಕ್ಷ ಅಯೋಧ್ಯೆಯಲ್ಲಿ ಶ್ರೀ ರಾಮ ಮಂದಿರವನ್ನು ಕಟ್ಟುವುದಕ್ಕೆ ಬೆಂಬಲವನ್ನು ಸೂಚಿಸುತ್ತಿದೆ ಎಂದು ರಾಜಾರೋಷವಾಗಿ ಮುಂದೆ ಬಂದಿರತಕ್ಕ ಪಾರ್ಟಿ. ಆದ್ದರಿಂದ ಕಮಲದ ಗುರುತನ್ನು ಹಾಕಿಕೊಳ್ಳಬೇಕೋ ಬೇಡವೋ ಎಂಬುದನ್ನು ತೀರ್ಮಾನ ಮಾಡುವವರು ಯಾರು ? ತೀರ್ಮಾನ ಮಾಡತಕ್ಕಂಥವರು ಜನರು. ಇವತ್ತಿನ ದಿವಸ ಅಲ್ಲಿ ರಥ ಹೊರಟಾಗ ಯಾರು ಹಾಕಿಕೊಳ್ಳಬೇಕು ಯಾವ ಬಾವುಟವನ್ನು ಹಾಕಿಕೊಳ್ಳಬೇಕು, ಯಾವ ಚಿತ್ರ ಇರಬೇಕು ಎನ್ನುವುದಕ್ಕೆ ನಮಗೆ ಸ್ವಾತಂತ್ರ್ಯವಿದೆ. ನಾವು ಕಮಲದ ಗುರುತನ್ನು ಹಾಕಿಕೊಂಡು ನಮ್ಮ ಪಕ್ಷದ ಒಂದು ಗುರುತು ಏನಿದೆ ಅದನ್ನು ಹಾಕಿಕೊಂಡು ಹೊರಟರೆ ಈ ಪಕ್ಷ ಬೇರೆ ಎಲ್ಲ ಪಕ್ಷಗಳಿಗೂ ಸ್ವಾತಂತ್ರ್ಯ ಬಂದು ೪೩ ವರ್ಷಗಳಿಂದ ಅಲ್ಪಸಂಖ್ಯಾತರ ಓಟಿಗೋಸ್ಕರ ಅವರನ್ನು ಬೇರೆ ಇಟ್ಟು ಕುತಂತ್ರವನ್ನು ಮಾಡುತ್ತಿರುವುದನ್ನು ಒಪ್ಪುವುದಿಲ್ಲವೆಂದು ಹೇಳಿ ನೇರವಾಗಿ ಹೊರಬಂದ ಬಿ.ಜೆ.ಪಿ. ಪಾರ್ಟಿ ಎಂದು ಹೇಳಿ ಈ ದೇಶದ ಜನರಿಗೆ ತಿಳಿಸುವುದಕ್ಕೋಸ್ಕರ ಕಮಲದ ಗುರುತನ್ನು ಹಾಕಿಕೊಂಡು, ಶ್ರೀ ರಾಮಮಂದಿರದ ಅವನ ಮೂರ್ತಿಯನ್ನು ಹಾಕಿಕೊಂಡರೆ ತಪ್ಪೇನಿದೆ. ಇದು ಚುನಾವಣೆಯಲ್ಲ. ರಥ ಹೊರಟಂಥ ಉದ್ದೇಶ ಒಂದು ಧಾರ್ಮಿಕ ಪ್ರಶ್ನೆಯಲ್ಲ. ಅದು ಒಂದು ರಾಷ್ಟ್ರೀಯ ಪ್ರಶ್ನೆ.

ಶ್ರೀ ಕೆ. ಹೆಚ್. ಪಾಟೀಲ್.—ನನ್ನದೊಂದು ಕ್ರಿಯಾಲೋಪವಿದೆ. ಏನೆಂದರೆ, ನಾನು ತಮ್ಮ ಭಾಷಣವನ್ನು ಕೇಳಿದೆ, ನಮ್ಮ ಕಾನ್ಸ್ಟಿಟ್ಯೂಷನ್ ಪ್ರಕಾರ ಸಹಿತ ಧರ್ಮ ಧರ್ಮಗಳಲ್ಲಿ ಜಾತಿ ಜಾತಿಗಳಲ್ಲಿ ದೇವರು ದೇವರುಗಳ ಹೆಸರಿನಲ್ಲಿ ವೈಷಮ್ಯತೆಯನ್ನು ತರುವಂಥ ಭಾಷಣವನ್ನು ಮಾಡುವುದು ವಿಧಿತ ಅಲ್ಲ. ಅದರಲ್ಲಿಯೂ ಈ ಸದನದಲ್ಲಿ ಮಾಡುವುದು ಸೂಕ್ತವಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಿನ್ನೆ ನಡೆದ ಚರ್ಚೆಗಳ ಬಗ್ಗೆ ರೆಕಾರ್ಡ್ಸ್ ತರಿಸಿ ನೋಡಿ.

ಶ್ರೀ ಕೆ. ಹೆಚ್. ಪಾಟೀಲ್.—ನಿನ್ನೆ ರೆಕಾರ್ಡಿನಲ್ಲಿ ಹೊಡೆದಾಡಿದರು ಎಂದರೆ ಇವತ್ತೂ ಸಹ ಹೊಡೆದಾಡಬೇಕೇ ? ನಿಮ್ಮಂತಹ ತಿಳಿವಳಿಕೆ ಇರುವ ಜನರು ನಮ್ಮನ್ನು ಕೇಳಿ. ಮುಖಂಡರು ಇವತ್ತಿನ ದಿವಸ ಬಿ.ಜೆ.ಪಿ. ಮುಖಂಡರು ಮಾತನಾಡುತ್ತಿದ್ದಾರೆ ಅವರ ಬಗ್ಗೆ ನನಗೆ ಬಹಳ ಗೌರವವಿದೆ. ಅವರು ಮಾತನಾಡುವಾಗ ಹೇಳಿದ್ದಾರೆ. ನಾವು ಬಹಳ ಪ್ರಭಾವಿಶಾಲಿ ಪಕ್ಷದವರು ಇದ್ದೇವೆ. ನಮ್ಮ ಪಕ್ಷದ ಪ್ರಣಾಳಿಕೆಯನ್ನು ನಾವು ಎತ್ತಿ ಹಿಡಿಯುತ್ತೇವೆಂದು ಹೇಳಿದರೆ ನಮ್ಮದೇನು ಅಭ್ಯಂತರವಿಲ್ಲ. ಆದರೆ ಸಮಸ್ತ ಹಿಂದುಗಳು ಈ ಅಲ್ಪ ಸಂಖ್ಯಾತರ ವಿರುದ್ಧ ಇದ್ದಾರೆ ಎನ್ನುವ ಭಾವನೆ ಮೂಡಿಸಿದರೆ, ಮತ್ತು ತಾವು ಮಾತ್ರ ಅಲ್ಪ ಸಂಖ್ಯಾತರ ಪರ ಇದ್ದೇವೆ ಎಂದು ಹೇಳಿಕೊಳ್ಳುವುದರಿಂದ ಎಂದೂ ನಿಮ್ಮ ಪಕ್ಷಕ್ಕೆ ಅನುಕೂಲ ವಾಗುವುದಿಲ್ಲ. ನಿಮ್ಮ ಪಕ್ಷ ಇದನ್ನು ತಿಳಿದುಕೊಳ್ಳಬೇಕು. ರಾಮನ ಬಗ್ಗೆ ನಿಷ್ಠೆ ಇರುವಂಥ ನೀವು ಬಸವೇಶ್ವರನ ಮೂರ್ತಿ ಮುಳುಗಿಹೋಯಿತಲ್ಲ ಕೂಡಲ ಸಂಗಮದಲ್ಲಿ ಆಗ ತಾವು ಏನು ಮಾಡಿದಿರಿ ? ಬಿ.ಜೆ.ಪಿ.ಯವರು ಏನು ಮಾಡಿದರು. ಏತಕ್ಕೆ ಕೇಳಲಿಲ್ಲ. ಅನೇಕ ದೇವಸ್ಥಾನಗಳು ಇದೇ ರೀತಿ ಹಾಳಾಗಿ ಹೋಗಲಿಲ್ಲವೇ ? ಅವುಗಳಲ್ಲಿ ಒಂದನ್ನಾದರೂ ನೀವು ಉದ್ಧಾರ ಮಾಡಲಿಕ್ಕೆ ಹೋದಿರಾ ? ಅಯೋಧ್ಯೆಯಲ್ಲಿ ಮಾತ್ರ ರಾಮನ ದೇವಸ್ಥಾನವನ್ನು ಉದ್ಧಾರ ಮಾಡಲಿಕ್ಕೆ ಹೊರಟವರು ನೀವು ; ನಾನು ಸ್ವತಃ ರಾಮನ ಭಕ್ತ ಇದ್ದೇನೆ, ನನಗಿಂತ ಹೆಚ್ಚಿನ ರಾಮನ ಭಕ್ತರು ನೀವು ಯಾರು ಇಲ್ಲ. ಆದರೆ ಅಯೋಧ್ಯೆಯಲ್ಲಿರುವ ರಾಮನು ಬೆಂಗಳೂರಿನಲ್ಲಿ ಇದ್ದಾನೆ ಬೆಂಗಳೂರಿನಲ್ಲಿ ಇರುವ ರಾಮನು ನಮ್ಮ ಹುಲಕೋಟೆಯಲ್ಲಿ ಸಹ ಇದ್ದಾನೆ. ನಮ್ಮ ಹುಲಕೋಟೆಯಲ್ಲಿ ನಾನು ಸಹ ರಾಮ ಮಂದಿರವನ್ನು ಕಟ್ಟಿದ್ದೇನೆ. ಅಲ್ಲಿಯೂ ಅಷ್ಟೇ ನೈಪುಣ್ಯತೆಯಿಂದ ಪೂಜೆಯನ್ನು ಮಾಡುತ್ತೇವೆ. ಆ ರಾಮ ನನಗೆ ಅಯೋಧ್ಯೆಗೆ ಹೋಗು ಎಂದು ಒಮ್ಮೆಯೂ ಮನಸ್ಸನ್ನು ಕೊಡಲಿಲ್ಲ. ಮತ್ತು ಅಲ್ಪ ಸಂಖ್ಯಾತರ ಬಗ್ಗೆ ವಿರುದ್ಧ ಮಾಡು ಎಂದು ನನಗೆ ಯಾವಾಗಲೂ ಹೇಳಲಿಲ್ಲ. ಇವಕ್ಕೆ ಏತಕ್ಕೆ ರಾಜಕೀಯ ಮಾಡುತ್ತೀರಿ ; ನೀವು ರಾಜಕೀಯ ಮಾಡುತ್ತೀರಿ ನಾವೂ ರಾಜಕೀಯ ಮಾಡುತ್ತೇವೆಂದು ಹೇಳಿ ; ನಾನು ಒಪ್ಪುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ರಾಮನ ಹೆಸರಿನಲ್ಲಿ ರಾಜಕೀಯ ಮಾಡುವ ಪ್ರಶ್ನೆ ಇಲ್ಲ. ರಾಮನ ಪ್ರಶ್ನೆ ಇಂದು ರಾಷ್ಟ್ರೀಯ ಪ್ರಶ್ನೆಯಾಗಿದೆ. ಇವತ್ತು ರಾಮ ಒಬ್ಬ ದೇವರು ಎಂದು ಹೊರಟಿಲ್ಲ ; ಮಾನ್ಯ ಕೆ. ಹೆಚ್. ಪಾಟೀಲರು ಬಸವೇಶ್ವರನ ಬಗ್ಗೆ ಮಾತನಾಡಿದರು. ಬಹುಶಃ ಅವರು ಹಿರಿಯರಿದ್ದಾರೆ, ಅವರ ಬಗ್ಗೆ ನನಗೂ ಬಹಳ ಗೌರವವಿದೆ. ನಾನೂ ಕೂಡ ಬಸವನಬಾಗೇವಾಡಿಗೆ, ಬಸವಕಲ್ಯಾಣಕ್ಕೆ ಹೋಗಿಬಂದಿದ್ದೇನೆ. ಬಸವೇಶ್ವರನ ಬಗ್ಗೆ ಇಷ್ಟೊಂದು ಸಾರಿ ಹೇಳುವಂಥ ನಾವು ನೀವು ಇದ್ದಂಥ ಸಂದರ್ಭದಲ್ಲಿ ಅಧಿಕಾರವನ್ನು ನಡೆಸಿದಂಥ ಕರ್ನಾಟಕ ರಾಜ್ಯದ ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳುತ್ತೇನೆ, ಹಾಳುಬಿದ್ದಿರುವಂಥ ಸ್ಥಳವನ್ನು ಹೋಗಿ ನೋಡಿಬನ್ನಿ ಎಂದು. ಕೋಟ್ಯಾಂತರ

ರೂಪಾಯಿಗಳನ್ನು ಸಂಗ್ರಹಣೆ ಮಾಡಿ ಅಲ್ಲಿ ದೇವಸ್ಥಾನವನ್ನು ನಿರ್ಮಾಣ ಮಾಡುತ್ತೇವೆಂದು ಹೇಳಿ. ಆದರೆ ಅಲ್ಲಿ ಒಂದು ಸರಿಯಾದಂಥ ರಸ್ತೆಯನ್ನು ನಿರ್ಮಾಣ ಮಾಡಿಲ್ಲ. ಬಸವೇಶ್ವರನ ಹೆಸರು ಹೇಳುವಂಥ ಶಕ್ತಿಯನ್ನೂ ನಾವೆಲ್ಲ ಕಳೆದುಕೊಳ್ಳುವಂಥ ವಿಚಿತ್ರವಾದಂಥ ಸ್ಥಿತಿಯಲ್ಲಿದ್ದೇವೆ. ಈಗ ಲಾದರೂ ಭಗವಂತನ ದಯದಿಂದ ಮತ್ತೊಮ್ಮೆ ನೀವು ಮಂತ್ರಿಗಳಾಗಿ ಕೆಲಸ ಮಾಡುವ ಅವಕಾಶ ಸಿಕ್ಕಿರುವುದರಿಂದ, ಹೋಗಿ ನೋಡಿ ಬನ್ನಿ. ಅದರ ಒಂದು ವೈಭವವನ್ನು ಅರ್ಥ ಮಾಡಿಕೊಂಡು, ಅಲ್ಲಿ ಸರಿಯಾದ ರೀತಿಯಲ್ಲಿ ಆ ಬಸವೇಶ್ವರನ ಗೌರವಕ್ಕೆ ತಕ್ಕಂತೆ, ಅಲ್ಲಿ ಏನು ಲೋಪದೋಷಗಳಾಗಿದೆ, ಅವನು ಬಾಳಿ ಬದುಕಿದಂಥ ಸ್ಥಳವನ್ನು ಸರ್ಕಾರ ತೆಗೆದುಕೊಂಡು, ಅದನ್ನು ಒಂದು ಸ್ಮಾರಕ ಮಾಡಲು ಈ ಸರ್ಕಾರಕ್ಕೆ ಆಗಿಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ನಾವು ನೀವು ಕೂಡಿ ಮಾಡೋಣ. ಮಾನ್ಯ ಯಡಿಯೂರಪ್ಪನವರೇ, ಮಂತ್ರಿ ಆಗಲಿ, ಮಂತ್ರಿ ಆಗದಿರಲಿ, ನಾವು ನೀವು ಕೂಡಿ ಮಾಡೋಣ. ಅಲ್ಲಿ ಅಯೋಧ್ಯೆಗೆ ಹೋಗುವ ಬದಲು ಇಲ್ಲಿಗೆ ಹೋಗಿ ಎಲ್ಲರೂ ಕೂಡಿ ಮಾಡೋಣ.

ಶ್ರೀ ಡಿ.ಬಿ. ಚಂದ್ರೇಗೌಡ.—ಇದು ಒಂದು ಹೊಸ ಸಲಹೆ. ಇದುವರೆಗೆ ರಾಮನ ಜ್ಯೋತಿ ಆಯಿತು. ಈಗ ಬಸವ ಜ್ಯೋತಿ ಹೊರಡಿಸೋಣ ಅನ್ನುತ್ತಾರೆ. ಇದಕ್ಕೆ ಸಹಮತ ಇದೆಯೋ ಇಲ್ಲವೋ ಹೇಳಿ.

ಶ್ರೀ ವಾಟಾಳ್ ನಾಗರಾಜ್.—ಬಸವ ಜ್ಯೋತಿ ಅಲ್ಲ. ರಾಮರಥ ಆಯಿತು ಈಗ ಬಸವರಥ ಹೊರಡಬೇಕಾಗಿದೆ. ಅಂಥದರಲ್ಲಿ ಹೋಗುವವರು ಯಾರು? ಮಾನ್ಯ ಪಾಟೀಲ್ ಅವರೋ ಅಥವಾ ಮಾನ್ಯ ಶಿವಣ್ಣನವರೋ?

SRI QUMARUL ISLAM.—I want to know from my friend as to why he don't want the votes of the minorities. I have not understood that. You can try to take the minorities also into confidence and definitely you can take them into confidence if you try to set right your youths.

ಶ್ರೀ ಬಿ. ಎಸ್. ಯಡಿಯೂರಪ್ಪ.—ಒಳ್ಳೆಯ ಮಾತು ಹೇಳಿದಿರಿ. ನೀವು ಹೇಳಿದ್ದು ಸರಿ. ಆದರೆ ಈಗ ಏನಾಗಿದೆ ಎಂದರೆ ಬಿಜೆಪಿ. ಆರ್‌ಎಸ್‌ಎಸ್. ಎಂದರೆ ಇದೊಂದು ಭೂತ ಎಂಬ ಕಲ್ಪನೆ ಬರುವಂತೆ ಮಾಡಿದ್ದಾರೆ. ಇವತ್ತು ಜನರು ಅರ್ಥ ಮಾಡಿಕೊಳ್ಳುತ್ತಿದ್ದಾರೆ. ಉದಾಹರಣೆಗೆ ನೀವು ನಮ್ಮ ಶಿಕಾರಿಪುರಕ್ಕೆ ಬನ್ನಿ. ನಾನು ಅಲ್ಲಿ ಪುರಸಭಾಧ್ಯಕ್ಷನಾಗಿ ಮತ್ತು ಸದಸ್ಯನಾಗಿ ಕೆಲಸ ಮಾಡಿದ್ದೇನೆ. ನಾನು ಪ್ರಾರಂಭದಲ್ಲಿ ಅನೇಕ ಕಡೆ ರಾಷ್ಟ್ರೀಯ ಸ್ವಯಂ ಸೇವಾ ಕಾರ್ಯಕರ್ತನಾಗಿ ಸೇವೆ ಸಲ್ಲಿಸಿದ್ದೇನೆ. ಇಲ್ಲಿ ಪ್ರಶ್ನೆ ಇರತಕ್ಕದ್ದು, ಈ ದೇಶದಲ್ಲಿ ರಾಷ್ಟ್ರೀಯ ಸ್ವಯಂ ಸೇವಾ ಸಂಘ ಪ್ರಾರಂಭವಾಗಿ ಹಿಂದೂಗಳಲ್ಲಿ ಜಾಗೃತಿ ಉಂಟು ಮಾಡುವ ಪ್ರಯತ್ನ ಮಾಡದಿದ್ದರೆ ಮಂತ್ರಿಗಳು ಉಳಿಯುತ್ತಿರಲಿಲ್ಲ, ಕಾವಿ ಬಟ್ಟೆಯು ಉಳಿಯುತ್ತಿರಲಿಲ್ಲ. ಸನ್ಯಾಸಿಗಳು, ಸಾಧು ಸಂತರು ಉಳಿಯುತ್ತಿರಲಿಲ್ಲ. ನೀವು ಇವತ್ತಿನ ದಿವಸ ಇದನ್ನು ವಿರೋಧ ಮಾಡಬಹುದು, ಆದರೆ ದೇಶದ ಜನರು ಒಪ್ಪುತ್ತಾರಲ್ಲ. ನೀವು ಮಧ್ಯ ಪ್ರದೇಶ, ಹಿಮಾಚಲ ಪ್ರದೇಶ ಮತ್ತು ರಾಜಾಸ್ತಾನದವರನ್ನು ಕೇಳಿಕೊಂಡು ಬನ್ನಿ, ಅಲ್ಲಿನ ಜನರು ಬಿಜೆಪಿ. ಜೊತೆ ಇದ್ದಾರೊ ಇಲ್ಲವೋ ಎಂಬುದನ್ನು. ಕರ್ನಾಟಕದ ಜನತೆ ಇನ್ನೂ ಕಣ್ಣು ಬಿಟ್ಟಿಲ್ಲ, ಮೂಢನಂಬಿಕೆಯಲ್ಲಿದ್ದಾರೆ. ಕಾಂಗ್ರೆಸ್‌ನವರು ಏನೋ ಮಾಡಬಹುದೆಂದು ಕಾದು ಕುಳಿತಿದ್ದರು ಈಗ ಸ್ವಲ್ಪ ಜಾಗೃತರಾಗಿದ್ದಾರೆ. ಕೆ. ಹೆಚ್. ಪಾಟೀಲ್ ಅಂಥವರು ಕಳೆದ ೪೩ ವರ್ಷಗಳಿಂದ ಅಲ್ಲಿದ್ದಂತಹವರು, ಯಾರಿಗೆ ಈ ದೇಶದಲ್ಲಿ ಸ್ವಾತಂತ್ರ್ಯ ಬಂದು ೪೩ ವರ್ಷಗಳಾದರೂ ನಾವು ಅಂದುಕೊಂಡ ಕೆಲಸ ಮಾಡುವುದಕ್ಕೆ ಆಗಲಿಲ್ಲವೆಂದು ನಿರಾಶರಾಗಿದ್ದಾರೋ. ಅಂಥವರು ಅಖಿಲ ಭಾರತ ಮಟ್ಟದಲ್ಲಿ ಬಿಜೆಪಿ. ಜೊತೆ ಬರುವ ಕಾಲ ಕೂಡಿ ಬಂದಿದೆ. ನಾಳೆ ಸಂಜೆ ೪-೩೦ಕ್ಕೆ ಶ್ರೀ ಲಾಲ್‌ಕೃಷ್ಣ ಅದ್ವಾನಿಯವರು ನ್ಯಾಷನಲ್ ಹೈಸ್ಕೂಲ್ ಗ್ರೌಂಡಿಗೆ ಬರುತ್ತಾರೆ. ಅಲ್ಲಿಗೆ ನಿಮ್ಮನ್ನು ಕರೆಯುತ್ತಿದ್ದೇನೆ. ಅಲ್ಲಿ ಯಾರು ಯಾರು ಬಂದು ಸೇರುತ್ತಾರೆಂಬುದನ್ನು ನೋಡಿ. ಆದರೆ ಪ್ರಶ್ನೆ ಅದಲ್ಲ, ಸ್ವಾತಂತ್ರ್ಯ ಬಂದ ೪೩ ವರ್ಷಗಳಲ್ಲಿ ಮಹಾತ್ಮ ಗಾಂಧೀಜಿಯವರ ರಾಮರಾಜ್ಯದ ಕಲ್ಪನೆ ಏನಿತ್ತು, ಆ ಕನಸು ನನಸಾಗಲಿಲ್ಲವೆಂದರೆ ನೀವು ಅಲ್ಲೇ ಕುಳಿತರೆ ನಾನು ಏನು ಮಾಡಲಿ? ತಾವು ಈ ಬಗ್ಗೆ ಧಾರಾಳವಾಗಿ ಯೋಚನೆ ಮಾಡಬೇಕಾಗಿದೆ. ಬಿಜೆಪಿ. ಬಗ್ಗೆ ಒಂದು ಪರಿಕಲ್ಪನೆ ಬೇಕಾಗಿದೆ...

(ಗೊಂದಲ

ಶ್ರೀ ಬಿ. ಎಸ್. ಯಡಿಯೂರಪ್ಪ.—ನನ್ನ ಸ್ನೇಹಿತರಾದಂಥ ಖಮರುಲ್ ಇಸ್ಲಾಮ್ ಅವರು ಒಂದು ಮಾತನ್ನು ಹೇಳಿದರು, ವಲ್ಲಭಾಯಿ ಪಟೇಲರು ಮತ್ತು ಜವಹರ್‌ಲಾಲ್ ನೆಹರೂರವರು ಸಹಿ ಮಾಡಿದ್ದರಿಂದ ಪಾಕೀಸ್ತಾನ ಬೇರೆ ಆಯಿತು, ಹಾಗೂ ನಿರ್ಮಾಣ ಆಯಿತು ಹಾಗೂ ಅದಕ್ಕೆ ಮುಸ್ಲಿಂ ಲೀಗ್ ಕಾರಣ ಅಲ್ಲವೆಂದು ಹೇಳಿದರು. ಬಹುಶಃ ಮಾನ್ಯ ಸ್ನೇಹಿತರಿಗೆ ಗೊತ್ತಿಲ್ಲವೆಂದು ಕಾಣುತ್ತದೆ ಈ ಸದನದಲ್ಲಿ ಇಷ್ಟು ದೊಡ್ಡ ಸಂಖ್ಯೆಯಲ್ಲಿ ನಮ್ಮ ಕಾಂಗ್ರೆಸ್ ಸ್ನೇಹಿತರು ಕುಳಿತಿರುವ ಸಂದರ್ಭದಲ್ಲಿ ಅಂಥ ಮಹಾ ಪುರುಷರ ಹೆಸರಿಗೆ ಮಸಿ ಬಳಿಯುವ ಮಾತನ್ನು ನಾವು ನೀವು ಮಾಡಬಾರದು.

ಶ್ರೀ ಕೆ.ಹೆಚ್. ಪಾಟೀಲ್.—ಶ್ರೀ ವಲ್ಲಭಾಯಿ ಪಟೇಲರು ಮತ್ತು ನೆಹರೂ ಅವರು ಮುಸ್ಲಿಂ ಜನರ ಮನಸ್ಸನ್ನು ನೋಯಿಸಬಾರದು ಹಾಗೂ ಅವರಿಗೆ ಏನು ಬೇಕು ಅದನ್ನು ಕೊಡೋಣ ಎಂಬ ಉದಾರ ಭಾವನೆಯಿಂದ ಕೊಟ್ಟಿದ್ದಾರೆಯೋ ಹೊರತು ಬೇರೆ ಭಾವನೆಯಿಂದ ಅಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಚರಿತ್ರೆಯು ಒಂದು ಪೂರ್ಣ ಸತ್ಯ ಸಂಗತಿಯನ್ನು ನಾವೂ ಸಹ ತಿಳಿದುಕೊಳ್ಳುವ ಪ್ರಯತ್ನ ಮಾಡಬೇಕು. ದೇಶದ ವಿಭಜನೆಯ ಬಗ್ಗೆ ಯಾವುದೋ ಒಂದು ಕೊನೆಯ ಹಂತದ ಅನಿವಾರ್ಯ ಪರಿಸ್ಥಿತಿಯನ್ನು ಉಲ್ಲೇಖ ಮಾಡಿ ಚರಿತ್ರೆಯನ್ನು ತಿರುಚುವುದಕ್ಕೆ ಆಗುವುದಿಲ್ಲ. ಜವಹರ್‌ಲಾಲ್ ನೆಹರೂರವರು ಹೇಳಿದರು. ದೇಶ ವಿಭಜನೆ ಮಾತನ್ನು ಆಡುವವರು ತಲೆ ತಿರುಕರು ಎಂಬ ಮಾತನ್ನು ಹೇಳಿದರು. ಅದು ನಮಗೆ ಗೊತ್ತಿದೆ ಮಾನ್ಯ ಸ್ನೇಹಿತರಿಗೂ ಗೊತ್ತಿರಬಹುದು. ಆದರೆ ಸ್ವಾತಂತ್ರ್ಯ ಪೂರ್ವದಲ್ಲಿ ೧೯೩೯ರಲ್ಲಿ ರಾವಿ ನದಿಯ ತೀರದಲ್ಲಿ ಮಹಮದ್ ಅಲಿ ಜಿನ್ನಾರವರ ಅಧ್ಯಕ್ಷತೆಯಲ್ಲಿ ಭಾರತ ವಿಭಜನೆಯಾಗಿ ಪಾಕೀಸ್ಥಾನ ಬೇಕು ಎಂದು ನಿರ್ಣಯ ಆಗಿದೆ.

SRI QUMARUL ISLAM —I am not representing that party. That was all-India Muslim League before Independence. This is Indian Union Muslim League which ruled Kerala State with a Chief Minister. Muslim League is a symbol of secularism. I am representing it and I contested with the ladder symbol. which is the symbol of the Muslim League in Kerala.

ಶ್ರೀ ಬಿ. ಎಸ್. ಯಡಿಯೂರಪ್ಪ.—ನೋಡಿ, ಪ್ರತಿ ಹೆಜ್ಜೆ ಹೆಜ್ಜೆಗೂ ತಾವು ಅನುಮತಿ ಕೊಡುವುದಾದರೆ ಹೇಗೆ ? ಒಂದು ಕಡೆ ಮಹಾತ್ಮ ಗಾಂಧೀಜಿಯವರು ಬ್ರಿಟಿಷರೇ ಈ ದೇಶ ಬಿಟ್ಟು ತೊಲಗಿ ಎಂದು ಕೂಗಿದರು. ಮಹಮ್ಮದ್ ಅಲಿ ಜಿನ್ನಾ ಹೇಳಿದರು divide and then quit India ಎಂದು ಭಾರತ ವಿಭಜನೆ ಮಾಡಿ ಮತ್ತೆ ತೊಲಗಿ ಎಂಬ ಮಾತನ್ನು ಹೇಳಿದರು. ಆ ರೀತಿ ಈ ದೇಶದಲ್ಲಿ ಮುಸ್ಲಿಂ ಲೀಗಿನ ಕುತಂತ್ರದಿಂದ ಏನು ದೇಶ ವಿಭಜನೆ ಆಯಿತು, ಆ ಜನ ಇವತ್ತು ಈ ಮಾತನ್ನು ಆಡುತ್ತಿದ್ದಾರೆ. ನಾನು ನಮ್ಮ ಕಾಂಗ್ರೆಸ್ ಸ್ನೇಹಿತರಿಗೆ ಮತ್ತು ಮುಸ್ಲಿಂ ಲೀಗ್ ಸ್ನೇಹಿತರಿಗೆ ಕೇಳುವುದಕ್ಕೆ ಇಷ್ಟಪಡುತ್ತೇನೆ, ಇಷ್ಟು ಕೂಗುತ್ತಾ ಇದ್ದೀರಲ್ಲ, ಇಷ್ಟು ಆಕ್ರೋಶದಿಂದ ಮಾತನಾಡಿದಿರಲ್ಲ, ಈ ಕಾಶ್ಮೀರದ ಕರ್ಮ ಕಥೆ ಗೊತ್ತಾ ಕಮರುಲ್ ಇಸ್ಲಾಂ ಸಾಹೇಬರೇ? ತಾವು ನಿನ್ನೆ ಹೇಳಿದಿರಿ, why Muslims are becoming terrorists in Kashmir ಎಂದು

SRI QUMARUL ISLAM.—Because of Jagmohan ?

ಶ್ರೀ ಬಿ. ಎಸ್. ಯಡಿಯೂರಪ್ಪ.—ಅವರು ನಿನ್ನೆ ಮಾತನಾಡಿದ್ದಾರೆ ಸ್ವಾಮಿ?

SRI K. H. PATIL.—You are a senior-most man belonging to a great national party which is responsible for changing the Prime Minister also. I would like to know from you, are we discussing Jammu and Kashmir subjects. If so, I will get books to reply. I cannot reply off-hand because there is a history why Pakistan divided. There is a big history behind. Britishers wanted to divide and rule. Therefore, Pandit Nehru, Vallabhai Patel and other leaders came to their rescue saying after all they are our frineds, Let them say whatever they want. Jinna was also a great Congress men. Please remember that.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಹಾತ್ಮ ಗಾಂಧಿಯವರು ಹೇಳಿದರು, ದೇಶ ವಿಭಜನೆ ಮಾಡುವುದಾದರೆ ಮೊದಲು ನನ್ನನ್ನು ತುಂಡು ಮಾಡಿ ಆ ಮೇಲೆ ಮಾಡಿ ಎಂದು.

ಛೇರ್ಮನ್.—ಮಾನ್ಯ ಯಡಿಯೂರಪ್ಪನವರು ದಯಮಾಡಿ ಕೇಳಬೇಕು, ನೀವು ಭಾಷಣ ಪೂರಾ ಮಾಡಿ ಒಂದು ಗಂಟೆ ಆಯಿತು ತಾವು ಯೀಲ್ಡ್ ಆಗುತ್ತೀರಿ, ಅವರು ಮಾತನಾಡುತ್ತಾರೆ. ನೀವು ರಾಜ್ಯದಲ್ಲಿ ನಡೆದಿರತಕ್ಕ ಕೋಮು ಗಲಭೆ ಬಗ್ಗೆ ಮಾತ್ರ ತಮ್ಮ ಭಾಷಣವನ್ನು ಸೀಮಿತ ಮಾಡಿಕೊಳ್ಳ ಬೇಕು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ನಿನ್ನೆ ದಿವಸ ಕೆ.ಎಚ್. ಪಾಟೀಲರು ಇರಲಿಲ್ಲ, ಅವರು ಕೇಳಿದಂಥ ಅನೇಕ ಪ್ರಶ್ನೆಗಳಿಗೆ ನಾನು ಜವಾಬ್ದಾರಿ ಸ್ಥಾನದಲ್ಲಿದ್ದುಕೊಂಡು, ಅಖಿಲ ಭಾರತ ಮಟ್ಟದ ಒಂದು ಪಕ್ಷದ ರಾಜ್ಯದ ಅಧ್ಯಕ್ಷನಾಗಿ ಅವರು ಕೇಳಿದಂಥ ಪ್ರಶ್ನೆಗೆ ಉತ್ತರ ಕೊಡದೇ ಹೋದರೆ ಜನ ಏನನ್ನುತ್ತಾರೆ? ಅವರು ಹೇಳಿದ್ದೆಲ್ಲಾ ರೆಕಾರ್ಡ್‌ಸ್‌ನಲ್ಲಿ ಹೋಗಿದೆ, ಲಾ ಅಂಡ್ ಆರ್ಡರ್ ಸಿಚ್ಯುಯೇಷನ್‌ಗೆ ನಾನು ಬರುತ್ತೇನೆ. ನಾನು ಕೊನೆಯದಾಗಿ..........

ಶ್ರೀ ಬಸವರಾಜ ರಾಯರೆಡ್ಡಿ.—ಅಲ್ಲ ಅಧ್ಯಕ್ಷರೇ ಅಖಿಲ ಭಾರತ ವಿರೋಧಿ ಪಕ್ಷದ ಅಧ್ಯಕ್ಷನಾಗಿ ಎಂದರೆ ಏನು? ಅಖಿಲ ಭಾರತ ವಿರೋಧಿ ಪಕ್ಷ ಅಂದರೆ ಯಾವುದು?

ಶ್ರೀ ಕೆ.ಎಚ್. ರಂಗನಾಥ್.—ಈ ಸದನದಲ್ಲಿ ಬಹಳ ವಿಚಾರಗಳು ದೂರ ಹೋಗುತ್ತಿವೆ. ವಿಭಜನೆ ಹೇಗಾಯಿತು, ಏನಾಯಿತು ಎಂಬ ಮಟ್ಟಕ್ಕೆ ಹೋಗಿ ಐಸೋಲೇಟೆಡ್ ಆಗಿ ಏನಾದರೂ ಹೇಳುತ್ತಾ ಹೋದರೆ ದೊಡ್ಡ ಅಪಚಾರ ಮಾಡಿದಂತೆ ಆಗುತ್ತದೆ ಮೊನ್ನೆ ಕರ್ನಾಟಕ ರಾಜ್ಯದಲ್ಲಿ ಏನು ಗಲಭೆ ಯಾಗಿದೆ, ಅದರ ಬಗ್ಗೆ ಏನಾದರೂ ಹೇಳುವುದಾದರೆ' ಅದು ಏತಕ್ಕೆ ಆಯಿತು ಎಂಬುದನ್ನು ಪ್ರಸ್ತಾಪ ಮಾಡಬೇಕೇ ವಿನಾಃ ಈಗ ಹಿಂದೂಸ್ತಾನ ಹೇಗೆ ವಿಭಜನೆ ಆಯಿತು, ಯಾರು ಏನು ಮಾಡಿದರು ಅದನ್ನೆಲ್ಲಾ ಕೆಣಕುತ್ತಾ ಹೋದರೆ, ಮಾನ್ಯ ಸದಸ್ಯರು he is proud of RSS also.......... ಅದು ಸ್ವಲ್ಪ

ಶ್ರೀ ಬಿ.ಎಸ್. ಯಡಿಯೂರಪ್ಪ.—ನಾನು ಒಂದೇ ವಿನಂತಿ ಮಾಡುವುದು. ನಿನ್ನೆ ತಾವು ಇರಲಿಲ್ಲ. ರೆಕಾರ್ಡ್ಸ್ ತೆಗೆದುನೋಡಿ. ಕಾಗೋಡು ತಿಮ್ಮಪ್ಪನವರು ಅನೇಕ ವಿಷಯಗಳನ್ನು ಹೇಳಿದ್ದಾರೆ.

ಶ್ರೀ ಕೆ.ಎಚ್.ರಂಗನಾಥ್.—ನಿನ್ನೆ ಏನೋ ತಪ್ಪಾಗಿದ್ದರೆ ಅದನ್ನೇ ಇವತ್ತೂ ಸಹ ಮಾಡಬೇಕಾ? ಎಂದು ಮಾನ್ಯ ಪಾಟೀಲ್ ಅವರು ಸಹ ಹೇಳಿದರು. ಆರ್. ಎಸ್.ಎಸ್. ಅದೆಲ್ಲಾ ತೆಗೆಯುತ್ತಾ ಹೋದರೆ ನಾವು ನಾಥೂರಾಮ್‌ಗೂಡ್ಸೆವರೆಗೂ ಹೋಗಿ ಬಿಡುತ್ತೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ.—ಹೋಗಬಹುದು. ತಪ್ಪೇನೂ ಇಲ್ಲ. ಸತ್ಯಸಂಗತಿಗಳನ್ನು ಯಾರೂ ಸಹ ಮುಚ್ಚಿಡುವುದಕ್ಕಾಗುವುದಿಲ್ಲ.

ಶ್ರೀ ಕೆ.ಎಚ್.ರಂಗನಾಥ್.—ಅದು ಬೇಡ. ನಾನು ತಮ್ಮಲ್ಲಿ ಕೇಳಿಕೊಳ್ಳುವುದು ಏನೆಂದರೆ, ಈ ಒಂದು ಚರ್ಚೆ ಏನಿದೆ ಇದು ಬಹಳ ಸೀಮಿತವಾಗಿದೆ. ಕರ್ನಾಟಕ ರಾಜ್ಯದಲ್ಲಿ ನಡೆದಂಥ ಗಲಭೆ ಬಗ್ಗೆ ಅದಕ್ಕೆ ಸಂಬಂಧಪಟ್ಟ ಹಾಗೆ ಮಾನ್ಯ ಸದಸ್ಯರಿಗೆ ಗೊತ್ತಿದ್ದರೆ, ಅದರಲ್ಲಿ ಸರ್ಕಾರದ ಲೋಪದೋಷ ಇದ್ದರೆ ಅದನ್ನು ಹೇಳತಕ್ಕದ್ದು ಒಳ್ಳೆಯದು. ಅದು ಬಿಟ್ಟು ನಾವು ಎಲ್ಲಿಗೋ ಹೋದರೆ ಅದು ತಪ್ಪಾಗುತ್ತದೆ,

ಶ್ರೀ ಬಿ. ಎಸ್. ಯಡಿಯೂರಪ್ಪ.—ಸನ್ಮಾನ್ಯ ಅಧ್ಯಕ್ಷರೇ, ನಿನ್ನೆ ದಿವಸ ಸನ್ಮಾನ್ಯ ಮುಖ್ಯ ಮಂತ್ರಿಗಳು ವಿರೋಧ ಪಕ್ಷದ ನಾಯಕರ ಸಭೆ ಕರೆದು ಶಾಂತಿ ಸುವ್ಯವಸ್ಥೆ ಬಗ್ಗೆ ಒಂದು ಪ್ರೆಸ್ ಪೇಪರ್ ಕೊಟ್ಟಿದ್ದಾರೆ. ಅದರಲ್ಲಿ ಅವರು ಕಾಶ್ಮೀರದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅದಕ್ಕಾಗಿ ನಾನು ಒಂದು ಮಾತನ್ನು ಹೇಳಲು ಇಷ್ಟಪಡುತ್ತೇನೆ. ಇವತ್ತು ಕಾಶ್ಮೀರದಲ್ಲಿ ಏನು ನಡೆಯುತ್ತಿದೆ. ಎಂಬುದನ್ನು ತಿಳಿದುಕೊಳ್ಳುವ ಅಗತ್ಯ ಇದೆ. ಆ ಬಗ್ಗೆ ಹೇಳಿ ನಾನು ರಾಜ್ಯದ ಕಾನೂನು ಸುವ್ಯವಸ್ಥೆ ಬಗ್ಗೆ ಬರುತ್ತೇನೆ. ಮಾನ್ಯ ರಂಗನಾಥ್‌ರವರೇ, ಕಾಶ್ಮೀರದಲ್ಲಿ ನಡೆದಂತಹ ಕ್ರೌರ್ಯ ಜಗತ್ತಿನ ಇತಿಹಾಸದಲ್ಲಿ ಹಿಂದೆಂದೂ ನಡೆದಿರಲಿಲ್ಲ. ಅಲ್ಲಿನ ಸುಮಾರು ೧ ಲಕ್ಷದ ೮೦ ಸಾವಿರ ಹಿಂದೂಗಳ ಪೈಕಿ ಸುಮಾರು ಒಂದೂ ವರೆ ಲಕ್ಷದಷ್ಟು ಜನರು ಕಾಶ್ಮೀರವನ್ನು ಬಿಟ್ಟು ಓಡಿಬಂದಿದ್ದಾರೆ. ಅವರು ಅಲ್ಲಿ ಆಸ್ತಿಪಾಸ್ತಿಯನ್ನು ಹಾಗೇ ಬಿಟ್ಟು ಬಂದಿದ್ದಾರೆ. ಭಾರತ ಇವತ್ತು ನಮ್ಮ ಶತ್ರು ಎಂದು ತ್ರಿವರ್ಣ ಧ್ವಜವನ್ನು ಸುಡುವ ಕೆಲಸ ಅಲ್ಲಿ ನಡೆಯುತ್ತಿದೆ, ಸಾವಿರಾರು ಜನ ಮಹಿಳೆಯರ ಮಾನಭಂಗ ಮಾಡಿ ನಂತರ ಅವರನ್ನು ಛಿದ್ರ

ಛಿದ್ರ ಮಾಡಿ ಎಸೆಯುವ ಪ್ರಯತ್ನವನ್ನು ಅಲ್ಲಿ ಮಾಡಿದ್ದಾರೆ. ಇದರ ಬಗ್ಗೆ ನಮ್ಮ ಸ್ನೇಹಿತರು ಯಾರೂ ಅನುಕಂಪ ತೋರಲಿಲ್ಲ. ಹಾಗೂ ಅದರ ಬಗ್ಗೆ ಮಾತನಾಡಲಿಲ್ಲ ಹಾಗೂ ಇದು ತಪ್ಪು ಎಂದು ಏಕೆ ಮಾತನಾಡಲಿಲ್ಲ ? ಮಾನ್ಯ ರಂಗನಾಥ್ ಅವರು ಮತ್ತು ಪಾಟೀಲರು ಈ ಬಗ್ಗೆ ಹೇಳಿದ ಮೇಲೆ ಈ ವಿಷಯವನ್ನು ಮುಂದುವರಿಸುವುದಕ್ಕೆ ಇಷ್ಟಪಡದೇ ರಾಜ್ಯದ ಕಾನೂನಿನ ಬಗ್ಗೆ ನನ್ನ ವಿಚಾರವನ್ನು ತಿಳಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ, ಈ ರಾಜ್ಯದಲ್ಲಿ ಪೋಲೀಸ್ ದೌರ್ಜನ್ಯ ಅನೇಕ ಕಡೆ ದೊಡ್ಡ ಪ್ರಮಾಣದಲ್ಲಿ ನಡೆದಿದೆ. ದಾವಣಗೆರೆಯಲ್ಲಿ ೭.೧೦.೯೦ರಂದು ಸುಮಾರು ೨೫-೩೦ ಸಾವಿರ ಜನರ ರಾಮಜ್ಯೋತಿ ಮೆರವಣಿಗೆ ಬಂತು. ಮಧ್ಯಾಹ್ನ ಅಲ್ಲಿ ಇದ್ದ ಕಾಂಗ್ರೆಸ್ ಮುಖಂಡರು, ವಿಶ್ವ ಹಿಂದೂ ಪರಿಷತ್ತಿನ ಮುಖಂಡರು ಮೆರವಣಿಗೆ ಸಾಗುವ ಬಗ್ಗೆ ಪೋಲೀಸ್ ಅಧಿಕಾರಿಗಳನ್ನು ರಿಕ್ವೆಸ್ಟ್ ಮಾಡಿಕೊಂಡು ಒಪ್ಪಿಸಿದ ನಂತರ ರಥಯಾತ್ರೆ ಪ್ರಾರಂಭವಾಯಿತು ಸುಮಾರು ೩೦ ರಿಂದ ೪೦ ಸಾವಿರ ಜನರ ಮೆರವಣಿಗೆಯಲ್ಲಿ ಬರುತ್ತಾ ಇರಬೇಕಾದರೆ ಪಕ್ಕದಲ್ಲಿ ಯಾವುದೋ ಒಂದು ರಸ್ತೆಯಲ್ಲಿ ಗಲಾಟೆ ಆಯಿತು ಎಂದು ಹಾಗೂ ಗೊಂದಲದ ವಾತಾವರಣ ಉಂಟಾದಾಗ ಎಸ್‌ಪಿ ಹಾಗೂ ಡಿಸಿಯವರು ಸ್ಥಳದಲ್ಲಿಯೇ ಇದ್ದರು. ಅಲ್ಲಿ ಮೆರವಣಿಗೆಯನ್ನು ನಿಯಂತ್ರಣ ಮಾಡುವ ಸಂದರ್ಭದಲ್ಲಿ ಮೊದಲು ಟಿಯರ್‌ಗ್ಯಾಸ್ ಹಾಕಲಿಲ್ಲ, ಲಾಠಿಛಾರ್ಜ್ ಮಾಡಲಿಲ್ಲ. ನೇರವಾಗಿ ಡಿಸಿ ಮತ್ತು ಎಸ್‌ಪಿಯವರ ಸಮಕ್ಷಮದಲ್ಲಿ ಗೋಲೀಬಾರ್ ಮಾಡಿದರು. ಚಿತ್ರದುರ್ಗದ ಒಬ್ಬ ಪಿಎಸ್‌ಐ ಸಾಧಾಗರ್ ಎನ್ನುವವರು ತಮ್ಮ ಬಳಿ ಸ್ವತಹ ರಿವಾಲ್ವರ್ ಇದ್ದರೂ ಕೂಡಾ ಪಕ್ಕದಲ್ಲಿ ಇದ್ದ ಪೋಲೀಸ್ ಸೆಂಟ್ರಿಯ ಕೈಯಲ್ಲಿ ಇದ್ದ ರೈಫಲ್‌ನ್ನು ಕಸಿದುಕೊಂಡು...ನಾವು ರಾಮಜ್ಯೋತಿ ಮೆರವಣಿಗೆ ಹೋಗುತ್ತಿದ್ದು, ನಮ್ಮ ಮೇಲೆ ಏಕೆ ಬೀಳುತ್ತೀರಿ ಎಂದು ನಾವು ಕೇಳಿದರೂ ಕೂಡಾ......

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವು ಪೋಲೀಸ್ ದೌರ್ಜನ್ಯದ ಬಗ್ಗೆ ಮಾತನಾಡಿ ಆದರೆ ಇಲ್ಲಿ ಪೋಲೀಸ್ ಅಧಿಕಾರಿಯ ಹೆಸರನ್ನು ಇಲ್ಲಿ ಹೆಸರಿಸುವುದು ಸರಿಯಲ್ಲ. ಆ ಮನುಷ್ಯ ಇಲ್ಲ ಇಲ್ಲದಿರುವುದರಿಂದ ಬಹುಶಃ ನಿಮ್ಮ ಉದ್ದೇಶ ಕೂಡಾ ಸಾಧನೆಯಾಗುವುದಿಲ್ಲ. ಮತ್ತು ಅದು ಒಂದು ರೀತಿಯಿಂದ ಗುಡ್ ಟೇಸ್ಟ್ ಸಹ ಆಗುವುದಿಲ್ಲ.

ಶ್ರೀ ಬಿ. ಎಸ್, ಯಡಿಯೂರಪ್ಪ.—ಏನೂ ತೊಂದರೆ ಇಲ್ಲ ನನ್ನ ಉದ್ದೇಶ ಬಹಳ ಸ್ಪಷ್ಟ ಇದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ ನಾನು ವಿನಯದಿಂದ ಹೇಳುತ್ತಿದ್ದೇನೆ. ಅಂತಹ ಅಧಿಕಾರಿಯ. ಕಾನ್‌ಸ್ಟೇಬಲ್‌ಗಳ ಹೆಸರನ್ನು ಹೇಳತಕ್ಕದ್ದು ಈ ಸಂಪ್ರದಾಯದ ಪ್ರಕಾರ ಕೂಡಾ ಸರಿಯಲ್ಲ. ನಿಯಮದ ಪ್ರಕಾರವೂ ಕೂಡಾ ಸರಿಯಲ್ಲ. ಈ ಸಭೆಯಲ್ಲಿ ಇಲ್ಲದವರ ಹೆಸರು ಹೇಳುವುದು ಸರಿಯಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನನಗೆ ಎಲ್ಲ ರೀತಿಯ ಅಧಿಕಾರ ಇದೆ. ಮಾನ್ಯ ಹಿರಿಯ ಸಚಿವರು ಆ ರೀತಿ ಹೇಳಿದರೆ ಆಗುವುದಿಲ್ಲ. ನಾನು ಏನೂ ಹೇಳಬೇಕೋ ಅದನ್ನು ಹೇಳುತ್ತೇನೆ.

ಛೇರ್ಮನ್.—ಇಲ್ಲಿ ಯಾರು ಹಾಜರು ಇಲ್ಲವೋ ಅವರ ಹೆಸರು ಹೇಳುವುದು...

ಶ್ರೀ ಬಿ, ಎಸ್. ಯಡಿಯೂರಪ್ಪ.—ದೌರ್ಜನ್ಯ ಮಾಡುವ ಎಲ್ಲ ಅಧಿಕಾರಿಗಳನ್ನು ಸದಸ್ಯರನ್ನಾಗಿ ಮಾಡಿ ಕೂಡಿಸಿಕೊಂಡು ಅವರ ಬಗ್ಗೆ ಮಾತನಾಡುವುದಕ್ಕಾಗುತ್ತದೆಯೋ?

ಛೇರ್ಮನ್.—ನೀವು ಅವರ ಡೆಸಿಗ್ನೇಷನ್ ಹೇಳಬಹುದು. ಆದರೆ ಹೆಸರು ಹೇಳಬಾರದು.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ಹೆಸರು ಹೇಳದಿದ್ದರೆ ಸರ್ಕಾರಕ್ಕೆ ಹೇಗೆ ತಿಳಿಯಬೇಕು. ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ ಡಿಸಿ ಮತ್ತು ಎಸ್‌ಪಿಯವರ ಸಮಕ್ಷಮದಲ್ಲಿ ಒಬ್ಬ ಎಸ್‌ಐ.....

ಶ್ರೀ ಎಂ. ವೀರಪ್ಪ ಮೊಯಿಲಿ.—ಹೆಸರು ಹೇಳುವುದು ನಿಯಮದ ಪ್ರಕಾರ ಆಗುವುದಿಲ್ಲ. ಮತ್ತು ಒಳ್ಳೆಯ ಭಾವನೆಯನ್ನು ಅದು ಸೃಷ್ಟಿ ಮಾಡುವುದಿಲ್ಲ. ದಯಮಾಡಿ ಸ್ವಲ್ಪ ಅದಷ್ಟು ಸಂಯಮದಿಂದ ತಾವು ಹೇಳಿ ಬಿಸನೆಸ್ ಅಡ್ವೈಸರಿ ಕಮಿಟಿಯಲ್ಲಿ ಕೂಡಾ ವಿರೋಧ ಪಕ್ಷದ ನಾಯಕರು ಇದ್ದರು. ಮತ್ತು ಅನೇಕ ಪಕ್ಷದ ನಾಯಕರು ಇದ್ದರು.

೩.೪೦ ಪಿ. ಎಂ

ನಾವು ಆದಷ್ಟೂ ನಮ್ಮ ಚರ್ಚೆಯನ್ನು ಹಾಗೂ ನಮ್ಮ ವಿಶ್ಲೇಷಣೆಯನ್ನು ಸಾರ್ವಜನಿಕರಿಗೆ ಅನುಕೂಲವಾಗುವ ರೀತಿಯಲ್ಲಿ ಮಾಡಬೇಕು ಏಕೆಂದರೆ ಬೆಂಕಿ ಜ್ವಾಲೆ ಇನ್ನೂ ಕೆಲವು ಕಡೆ ಅಡಗಿದೆ. ಅದು ಮತ್ತೆ ಸ್ಫೋಟನವಾಗತಕ್ಕಂತಹ ರೀತಿಯಲ್ಲಿ ಮತ್ತು ಪ್ರಚೋದನೆ ಆಗುವಂಥ ರೀತಿಯಲ್ಲಿ ನಾವು ಪ್ರೇರೇಪಿಸಿದರೆ ಹಾಗೂ ಈ ಸದನವನ್ನು ಉಪಯೋಗ ಮಾಡಿದರೆ ಅದು ಬಹಳ ತಪ್ಪಾಗುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಬಸವಲಿಂಗಪ್ಪನವರಿಗೆ ಈ ಮಾತನ್ನು ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅದು ತಮಗೂ ಅನ್ವಯವಾಗುತ್ತದೆ. ನನಗೂ ಅನ್ವಯವಾಗುತ್ತದೆ. ಮಾನ್ಯ ಬಸವಲಿಂಗಪ್ಪನವರಿಗೂ ಅನ್ವಯವಾಗುತ್ತದೆ. ಹಾಗೂ ಈ ಸದನದಲ್ಲಿರುವವರೆಲ್ಲರಿಗೂ ಅನ್ವಯವಾಗುತ್ತದೆ. ಆದ್ದರಿಂದ ಸದ್ಭಾವನೆಗಳನ್ನು ನಾವು ಬೆಳೆಸಿಕೊಳ್ಳಬೇಕಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ನಾವು ಇದರ ಬಗ್ಗೆ ಚರ್ಚೆ ಮಾಡುತ್ತಿರುವಾಗ ಅತ್ಯಂತ ವಿಶೇಷ ರೀತಿಯ ಸಂಯಮವನ್ನು ಉಪಯೋಗ ಮಾಡಿಕೊಂಡು ಜನರಲ್ಲಿ ವಿಶ್ವಾಸ ಭಾವನೆಯನ್ನು ಸಾಮರಸ್ಯವನ್ನು ಬೆಳೆಸುವುದಕ್ಕೆ ಈ ಚರ್ಚೆ ಸಹಕಾರಿಯಾಗಬೇಕು ಎಂದು ಈ ಚರ್ಚೆಯನ್ನು ಇಟ್ಟಿದ್ದೇವೆ. ಇದು ಅವರ ವಿರುದ್ಧ ವಾಖ್ಯಾನವಾದರೆ ಅದು ಈ ಸದನಕ್ಕೆ ಶೋಭೆ ತರುವುದಿಲ್ಲ. ಮತ್ತು ಹೊರಗಡೆ ಶಾಂತಿ ನೆಮ್ಮದಿಯನ್ನು ಕಾಪಾಡಬೇಕೆಂಬ ಸದುದ್ದೇಶ ನಮ್ಮದು ನಿಮ್ಮದು ಏನು ಇದೆ ಅದೂ ಕೂಡ ಸಾಧನೆಯಾಗುವುದಿಲ್ಲ. ಆದ್ದರಿಂದ ಸಂಯಮವನ್ನು ಉಪಯೋಗ ಮಾಡಿಕೊಂಡು ಮಾತನಾಡಿದರೆ ಒಳ್ಳೆಯದು.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಿನ್ನೆ ಪೂರ್ತಿಯಾಗಿ ತಾವು ಇಲ್ಲಿ ಕುಳಿತುಕೊಂಡು ಯಾರು ಏನು ಮಾತಾಡಿದರು ಎಂಬುದನ್ನು ಕೇಳಿದ್ದರೆ ಗೊತ್ತಾಗುತ್ತಿತ್ತು. ಹಾಗೆ ನಿಬಂಧನೆ ಮಾಡಿದರೆ ನಾನು ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವ ದೃಷ್ಟಿಯಿಂದ ನಾನು ಅದನ್ನು ವಿರೋಧ ಮಾಡುವುದಿಲ್ಲ. ಆದರೆ ಈ ರೀತಿ ೩೫–೪೦ ಸಾವಿರ ಜನರು ಮೆರವಣಿಗೆಯಲ್ಲಿ ಶಾಂತ ರೀತಿಯಲ್ಲಿ ಬರುತ್ತಿದ್ದರು, ಹಿಂದಿನ ದಿವಸ ೫ ನೇ ತಾರೀಖು ಶಿವಾಜಿರಾವ್ ಎನ್ನುವಂತಹ ಒಬ್ಬ ಹುಡುಗನನ್ನು ೭–೮ ಕಡೆ ಸ್ಟ್ಯಾಬ್ ಮಾಡಿ ಅಲ್ಪಸಂಖ್ಯಾತರು ಕೊಂದರು. ನಾನು ಅವರ ಹೆಸರನ್ನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ, ೬ ನೇ ತಾರೀಖು ರಾಮಜ್ಯೋತಿ ಮೆರವಣಿಗೆ ನಡೆಯಬೇಕಾಗಿತ್ತು. ೩ ನೇ ತಾರೀಖು ಮಹಮದ್ ಪೈಗಂಬರರ ಮೆರವಣಿಗೆ ಆಯಿತು. ಅದರಲ್ಲಿ ೩೦–೪೦ ಸಾವಿರ ಮುಸ್ಲಿಮರ ಬಂಧುಗಳು ಸೇರಿದ್ದರು. ಅಲ್ಲಿ ಒಂದು ಸಣ್ಣ ಘಟನೆ ಕೂಡ ಆಗಲಿಲ್ಲ. ಬಹಳ ವಿಜೃಂಭಣೆಯಿಂದ ಮಾಡಿದರು.? ಅದೇ ದಾವಣಗೆರೆಯಲ್ಲಿ ಸುಮಾರು ೩೦–೪೦ ಜನರು ಮೆರವಣಿಗೆ ಮಾಡುವುದಕ್ಕೆ ಅನುಮತಿ ಕೇಳಿದ್ದಕ್ಕೆ ಅನುಮತಿ ಕೊಡುವುದಕ್ಕೆ ಹಿಂದೆ ಮುಂದೆ ನೋಡಿ ನಂತರ ಅನುಮತಿ ಕೊಟ್ಟರು.

ನಂತರ ಮೆರವಣಿಗೆ ಬರಬೇಕಾದರೆ ಎಲ್ಲಿ ಗಲಾಟೆಯಾಗುತ್ತಿತ್ತು. ಅಲ್ಲಿ ನಿಯಂತ್ರಣ ಮಾಡುವುದಕ್ಕೆ ಬದಲಾಗಿ ಹಿಂದಿನ ದಿವಸ ಅಂದರೆ ೩ ನೇ ತಾರೀಖು ಮೆರವಣಿಗೆಯಾದ ಮೇಲೆ ಶಿವಾಜಿ ರಾವ್ ಎನ್ನುವವನಿಗೆ ೭–೮ ಕಡೆ ಸ್ಟ್ಯಾಬ್ ಮಾಡಿ ಕೊಂದರಲ್ಲ, ಆಗ ನಿಮ್ಮ ಪೋಲೀಸರು ಏನು ಬಿಗಿ ಕ್ರಮವನ್ನು ತೆಗೆದುಕೊಂಡರು? ೬ ನೇ ತಾರೀಖು ಮೆರವಣಿಗೆ ಬಂದಾಗ ೩೦–೪೦ ಸಾವಿರ ಜನರನ್ನು ನಿಯಂತ್ರಣ ಮಾಡಲು ಲಾಠಿ ಚಾರ್ಜ್ ಮಾಡಬಹುದಿತ್ತು, ಇಲ್ಲವೇ ಟ್ಯೆರ್‌ಗ್ಯಾಸ್ ಹಾಕಬಹುದಾಗಿತ್ತು. ಅತ್ಯಂತ ಆಶ್ಚರ್ಯದ ಸಂಗತಿಯನ್ನು ಇಲ್ಲಿ ತಮಗೆ ಹೇಳಬಯಸುತ್ತೇನೆ, ಮೆರವಣಿಗೆಯಲ್ಲಿ ಮುಂದೆ ಇದ್ದಂತಹ ಶ್ರೀ ವೆಂಕಟೇಶ್ ಮತ್ತು ಶ್ರೀ ಚಂದ್ರಶೇಖರ್ ಸಿಂಧ್ಯ ಎನ್ನುವಂತಹ ಇಬ್ಬರು ಯುವಕರು ಏನು ಇದ್ದರು. ಇವರನ್ನು ಪೋಲೀಸ್ ಅಧಿಕಾರಿಗಳು ತಡೆಯುವುದಕ್ಕೆ ಬಂದಾಗ, ಗೋಲಿಬಾರ್ ಮಾಡುವಂತಹ ಪ್ರಯತ್ನ ಮಾಡಿದಾಗ ಇಬ್ಬರೂ ತಮ್ಮ ಶರ್ಟ್ ಬಿಚ್ಚಿ ಎದೆ ಚಾಚಿದರು, ನಮಗೆ ಬೇಕಾದರೆ ಹೊಡೆಯಿರಿ. ಆದರೆ ಎಲ್ಲಿ ಗಲಾಟೆಯಾಗುತ್ತಿದೆ ಅಲ್ಲಿ ಹೋಗಿ ಅಡ್ಡಿ ಮಾಡಿ ನಮಗೇಕೆ ಅಡ್ಡಿ ಮಾಡುತ್ತೀರಿ ಎಂದು ಹೇಳಿದರೆ, ಅಲ್ಲಿದಂತಹ ಈ ಎಸ್‌ಐ ಪಕ್ಕದಲ್ಲಿದ್ದಂತಹವರಿಂದ ರಿವಾಲ್ವಾರ್ ಅನ್ನು ಕಿತ್ತುಕೊಂಡು ನೇರವಾಗಿ ಅವರನ್ನು ಗುಂಡು ಹಾಕಿ ಸ್ಥಳದಲ್ಲೇ ಇಬ್ಬರನ್ನು ಕೊಂದಿದ್ದು ಅಲ್ಲದೆ ಇನ್ನೂ ೬ ಜನರು ಸ್ಪಾಟ್‌ನಲ್ಲಿಯೇ ಗೋಲಿಬಾರ್‌ನಿಂದಾಗಿ ಸತ್ತರು. ಇದು ಯಾವ ಸರಕಾರಕ್ಕೆ ಗೌರವ ತರುವಂತಹ ಸಂಗತಿ. ಪೋಲೀಸ್ ಅಧಿಕಾರಿಗಳಿಗೆ ಕಂಡಲ್ಲಿ ಗುಂಡು ಅದೂ ವಿಶೇಷ ಸಂದರ್ಭದಲ್ಲಿ ಎಂಬ ಒಂದು ಅಧಿಕಾರ ಏನು ಇತ್ತು, ಆ ಒಂದು ಅವಕಾಶವನ್ನು ದುರುಪಯೋಗ ಮಾಡಿಕೊಂಡು ಪಕ್ಕದಲ್ಲಿದ್ದವರಿಂದ ರಿವಾಲ್ವಾರನ್ನು ಕಿತ್ತುಕೊಂಡು ಇವರನ್ನು ಕೊಲೆ ಮಾಡಿದರಲ್ಲ, ಅವರು ಪ್ರಾಮಾಣಿಕವಾಗಿ ಅಲ್ಲಿನ ಎಸ್‌ಪಿ ಮತ್ತು ಡಿಸಿ ಯವರನ್ನು ಕೇಳಿ ಗೋಲಿಬಾರಿಗೆ ಆಜ್ಞೆ ಕೊಟ್ಟಿದ್ದರಾ ಎಂದು? ತಾವು ಬೇಕಾದರೆ ಕೇಳಿ ಈ ರೀತಿಯಾದ ಗೋಲಿಬಾರ್ ಮಾಡುವಂತಹ ಪ್ರಯತ್ನ ಮಾಡಿ ಆ ಒಂದು ಕಾರ್ಯಕ್ರಮವನ್ನು ಹತ್ತಿಕ್ಕುವಂತಹ ಕೆಲಸವನ್ನು ಮಾಡಿದರು, ಮತ್ತೆ ಮುಳಬಾಗಿಲಿನಲ್ಲಿ ಬೆಂಕಿ ಹತ್ತುಕೊಳ್ಳುವಂತಹ ವ್ಯವಸ್ಥೆ ಏಕೆ ಉಂಟಾಯಿತು, ಕೆ.ವಿ. ಜಯರಾಂ ಎನ್ನುವಂತಹವರ ಮಗ ಪಿಯುಸಿ

ಓಮತ್ತಿದ್ದವನು ಯಾವುದೋ ಗಲಾಟೆಯಲ್ಲಿ ಸಿಕ್ಕಿದನು ಆ ಸುಭಾಷ್ ಎಂಬುವವನು ಇವರಿಗೆ ಸಿಕ್ಕಲಿಲ್ಲ ವೆಂದು ಹೇಳಿ ಕೆ.ವಿ ಜಯರಾಂರವರನ್ನು ರಾತ್ರಿ ೧೨-೩೦ರಲ್ಲಿ ಕರೆದು ಎಸ್‌ಪಿ ಡಿಸಿ, ಡಿವೈಎಸ್‌ಪಿ ಯವರು ಸ್ಥಳದಲ್ಲಿ ನಿಂತುಕೊಂಡು ಅವರಿಗೆ ಸಿಕ್ಕಾಪಟ್ಟೆ ಹೊಡೆದು ಬೂಟ್ಸ್ ಕಾಲಿನಲ್ಲಿ ಒದ್ದರು. ಕೊನೆಗೆ ಸರಕಾರಿ ನೌಕರರು ಮಾರನೇ ದಿವಸ ಬೆಳಿಗ್ಗೆ ಧರಣಿ ಮಾಡುವಂತಹ ವಿಚಿತ್ರವಾದ ಸಂದರ್ಭ ನಡೆಯಿತು ಯಾವ ಪೋಲೀಸ್ ಅಧಿಕಾರಿಗಳಿಗೆ ಸ್ವತಃ ಅವರೇ ಥಳಿಸಿ ಅವರೇ ಶಿಕ್ಷೆ ಕೊಡುವಂತಹ ಅಧಿಕಾರವನ್ನು ನಮ್ಮ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಯಾವಾಗ ಕೊಟ್ಟರೋ ಗೊತ್ತಿಲ್ಲ. ಅಲ್ಲಿರುವಂತಹ ಡಿವೈಎಸ್‌ಪಿ ಯವರು ಪಿ.ವಿ. ಸುಬ್ರಮಣ್ಯಂ ಎನ್ನುವವರನ್ನು ಸ್ಟೇಷನಿಗೆ ಕರೆಸಿ ಜನಿವಾರವನ್ನು ಕಿತ್ತು ಹಾಕಿ ಅಲ್ಲಿ ಪಕ್ಕದಲ್ಲಿದ್ದ ಮತ್ತೊಬ್ಬನ ಕತ್ತಿನಲ್ಲಿದ್ದ ತುಳಸಿ ಹಾರವನ್ನು ಕಿತ್ತು ಹಾಕಿ ಕಾಲಲ್ಲಿ ತುಳಿದು ಅದಕ್ಕೆ ಅಪಮಾನ ಮಾಡುವಂತಹ ಪ್ರಯತ್ನ ಮಾಡಿದ್ದಾರೆ.

ಯಾವ ರೀತಿಯಲ್ಲಿ ಇದರಿಂದ ಗೌರವ ಬರುತ್ತದೆ ? ಹೋಂ ಮಿನಿಸ್ಟರ್ ಇಲ್ಲಿ ಇದ್ದಾರೆ. ಕೋಲಾರ ಜಿಲ್ಲೆಯ ಮುಳಬಾಗಿಲಿನಲ್ಲಿ ಎರಡು ಸಾವು ಗೋಲಿಬಾರಿನಿಂದ ಆಯಿತು. ಅಲ್ಲಿ ವೈದ್ಯಕೀಯ ವರದಿಯನ್ನು ತೆಗೆದುಕೊಂಡರು, ಗೋಲಿಬಾರ್‌ನಿಂದ ಗೋಪಾಲಕೃಷ್ಣ ಎಂಬುವರ ಸಾವು ಆಯಿತು ಎಂದು ರೆಕಾರ್ಡ್ ಆಯಿತು. ಇಬ್ಬರು ಮೃತರ ಶರೀರವನ್ನು ಐಡೆಂಟಿಫೈ ಮಾಡಿ ಗೋಲಿಬಾರಿನಿಂದ ಸಾವು ಆಗಿದೆಯೆಂದು ರೆಕಾರ್ಡ್ ಆಯಿತು. ಆ ಸಂದರ್ಭದಲ್ಲಿ ಕೋಲಾರದಿಂದ ಬೇರೆ ಒಬ್ಬ ಡಾಕ್ಟರನ್ನು ಕರೆಸಿ ಇವರು ಗೋಲಿಬಾರ್‌ನಿಂದ ಸತ್ತಿಲ್ಲ, ಬೇರೆ ಕಾರಣದಿಂದ ಸತ್ತರು ಎಂದು ವಿಷಯವನ್ನು ತಿರುಚಿ ರೆಕಾರ್ಡ್ ಮಾಡಿಸಿದರು. ವಿನಾ ಕಾರಣ ಆ ಊರಿನ ೧೦ ಜನರನ್ನು ಪ್ರಮುಖರನ್ನು ಕರೆಸಿ ಅವರ ಮೇಲೆ ಕೇಸ್ ಹಾಕಿ ಅವರಿಗೆ ತೊಂದರೆ ಮಾಡುವ ಪ್ರಯತ್ನವನ್ನು ಪೋಲೀಸ್ ಅಧಿಕಾರಿಗಳು ಮಾಡಿದ್ದಾರೆ. ಹಾಸನ ಜಿಲ್ಲೆಯ ಎಸ್.ಪಿ.ಯವರ ಬಗ್ಗೆ ಇದೇ ರೀತಿಯ ಆರೋಪವಿದೆ. ೨೪ನೇ ತಾರೀಖು ಚನ್ನಪಟ್ಟಣದಲ್ಲಿ ಭಾರತ ಬಂದ್ ಆಚರಣೆ ಮಾಡಿದ ಸಂದರ್ಭದಲ್ಲಿ, ಲಾಲ್‌ಕೃಷ್ಣ ಅದ್ವಾನಿರವರ ಬಂಧನ ಆದಾಗ ಇಡೀ ದೇಶದಲ್ಲಿ ಸ್ವಯಂ ಪ್ರೇರಣೆಯಿಂದ ಹಿಂದೆ ಎಂದೂ ಕಾಣದ ರೀತಿಯಲ್ಲಿ ಭಾರತ ಬಂದ್ ಆಯಿತು ಕರ್ನಾಟಕದಲ್ಲಿ ಆಯಿತು, ಬೆಂಗಳೂರಿನಲ್ಲಿಯೂ ಆಯಿತು. ಅಲ್ಲಿ ಬಂದ್ ಆಚರಣೆ ಮಾಡಿ ಮೆರವಣಿಗೆ ಹೋಗಬೇಕಾದರೆ ಯಾರೋ ಒಬ್ಬ ಮೇಲೆ ನಿಂತು ಗಲಾಟೆ ಮಾಡುವ ಪ್ರಯತ್ನ ಮಾಡಿದಾಗ ಸ್ವತಃ ಎಸ್.ಪಿ.ಯವರು ನಿಂತು ರಾಮಕೃಷ್ಣ ಅಯ್ಯರ್ ಎಂಬುವರ ಅಂಗಡಿಗೆ ಬೆಂಕಿ ಹಚ್ಚಿದರು, ಅದನ್ನು ಆರಿಸಲು ರಾಮಕೃಷ್ಣ ಅಯ್ಯರ್‌ರವರ ಮಗ ಕೃಷ್ಣ ತನ್ನ ಸ್ನೇಹಿತರ ಜೊತೆಯಲ್ಲಿ ಬಂದರೆ, ಅವನನ್ನು ಅರೆಸ್ಟ್ ಮಾಡಿ ಒಳಗೆ ಹಾಕಿದ್ದಾರೆ. ಬೆಂಕಿ ಆರಿಸುವ ಕೆಲಸ ನಮ್ಮದು ಅದು ನಿನ್ನ ಕೆಲಸವಲ್ಲವೆಂದು ಎಸ್.ಪಿ.ಯವರು ಮಾತನಾಡುತ್ತಾರೆಂದರೆ ಆ ರೀತಿ ವರ್ತನೆ ಮಾಡುತ್ತಾರೆಂದರೆ ನಿಮ್ಮ ಪೋಲೀಸ್ ಅಧಿಕಾರಿಗಳಿಂದ ಜನರಿಗೆ ರಕ್ಷಣೆ ಸಿಗುತ್ತದೆಯೋ ? ಅವರಿಂದ ಜನರಿಗೆ ರಕ್ಷಣೆ ಸಿಗುತ್ತದೆಯೆ ? ಹಾಸನ ಜಿಲ್ಲೆಯ ವಿವರಕ್ಕೆ ನಾನು ಹೋಗುವುದಿಲ್ಲ. ನೀವು ಹಿರಿಯರು ಇದ್ದೀರಿ, ನೀವು ಮಾತನಾಡಿ. ಹಾಸನ ನಗರದಲ್ಲಿ ಒಂದು ಗಲಾಟೆ ಸಹ ಆಗಿಲ್ಲ. ಆ ರೀತಿ ಗಲಾಟೆಯಾಗದಿದ್ದರೂ ಸಹ ಶ್ರೀ ಗುಂಡೂರಾವ್ ಎಂಬ ಒಬ್ಬ ಹಿರಿಯ ಸೀನಿಯರ್ ಆಡಿಟರ್, ಪ್ರಮುಖ ಡಾಕ್ಟರ್ ಮೋಹನ್ ಇವರುಗಳ ಮೇಲೆ ಪ್ರೊಕ್ಲಮೇಷನ್ ಆರ್ಡರ್ಸ್ ಇಷ್ಯೂ ಮಾಡಿ ಈ ಇಬ್ಬರೂ ತಪ್ಪಿಸಿಕೊಂಡಿದ್ದಾರೆಂದು ಹೇಳಿ ಅವರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಒಂದು ಸಣ್ಣ ಘಟನೆ ಅಲ್ಲಿ ನಡೆಯದಿದ್ದರೂ ಈ ರೀತಿಯಲ್ಲಿ ಊರಿನ ಆರು ಜನರನ್ನು ಪ್ರೊಕ್ಲಮೇಷನ್ ಆರ್ಡರ್ ಇಷ್ಯೂ ಮಾಡಿ ಪೋಲೀಸ್‌ನವರು ದೌರ್ಜನ್ಯ ನಡೆಸುವಂತಹ ಪ್ರಯತ್ನ ಮಾಡಿದ್ದಾರೆ. ಅವರು ಹೈಕೋರ್ಟ್‌ಗೆ ಬಂದು ಜಾಮೀನು ಪಡೆದು ಹೋಗುವ ಹೀನ ಸ್ಥಿತಿ ಅವರಿಗೆ ಬಂತು. ೧೫ ದಿವಸ ಊರು ಬಿಟ್ಟರು. ಅವರು ಏನು ತಪ್ಪು ಮಾಡಿದರು ? ಹಾಸನ ನಗರದಲ್ಲಿ ಗಲಾಟೆಯಾಯಿತಾ ? ಆಡಿಟರ್ ಮತ್ತು ಡಾಕ್ಟರ್‌ಗೂ ಸಂಬಂಧವೇನು ? ಯಾವುದೋ ಒಂದು ಸಂಸ್ಥೆಯಲ್ಲಿ ಕೆಲಸಮಾಡುತ್ತಾರೆಂದು ಹೇಳಿದಾಕ್ಷಣ ಈರೀತಿ ಮನ ಬಂದಹಾಗೆ ಅವರ ಮೇಲೆ ಸೇಡು ತೀರಿಸಿಕೊಳ್ಳುವ ಪ್ರಯತ್ನವನ್ನು ಪೋಲೀಸಿನವರು ಮಾಡುತ್ತಾರೆಂದರೆ ಇದರ ಬಗ್ಗೆ ತಾವೇ ಯೋಚನೆ ಮಾಡಿ. ನಾನು ಮೈಸೂರಿಗೆ ಮತ್ತು ಮಂಡ್ಯಕ್ಕೆ ಹೋಗಿದ್ದೆ. ರಾಜ್ಯದ ಉದ್ದಗಲಕ್ಕೂ ಹೋಗಿ ನೋಡಿ ಬಂದಿದ್ದೇನೆ. ಮೈಸೂರುನಗರದ ಬಗ್ಗೆ ಹೇಳಬೇಕಾದರೆ ಇದುವರೆಗೆ ಬಹುಶಃ ಕೋರ್ಟ್ ಮ್ಯಾಜಿಸ್ಟ್ರೇಟ್ ಪವರ್ ಇದ್ದು ತಹಶೀಲ್ದಾರ್ ಅವರು ಸ್ವತಂತ್ರವಾಗಿ ಕೆಲಸಮಾಡುತ್ತಿದ್ದರು. ಮೈಸೂರುನಗರದ ಪೋಲೀಸ್ ಕಮಿಷನರ್ ಮತ್ತು ಕೆಲವು ಅಧಿಕಾರಿಗಳು ಎಲ್ಲ ಸೇರಿಕೊಂಡು ಒಂದು ಕಾರ್ಯಕ್ರಮ ಆಗುವುದಕ್ಕೆ ಬಿಟ್ಟಿಲ್ಲ. ರಾಮಜ್ಯೋತಿಯ ಮೆರವಣಿಗೆ ಇರಬಹುದು, ಅಲ್ಲಿ ಹುತಾತ್ಮರಾದವರಿಗೆ ಶ್ರದ್ಧಾಂಜಲಿ ಅರ್ಪಿಸುವ ಕಾರ್ಯಕ್ರಮವಿರಬಹುದು, ಇದು ಯಾವುದಕ್ಕೂ ಅವಕಾಶ ಕೊಟ್ಟಿಲ್ಲ. ರಾಮಮಂದಿರದಲ್ಲಿ ೩೦ನೇ ತಾರೀಖು ರಾಮಮಂದಿರಗಳಲ್ಲಿ ಭಜನೆ ಮಾಡುತ್ತೇವೆಂದು ಹೇಳಿದರೆ ರಾಮಮಂದಿರದ

ಸದಸ್ಯರನ್ನು ಬೆದರಿಸಿ ಶ್ರೀರಾಮಮಂದಿರದ ಬಾಗಿಲನ್ನೆ ಹಾಕಿಸಿದ್ದಾರೆ. ಅಲ್ಲಿ ಶ್ರೀರಾಮಮಂದಿರದ ಬಾಗಿಲನ್ನು ಕೂಡ ತೆಗೆಯಲಿಲ್ಲ, ಈರೀತಿಯಾಗಿ ಮೈಸೂರು ನಗರದ ಪೋಲೀಸ್ ಕಮೀಷನರ್ ಮಾಡಿದ್ದಾರೆ. ನಾವು ಹೋಗಿ ಅವರನ್ನು ಭೇಟಿಯಾಗಿದ್ದೆ. ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಶಿವಮೊಗ್ಗದಲ್ಲಿ ತಾವು ಎಸ್.ಪಿ. ಆಗಿದ್ದವರು ಅಲ್ಲಿ ತಾವು ಯಾವರೀತಿ ನಡೆದುಕೊಂಡಿರಿ, ಇಲ್ಲಿ ಏತಕ್ಕೆ ಈ ರೀತಿ ವರ್ತನೆ ಮಾಡುತ್ತಿದ್ದೀರಿ, ಯಾರನ್ನು ತೃಪ್ತಿಪಡಿಸುವುದಕ್ಕೋಸ್ಕರ ಈ ರೀತಿ ಮಾಡುತ್ತಿದ್ದೀರಿ ಎಂದು ಕೇಳಿದೆ. ಮೈಸೂರು ನಗರದಲ್ಲಿ ಡಾಕ್ಟರಂಗಳ ಮೇಲೆ ಕಾರ್ಪೋರೇಟರ್‌ಗಳ ಮೇಲೆ ಕೇಸ್ ಹಾಕಿದರು. ತಹಶೀಲ್ದಾರ್‌ರವರು ಜಾಮೀನು ಕೊಡುತ್ತೇನೆಂದರೆ ಕಮೀಷನರ್ ಹತ್ತು ಹತ್ತು ನಿಮಿಷಗಳಿಗೊಂದುಸಲ ಫೋನ್ ಮಾಡಿ ಬಳ್ಳಾರಿ ಜೈಲಿಗೆ ಕಳುಹಿಸಿದ್ದಾರೆ. ಧರಣಿ ಕುಳಿತದ್ದು ತಪ್ಪೆ ? ರಥಯಾತ್ರೆಗೆ ಹೊರಟ್ಟಿದ್ದು ತಪ್ಪೆ ? ಮೈಸೂರು ನಗರದಲ್ಲಿ ಕೊಲೆ ಸುಲಿಗೆ ಏನಾದರೂ ಆಗಿದೆಯೆ ? ಯಾವುದೇ ರೀತಿಯ ಕಾರ್ಯಕ್ರಮ ಮಾಡುವುದಕ್ಕೆ ಬಿಡದೆ ಅದನ್ನು ಹತ್ತಿಕ್ಕಲಿಕ್ಕೆ ವ್ಯವಸ್ಥಿತವಾಗಿ ಅಲ್ಲಿನ ಪೋಲೀಸ್ ಅಧಿಕಾರಿಗಳು ಮಾಡುವಂತಹ ಒಂದು ಪ್ರಯತ್ನ ಮಾಡಿದರು. ಈ ರೀತಿಯ ಅನೇಕ ಘಟನೆಗಳು ನಡೆದಿವೆ. ಸನ್ಮಾನ್ಯ ಗೃಹಮಂತ್ರಿಯವರೇ. ಕೊಡಗಿನಲ್ಲಿ ಅನೇಕ ದುರ್ಘಟನೆಗಳು ನಡೆದಿವೆ. ಆ ಬಗ್ಗೆ ಸರಿಯಾಗಿ ತನಿಖೆ ಮಾಡಿ, ತೀವ್ರವಾಗಿ ಕ್ರಮ ತೆಗೆದುಕೊಳ್ಳಬೇಕು. ಆದರೆ ಇದು ಯಾರಿಗಾದರೂ ಶೋಭೆ ತರುವಂಥಾದ್ದೆ ? ಕೊಡಗಿನ ಸೋಮವಾರಪೇಟೆಯಲ್ಲಿ ಹಿಂದೂಗಳ ಹತ್ತಿರ ಕೋವಿಗಳು ಇದ್ದರೆ ವಾಪಸ್ಸು ಕೊಡಬೇಕಂತೆ, ಬಲತ್ಕಾರವಾಗಿ ವಾಪಸ್ಸು ತಂದಿಡಿ ಅಂತ ಹೇಳಿದ್ದಾರೆ. ಅದೇ ಅಲ್ಪಸಂಖ್ಯಾತರಿಗೆ ಕೋವಿಗಳನ್ನು ಹೊಸದಾಗಿಕೊಡುವುದಕ್ಕೋಸ್ಕರ ಅರ್ಜಿಯನ್ನು ಕರೆದು ಮಂಜೂರಾತಿ ಮಾಡುತ್ತಾರೆ. ಇದು ಅಲ್ಲಿ ನಡೆಯುತ್ತಿರುವಂಥ ಘಟನೆ. ಯಾವ ಉದ್ದೇಶಕ್ಕಾಗಿ ಇದನ್ನು ಮಾಡುತ್ತಿದ್ದಾರೋ ನನಗೆ ಗೊತ್ತಿಲ್ಲ. ನಾನು ಮಂಡ್ಯ ಜಿಲ್ಲೆಗೆ ಹೋಗಿದ್ದೆ ಬಾಲಗಂಗಾಧರ ಸ್ವಾಮಿಗಳನ್ನು ಆದಿಚುಂಚನಗಿರಿ ಸ್ವಾಮಿಗಳನ್ನು ಭೇಟಿ ಮಾಡಿದ್ದೆ ಬಹುಶಃ ಅವರು ಅಲ್ಲಿ ಇಲ್ಲದೇ ಹೋಗಿದ್ದರೆ ಮಂಡ್ಯ ಜಿಲ್ಲೆಯಲ್ಲಿ ಅನೇಕ ಅನಾಹುತಗಳು ಆಗುತ್ತಿದ್ದವು. ಅಲ್ಲಿ ಬಿ.ಜೆ.ಪಿ. ಇಲ್ಲ. ಅಲ್ಲಿ ಇನ್ನೂ ನಾವು ಅಲ್ಲಿ ಕಣ್ಣು ಬಿಡುತ್ತಿದ್ದೇವೆ. ನಮ್ಮ ಯಾವುದೇ ಸಂಸ್ಥೆ ಅಲ್ಲಿ ಸರಿಯಾದ ರೀತಿಯಲ್ಲಿ ಬೆಳೆಯದೇ ಇರುವ ಕಾಲದಲ್ಲಿ ಶಾಂತರೀತಿಯಿಂದ ಮೆರವಣಿಗೆ ಮಾಡಿದರೆ, ಅದ್ವಾನಿಯವರ ಬಂಧನದ ವಿರುದ್ಧ ಶ್ರೀರಂಗಪಟ್ಟಣದಲ್ಲಿ ಬಂದ್ ಆಚರಿಸಿದರೆ, ಎಸ್.ಪಿ.ಯವರು ಶಾಂತಿಸಮಿತಿ ಸಭೆಯಲ್ಲಿ ಹೇಳುತ್ತಾರೆ, ಬಿ.ಜೆ.ಪಿ.ಯವರು ಎದ್ದು ಹೊರಗಡೆ ಹೋಗಿ ಅಂತ, ಅಲ್ಲಿ ಡಾಕ್ಟರ್ ಒಬ್ಬರು ಇದನ್ನು ಪ್ರತಿಭಟನೆ ಮಾಡಿದರು. ಅಲ್ಲಿ ಶಾಂತಿ ಸಮಿತಿ ಸಭೆ ನಡೆಯಲಿಲ್ಲ. ಮಂಡ್ಯ ಜಿಲ್ಲೆಯಲ್ಲಿ ಬಿ.ಜೆ.ಪಿ. ಸ್ವಲ್ಪ ಬೆಳೆಯುತ್ತಿದೆ, ಅಲ್ಲಿ ಜನ ಸ್ವಲ್ಪ ಜಾಗೃತರಾಗುತ್ತಿದ್ದಾರೆ ಎಂದು ಹೇಳಿ, ಎಲ್ಲೆಲ್ಲಿ ನಮ್ಮ ಹಿತೈಷಿಗಳಿದ್ದರು, ಅವರೆಲ್ಲರನ್ನೂ ಅರೆಸ್ಟ್ ಮಾಡಿ ಅವರ ಮೇಲೆ ಆಕ್ರೋಶ ತೀರಿಸಿಕೊಳ್ಳುವಂಥ ಪ್ರಯತ್ನ ಮಾಡಿದರು. ಅದೇರೀತಿ ನಾನು ಬೆಳ್ಳೂರಿಗೆ ಹೋಗಿದ್ದೆ. ಅಲ್ಲಿ ೩೦ನೇ ತಾರೀಕಿನ ದಿವಸ ಮೆರವಣಿಗೋಸ್ಕರ ಡಿಸಿ ಎಸ್‌ಪಿ ಯವರು ಮೊದಲು ಅನುಮತಿ ಕೊಡುವುದಿಲ್ಲ ಎಂದು ಹೇಳಿ ಆಮೇಲೆ ಅನುಮತಿಯನ್ನು ಕೊಟ್ಟರು. ಸ್ವತಃ ಡಿಸಿ ಎಸ್‌ಪಿ ಅವರು ಮೆರವಣಿಗೆಯಲ್ಲಿ ಇದ್ದರು ಎಂಬುದಕ್ಕೆ ನನ್ನ ಹತ್ತಿರ ಫೋಟೋ ಇವೆ. ಅದನ್ನು ತಮಗೆ ಕಳಿಸಿಕೊಡುತ್ತೇನೆ. ೩೧ನೇ ತಾರೀಕು ಕಾರಸೇವೆ ಸಂದರ್ಭದಲ್ಲಿ ಹುತಾತ್ಮರಾದಂಥವರಿಗೆ ಶ್ರದ್ಧಾಂಜಲಿ ಅರ್ಪಿಸುವುದಕ್ಕೋಸ್ಕರ ೯ ಜನ ಮಾತ್ರ ಉಪವಾಸ ಕುಳಿತುಕೊಂಡರೆ, ಅಲ್ಲಿಗೆ ಬಂದು ವಿನಾಕಾರಣ ಅವರ ಮೇಲೆ ಹಲ್ಲೆ ಮಾಡಿ ೪೦–೫೦ ಜನರನ್ನು ಮನೆಮನೆಗೂ ಹೋಗಿ ಎಳೆದುಕೊಂಡುಬಂದು ಬಂಧನ ಮಾಡಿದರು. ಸಣ್ಣ ಘಟನೆ ಕೂಡ ಬೆಳ್ಳೂರಿನಲ್ಲಿ ನಡೆದಿಲ್ಲ. ಅಲ್ಲಿರತಕ್ಕಂಥ ಆಟೋರಿಕ್ಷಾದಲ್ಲಿ ಭಗವಾ ಧ್ವಜ ಇತ್ತು. ಇಲ್ಲಿ ಅನೇಕ ಜನ ಅದು ಬಿಜೆಪಿ ಆರೆಸ್ಸೆಸ್ ಧ್ವಜ ಅಂತ ತಿಳಿದುಕೊಂಡುಬಿಟ್ಟಿದ್ದಾರೆ. ಅದು ತಪ್ಪು ಭಾವನೆ. ಆಟೋರಿಕ್ಷಾದಲ್ಲಿ ಭಗವಾ ಧ್ವಜ ಇಟ್ಟುಕೊಂಡಿದ್ದರೆ, ಪದ್ಮನಾಭ ಎಂಬ ಆಟೋರಿಕ್ಷಾ ಚಾಲಕನನ್ನು ಕರೆದು ಬೆದರಿಸಿ ಆ ಧ್ವಜವನ್ನು ಕಿತ್ತುಹಾಕಿ, ಸ್ವತಃ ಎಸ್.ಪಿ. ಡಿ.ಸಿ. ಅವರ ಎದುರಿಗೇ ಪೋಲೀಸರು ಬೂಟು ಕಾಲಿನಿಂದ ತುಳಿದು, ಚುಚ್ಚುವಂಥ ಕೆಲಸ ಮಾಡಿಸುತ್ತಾರೆ ಅಂದರೆ ಇದು ಮಾನವೀಯತೆಗೆ ಕಳಂಕ ತರುವ ಕೆಲಸ ಅಲ್ಲವೇನು ? ಆಟೋರಿಕ್ಷಾದಲ್ಲಿ ಭಗವಾ ಧ್ವಜವನ್ನು ಯಾರು ಹಾಕೋಬೇಕು, ಎಲ್ಲಿ ಮೆರವಣಿಗೆ ಮಾಡಬೇಕು, ಎಲ್ಲಿ ಮಾಡಬಾರದು ಎಂಬುದನ್ನು ನಿಮ್ಮನ್ನು ಕೇಳಿ ತೀರ್ಮಾನ ಮಾಡಬೇಕು ಸ್ವಾಮಿ ? ನಿಮ್ಮ ಅನುಮತಿಯ ಅಗತ್ಯ ಇದೆಯೆ ಸ್ವತಂತ್ರ ಭಾರತದಲ್ಲಿ ? ಎಲ್ಲರೂ ಹೀಗಿದ್ದಾರೆಂತಲ್ಲ. ನಾನು ಧನ್ಯವಾದಗಳನ್ನು ಹೇಳುತ್ತೇನೆ. ಕೆಲವು ಉನ್ನತ ಅಧಿಕಾರಿಗಳು ಎಸ್.ಪಿ. ಡಿ.ಸಿ.ಗಳು ಬೇರೆ ಬೇರೆ ಜಿಲ್ಲೆಗಳಲ್ಲಿ ಎಷ್ಟು ಚೆನ್ನಾಗಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡಿದ್ದಾರೆ. ನಾನು ಶಿವಮೊಗ್ಗ ಜಿಲ್ಲೆಯಿಂದ ಬಂದವನು. ನಾನು ಈಶ್ವರಪ್ಪ ಮತ್ತು ಶಂಕರಮೂರ್ತಿಯವರು ಶಾಸಕರು ಇದ್ದೇವೆ. ಒಂದು ಸಣ್ಣ ಘಟನೆಯೂ ನಡೆದಿಲ್ಲ.

ಶ್ರೀ ಕರಿಯಣ್ಣ.—ನಡೆದಿದೆ. ನನ್ನ ಕ್ಷೇತ್ರದ ಮಾಡಾಳ್ ಎನ್ನತಕ್ಕಂಥ ಪ್ರದೇಶದಲ್ಲಿ ಒಬ್ಬರನ್ನು ಸುಟ್ಟುಹಾಕಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ತನಿಖೆ ಮಾಡಿಸಿ; ಬಹುಶಃ ನೀವು ಮಾಡಿಸಿರಬಹುದು, ಇದು ನನಗೆ ಗೊತ್ತಿಲ್ಲವೇ ಇರತಕ್ಕಂಥ ಸಂಗತಿ. ಆದ್ದರಿಂದ ಸನ್ಮಾನ್ಯ ಅಧ್ಯಕ್ಷರೇ......

ಶ್ರೀ ಕರಿಯಣ್ಣ.—ಅಧ್ಯಕ್ಷರೇ......

ಶ್ರೀ ಬಿ. ಎಸ್. ಯಡಿಯೂರಪ್ಪ.—ನೀವು ಮಾತನಾಡುವಾಗ ಹೇಳಿ. ಯಾರನ್ನು ಸುಟ್ಟಿದರು ಅಂತ ಗೊತ್ತಿದ್ದರೆ ಅದನ್ನು ಹೇಳಿ. ಯಾವುದೋ ಸಂಬಂಧವಿಲ್ಲದ್ದನ್ನು ನೆಪ ಒಡ್ಡಿ ಗಲಭೆ ಆಗಿದೆ ಎನ್ನುವುದಾದರೆ ನಾನು ಇವರನ್ನು ಕೇಳುತ್ತೇನೆ. ೩ನೇ ತಾರೀಕು ದಸ್ತೆಯಲ್ಲಿ ಮೆರವಣಿಗೆ ಆದಾಗ ಮಾಡಬಾರದ್ದನ್ನು ಮಾಡಿಕೊಂಡು, ಬೇರೆ ಬೇರೆ ಶಬ್ದಗಳನ್ನು ಉಪಯೋಗಿಸಿಕೊಂಡು ಘೋಷಣೆ ಮಾಡಿಕೊಂಡು ಹೋದಾಗ ನಾನು ಸ್ವತಃ ಎಸ್.ಪಿ. ಮತ್ತು ಡಿ ಸಿ ಯವರನ್ನು ಕಂಡು ಕಂಪ್ಲೇಂಟ್ ಕೊಟ್ಟಿದ್ದೇನೆ. ಇಂತಹ ಅಶಾಂತಿ ವಾತಾವರಣ ತರಬೇತಿ ಅಂತ ಹೇಳಿದ್ದೇನೆ. ಸಣ್ಣಪುಟ್ಟ ಗಲಭೆ ನಡೆದಿರಬಹುದು. ನಾನು ಇಲ್ಲ ಅಂತ ಹೇಳುವುದಿಲ್ಲ. ಆದರೆ ಏನೊಂದು ಆರೋಪ ಮಾಡುವುದಕ್ಕೆ ಹೊರಟ್ಟಿದ್ದಾರೆ, ಬಿ.ಜೆ.ಪಿ. ಮತ್ತೊಂದು ಅಂತ ಹೆಸರು ಹೇಳಿ, ಅದಕ್ಕೇ ನಾನು ಹೇಳುತ್ತಿದ್ದೇನೆ. ಇದು ಬೀದರ್ ಇರಬಹುದು, ಗುಲ್ಬರ್ಗಾ ಇರಬಹುದು, ದಕ್ಷಿಣ ಕನ್ನಡ ಜಿಲ್ಲೆ ಅಥವಾ ಶಿವಮೊಗ್ಗ ಜಿಲ್ಲೆ ಇರಬಹುದು, ಬೆಂಗಳೂರು ನಗರ ಇರಬಹುದು. ಬೇರೆ ಕಡೆಯಲ್ಲಿ ನಾವು ಅಲ್ಪಸ್ವಲ್ಪ ಬೆಳೆಯುತ್ತಿದ್ದೇವೆ. ಇನ್ನೂ ಪೂರ್ತಿ ಬೆಳೆದಿಲ್ಲ ಇನ್ನೂ ಕಣ್ಣು ಬಿಡುತ್ತಿದ್ದೇವೆ. ಸ್ವಲ್ಪ ಕಣ್ಣುಬಿಟ್ಟಿರುವ ಕಡೆ ಸಹ ಗಲಭೆ ಆಗಿದ್ದರೆ ಅದು ಆಗದ ಹಾಗೆ ನಾವು ನೀವು ಸೇರಿ ಸರಿ ಮಾಡೋಣ. ಆದರೆ ಕೇವಲ ದುರುದ್ದೇಶದಿಂದ, ರಾಜಕೀಯವಾಗಿ ದ್ವೇಷ ಶೀರಿಸಿಕೊಳ್ಳುವುದಕ್ಕೋಸ್ಕರ ಇದನ್ನು ಮಾಡಬೇಡಿ ಎಂದು ಈ ಸಂದರ್ಭದಲ್ಲಿ ಹೇಳುತ್ತಾ, ಕೊಪ್ಪದಲ್ಲಿ ದುರ್ಗಪ್ಪ ಅಂತ ಕ್ಷಮಿಸಿ ಹೆಸರು ಹೇಳಬೇಡಿ ಅಂತ ತಾವು ಹೇಳಿದ್ದೀರಿ. ಅಲ್ಲಿ ಒಬ್ಬ ಎಸ್.ಐ. ಇದ್ದಾರೆ ಅಕ್ಟೋಬರ್ ೩೦ನೇ ತಾರೀಖು ಅಯೋಧ್ಯೆಯ ಕಾರಸೇವೆಗೋಸ್ಕರ ಒಂದು ಮೆರವಣಿಗೆ ಹೋದರೆ ಅದರನ್ನು ತಡೆಯುವಂಥ ಪ್ರಯತ್ನ ಮಾಡಿದರು. ಕಡೆಗೆ ಸ್ವತಃ ತಹಶೀಲ್ದಾರರೇ ಬಂದು ಅನುಮತಿಯನ್ನು ಕೊಟ್ಟರು. ಮೆರವಣಿಗೆ ಹೋಗುತ್ತಿರುವಂಥ ಸಂದರ್ಭದಲ್ಲಿ ಶಾಂತರೀತಿಯಿಂದ ಮೆರವಣಿಗೆ ಆದಮೇಲೆ ಜನರು ವಾಪಸ್ಸು ಹಳ್ಳಿಗಳಿಗೆ ಹೋಗಬೇಕಾದರೆ ಲಾಠಿ ಚಾರ್ಜ್ ಮಾಡಿದರು.

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

೬೦-೭೦ ಜನರನ್ನು ಬಂಧನ ಮಾಡಿದಿರಿ. ಆ ಊರಿನ ಮುಖಂಡರಾದ ಲಕ್ಷ್ಮಿನಾರಾಯಣ ಎಂಬುವರನ್ನು ಕರೆಸಿ. ಡಿವೈಎಸ್‌ಪಿ, ಎಸ್‌ಪಿ ಮತ್ತು ಎಸ್‌ಐಗಳು ಬೂಟ್ಸ್ ಕಾಲಿನಿಂದ ಒದ್ದಿದ್ದಾರೆ. ಅವರು ಮಾಡಿರುವಂಥ ಫೋಟೋಗಳನ್ನು ಪೋಲೀಸ್ ಅಧಿಕಾರಿಗಳಿಗೆ ಕಳುಹಿಸಿಕೊಟ್ಟಿದ್ದೇನೆ. ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ, ದಯವಿಟ್ಟು ಈ ರೀತಿ ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳುವಂಥ ಪ್ರಯತ್ನವನ್ನು ಯಾವ ಅಧಿಕಾರಿಗಳು ಮಾಡುತ್ತಿದ್ದಾರೆ; ಸರ್ಕಾರವನ್ನು, ಮಂತ್ರಿಗಳನ್ನು, ಅಲ್ಲಿರುವಂಥ ಶಾಸಕರನ್ನು ತೃಪ್ತಿಪಡಿಸುವುದಕ್ಕೋಸ್ಕರ, ಆ ಕುರ್ಚಿಯನ್ನು ಖಾಯಂ ಇಟ್ಟುಕೊಳ್ಳುವುದಕ್ಕೋಸ್ಕರ ಕಾನೂನುಬಾಹಿರ ವರ್ತನೆಯನ್ನು ಮಾಡುತ್ತಿದ್ದಾರೆ; ಇದು ಸರಿಯಲ್ಲ. ಬೇಕಾದರೆ ಕೋರ್ಟಿನಲ್ಲಿ ತೀರ್ಮಾನವಾಗಿ ಶಿಕ್ಷೆ ಬೇಕಾದರೂ ಆಗಲಿ; ಆದರೆ ವಿನಾಕಾರಣ ಬಂಧನ ಮಾಡಿ ಪೋಲೀಸ್ ಸ್ಟೇಷನ್‌ನಲ್ಲಿ, ಹಲ್ಲೆಮಾಡಿ, ಬಿ.ಜೆ.ಪಿ.ಯ ಈ ಒಂದು ಕಾರ್ಯಕ್ರಮವನ್ನು ಹತ್ತಿಕ್ಕಬೇಕು ಎಂಬ ದುರುದ್ದೇಶದಿಂದ, ಕಾನೂನು ದುರುಪಯೋಗ ಮಾಡತಕ್ಕಂಥ ಪ್ರಯತ್ನ ಏನಾಗುತ್ತಿದೆ, ಅದನ್ನು ನಾನು ಖಂಡನೆ ಮಾಡುತ್ತೇನೆ. ನಾವು, ನೀವೆಲ್ಲಾ ಸೇರೋಣ. ಸನ್ಮಾನ್ಯ ಅಧ್ಯಕ್ಷರೇ, ತಾವು ಆಗ ಇರಲಿಲ್ಲ, ನಾನು ಒಂದು ಸಲಹೆ ಕೊಟ್ಟಿದ್ದೆ, ತಾವು ಪ್ರಾರಂಭದಲ್ಲಿ ಇದ್ದರೆಂದು ಅಂದು ಕೊಂಡಿದ್ದೇನೆ. ದಯವಿಟ್ಟು, ನಾನು ಹೇಳುವುದು ಸತ್ಯವೇ ಅಥವಾ ಅವರು ಹೇಳುವುದು ಸತ್ಯವೇ ಈ ರಾಜ್ಯದ ಜನತೆಗೆ ಗೊತ್ತಾಗಲೀ. ಈ ದೇಶಕ್ಕೆ ಗೊತ್ತಾಗಲಿ. ನಾನು ಪ್ರಾರಂಭದಲ್ಲಿ ಹೇಳಿದ್ದು, ಒಂದು ಸದನದ ಸಮಿತಿಯನ್ನು ಮಾಡಿ; ಎಲ್ಲಾ ಪಕ್ಷದ ಮುಖಂಡರೂ ಇದ್ದಾರೆ, ಅವರ ಜೊತೆಯಲ್ಲಿ ಹೋಗೋಣ. ಪ್ರಮುಖ ಪತ್ರಿಕೆಯ ಸಂಪಾದಕರನ್ನು ಜೊತೆಗೆ ಕರೆದುಕೊಂಡು ಹೋಗೋಣ; ತನಿಖೆ ಮಾಡೋಣ. ನಡೆದಂಥ ಘಟನೆ ಏನು ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡೋಣ. ಎಲ್ಲಿ ಶಸ್ತ್ರಾಸ್ತ್ರಗಳು ಸಿಕ್ಕಿದೆ, ಮದ್ದು ಗುಂಡುಗಳು ಎಲ್ಲಿ ಸಿಕ್ಕಿವೆ, ಅದನ್ನು ಜನತೆಗೆ ತಿಳಿಸುವಂಥ ಪ್ರಯತ್ನ ಮಾಡೋಣ. ಈ ರೀತಿಯಾಗಿ ನಾವು, ನೀವೆಲ್ಲಾ ಪ್ರಾಮಾಣಿಕ ಪ್ರಯತ್ನ ಮಾಡಿ. ರಾಜ್ಯದಲ್ಲಿ ತಲೆತಗ್ಗಿಸುವಂಥ ಹೇಯ ಕೃತ್ಯವನ್ನು ಯಾರೇ ಮಾಡಿರಲಿ, ಅದು ಬಿ.ಜೆ.ಪಿ.ಯವರು

ಮಾಡಿರಲಿ, ಕಾಂಗ್ರೆಸ್‌ನವರು ಮಾಡಿರಲಿ, ಮತ್ತೊಬ್ಬರು ಮಾಡಿರಲಿ, ತಪ್ಪು ತಪ್ಪೇ, ಈ ರೀತಿ ಆಗದಂತೆ ರಾಜ್ಯದಲ್ಲಿ ಶಾಂತಿಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ನಾವೆಲ್ಲಾ ಸೇರಿ ಕೆಲಸ ಮಾಡಬೇಕಾಗಿದೆ. ಇದಕ್ಕಾಗಿ ವಿಶೇಷವಾದ ಪ್ರಯತ್ನವನ್ನು ಮಾಡೋಣ. ಸರಿಯಾಗಿ ಒಂದು ತನಿಖೆ ಮಾಡಿ, ರಾಜ್ಯದ ಜನತೆಗೆ ತಪ್ಪು ಕಲ್ಪನೆಯನ್ನು, ಅಪಪ್ರಚಾರ ಮಾಡುವಂಥ ವ್ಯವಸ್ಥಿತವಾದ ಪ್ರಯತ್ನವನ್ನು ಅಧಿಕಾರದಲ್ಲಿರುವಂಥ ಕಾಂಗ್ರೆಸ್ಸಿನ ನಮ್ಮ ಸ್ನೇಹಿತರು ಏನು ಮಾಡುತ್ತಿದ್ದಾರೆ. ಅದಕ್ಕೆ ಅವಕಾಶ ಮಾಡಿಕೊಡುವುದು ಬೇಡ. ಮತ್ತೆ ನಮ್ಮ ಪೊಲೀಸ್ ಅಧಿಕಾರಿಗಳ ಪೈಕಿ ಕೆಳಗಿನವರು ಕೆಲವುಕಡೆ ಸ್ವೇಚ್ಛಾನುಸಾರವಾಗಿ ನಡೆದುಕೊಂಡಿದ್ದಾರೆ. ಅವರನ್ನು ಸರಿಯಾದ ರೀತಿಯಲ್ಲಿ ಹದ್ದುಬಸ್ತಿನಲ್ಲಿಡದಿದ್ದರೆ ಜನ ಬೀದಿಗೆ ಇಳಿಯುತ್ತಾರೆ; ಆಗ ನೀವು ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಅಧಿಕಾರ ದುರುಪಯೋಗ ಮಾಡುವಂತಹ ಪ್ರಯತ್ನ ಏನು ತಾವು ಮಾಡುತ್ತಿದ್ದೀರಿ ಇದನ್ನು ಈಗಲಾದರೂ ಕೈಬಿಡಬೇಕೆಂದು ಪ್ರಾರ್ಥನೆ ಮಾಡಿಕೊಂಡು, ಈ ಸಂದರ್ಭದಲ್ಲಿ ತಾವು ಸಾಕಷ್ಟು ಅವಕಾಶ ಮಾಡಿಕೊಟ್ಟಿದ್ದೀರಿ. ಇನ್ನೂ ಅನೇಕ ಜನರು ತಮ್ಮ ಅಭಿಪ್ರಾಯವನ್ನು ಹೇಳುವವರು ಇದ್ದಾರೆ, ನಾವು, ನೀವೆಲ್ಲಾ ಒಟ್ಟಾಗಿ ಸೇರಿ, ಈ ರಾಜ್ಯದಲ್ಲಿ ಶಾಂತಿಸುವ್ಯವಸ್ಥೆಯನ್ನು ಕಾಪಾಡುವುದಕ್ಕೆ ಪ್ರಾಮಾಣಿಕವಾಗಿ ಸಿದ್ಧರಿದ್ದೇವೆ. ಯಾವುದೋ ಒಂದು ಕಲ್ಪನೆ ಏನಿದೆ, ಆ ಕಲ್ಪನೆಯನ್ನು ಸರಿಯಾದ ರೀತಿಯಲ್ಲಿ ಸರಿಪಡಿಸಿಕೊಂಡು ವಾಸ್ತವ ಸತ್ಯಸಂಗತಿಯನ್ನು ತಿಳಿಸುವಂಥ ಪ್ರಯತ್ನ ಮಾಡಿ. ಇಡೀ ದೇಶದಲ್ಲಿ ಎಲ್. ಕೆ. ಅಡ್ವಾನಿಯವರನ್ನು ಅಪ್ರಿಷಿಯೇಟ್ ಮಾಡುತ್ತಾರೆ. ನಾನು ಮೊನ್ನೆ ದೆಹಲಿಗೆ ಹೋಗಿದ್ದೆ. ಕಾಂಗ್ರೆಸ್ಸಿನ ಕೆಲವು ಎಂ.ಪಿ.ಗಳೇ ಹೇಳಿದರು. ಯಡಿಯೂರಪ್ಪನವರೇ, ಮೊನ್ನೆ ಲೋಕಸಭೆಯಲ್ಲಿ ವಿ.ಪಿ. ಸಿಂಗ್‌ರವರು ಬಹುಮತ ಕೇಳುವ ಸಂದರ್ಭದಲ್ಲಿ, ಅವರು ಮಾತನಾಡಿದ, ಭಾಷಣ ನಿಜವಾಗಿಯೂ ಸಹ ಒಂದೊಂದು ಶಬ್ದವನ್ನೂ ನಾವೆಲ್ಲರೂ ತಿಳಿದುಕೊಳ್ಳಬೇಕು, ಆ ರೀತಿಯಲ್ಲಿ ಭಾಷಣ ಮಾಡಿದರು. ಈ ರೀತಿಯಾಗಿ ಶ್ರೀಮಾನ್ ಎಲ್.ಕೆ ಅಡ್ವಾನಿಯವರ ಬಗ್ಗೆ ಗೌರವ ಜಾಸ್ತಿಯಾಗಿರಬೇಕಾದರೆ, ಸರ್ದಾರ್ ವಲ್ಲಭಾಯ್ ಪಟೇಲ್ ರಂಥವರು, ಇನ್ನೊಬ್ಬರು ಈ ರೀತಿಯ ಶಕ್ತಿ ಇರುವಂಥ ವ್ಯಕ್ತಿ ಪ್ರಾಮಾಣಿಕವಾಗಿ ಈ ದೇಶದಲ್ಲಿ ಕೆಲಸ ಮಾಡುತ್ತಿದ್ದಾರೆ. ಅಂತಹವರ ನಾಯಕತ್ವದಲ್ಲಿ ಈ ದೇಶ ಮುಂದೆ ಹೋಗಬೇಕೆಂದು ಜನ ಯೋಚನೆ ಮಾಡುತ್ತಿರುವ ಕಾಲದಲ್ಲಿ ನಮಗೆ ಕಪ್ಪು ಮಸಿ ಬಳಿಯುವ ಪ್ರಯತ್ನ ಮಾಡದೇ, ನಾಳೆ ನ್ಯಾಷನಲ್ ಹೈಸ್ಕೂಲ್ ಗ್ರೌಂಡ್‌ನಲ್ಲಿ ಅವರು ಬರುತ್ತಿದ್ದಾರೆ, ತಾವೂ ಸಹ ಬಂದು, ಅವರ ಭಾಷಣ ಕೇಳಿ, ನಿಮ್ಮ ತಪ್ಪು ಕಲ್ಪನೆ ಏನಿದೆ, ಅದನ್ನು ಸರಿಪಡಿಸಿಕೊಳ್ಳುವ ಪ್ರಯತ್ನ ಮಾಡಬೇಕೆಂದು ಹೇಳಿ, ವಿನಂತಿ ಮಾಡಿಕೊಂಡು, ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗ ಲಕ್ಕಪ್ಪನವರು ಮಾತನಾಡಬಹುದು.

(ಮಾನ್ಯ ಸದಸ್ಯರು ಹಾಜರಿರಲಿಲ್ಲ)

† ಶ್ರೀ ಷಫಿ ಅಹಮದ್ (ತುಮಕೂರು).—ಸನ್ಮಾನ್ಯ ಅಧ್ಯಕ್ಷರೇ ಪ್ರಥಮವಾಗಿ ನಮ್ಮ ರಾಜ್ಯದ ಮುಖ್ಯಮಂತ್ರಿಯವರು ಪ್ರಮಾಣ ವಚನ ಸ್ವೀಕರಿಸಿದ ಕೂಡಲೇ, ಕೋಮುವಾರು ಗಲಭೆ ಎಲ್ಲೆಲ್ಲಿ ನಡೆಯಿತು, ಅಲ್ಲಿಗೆ ಹೋಗಿ. ಸಭೆ ಮಾಡಿ, ಎಲ್ಲಾ ಜನಾಂಗದವರ ಕುಂದುಕೊರತೆಗಳನ್ನು ಕೇಳಿ, ಅವರಿಗೆ ಆರ್ಥಿಕ ಸೌಲಭ್ಯಗಳನ್ನು ಒದಗಿಸಿಕೊಟ್ಟಿದ್ದಾರೆ. ಮತ್ತು ನಮ್ಮ ನಾಯಕರಾದ ರಾಜೀವ್ ಗಾಂಧಿಯವರು ಸಹ ಕರ್ನಾಟಕಕ್ಕೆ ಭೇಟಿ ಕೊಟ್ಟು, ಬಡವರ ಕುಂದು ಕೊರತೆಗಳನ್ನು ಕೇಳಿ, ಅವರಿಗೆ ಪರಿಹಾರ ಕೊಟ್ಟಿದ್ದಾರೆ. ಅದಕ್ಕಾಗಿ ನಾನು ವೈಯಕ್ತಿಕವಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈಗತಾನೆ ಮಾನ್ಯ ಕಾಗೋಡು ತಿಮ್ಮಪ್ಪನವರು ಬಹಳ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಪ್ರಮುಖವಾಗಿ ನಮ್ಮ ಮುಖ್ಯಮಂತ್ರಿಯವರು ಕೋಮುವಾರು ಗಲಭೆ ಬಗ್ಗೆ ಇಡೀ ಕರ್ನಾಟಕ ರಾಜ್ಯಕ್ಕೆ ಒಳ್ಳೆಯ ಕರೆಯನ್ನು ಕೊಟ್ಟರು. ನಮ್ಮ ರಾಜ್ಯದಲ್ಲಿ ಯಾವುದೇ ಕಾರಣದಿಂದ ಈ ಕೋಮುವಾರು ಗಲಭೆಗಳು ಆಗಬಾರದು, ಎಲ್ಲರೂ ಸಹೋದರ ಭಾವನೆಯಿಂದ ಹೋಗಬೇಕು, ನಮ್ಮ ನಾಡು ಮಹಾತ್ಮಗಾಂಧಿಯವರು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ನಡೆದು, ಒಳ್ಳೆಯ ಸಂಪ್ರದಾಯ ಹಾಕಬೇಕೆಂಬ ಒಳ್ಳೆಯ ಕರೆಯನ್ನೂ ಸಹ ಅವರು ಕೊಟ್ಟಿದ್ದಾರೆ. ನಮ್ಮ ಹಿರಿಯ ನಾಯಕರಾದಂಥ ಯಡಿಯೂರಪ್ಪನವರು ಇಂತಹ ಕಾರ್ಯಕ್ರಮ ಹಾಕಿದರೆ ನಾನೂ ಸಹ ಸಹಕರಿಸುತ್ತೇನೆಂದು ಈಗತಾನೆ ಹೇಳಿದರು. ಇದಕ್ಕೆ ನನ್ನ ಬೆಂಬಲ ಇದೆ ಎಂದು ಹೇಳಿದ್ದಾರೆ. ಕಳೆದ ಎರಡು ತಿಂಗಳಿಂದ ಸುಮಾರು ೩೭ ಕೋಮು ಗಲಭೆಗಳು ನಮ್ಮ ಕರ್ನಾಟಕದಲ್ಲಿ ಆಗಿವೆ. ನಾನು ಬಾಬರಿ ಮಸೀದಿ ಮತ್ತು ರಾಮಜನ್ಮಭೂಮಿ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ನಾನು ನಮ್ಮ ಕರ್ನಾಟಕದಲ್ಲಿ ನಡೆದಿರುವ ದುರ್ಘಟನೆಗಳ ಬಗ್ಗೆ ನಾವು ಯಾವರೀತಿ ನಮ್ಮ ಪ್ರತಿ ಜನರಲ್ಲೂ

ಒಂದು ಸಹಾನುಭೂತಿ ಹಾಗೂ ಅಣ್ಣತಮ್ಮಂದಿರ ಭಾವನೆಯನ್ನು ತರಬೇಕೆನ್ನುವ ಬಗ್ಗೆ ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ಪ್ರಥಮವಾಗಿ ನಮ್ಮ ರಾಜ್ಯದಲ್ಲಿ ಒಬ್ಬ ವ್ಯಕ್ತಿ ಪೋಲೀಸ್ ಫೈರಿಂಗ್‌ನಲ್ಲಿ ಅಥವಾ ಇಂತಹ ದುರ್ಘಟನೆಯಲ್ಲಿ ಸತ್ತರೆ ೨೦ ಸಾವಿರ ರೂಪಾಯಿ ಕೊಡಬೇಕೆಂದು ಏನು ನಿಯಮ ಇದೆ ಅದನ್ನು ೫೦ ಸಾವಿರ ರೂಪಾಯಿಗೆ ಹೆಚ್ಚು ಮಾಡಿದ್ದಾರೆ. ಆದರೆ ಇದೂ ಸಹ ಸಾಲುವುದಿಲ್ಲ. ಕನಿಷ್ಟಪಕ್ಷ ಇದನ್ನು ಒಂದು ಲಕ್ಷ ರೂಪಾಯಿ ಮಾಡಿದರೆ ಬಹಳ ಸೂಕ್ತ. ಇಂತಹ ದುರ್ಘಟನೆಗಳಲ್ಲಿ ಯಾರೇ ಆಗಲಿ ತೀವ್ರವಾಗಿ ಗಾಯಗೊಂಡರೆ ೨೦ ಸಾವಿರ ರೂಪಾಯಿ ಕೊಡಬೇಕೆಂದು ಇದೆ, ಅದನ್ನು ೫೦ ಸಾವಿರ ರೂಪಾಯಿ ಮಾಡಿದರೆ ಬಹಳ ಸೂಕ್ತ ಎಂದು ಹೇಳುತ್ತೇನೆ. ಪರ್ಮನೆಂಟ್ ಆಗಿ ಡಿಸ್‌ಏಬಲ್ ಆದರೆ ಅಂತಹವರಿಗೆ. ಇನ್‌ಷ್ಯೂರೆನ್ಸ್‌ನಲ್ಲಿ ಸತ್ತವರಿಗೆ ಯಾವರೀತಿ ಒಂದು ನಿಧಿಯನ್ನು ಕೊಡುತ್ತಿದ್ದಾರೆ, ಅದಕ್ಕಿಂತ ಹೆಚ್ಚು ನಿಧಿಯನ್ನು ಕೊಡಬೇಕು. ಅವರ ಜೀವನದಲ್ಲಿ ಯಾರು ಇಂತಹ ದುರ್ಘಟನೆಗೆ ಈಡಾಗಿದ್ದಾರೆ, ಅವರಿಗೆ ಕನಿಷ್ಟಪಕ್ಷ ೫೦ ಸಾವಿರ ರೂಪಾಯಿ ಕೊಟ್ಟರೆ ಬಹಳ ಒಳ್ಳೆಯದು. ಇವತ್ತು ನಮ್ಮ ರಾಜ್ಯದಲ್ಲಿ ನಾನಾ ಭಾಗಗಳಲ್ಲಿ ಅಶಾಂತಿ ಉಂಟಾಗಿದೆ. ಈ ಅಶಾಂತಿಯನ್ನು ನಾವೆಲ್ಲರೂ ಸೇರಿಕೊಂಡು ಒಗ್ಗಟ್ಟಿನಿಂದ ಹೋಗಲಾಡಿಸಬೇಕು. ಅದರಲ್ಲಿ ಯಾವ ವಿಧವಾದ ಪಕ್ಷಪಾತ ಇಲ್ಲದೆ ರಾಜಕೀಯ ಸೇರಿಸದೆ ಕೆಲಸ ಮಾಡಿದರೆ ರಾಜ್ಯದಲ್ಲಿ ಪುನಃ ಮೊದಲಿನ ಸ್ಥಿತಿಯನ್ನು ತರುವುದಕ್ಕೆ ಸಾಧ್ಯವಾಗುತ್ತದೆ. ಉದಾಹರಣೆಗೆ ಹೇಳುವುದಾದರೆ ನನ್ನ ಕ್ಷೇತ್ರವಾದ ತುಮಕೂರಿನಲ್ಲಿ ಸುಮಾರು ಎರಡು ತಿಂಗಳಿಂದ ನಾನಾ ದುರ್ಘಟನೆಗಳು ನಡೆಯುತ್ತಿವೆ. ಅಲ್ಲಿನ ದುರ್ಘಟನೆಗಳು ಬಹಳ ವಿಚಿತ್ರವಾಗಿವೆ. ಅಲ್ಲಿ ನಮ್ಮ ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳ ನಡುವೆ ಮಿಸ್ ಅಂಡರ್‌ಸ್ಟಾಂಡಿಂಗ್ ಆಗಿದ್ದು ಇದು ಬಹಳ ಮಹತ್ವವಾಗಿದೆ. ಇವತ್ತು ಪ್ರತಿಯೊಬ್ಬ ಆಫೀಸರೂ ಇನ್ನೊಬ್ಬ ಆಫೀಸರ್ ಮೇಲೆ ಅವನ ಸುಪೀರಿಯಾರಿಟಿಯನ್ನು ಚಾಲೆಂಜ್ ಮಾಡುವುದು ನಡೆದಿದೆ ಮತ್ತು ಇಂತಹ ಕಾರಣದಿಂದ ಅಂದರೆ ಆಫೀಸರ್‌ಗಳಲ್ಲಿ ಕೋ-ಆರ್ಡಿನೇಷನ್ ಇಲ್ಲದಿದ್ದರೂ ಕೂಡಾ ಇಂತಹ ದುರ್ಘಟನೆಗಳು ನಡೆಯುವುದಕ್ಕೆ ಸಾಧ್ಯವಾಗುತ್ತದೆ. ಈ ಸದನದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ, ಇಷ್ಟೆಲ್ಲಾ ಇದ್ದರೂ ಅಲ್ಲಿನ ಡಿ.ಸಿ ಮತ್ತು ಎಸ್.ಪಿ.ಯವರು ಒಳ್ಳೆಯ ಕೆಲಸ ಮಾಡಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಕುಣಿಗಲ್‌ಗೆ ಬಂದಾಗ, ಅಲ್ಲಿನ ಒಬ್ಬ ತಹಸೀಲ್ದಾರ್‌ರವರು ಹಾಗೂ ಸಬ್‌ಇನ್‌ಸ್ಪೆಕ್ಟರ್‌ರವರು ಯಾವರೀತಿ ಕೆಲಸ ಮಾಡಿ ಅಲ್ಲಿ ಶಾಂತಿಯನ್ನು ತರುವುದಕ್ಕೆ, ಲಾ ಅಂಡ್ ಆರ್ಡರ್‌ನ್ನು ಕಂಟ್ರೋಲ್‌ಗೆ ತರುವುದಕ್ಕೆ ಪ್ರಯತ್ನ ಮಾಡಿದ್ದಾರೆ, ಅವರು ಎಷ್ಟರಮಟ್ಟಿಗೆ ಕೆಲಸ ಮಾಡಿದ್ದಾರೆಂದರೆ ನಮ್ಮ ಮುಖ್ಯ ಮಂತ್ರಿಗಳು ಅವರಿಗೆ ಅಭಿನಂದನೆಯನ್ನೂ ಸಹ ಸಲ್ಲಿಸಿದ್ದಾರೆ. ಇಂತಹ ಆಫೀಸರ್ಸ್ ಸಹ ನಮ್ಮ ರಾಜ್ಯದಲ್ಲಿದ್ದಾರೆ. ಪೋಲೀಸರು ದೌರ್ಜನ್ಯ ಮಾಡಿದ್ದಾರೆ ಎಂದು ಮಾನ್ಯ ಯಡಿಯೂರಪ್ಪನವರು ಹೇಳಿದ್ದಾರೆ. ಆದರೆ ಇದು ಕ್ಷುಲ್ಲಕ. ಎಲ್ಲೋ ಕೆಲವುಕಡೆ ಆಗಿರಬಹುದು. ಆದರೆ ನಮ್ಮ ರಾಜ್ಯದಲ್ಲಿರುವ ಪೋಲೀಸ್ ಫೋರ್ಸ್ ಏನಿದೆ, ಅದು ಬಹಳ ಕಡಿಮೆ ಇದೆ. ೧೦ ಸಾವಿರ ಜನಕ್ಕೆ ಒಬ್ಬ ಪೋಲೀಸ್ ಕಾನ್‌ಸ್ಟೇಬಲ್ ಇದ್ದಾನೆ. ೧೦ ವರ್ಷದಿಂದ ನಮ್ಮ ರಾಜ್ಯದಿಂದ ಪೋಲೀಸ್ ಫೋರ್ಸ್ ಎನ್‌ಹ್ಯಾನ್ಸ್ ಮಾಡಿಲ್ಲ. ಫೈನಾನ್‌ಷಿಯಲ್ ಕ್ರೈಸಿಸ್ ಇದ್ದುದರಿಂದ ಇಂತಹ ಸಮಸ್ಯೆಯನ್ನು ಎದುರಿಸಬೇಕಾಗಿದೆ. ಪೋಲೀಸ್ ಫೋರ್ಸ್ ಜಾಸ್ತಿ ಮಾಡಬೇಕು ಹಾಗೂ ಅನೇಕ ಕಡೆ ಪೋಲೀಸ್ ಸ್ಟೇಷನ್‌ಗಳನ್ನು ಪ್ರಾರಂಭ ಮಾಡಬೇಕಾಗಿದೆ. ಕಳೆದ ಬಜೆಟ್ ಅಧಿವೇಶನದಲ್ಲಿ ಪೋಲೀಸ್ ಫೋರ್ಸ್ ಬಗ್ಗೆ ತಮ್ಮ ಒಂದು ಡಿಮ್ಯಾಂಡ್‌ನಲ್ಲಿ ಮಾನ್ಯ ಮುಖ್ಯ ಮಂತ್ರಿಗಳಾಗಿದ್ದವರು ಏನು ಹೇಳಿದ್ದಾರೆ, ಕನಿಷ್ಟಪಕ್ಷ ಅದನ್ನಾದರೂ ಅಳವಡಿಸಿಕೊಂಡರೆ ಪೋಲೀಸ್ ಫೋರ್ಸ್‌ಗೆ ಹೆಚ್ಚಿನ ರೀತಿಯಲ್ಲಿ ರೆಕ್ರೂಟ್‌ಮೆಂಟ್ ಮಾಡಬಹುದಾಗಿದೆ. ಇವತ್ತು ಪೋಲೀಸ್ ಫೋರ್ಸ್‌ನಲ್ಲಿ ೧೨ ಪರ್ಸೆಂಟ್‌ನಷ್ಟು ಅಲ್ಪಸಂಖ್ಯಾತರಿಗೆ ರೆಕ್ರೂಟ್‌ಮೆಂಟ್ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟರೆ, ಕೋಮುಗಲಭೆಗಳನ್ನು ಮತ್ತು ಇತರ ಘರ್ಷಣೆಗಳನ್ನು ಸಮಾಧಾನ ರೀತಿಯಲ್ಲಿ ಬಗೆಹರಿಸುವುದಕ್ಕೆ ಸಾಧ್ಯವಾಗುತ್ತದೆಂದು ಹೇಳುತ್ತೇನೆ.

ಮುಖ್ಯವಾಗಿ ಪ್ರತಿಯೊಂದು ಪೋಲೀಸ್ ಠಾಣೆಗಳಲ್ಲಿಯೂ ಸಹ ಅಲ್ಪಸಂಖ್ಯಾತ ಅಧಿಕಾರಿಗಳು ಇದ್ದರೆ ಒಳ್ಳೆಯದು. ಇವತ್ತು ಕರ್ನಾಟಕ ರಾಜ್ಯದಲ್ಲಿ ಅದರಲ್ಲೂ ಹಳೆಯ ಮೈಸೂರು ಜಿಲ್ಲೆಗಳಲ್ಲಿ ಕೋಮು ಗಲಭೆಗಳು ಹೆಚ್ಚಾಗಿ ಕೋಲಾರ, ಮುಳಬಾಗಿಲು ಶ್ರೀನಿವಾಸಪುರ, ತುಮಕೂರು ರಾಮನಗರ, ಮಂಡ್ಯ ಚನ್ನಪಟ್ಟಣ ಮತ್ತು ಚನ್ನರಾಯಪಟ್ಟಣ, ದಾವಣಗೆರೆ ಇಂತಹ ಕಡೆ ನಡೆದಿವೆ. ಮತ್ತು ಧಾರವಾಡ ಜಿಲ್ಲೆಗಳಲ್ಲಿ ಕೋಲಾರ ಜಿಲ್ಲೆಯಲ್ಲಿ ಸಹ ಕೋಮು ಗಲಭೆಗಳು ನಡೆದಿವೆ. ಎಲ್ಲೆಲ್ಲಿ ಕೋಮು ಗಲಭೆಗಳು ಹೆಚ್ಚು ನಡೆದಿವೆ ಅಂತಹ ಭಾಗಗಳಲ್ಲಿ ಹೆಚ್ಚಿನ ರೀತಿಯಲ್ಲಿ ಗಲಭೆಗಳು ನಡೆಯುತ್ತವೆಯೋ ಅಂತಹ ಕಡೆಗಳಿಗೆ ಗಲಭೆಗಳನ್ನು ತಡೆಗಟ್ಟಲು ಸರ್ಕಾರದವರು ಸೂಕ್ತ ಕ್ರಮ ಕೈಗೊಳ್ಳಬೇಕು. ಗಲಭೆಗಳನ್ನು ತಡೆಗಟ್ಟದಿದ್ದರೆ ನಮಗೂ ಮತ್ತು ಸರ್ಕಾರಕ್ಕೂ ಒಳ್ಳೆಯ ಹೆಸರು ಬರುವುದಿಲ್ಲ. ಇದರಲ್ಲಿ ಸರ್ಕಾರದ ಮತ್ತು ನಮ್ಮಗಳ ಜವಾಬ್ದಾರಿ ಸಹ ಹೆಚ್ಚು ಇದೆ.

ಪ್ರತಿಯೊಬ್ಬ ಸದಸ್ಯರು ಈ ವಿಷಯಗಳಲ್ಲಿ ಹೆಚ್ಚಿನ ಜವಾಬ್ದಾರಿ ವಹಿಸಬೇಕು ಆ ಜವಾಬ್ದಾರಿ ನಮ್ಮಗಳ ಮೇಲೂ ಸಹ ಇದೆ. ಯಾವುದೇ ಕಾರಣಗಳು ಇರಲಿ, ಅಲ್ಲಿನ ಲೋಕಲ್ ಮೆಂಬರ್ಸ್ ಹೆಚ್ಚಿನ ಆಸಕ್ತಿ ವಹಿಸಿ ನಾವು ಗಲಭೆಗಳನ್ನು ಕಂಟ್ರೋಲ್ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಇವತ್ತು ರಾಜ್ಯದ ನಾನಾ ಭಾಗಗಳಲ್ಲಿ ಗಲಭೆಗಳು ನಡೆದಿವೆ. ಆ ಭಾಗದ ಸದಸ್ಯರು ಪಕ್ಷಬೇಧವನ್ನು ಮರೆತು ಸಾಕಷ್ಟು ಕೆಲಸ ಮಾಡಿದ್ದಾರೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಇಂತಹ ಒಂದು ಗಲಭೆಗಳು ನಡೆದಾಗ ನಮ್ಮ ಸದಸ್ಯರು ಪಕ್ಷಭೇದ ಇಲ್ಲದೆ ಲೋಕಲ್‌ನಲ್ಲಿ ಪೀಸ್ ಕಮಿಂಟಿಗಳನ್ನು ರಚನೆ ಮಾಡಿ ಅಲ್ಲಿ ವಾಸ ಮಾಡತಕ್ಕಂಥ ಜನರನ್ನು ಅಣ್ಣ ತಮ್ಮಂದಿರಂತೆ ಇರಲು ಪ್ರಯತ್ನಗಳು ಮಾಡಿದ್ದಾರೆ. ಇಲ್ಲದಿದ್ದರೆ ಈ ಘಟನೆಗಳನ್ನು ತಡೆಗಟ್ಟಲು ಸಾಧ್ಯವಾಗುತ್ತಿರಲಿಲ್ಲ. ಕಳೆದ ಎರಡು ಮೂರು ತಿಂಗಳುಗಳಿಂದ ರಾಜ್ಯದಲ್ಲಿ ಯಾರಿಗೂ ನೆಮ್ಮದಿ ಇಲ್ಲ. ಯಾವಾಗ ಯಾವ ದುರ್ಘಟನೆ ನಡೆಯುವುದೋ ಎಂದು ರಾತ್ರಿಯಲ್ಲಾ ಜನರಿಗೆ ನಿದ್ದೆ ಇಲ್ಲ ನೆಮ್ಮದಿ ಇಲ್ಲ. ನಮ್ಮ ಜಿಲ್ಲಾ ಮಂತ್ರಿಗಳು ನಮ್ಮ ಜಿಲ್ಲೆಗೂ ಸಹ ಭೇಟಿ ಮಾಡಿ ಶಾಂತಿ ಪಾಲನೆ ಕಾಪಾಡಲು ಕರೆ ನೀಡಲು. ಆದರೆ ಆಮೇಲೆ ಎಲ್ಲೂ ಅಂತಹ ದುರ್ಘಟನೆಗಳು ನಡೆಯಲಿಲ್ಲ ಆದರೂ ಜನ ಶಾಂತವಾಗಿ ನಿದ್ದೆ ಮಾಡುತ್ತಿಲ್ಲ. ಅವರ ಮನಸ್ಸಿನಲ್ಲಿ ಏನೋ ಒಂದು ಭಯ ಆವರಿಸಿದೆ. ಸರ್ಕಾರದವರು ಸಹ ತೀವ್ರವಾದ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ. ಸರ್ಕಾರದವರು ಮೊನ್ನೆ ಟಾಡ ಆಕ್ಟನ್ನು ಜಾರಿಗೆ ತಂದಿದ್ದಾರೆ. ಅದನ್ನು ಸರ್ಕಾರದವರು ಬಹಳ ಸೀರಿಯಸ್ ಆಗಿ ಇಂಪ್ಲಿಮೆಂಟ್ ಮಾಡಬೇಕಾಗುತ್ತದೆ. ಇವತ್ತು ಕೆಲವರ ಮನಸ್ಸಿನಲ್ಲಿ ಏನಾಗಿದೆ ಎಂದರೆ ಅದನ್ನು ದುರುಪಯೋಗ ಪಡಿಸಿಕೊಳ್ಳುತ್ತಾರೋ ಏನೋ ಎನ್ನುವ ಅಭಿಪ್ರಾಯ ಕೆಲವರಿಗೆ ಇದೆ. ಆದರೆ ಸರ್ಕಾರ ಬಲವಾಗಿದ್ದರೆ, ಯಾರೇ ಅಧಿಕಾರದಲ್ಲಿರಲಿ, ಯಾರು ಇದನ್ನು ದುರುಪಯೋಗ ಪಡಿಸಿಕೊಳ್ಳುತ್ತಾರೋ ಅಂತಹವರ ಬಗ್ಗೆ ಕ್ರಮ ತೆಗೆದುಕೊಂಡು ಶಿಕ್ಷೆಕೊಡಲು ಅನುಕೂಲವಾಗುತ್ತದೆ.

ಆದ್ದರಿಂದ ಈ ಆಕ್ಟನ್ನು ಸರ್ಕಾರ ಸೀರಿಯಸ್ ಆಗಿ ಇಂಪ್ಲಿಮೆಂಟ್ ಮಾಡಬೇಕು. ಮತ್ತು ನಮ್ಮ ರಾಜ್ಯದಲ್ಲಿ ಎಂದೂ ಇಂತಹ ಗಲಭೆಗಳು ನಡೆದಿರಲಿಲ್ಲ. ಕಳೆದ ಸದನದಲ್ಲಿ ಮಾನ್ಯ ಮಂತ್ರಿಗಳು ಒಂದು ಆಶ್ವಾಸನೆ ಕೊಟ್ಟರು ಏನೆಂದರೆ ಯಾರದೇ ಆಸ್ತಿ ನಷ್ಟವಾದಾಗ, ಕನಿಷ್ಟ ಪಕ್ಷ ೫೦ ಸಾವಿರ ರೂಪಾಯಿಗಳ ವರೆಗೆ ಸರ್ಕಾರದಿಂದ ಪರಿಹಾರ ಕೊಡುವುದು, ಮತ್ತು ೫೦ ಸಾವಿರ ರೂಪಾಯಿಗಳಿಗೂ ಹೆಚ್ಚು ಆಸ್ತಿ ನಷ್ಟ ಆಗಿದ್ದರೆ ಅಲ್ಲಿ ಫ್ರೀ ಇಂಟ್ರೆಸ್ಟ್ ಸಾಲ ಕೊಟ್ಟರೆ ಅವರು ಯಾವ ಕೋಮಿನವರೇ ಆಗಲೀ, ಅವರನ್ನು ಬೇಗ ಬೇರೆ ಕಡೆ ರೀಯಾಬಲಿಯೇಟ್ ಮಾಡುವುದಕ್ಕೆ ಅನುಕೂಲವಾಗುತ್ತದೆ. ಅವರು ಸುಖದಿಂದ ಜೀವನ ಮಾಡುವುದಕ್ಕೆ ಅವಕಾಶವಾಗುತ್ತದೆ. ಇವತ್ತು ರಾಜ್ಯದ ನಾನಾ ಕಡೆ ಬೆಂಕಿ ಅನಾಹುತಗಳಿಂದ ಮನೆಗಳು ಸುಟ್ಟು ಹೋಗಿವೆ. ಮನೆಗಳು ಇಲ್ಲದೆ ತುಂಬಾ ಕಷ್ಟದ ಪರಿಸ್ಥಿತಿಯಲ್ಲಿದ್ದಾರೆ. ಅರ್ಬನ್ ಏರಿಯಾದಲ್ಲಿ ಇರತಕ್ಕಂಥ ಜನರಿಗೆ ಸರ್ಕಾರದವರು ಭಾಗ್ಯ ಮಂದಿರ ಯೋಜನೆಯಡಿಯಲ್ಲಿ ಮನೆಗಳನ್ನು ಕಟ್ಟಿಸಿಕೊಡಬೇಕು. ಈ ಬಗ್ಗೆ ಸರ್ಕಾರದವರು ಕೂಡಲೇ ಕಾರ್ಯಕ್ರಮ ಹಾಕಿಕೊಳ್ಳಬೇಕು. ರಾಮನಗರ ಮತ್ತು ಚನ್ನಪಟ್ಟಣದಲ್ಲಿ ಗಲಭೆಗಳು ಆದಾಗ ಅಲ್ಲಿ ಮನೆ ಕಳೆದುಕೊಂಡವರು ಒಂದು ಆಟದ ಮೈದಾನದಲ್ಲಿ ವಾಸ ಮಾಡುತ್ತಿದ್ದರು. ಆದ್ದರಿಂದ ಆದಷ್ಟು ಬೇಗ ಈ ಕೆಲಸ ಆಗಬೇಕು, ಇನ್ನು ೧೫-೨೦ ದಿವಸಗಳಲ್ಲಿ ಸರ್ಕಾರದವರು ಅವರಿಗೆ ಮನೆ ಕಟ್ಟಿಸಿಕೊಡಬೇಕು. ಇವತ್ತು ರಾಜ್ಯದಲ್ಲಿ ಪೋಲೀಸ್ ಪಡೆಯನ್ನು ನಾವು ಹೆಚ್ಚು ಮಾಡಬೇಕಾದ ಅವಶ್ಯಕತೆ ಇದೆ. ಅದೇ ರೀತಿಯಲ್ಲಿ ಫೈರ್ ಫೋರ್ಸ್‌ನ್ನು ಹೆಚ್ಚು ಮಾಡಬೇಕು ಕನಿಷ್ಟ ಪಕ್ಷ ಸಬ್ ಡಿವಿಜನ್ ಲೆವೆಲ್‌ಗಳಲ್ಲಿ ಆದರೂ ಫೈರ್ ಸ್ಟೇಷನ್ ತೆರೆಯಬೇಕು. ಈ ಫೈರ್ ಸ್ಟೇಷನ್ ಪ್ರಾರಂಭ ಮಾಡುವುದಕ್ಕೆ ಅನೇಕ ಕಡೆ ಎಪಿಎಂಸಿಯವರು ಜಾಗ ಕೊಡಲು ಮುಂದೆ ಬಂದಿದ್ದಾರೆ.

೪-೧೦ ಪಿ. ಎಂ.

ಆದ್ದರಿಂದ ಫೈರ್ ಸ್ಟೇಷನ್ ಬಹಳ ಮುಖ್ಯವಾದುದು: ದಯವಿಟ್ಟು ಸರ್ಕಾರದವರು ಇದನ್ನು ಗಮನದಲ್ಲಿ ಇಟ್ಟುಕೊಂಡು ಅತಿ ಶೀಘ್ರವಾಗಿ ಫೈರ್ ಸ್ಟೇಷನ್‌ಗಳನ್ನು ಮಾಡಿದರೆ ಒಳ್ಳೆಯದು ಮತ್ತು ನ್ಯಾಷನಲ್ ಇಂಟಿಗ್ರೇಷನ್ ಬಗ್ಗೆ ಮೊನ್ನೆ ತಾನೆ ನಾವುಗಳೆಲ್ಲರೂ ಪ್ರಮಾಣವಚನ ಸ್ವೀಕಾರ ಮಾಡಿದ್ದೇವೆ, ಇದನ್ನು ತೋರಿಸಿಕೊಳ್ಳುವುದಕ್ಕಾಗಿ ಮಾಡದೆ ಪ್ರಾಕ್ಟಿಕಲ್ ಆಗಿ ಮಾಡುತ್ತೇವೆ ಎಂಬುದನ್ನು ತೋರಿಸಿ ಕೊಡಬೇಕು. ಇದರಲ್ಲಿ ದೂರದರ್ಶನ ಮತ್ತು ಪ್ರೆಸ್ ರಿಪೋರ್ಟರ್‌ಗಳ ಪಾತ್ರವೂ ಬಹಳ ಮುಖ್ಯವಾದುದು. ಇಡೀ ದೇಶದಲ್ಲಿ ಏನು ಕಾರ್ಯಕ್ರಮ ಬರುತ್ತದೋ ಅದನ್ನೆಲ್ಲಾ ಅವರು ಬರೆಯುತ್ತಾರೆ ಪೆನ್ ಈಸ್ ಮೈಟಿಯರ್ ದ್ಯಾನ್ ಸೋರ್ಡ್ ಎನ್ನುವ ಹಾಗೆ, ಶಾಂತಿ ಸ್ಥಾಪನೆ ಮಾಡುವುದಕ್ಕಾಗಿ ಮತ್ತು ಕೋಮು ಸೌಹಾರ್ದತೆಯನ್ನು ಎತ್ತಿ ಹಿಡಿಯುವಂತಹ ಲೇಖನಗಳನ್ನು ಬರೆಯಬೇಕು. ಇದರ ಜೊತೆಗೆ ಪರ್ಮನೆಂಟ್ ಆಗಿ ಒಂದೊಂದು ಡಿವಿಷನಲ್‌ನಲ್ಲಿ ಪೀಸ್ ಕಮಿಟಿ ಮಾಡಿದರೆ ಬಹಳ ಒಳ್ಳೆಯದಾಗುತ್ತದೆ ನನ್ನ ಮುಖ್ಯ ಮಂತ್ರಿಗಳು ಏನು ಈ ಕರೆ ಕೊಟ್ಟಿದ್ದಾರೋ ಅದರ ಮೇಲೆ ನಾವು

ನಡೆಯುವುದು ಒಳ್ಳೆಯದು. ಕರ್ನಾಟಕ ರಾಜ್ಯದಲ್ಲಿ ಮುಂಚಿನಿಂದಲೂ, ಅಂದರೆ ಸ್ವಾತಂತ್ರ್ಯ ಬಂದಾಗಲಾಯಿತು ಇದುವರೆಗೆ ಇಂಥಾ ದುರ್ಘಟನೆಗಳು ಆಗಿರಲಿಲ್ಲ. ನಾವೆಲ್ಲಾ ಅಂದರೆ ಈ ಸದನದಲ್ಲಿರತಕ್ಕಂಥ ಸದಸ್ಯರುಗಳು ಯಾವುದೇ ಪಕ್ಷಪಾತವಿಲ್ಲದೆ ನಮ್ಮ ನಮ್ಮ ಕ್ಷೇತ್ರದಲ್ಲಿ ಕೋಮು ಸೌಹಾರ್ದತೆಯನ್ನು ಕಾಪಾಡಿಕೊಂಡು ಹೋಗಹೇಕು ಹಾಗೂ ಎಲ್ಲರಲ್ಲೂ ಸಹೋದರಭಾವನೆಯನ್ನು ತರಬೇಕೆಂದು ಕೇಳಿಕೊಂಡು ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಆಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

† SRI SADAT ALI KHAN (Channapatna).—Mr. Speaker Sir, Karnataka is a land of Basava who brought in reformation in society. This is a land of Hazrath Tippu Sultan shaheed who laid down his life for the country and who was the champion of communal harmony. when we have such a past of National Integration and communal harmony, I fail to understand how we can fight with our neighbours on small and simple issues. Communal forces are on the rise since one Party is hell-bent on communalizing politics. Rama is considered as a perfect being an avtar who humanised society. A political party cannot exploit the name of Sri Rama to reach their political ends and to get electora benefits. I earnestly urge the leaders who are spear heading this movement to stop this fortwith and respond to the call of reason. when a person needs blood of any community to save his life, he goes to blood bank. He does not ask whether it is a Muslim blood or a Harijan blood or a Brahmin blood. All that counts is saving a life with anybodys blood. Our Quran says:

"Lakum-Dinakum waliahdeen"

(My religion is sacred as your religion is sacred to you)

Dr. Allam-e-Iqbal in his famous couplet has said,

"Mazhab Naheen Sikatha Apas may beir Rackna, Hindi hai
hum wat an hai Hindustan Hamara"

(That no religion which teaches hatred to another humanbeing.) The need of the hour is humanism. We should treat our neighbours with compassion and love them. We should rise above cast feelings and embark the universal religion of love, as so many philosophers have said "Love is God".

Mr. Speaker Sir, I have written eighteen letters so far to the former Chief Minister and the present Chief Minister to increase the Police Force in Channapatna Taluka right from December, 1989 and to sanction a Fire Force at Channapatna. But no action was taken till 14th of october when the present Government has sanctioned a police station at M.K. Dodi. This police station is sanctioned after 40 years. Channapatna is a very sensitive place. I request the Government to increase the number of policy stations, increase D A R and sanction a Fire Force Station at Channapatna Which is full of slums/coir industries/Toy industrices Which are fire prone. Hence I request the Government to take up the construction of Fire Force Station, immediately

I request through you, Sir, that the Government should take action to immediately increase the Police Force wherever communal trouble took place during this year and also increase the intelligence net-work which has totally failed.

During 1990,33 communal troubles have taken place resulting in 69 deaths and 150-injured This is the largest communal trouble in 100 year's History of Karnataka. To control the communal clashes, I request the Government to implement the following suggestions:

1) Increase the death compensation from Rs. 50,000/- to one lakh. To-day the cost of one Kidney is Rs. 50,000. The State Government of Uttar Pradesh, Bihar, Rajasthan are paying Rs. one lakh.

2) To increase the loss compensation from Rs.20,000 to Rs.one lakh and sanctioning powers should be given to the respective Deputy Commissioners.

3) Increase the interest free loan from Rs.50.000 to Rs.2,50,000 Here also, the sanctioning powers should be given to the concerned Deputy Commissioners.

4) 100% compensation should be given for the loss of Mango Gardens/Coconut Gardens and other agricultural crops. If this is not done, I feel no muslim will continue as agriculturist.

5) Vehicles like buses/lorries/cars/scooters/rickshws where Third-Party insurance is there, full loss should be given as compensation.

Sir. TADA is required in the State as the largest communal clashes have taken place in Karnataka. TADA is necessary because the police will be totally armed to deal with anti-social elements. I agree with the Members of the Opposition that there is scope for misuse. That is why I feel that police force should depend more on honest dedicated and efficient officers.

The cause and effects of communal riots should be deeply studied. We should come up with remedial suggestions. Sir, I have the harrowing experience of witnessing the communal riots in my Constituency. This is the worst, frustrating and agonising experience one can go through. I pray that no one should have this experience. People of disturbed areas are living in a tense atmosphere. The daily living is an ordeal. I strongly suggest that a Committee of the Legislature consisting of Members from all communities be constituted to study the problems in detail and give suggestions so that these incidents don't recur again and to restore the peaceful atmosphere. The Committee should also go round the disturbed areas and build the confidence of the people.

I humbly request my colleagues from all parties in this August House, no to play petty politics and disturb the peaceful coexistence of all communities in our beloved peaceful Karnataka.

I also humbly appeal to the people of Karnataka to sink their differences and give their shoulders to the wheel of progress of the State.

Lastly Sir, I appeal to the Government to see that all the pending cases relating to the loss of properties, gardens, vehicles and houses should be cleared within one month from to-da . The after-effects of the police is coming up by arresting innocent people that should not take place in future.

Thank you Sir.

ಶ್ರೀ ಸಿ. ಬೈರೇಗೌಡ (ವೇಮಗಲ್).—ಮಾನ್ಯ ಅಧ್ಯಕ್ಷರೇ ಈ ದಿನ ನಮ್ಮ ರಾಜ್ಯದಲ್ಲಿ ನಡೆದ ಅತ್ಯಂತ ಹೇಯವಾದ ಹಾಗೂ ಅಮಾನುಷವಾದ ದುರ್ಘಟನೆಗಳ ಬಗ್ಗೆ ನಾವು ಚರ್ಚೆ ನಡೆಸುತ್ತಿದ್ದೇವೆ. ಈ ದುರ್ಘಟನೆಗಳಿಂದ ಮನುಷ್ಯರಾಗಿರುವವರು ತಲೆ ಎತ್ತಿ ಓಡಾಡುವುದು, ನಾವು ಮನುಷ್ಯರೆಂದು ಹೇಳಿಕೊಳ್ಳುವುದಕ್ಕೂ ಕೂಡ ನಾಚಿಕೆಯಾಗುತ್ತದೆ. ಈ ದುರ್ಘಟನೆಗಳು ಪ್ರಾರಂಭವಾದಾಗ ನಾವು ಈ ದೇಶದಲ್ಲಿರಲಿಲ್ಲ, ಚೈನಾದೇಶಕ್ಕೆ ಹೋಗುವ ಅವಕಾಶ ಸಿಕ್ಕಿತ್ತು, ನಾನು ಅಲಿದ್ದೆ. ಚೈನಾದೇಶ ನಮ್ಮ ದೇಶ ಸ್ವಾತಂತ್ರ್ಯವಾದ ಒಂದು ವರ್ಷಕ್ಕೆ ಸ್ವತಂತ್ರವಾಯಿತು. ಅಲ್ಲಿ ಸಾಧಿಸಿರುವ ಅದ್ಭುತಗಳನ್ನು ಕಣ್ಣಾರೆ ಕಾಣುವ ಒಂದು ಅವಕಾಶ ನನಗೆ ಸಿಕ್ಕಿತ್ತು. ಅಲ್ಲಿ ಸ್ವರ್ಗವನ್ನು ಭೂಮಿಗೆ ಇಳಿಸುವ ಪ್ರಯತ್ನ ಎಷ್ಟರಮಟ್ಟಿಗೆ ನಡೆಯುತ್ತಿದೆ ಎಂದು ನೋಡಿ ನನಗೆ ಸಂತೋಷವಾಯಿತು. ಅಲ್ಲಿಂದ ಪ್ರವಾಸ ಮುಗಿಸಿ ನಮ್ಮ ದೆಹಲಿಯಲ್ಲಿ ಕಾಲಿಡುತ್ತಿದ್ದಾಗಲೇ ಪತ್ರಿಕೆಗಳಲ್ಲಿ ನೋಡಿ ಅತ್ಯಂತ ನಾಚಿಕೆಯಾಯಿತು ಹಾಗೂ ದುಃಖವಾಯಿತು. ಈ ಎರಡು ದೇಶಗಳ ಹೋಲಿಕೆ ಮಾಡಿ ನೋಡಿದರೆ ಹೋಲಿಕೆ ಅಜಗಜಾಂತರ ವ್ಯತ್ಯಾಸವಿದೆ. ದುರದೃಷ್ಟವಶಾತ್ ನನ್ನ ಕ್ಷೇತ್ರದಲ್ಲಿ ಎರಡು ಸಾವಾಗಿದೆ. ಇದರಿಂದ ನಾನು ಅತ್ಯಂತ ದುಃಖಿತನಾಗಿದ್ದೇನೆ. ಅವರು ಹಿಂದುಗಳೋ ಮುಸ್ಲಿಮರೋ ಎಂಬುದು ಅಪ್ರಕೃತ. ಅವರು ಮನುಷ್ಯರು, ಕೂಲಿ ಮಾಡಿ ಜೀವನ ಮಾಡುವವರು. ಅವರು ಕೂಲಿಕಾರರು ಆಗಿರಬಹುದು ಅಥವಾ ದೊಡ್ಡ ಸಾಹುಕಾರರು ಆಗಿರಬಹುದು, ಇಬ್ಬರ ಜೀವವೂ ಒಂದೇ ಅಂಥಾ ಇಬ್ಬರ ಅಮಾಯಕರ ಕೊಲೆ ನನ್ನ ಕ್ಷೇತ್ರದಲ್ಲಿ ನಾನು ಇಲ್ಲದಾಗ ನಡೆಯಿತು. ನಾನು ಬಂದ ತಕ್ಷಣ ಆ ಸ್ಥಳಕ್ಕೆ ಹೋದೆ. ಅದು ದೊಡ್ಡ ಊರು, ಅವರ ಬೆಂಬಲ ನನಗ ಯಾವಾಗಲೂ ಸಿಕ್ಕಿದೆ. ಅಲ್ಲಿನ ಜನರನ್ನೆಲ್ಲಿ ಕೂಡಿಹಾಕಿ ಒಂದು ಪ್ರಶ್ನೆ ಕೇಳಿದೆ. ಏನಪ್ಪ ಇಬ್ಬರನ್ನು ನೀವು ಸಾಯಿಸಿದ್ದೀರಿ, ಅವರು ಏನು ತಪ್ಪು ಮಾಡಿದ್ದರು ಹೇಳಿ, ಯಾವತ್ತಾದರೂ ಕಳ್ಳತನ ಮಾಡಿದ್ದರೆ ಅಥವಾ ಏನಾದರೂ ಅಕೃತ್ಯ ಎಸಗಿದ್ದರೆ, ಏನಾದರೂ ಉದಾಹರಣೆ ಇದ್ದರೆ ದಯುವಿಟ್ಟು ಹೇಳಿ ಎಂದು ಕೇಳಿದೆ. ಆ ಊರಿನಲ್ಲಿ ಯಾರೂ ಕೂಡ ತಗ್ಗಿಸಿದ್ದ ತಲೆ ಎತ್ತದೆ, ಅಂಥಾದ್ದೇನಿಲ್ಲ ಅವರು ಬಹಳ ಅನ್ಯೋನ್ಯವಾಗಿದ್ದರು. ಯಾವತ್ತೂ ಸಣ್ಣ ಘಟನೆಗೂ ಕಾರಣಕರ್ತರಾಗಿರಲಿಲ್ಲವೆಂದು ಹೇಳಿದರು. ನಾನು ಅಂಥಾ ಅಮಾಯಕರ ಜೀವ ತೆಗೆದಿದ್ದೇಕೆಂದು ಅವರನ್ನು ಕೇಳಿದಾಗ, ಅವರು ನಾವಲ್ಲ ಬೇರೆ ಊರಿನಿಂದ ಬಂದಿದ್ದರು ಎಂದು ಹೇಳಿದರು. ಇದಕ್ಕೆ ಹಿನ್ನೆಲೆಯಾಗೇ ಇಷ್ಟು ಹೊತ್ತಿನವರೆಗೆ ಚರ್ಚೆಯಾಗಿದೆ. ದೇವಸ್ಥಾನ ಕಟ್ಟಬೇಕು ನಿಜ, ಯಾರೂ ಬಹ ಬೇಡ ಎನ್ನುವುದಿಲ್ಲ.

ಮಾನ್ಯ ಸ್ನೇಹಿತರಾದಂಥ ಯಡಿಯೂರಪ್ಪನವರು ಇಲ್ಲಿಯೇ ಇದ್ದಾರೆ. ಅವರ ಪ್ರಕಾರ ಈಗಿರತಕ್ಕಂಥ ಸ್ಥಳದಲ್ಲಿ ರಾಮನ ಮೂರ್ತಿ ಇದೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಅದನ್ನು ನಾನು ಕೂಡಾ ಎರಡು ಸಾರಿ ಟಿ. ವಿ. ಯಲ್ಲಿ ನೋಡಿದ್ದೇನೆ. ಅಲ್ಲಿ ಗರ್ಭಗುಡಿ ರಲ್ಲಿತ್ತೋ, ಹೊರಗಡೆ ರಲ್ಲಿತ್ತೋ, ಅದು ಅಪ್ರಕೃತ. ಅಂತೂ ಮೂರ್ತಿ ಇದೆ ಎಂದು ಹೇಳುತ್ತಾರೆ, ಅದನ್ನು ಟಿ. ವಿ. ಯಲ್ಲಿಯೂ ನೋಡಿದ್ದೇವೆ. ಸ್ಥಳಕ್ಕೆ ಹೋಗಿ ನೋಡುವುದಕ್ಕೆ ಅವಕಾಶ ಸಿಕ್ಕಿಲ್ಲ. ಆ ಮೂರ್ತಿ ಅಲ್ಲಿಯೇ ಇದ್ದರೆ ಆ ಮೂರ್ತಿಗೆ ಪೂಜೆ ಮಾಡುವುದಕ್ಕೆ ಯಾರಾದರೂ ಅಡ್ಡಿ ಮಾಡಿದ್ದಾರೆಯೇ? ಇವತ್ತಿಗೂ ಅಡ್ಡಿ ಪಡಿಸಿಲ್ಲ. ಪೂಜೆ ಮಾಡುವುದಕ್ಕೆ ಅಲ್ಲಿ ಅಡ್ಡಿ ಬಾದಿಲ್ಲ. ಮತ್ತು ಟಿ. ವಿ ಸುದ್ದಿ ಪ್ರಕಾರ ನಾನು ಕೇಳಿದೆ, ಅಲ್ಲಿಯೂ ಅಡ್ಡಿಪಡಿಸುತ್ತಿಲ್ಲ ಎನ್ನತಕ್ಕಂಥದನ್ನು ಪತ್ರಿಕೆಗಳಲ್ಲಿಯೂ ಓದಿದ್ದೇನೆ, ಟಿ. ವಿ.

ಯಲ್ಲಿಯೂ ಕೂಡಾ ಕೇಳಿದ್ದೇವೆ. ಆದರೆ ನೀವು ಅಲ್ಲಿ ದೇವಸ್ಥಾನವನ್ನು ಕಟ್ಟಬೇಕು ಎಂದು ಹೊರಟಿದ್ದೀರಿ. ಇದನ್ನೇ ಒಂದು ದೊಡ್ಡ ಕಾರ್ಯಕ್ರಮವಾಗಿ ಹಾಕಿದ್ದೀರಿ. ದೇವಸ್ಥಾನವನ್ನು ಕಟ್ಟುವುದಕ್ಕೆ ಈ ದೇಶದಲ್ಲಿರತಕ್ಕಂಥ ಹಿಂದೂವಾಗಲಿ, ಮುಸ್ಲಿಂ ಆಗಲೀ ಯಾರೂ ಕೂಡಾ ದೇವಸ್ಥಾನವನ್ನು ಕಟ್ಟುವುದಕ್ಕೆ ಅಡ್ಡಿ ಮಾಡಿಲ್ಲ. ಅಲ್ಲಿ ಪೂಜೆ ಮಾಡತಕ್ಕಂಥ ಸ್ಥಳದಲ್ಲಿ ಪೂಜೆಯನ್ನು ಮಾಡಬೇಡಿ ಎಂದು ಯಾರೂ ಕೂಡಾ ಹೇಳಿಲ್ಲ. ಇಲ್ಲಿ ನಾನು ಒಂದು ಪ್ರಶ್ನೆಯನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಶ್ರೀರಾಮಚಂದ್ರನ ಬಗ್ಗೆ ನಾನು ಕೆಲವು ಬೇರೆ ದೇಶಗಳಿಗೂ ಹೋಗಿ ನೋಡಿ ಬಂದಿದ್ದೇನೆ. ಅಲ್ಲಿ ಶ್ರೀರಾಮಚಂದ್ರನ ವಿಚಾರ ಏನು ಇದೆ ಎಂದು ಆಮೇಲೆ ಹೇಳುತ್ತೇನೆ. ಇದೇ ರೀತಿ ದೇವಸ್ಥಾನ ವಿರಬೇಕು, ಇಷ್ಟು ದೊಡ್ಡದಾಗಿ ಹತ್ತಾರು ಎಕರೆ ವಿಸ್ತೀರ್ಣ ಇರಬೇಕು ಎಂದು ಶ್ರೀರಾಮಚಂದ್ರನೇನಾದರೂ ಯಾರಿಗಾದರೂ ಹೇಳಿಹೋಗಿದ್ದಾನೇನು ? ಇವತ್ತು ಕಾಶಿಯಲ್ಲಿರತಕ್ಕಂಥ ವಿಶ್ವನಾಥ ದೇವಸ್ಥಾನವನ್ನು ನೋಡಿದ್ದೇನೆ. ಎಷ್ಟು ಚಿಕ್ಕದಾಗಿದೆ. ಕಾಶಿಯಲ್ಲಿರುವ ವಿಶ್ವನಾಥನ ಬಗ್ಗೆ ಭೂಮಿಯಲ್ಲಿರುವ ಒಂದು ಸ್ವರ್ಗ ಎಂದು ಎಲ್ಲರಿಗೂ ಕೂಡಾ ಒಂದು ನಂಬಿಕೆ ಇದೆ. ಆ ದೇವಸ್ಥಾನಕ್ಕೆ ಹೋಗುವುದೇ ಕಷ್ಟ. ಅಲ್ಲಿಗೆ ಹೋದರೆ ಆ ದೇವಸ್ಥಾನಕ್ಕೆ ಹೋಗುವುದಕ್ಕೆ ಬದಲಿಗೆ ಎಲ್ಲಿಗೋ ಹೋಗುತ್ತೇವೆ ಎನ್ನುವ ಭಯ. ಅಂಥ ಇಕ್ಕಟ್ಟಾದ ಪರಿಸ್ಥಿತಿಯಲ್ಲಿದೆ. ಇವತ್ತು ದೇವಸ್ಥಾನವನ್ನು ಕಟ್ಟಬೇಕು ಎಂದು ಹೊರಟಿದ್ದೀರಿ. ಅದಕ್ಕೆ ವಿರೋಧ ಇಲ್ಲ, ನನ್ನದೂ ಇಲ್ಲ, ಈ ದೇಶದಲ್ಲಿ ಯಾರದೂ ಕೂಡಾ ಇಲ್ಲ. ಆದರೆ ಇದರ ಹಿಂದೆ ಇದ್ದಂಥ ಉದ್ದೇಶವನ್ನು ವಿವರವಾಗಿ ಹೇಳುವುದಕ್ಕೆ ಹೋದರೆ ನಾನು ಪುನರುಚ್ಚಾರ ಮಾಡಿದರೆ ಕಾಲವನ್ನು ವ್ಯಯ ಮಾಡಿದಂತಾಗುತ್ತದೆ. ಆದ್ದರಿಂದ ಅದು ಬೇಕಾಗಿಲ್ಲ ಪುನಃ ನಾನು ಈ ರಥಯಾತ್ರೆಯ ಬಗ್ಗೆ ಒಂದು ಮಾತನ್ನು ಹೇಳಬೇಕಾಗುತ್ತದೆ. ಅದು ಇವತ್ತು ಚರಿತ್ರೆಯಲ್ಲಿ ಸೇರಿರತಕ್ಕಂಥದ್ದು. ನಾನು ಚೈನಾ ದೇಶದ ಬಗ್ಗೆ ಹೇಳದಿದ್ದರೆ ಇಲ್ಲಿ ನನಗೆ ನನ್ನ ವಾದಕ್ಕೆ ಪುಷ್ಟಿ ಬರುವುದಿಲ್ಲ. ಚೈನಾ ದೇಶವನ್ನು ೧೯೪೮-೪೯ರಲ್ಲಿ ಬಿಡುಗಡೆ ಮಾಡಿಸಬೇಕಾಗಿದ್ದರೆ ಮಾವೋರವರು 'ಗ್ರೇಟ್ ಮಾರ್ಚ್'ನ್ನು ದೇಶದ ಉದ್ದಗಲಕ್ಕೂ ತನ್ನದೇ ಆದಂಥ ಒಂದು ಸೈನ್ಯವನ್ನು ಕಟ್ಟಿ ದೇಶವನ್ನು ಬಿಡುಗಡೆ ಮಾಡಿಸಿದರು, ಅಂದು ಒಂದು ಕೆ.ಜಿ. ಅಕ್ಕಿಯನ್ನು ತರಬೇಕಾಗಿದ್ದರೆ ನಾನು ಕೆಲವು ಫೋಟೋಗಳನ್ನು ನೋಡಿದ್ದೇನೆ. ಯಾವ ರೀತಿ ನಾವು ಸೈಕಲ್‌ನಲ್ಲಿ ಪೇಪರನ್ನು ಕಟ್ಟಿ ಮಾರಾಟ ಮಾಡುವುದಕ್ಕೆ ಹೋಗುತ್ತೇವೆಯೋ ಅದೇ ರೀತಿಯಲ್ಲಿಯೇ ನೋಟನ್ನು ಸೈಕಲ್‌ನಲ್ಲಿ ಹಾಕಿ ತೆಗೆದುಕೊಂಡು ಹೋಗಿ ಅಕ್ಕಿಯನ್ನು ತರಬೇಕಾಗಿತ್ತು. ಅಂಥ ಒಂದು ಕಷ್ಟ ಇತ್ತು. ಇದಕ್ಕೆ ಕಾರಣವೇನೆಂದರೆ ಹಣದುಬ್ಬರ. ಚೈನಾ ದೇಶದಲ್ಲಿಯೇ ಅಷ್ಟೊಂದು ಭೀಕರವಾಗಿತ್ತು. ಸಾಮಾನ್ಯ ಜನರಿಗೆ ಅನ್ನ ಇಲ್ಲ ಆಹಾರ ಇಲ್ಲ, ಬಟ್ಟೆ ಇಲ್ಲ, ಅಲ್ಲಿ ಸಾಮಾನ್ಯ ಜನರು ಬದುಕುವುದಕ್ಕೆ ಕಷ್ಟವಾಗಿತ್ತು. ಆಗ ಮಾವೋರವರು ಚೈನಾ ದೇಶವನ್ನು ಬಿಡುಗಡೆ ಮಾಡತಕ್ಕಂಥ ಒಂದು ಕಾರ್ಯಕ್ರಮವನ್ನು ಅವರು ಹಾಕಿದರು. ನೀವು ರಥಯಾತ್ರೆಯನ್ನು ನಡೆಸಿದಿರಿ. ಸೈಟು ಇಲ್ಲದೇ ಇರತಕ್ಕಂಥವರಿಗೆ ಸೈಟನ್ನು ಕೊಡಬೇಕು ಎಂದು ರಥಯಾತ್ರೆಯಲ್ಲಿ ಹೇಳಿದಿರಾ ? ಹೊಟ್ಟೆಗೆ ಇಲ್ಲದೇ ಇರತಕ್ಕಂಥವರಿಗೆ ಊಟ ಕೊಡಬೇಕು, ಅನ್ನ ಅಲ್ಲದೇ ಇರತಕ್ಕಂಥವರಿಗೆ ಅನ್ನವನ್ನು ಕೊಡಬೇಕು ಎಂದು ರಥಯಾತ್ರೆ ಕಾರ್ಯಕ್ರಮದಲ್ಲಿ ಹಾಕಿದಿರಾ ? ಬಟ್ಟೆ ಇಲ್ಲದೇ ಇರತಕ್ಕಂಥವರಿಗೆ ಬಟ್ಟೆಯನ್ನು ಕೊಡಬೇಕು ಎನ್ನತಕ್ಕಂಥ ಕಾರ್ಯಕ್ರಮವನ್ನು ಹಾಕಿದಿರಾ ? ನಮ್ಮ ದೇಶದಲ್ಲಿ ಶೇಕಡ ೫೦ ಕ್ಕಿಂತ ಹೆಚ್ಚಿಗೆ ಬಡತನ ರೇಖೆಯ ಕೆಳಗಡೆ ಇರುವವರು ಜೀವನವನ್ನು ನಡೆಸುತ್ತಿದ್ದಾರೆ, ಅವರನ್ನು ಕೂಡಾ ಆ ರೇಖೆಯಿಂದ ಮೇಲೆ ಎತ್ತತಕ್ಕಂಥ ಕಾರ್ಯಕ್ರಮವನ್ನು ಹಾಕಿದಿರಾ ?

ಇವೊತ್ತು ಪರಿಸ್ಥಿತಿ ಏನು ಆಗಿದೆ? ಆ ಕಾರ್ಯಕ್ರಮಗಳೆಲ್ಲವೂ ಕೂಡ ಬದಿಗೆ ಹೋಗುತ್ತಿದೆ. ಸಾಮಾನ್ಯವಾಗಿ ಬಡವರಾಗಿರತಕ್ಕವರು ಮತ್ತೆ ಬಡವರನ್ನಾಗಿ ಮಾಡತಕ್ಕ ಕಾರ್ಯಕ್ರಮ ಇದು. ಅನ್ನ ಕೊಡತಕ್ಕವನಿಗೆ ಮತ್ತೆ ಅನ್ನದಿಂದ ವಂಚನೆ ಮಾಡತಕ್ಕ ಕಾರ್ಯಕ್ರಮ ಇದು. ಬಟ್ಟೆ ಇದ್ದವನಿಗೆ ಬಟ್ಟೆ ಇಲ್ಲದೆ ಇರುವ ಹಾಗೆ ಮಾಡತಕ್ಕ ಕಾರ್ಯಕ್ರಮ ಇದು. ಆದರೆ ಇವೊತ್ತು ಗ್ರಾಮಾಂತರ ಪ್ರದೇಶದಲ್ಲಿ ಏನು ಆಗಿದೆ? ನಾನು ನನ್ನ ಕ್ಷೇತ್ರದ ಅನೇಕ ಗ್ರಾಮಗಳಿಗೆ ಹೋಗಿದ್ದೇನೆ. ವಿಷದ ಗಾಳಿ, ವಿಷದ ಬೀಜ ಸಣ್ಣ ಸಣ್ಣ ಮಕ್ಕಳಲ್ಲೂ ಬಿತ್ತನೆ ಆಗಿದೆ. ಒಂದು ಉದಾಹರಣೆಯನ್ನು ಕೊಡಲಿಕ್ಕೆ ಇಷ್ಟಪಡುತ್ತೇನೆ. ನನ್ನ ಕ್ಷೇತ್ರದ ದೊಡ್ಡ ಹಳ್ಳಿಯಲ್ಲಿ ಸುಮಾರು ೨೦ ೩೦ ಮುಸ್ಲಿಮ್ ಕುಟುಂಬಗಳು ಇವೆ. ಅಲ್ಲಿ ಎಲ್ಲರೂ ಅಣ್ಣ ತಮ್ಮಂದಿರ ಹಾಗೆ ಇದ್ದಾರೆ, ಆದರೆ ಕತ್ತಲು ಆದ ಮೇಲೆ ಅವರ ಮನೆಗಳ ಮೇಲೆ ಕಲ್ಲು ಬೀಳುತ್ತದೆ. ಎಲ್ಲರೂ ಬಹಳ ಅನ್ಯೋನ್ಯವಾಗಿದ್ದಾರೆ, ಆದರೆ ಕತ್ತಲಾದ ಮೇಲೆ ಅವರ ಮನೆಗಳ ಮೇಲೆ ಕಲ್ಲು ಬೀಳುತ್ತದೆ. ಇದು ಯಕ್ಷಿಣಿ. ಎಲ್ಲರಿಗೂ ಕೂಡ ಆಶ್ಚರ್ಯ ಏನು ಕಾರಣ ಎಂದು? ಕೊನೆಗೆ ಕಾರಣ ಪತ್ತೆ ಹಚ್ಚಿದರೆ ಸಣ್ಣ ಮಕ್ಕಳು ಸುಮಾರು ೭-೮ ವರ್ಷದ ಮಕ್ಕಳು ಇವೊತ್ತು ಅವರುಗಳ ಮನೆ ಮೇಲೆ ಕಲ್ಲು ಹಾಕತಕ್ಕ ಕೆಲಸವನ್ನು

ಮಾಡುತ್ತಿದ್ದಾರೆ. ೭–೮ ವರ್ಷದ ಮಕ್ಕಳಿಗೆ ಈಗಲೇ ಜಾತೀಯತೆಯ ವಿಷದ ಬೀಜವನ್ನು ಬಿತ್ತುತ್ತಿದ್ದಾರೆ. ಅವರು ಮುಂದೆ ಈ ದೇಶದ ಪ್ರಜೆಗಳಾಗುತ್ತಾರೆ. ಮುಂದೆ ದೇಶ ಅವರ ಕೈಗೆ ಹೋಗುತ್ತದೆ. ಆದರೂ ಸಹ ಹೀಗಾದರೆ ಈ ದೇಶದ ಗತಿ ಏನು? ಇದು ಒಂದು ಹಳ್ಳಿಯಲ್ಲಿರತಕ್ಕಂಥ ಪ್ರಶ್ನೆ ಅಲ್ಲ. ಸರ್ವೇಸಾಮಾನ್ಯವಾಗಿ ಎಲ್ಲ ಹಳ್ಳಿಗಳಲ್ಲೂ ಇರತಕ್ಕ ಪ್ರಶ್ನೆ ಇದು. ಈ ವಿಷದ ಬೀಜ ಪ್ರತಿಯೊಂದು ಹಳ್ಳಿಯಲ್ಲೂ ಇವೊತ್ತಿನ ದಿವಸ ಬಿತ್ತನೆ ಆಗಿದೆ. ಇದರಿಂದ ದೇಶಕ್ಕೆ ನನ್ನ ಪ್ರಕಾರ ಅನಾಹುತ ಕಾದಿದೆ. ಜನರ ಮನಸ್ಸು ಕೆಟ್ಟಿದೆ. ಸಾಮಾನ್ಯ ಮಕ್ಕಳ ಮನಸ್ಸು ಕೂಡ ಕಲಗೆಟ್ಟಿದೆ. ಇದನ್ನು ಕನಿಷ್ಟ ೫೦–೧೦೦ ವರ್ಷಗಳಾದರೂ ಸರಿಪಡಿಸುವುದಕ್ಕೆ ಆಗದೇ ಇರತಕ್ಕ ಪರಿಸ್ಥಿತಿ. ನಾನು ಮೊದಲೇ ಹೇಳಿದ್ದೇನೆ, ಜನರ ಜೀವನ ಮಟ್ಟವನ್ನು ದೇಶ ಎದುರಿಸತಕ್ಕ ಸಮಸ್ಯೆಯನ್ನು ನೋಡುತ್ತಿದ್ದೇವೆ. ಇವೊತ್ತಿನ ದಿವಸ ಚರ್ಚೆ ಆಯಿತು. ಡೀಸಲ್ ಇಲ್ಲ. ಪೆಟ್ರೋಲ್ ಇಲ್ಲ. ಅನೇಕ ಕಡೆ ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವುದಕ್ಕೆ ನೀರು ಇಲ್ಲ. ಇವೊತ್ತು ದೇಶದಲ್ಲಿ ಕಾಡುತ್ತಿರುವ ಸಮಸ್ಯೆಗಳು ಹಲವು. ನಮ್ಮ ದೇಶದ ಆರ್ಥಿಕ ಪರಿಸ್ಥಿತಿ ಏನು ಆಗಿದೆ? ಅದು ಎಲ್ಲೋ ಕೊನೆಯ ಮಟ್ಟದಲ್ಲಿ ಇದೆ. ಈ ಆರ್ಥಿಕ ನೀತಿ, ಆರ್ಥಿಕ ಅಭಿವೃದ್ಧಿ ಜನರ ಜೀವನವನ್ನು, ಜನರ ಬಾಳನ್ನು ಏರಿಸುವುದಕ್ಕೆ, ದೇಶವನ್ನು ಸಮೃದ್ಧಿಗೊಳಿಸುವುದಕ್ಕೆ ಕಾರಣ ಆಗಿದಿದ್ದರೆ ನಾನಂತೂ ಕೂಡ ಸ್ವಾಗತಿಸುತ್ತಿದ್ದೆ; ಪ್ರತಿಯೊಬ್ಬ ಭಾರತೀಯನೂ ಸ್ವಾಗತಿಸುತ್ತಿದ್ದ; ಅದು ಕರ್ತವ್ಯ ಕೂಡ. ಹೀಗೆಂದು ಹೇಳಿದ ತಕ್ಷಣ ಎಲ್ಲರೂ ಕೂಡ ಇದರಲ್ಲಿ ಭಾಗಿಯಾಗಿದ್ದಾರೆಂದು ಹೇಳುವುದಿಲ್ಲ. ದೇಶದಲ್ಲಿರತಕ್ಕ ಎಲ್ಲ ಹಿಂದೂಗಳು ಭಾಗಿ ಆಗಿದ್ದಾರೆಂದು ನಾನು ಹೇಳುವುದಿಲ್ಲ; ಕೆಲವೇ ಜನ ಇದ್ದಾರೆ. ಅವರು ಕೇವಲ ಹಿಂದೂಗಳಲ್ಲಿ ಈ ಕೆಲಸ ಮಾಡುವವರು ಇದ್ದಾರೆಂದು ಹೇಳುವುದಿಲ್ಲ, ಮುಸ್ಲಿಮರಲ್ಲೂ ಕೂಡ ಇದ್ದಾರೆ. ಕೆಲವೇ ಜನ ಯಾರು ಮತಾಂಧತೆಯನ್ನು ಹೊಂದಿರುತ್ತಾರೆ ಅವರು ಹಿಂದೂಗಳಲ್ಲ. ಯಾರು ಮುಸ್ಲಿಮರಲ್ಲಿ ಈ ಮತಾಂಧತೆಯನ್ನು ಹೊಂದಿರುತ್ತಾರೋ, ಅದೇ ಸರ್ವಸ್ವ ಎಂದು ತಿಳಿದುಕೊಂಡಿದ್ದಾರೋ ಅವರು ಮುಸ್ಲಿಮರಲ್ಲ. ಮನುಷ್ಯರಂತೂ ಮೊದಲೇ ಅಲ್ಲ. ಹಿಂದೂಗಳು ಇರಬಹುದು ಅಥವಾ ಮುಸ್ಲಿಮರು ಇರಬಹುದು; ಅವರು ಮನುಷ್ಯರಂತೂ ಮೊದಲೇ ಅಲ್ಲ. ಅವರು ಬೇರೆ ವರ್ಗಕ್ಕೆ, ಬೇರೆ ಜಾತಿಗೆ ಸೇರಿರತಕ್ಕವರು; ಅವರು ಮನುಷ್ಯ ಜಾತಿಗೆ ಸೇರಿದವರಲ್ಲ. ಅವರು ಭೂತ ವರ್ಗಕ್ಕೆ ಸೇರಿದವರು ಎಂದು ಹೇಳಬೇಕಾಗಿದೆ. ಅವರಿಂದ ಈ ದೇಶಕ್ಕೆ ದುರ್ಗತಿ ಬಂದಿದೆ. ಇವೊತ್ತು ಅವರು ರಕ್ಷಣೆಗೋಸ್ಕರ ಪ್ರತಿ ದಿವಸ ಎಷ್ಟು ಕೋಟಿ ರೂಪಾಯಿಗಳು ಖರ್ಚಾಗುತ್ತಿದೆ? ಕೋಲಾರದಲ್ಲಿ ಸತತವಾಗಿ ಕರ್ಫ್ಯೂ ಜಾರಿಯಲ್ಲಿ ಇರುವುದನ್ನು ನಾನು ನೋಡಿದ್ದೇನೆ. ಕೋಲಾರದಲ್ಲಿ ಸತತವಾಗಿ ೨೪ ಗಂಟೆಯೂ ಕರ್ಫ್ಯೂ, ಅಲ್ಲಿ ಜನ ಹೊರಗಡೆ ಬರುವುದಿಲ್ಲ. ಅಲ್ಲಿನ ಸಾಮಾನ್ಯ ಜನರನ್ನು ನೋಡಿದಾಗ ನಮಗೆ ಕೂಲಿ ಇಲ್ಲ. ಕೆಲಸ ಇಲ್ಲ, ಬೆಳಿಗ್ಗೆಯಿಂದ ನಾವು ಕೂಲಿ ಮಾಡಿ ಕೆಲಸ ಮಾಡತಕ್ಕವರು ನಮಗೆ ಕೆಲಸವಿಲ್ಲ. ಕೂಲಿ ಇಲ್ಲ. ನಾವು ಹೇಗೆ ಜೀವನ ಮಾಡುವುದು ಎನ್ನುವ ಪ್ರಶ್ನೆ ಅಲ್ಲಿನ ಜನರಲ್ಲಿ ಇದೆ. ಕೋಲಾರದಜಿಲ್ಲಾಧಿಕಾರಿಗಳಿಗೆ ನಾನು ಕೋಲಾರದ ಸುತ್ತಲು ಕೂಡ ರಿಲೀಫ್ ಕಾಮಗಾರಿಯನ್ನು ಪ್ರಾರಂಭ ಮಾಡಿ ಯಾರ್ಯಾರು ಕೆಲಸ ಮಾಡುತ್ತಾರೆ ಅವರಿಗೆ ಕೆಲಸ ಕೊಡುವಂತೆ ಮೊದಲು ಏರ್ಪಾಡು ಮಾಡಿ ಎಂದು ಹೇಳಿದ್ದೆ; ಅವರು ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ. ನಾನು ಬೇರೆ ಕಡೆ ಹೋಗಿದ್ದರಿಂದ ಅವರು ಮಾಡಿದ್ದಾರೊ ಇಲ್ಲವೋ ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಗಳು ತಿಳಿಸಬೇಕು. ನಾನು ಕೋಲಾರಕ್ಕೆ ಸೀಮಿತವಾಗಿ ಮಾತ್ರ ಈ ಮಾತನ್ನು ಹೇಳುತ್ತಿಲ್ಲ. ಇವತ್ತಿನ ದಿವಸ ಅನೇಕ ಹಳ್ಳಿಗಳಲ್ಲಿ ಜನರೇ ಖಾಲಿಯಾಗಿದ್ದಾರೆ. ನನ್ನ ಕ್ಷೇತ್ರದಲ್ಲಿಯೂ ಸಹ ೨–೩ ಹಳ್ಳಿಗಳಲ್ಲಿ ಜನರು ಒಬ್ಬರೂ ಇಲ್ಲ. ಎಲ್ಲರೂ ಖಾಲಿಯಾಗಿದ್ದಾರೆ ಹೀಗಾದರೆ ಅವರ ಮನೆಗಳ ಗತಿ ಏನು? ಅವರ ಆಸ್ತಿಪಾಸ್ತಿಗಳ ಗತಿ ಏನು? ಊರೂರೆ ಖಾಲಿಯಾಗಿರುವ ನಿದರ್ಶನಗಳು ಉಂಟು. ಅದಕ್ಕೆ ರಕ್ಷಣೆಯನ್ನು ಕೊಡಬೇಕಾಗಿರುವುದು ಸರ್ಕಾರದ ಜವಾಬ್ದಾರಿಯಾಗಿದೆ.

ಇವತ್ತು ದೇವಸ್ಥಾನದ ಬಗ್ಗೆ ಹಿಂದೆ ಅದು ರಾಮ ಜನ್ಮ ಸ್ಥಾನವೆಂದು ಹೇಳಿದ್ದಾರೆ. ನಾನು ಅದು ನಿಜವೊ ಅಥವಾ ಅಲ್ಲವೊ ಎನ್ನುತಕ್ಕ ಮಾತನ್ನು ಹೇಳುತ್ತೇನೆ. ನಾನು ಪರಿಣಿತನು ಅಲ್ಲ. ಈ ವಿಚಾರದಲ್ಲಿ ಹೆಚ್ಚಿಗೆ ತಿಳಿದುಕೊಳ್ಳುವುದಕ್ಕೆ ಹೋಗುವುದಿಲ್ಲ. ಆದರೆ ಒಂದು ವಿಚಾರವನ್ನು ಮಾನ್ಯ ಯಡಿಯೂರಪ್ಪನವರ ಗಮನಕ್ಕೆ ತರುತ್ತೇವೆ ಕೆಂಪೇಗೌಡನು ಬೆಂಗಳೂರನ್ನು ಸ್ಥಾಪಿಸಿದನು. ಅವನು ಕಟ್ಟಿಸಿದಂತಹ ಗೋಪುರ ಬೆಂಗಳೂರಿನ ಸದಾಶಿವನಗರದಲ್ಲಿದೆ. ಇವತ್ತು ಆ ಗೋಪುರಕ್ಕೆ ಏನು ಗತಿ ಬಂದಿದೆ ಗೊತ್ತೇ? ಹಾಗಾದರೆ ನೀವು ಅಲ್ಲಿದ್ದಂತಹ ಮಸೀದಿಯನ್ನು ಕೆಡವಬೇಕೆಂದು ಹೇಳುತ್ತಿದೀರಿ ಅಲ್ಲಿ ದೇವಸ್ಥಾನದಲ್ಲಿ ಪೂಜೆ ಮಾಡಲು ಅವಕಾಶವಿರಬೇಕು. ಹಾಗೂ ದೇವಸ್ಥಾನ ದೊಡ್ಡದಾಗಿ ಕಟ್ಟಬೇಕೆಂದು ಹೇಳುತ್ತೀರಿ? ಅದಕ್ಕೋ ಜನ ಬೀದಿಗಿಳಿಯಬೇಕಾಗಿ ಬಂತು; ಚಳುವಳಿ ಮಾಡಬೇಕಾಗಿ ಬಂತು. ಆಗ ಅದಕ್ಕೆ ಯಾರೂ ಸಹ ಸೊಪ್ಪು ಹಾಕಲಿಲ್ಲ. ಆದರೆ ಬೆಂಗಳೂರಿನಲ್ಲಿ ಸ್ಥಾಪಿಸಿದಂತಹ ಕೆಂಪೇಗೌಡ

ಸ್ಮಾರಕವನ್ನು ವಿಕೃತಗೊಳಿಸತಕ್ಕ ಕೆಲಸ ಈ ನಿಮಿಷದವರೆಗೂ ಕೂಡ ನಡೆಯುತ್ತಿದೆ. ನೀವು ಅಯೋಧ್ಯೆಯಲ್ಲಿ ದೇವಸ್ಥಾನವನ್ನು ಕಟ್ಟತಕ್ಕವರು, ಆದರೆ ಇಲ್ಲಿ ನಡೆಯುತಕ್ಕ ಕೃತ್ಯಕ್ಕೆ ಯಾರು ಕಾರಣ ಕರ್ತರು. ನೀವು ಏನು ಮಾಡಿದ್ದೀರಿ ಅಲ್ಲಿ ರಕ್ಷಣೆ ಮಾಡಿದ್ದೀರಾ? ಏನು ಮಾಡಿದ್ದೀರಿ ಹೇಳಿ; ಅನೇಕ ಹಳ್ಳಿಗಳಲ್ಲಿ ಇವತ್ತು ದೇವಸ್ಥಾನಗಳಿವೆ ನನ್ನ ಕ್ಷೇತ್ರದಲ್ಲಿ ನಡೆದಂತಹ ದೊಡ್ಡ ಕೃತ್ಯ ಏನೆಂದರೆ ಅಲ್ಲಿ ವಿಗ್ರಹಗಳನ್ನು ಒಡೆದರು ಆಗ ದೊಡ್ಡ ಬಂದ್ ಆಯಿತು ಮೆರವಣಿಗೆ ಎಲ್ಲಾ ಆಯಿತು, ಮುಸ್ಲಿಮರು ಯಾರೋ ಮಾಡಿದ್ದಾರೆ, ಎಂದು ಹೇಳಿದರು. ಕೊನೆಗೆ ನಾನು ನನ್ನ ಕ್ಷೇತ್ರವಾದ್ದರಿಂದ ನಾನು ಅಲ್ಲಿಗೆ ಹೋದೆ. ನನ್ನ ಕ್ಷೇತ್ರದ ಬಸವರಿ ಎಂಬ ಗ್ರಾಮದಲ್ಲಿ ಮಾರ್ಕಂಡೇಯಾ ದೇವಸ್ಥಾನ ಇದೆ. ಅದು ಸುಮಾರು ೧೧೦೦ ವರ್ಷದ ಹಿಂದಿನ ದೇವಸ್ಥಾನ. ಅಲ್ಲಿರುವ ಜನರನ್ನು ತಣ್ಣಗೆ ಮಾಡಿ ದೇವಸ್ಥಾನದ ಅಭಿವೃದ್ಧಿಗೆ ಒಂದು ಸಮಿತಿ ಮಾಡಿ ಸುಮಾರು ೭–೮ ಲಕ್ಷ ರೂಪಾಯಿಯನ್ನು ಸಾರ್ವಜನಿಕರಿಂದ ವಸೂಲು ಮಾಡಿದೆ ಆ ದೇವಸ್ಥಾನಕ್ಕೆ ಗೋಪುರ ಇರಲಿಲ್ಲ; ಗೋಪುರ ಕೆಲಸವನ್ನು ಕಟ್ಟಿಸುವ ಕೆಲಸ ಆಯಿತು. ಯಾವ ವಿಗ್ರಹಗಳು ಹಾನಿಯಾಗಿದ್ದವು ಆ ವಿಗ್ರಹಗಳನ್ನು ಸರಿಪಡಿಸುವ ಕೆಲಸ ಆಯಿತು. ಹೊಸದಾಗಿ ವಿಗ್ರಹವನ್ನು ಸ್ಥಾಪಿಸುವ ಕೆಲಸವೂ ಕೂಡ ಆಗಿದೆ. ಆದರೆ ಯಾರು ಚಳುವಳಿ ಮಾಡಿದರು ಯಾರು ಬಂದ್ ಮಾಡಿದರು, ಅವರ ಐದು ಪೈಸೆ ಸಹ ಕೊಡಲಿಲ್ಲ. ಒಂದು ದಿವಸ ಕೂಡ ದೇವಸ್ಥಾನದ ಕೆಲಸಕ್ಕೆ ಸಹಾಯ ಮಾಡೋಣವೆಂದು ಇವರು ಯಾರೂ ಬರಲಿಲ್ಲ. ಆದರೆ ಈ ಚಳುವಳಿಯಲ್ಲಿ ಭಾಗ ವಹಿಸಲು ಯಾರು ಪ್ರಯತ್ನ ಪಡಲಿಲ್ಲವೋ ಅವರು ಮುಂದೆ ಬಂದಿದ್ದರಿಂದ ಸುಮಾರು ೭–೯ ಲಕ್ಷ ರೂಪಾಯಿ ಇಪ್ಪತ್ತಿನ ದಿವಸ ವಸೂಲಾಯಿತು. ದೇವಸ್ಥಾನದ ಕೆಲಸವೂ ಆಯಿತು. ಆದರೆ ನೀವು ಹಳ್ಳಿಯಲ್ಲಿರುವದೇವಸ್ಥಾನವನ್ನು ಬಿಟ್ಟು ಅಲ್ಲಿರತಕ್ಕ ದೇವಸ್ಥಾನದ ಬಗ್ಗೆ ಇಡೀ ದೇಶಕ್ಕೆ ಬೆಂಕಿ ಇಡುವಂತಹ ಕೆಲಸವನ್ನು ನೀವು ಮಾಡಲು ಹೊರಟಿದ್ದೀರಿ,

೪.೪೦ ಪಿ.ಎಂ.

ಅಧ್ಯಕ್ಷರೆ, ಮಾನ್ಯ ಸ್ನೇಹಿತರಾದಂಥ ಶ್ರೀಮಾನ್ ತಿಮ್ಮಪ್ಪನವರು ನಿನ್ನೆ ಒಂದು ಮಾತನ್ನು ಹೇಳಿದರು ಈಗ ಅವರು ಇಲ್ಲ. ಆಯಿತು ಸ್ವಾಮಿ, ನಾವು ಹಿಂದೂಗಳು. ನಾನು ಬಹಳ ಹೆಮ್ಮೆಯಿಂದ ಈ ಮಾತನ್ನು ಹೇಳುತ್ತೇನೆ, ನಾನು ಹಿಂದೂ. ಹಿಂದೂಗಳು ನಾವು ನಿಜ. ಹಿಂದೂಗಳನ್ನು ನೀವೆಲ್ಲರೂ ಸರಿಸಮನಾಗಿ ನೋಡುತ್ತಿದ್ದೀರಾ ? ಹರಿಜನರನ್ನೆಲ್ಲಾ ಹರಿಜನರನ್ನಾಗಿಯೇ ಇಟ್ಟಿರಬೇಕು. ಎಂದು ಒಬ್ಬ ಧರ್ಮಗುರು ಸಹ ಹೇಳಲಿಲ್ಲ ; ಅವರು ಅಸ್ಪೃಶ್ಯರು ಅವರನ್ನು ಮುಟ್ಟಬಾರದು ಎಂದು ಈ ೨೦ನೇ ಶತಮಾನದಲ್ಲಿ ಸಹ ಹೇಳಲಿಲ್ಲವೇ ? ಹಿಂದೂಗಳೆಲ್ಲರೂ ಒಂದೇ ಎನ್ನತಕ್ಕ ಮಾತನ್ನು ಹೇಳತಕ್ಕವ ತಾವು ಏನು ಅವರ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ. ಅದೂ ಒಂದು ಧರ್ಮ ಸಂಸ್ಥೆಯಲ್ಲಿರತಕ್ಕವರು, ಗುರು ಎನಿಸಿಕೊಂಡಿರುವವರು ಈ ಮಾತನ್ನು ಹೇಳಿದಾಗ, ಬಹಿರಂಗವಾಗಿ ಈ ಮಾತನ್ನು ಹೇಳಿದಾಗ, ಕಾನೂನಿಗೆ ವಿರೋಧವಾಗಿ ಈ ಮಾತನ್ನು ಹೇಳಿದಾಗ ಯಾವ ವಿಚಾರದಲ್ಲಿ ಮಹಾತ್ಮ ಗಾಂಧಿಯವರು ಅವರ ಜೀವನಪರ್ಯಂತ ಶ್ರಮಿಸಿದರೋ ಅದಕ್ಕೆ ವಿರೋಧವಾದಂಥ ಮಾತನ್ನು ಅವರು ಹೇಳಿದಾಗ ಎಲ್ಲಿ ಹೋಗಿತ್ತು ನಿಮ್ಮ ಹಿಂದೂ ಭಾವನೆ. ಹಾಗಾದರೆ ಹರಿಜನರು ಹಿಂದೂಗಳಲ್ಲವೇ ? ಈ ಸಮಾಜದಲ್ಲಿ ತಲೆತಲಾಂತರಗಳಿಂದ ತುಳಿತಕ್ಕೆ ಸಿಕ್ಕಿರತಕ್ಕಂಥ ವರ್ಗ ಅಲ್ಲವೇ ಅದು.

ಪ್ರೊ. ಎಂ. ಡಿ. ನಂಜುಂಡಸ್ವಾಮಿ .—ಮಾನ್ಯ ಬೈರೇಗೌಡರ ಮಾತು ಕೇಳುತ್ತಾ, ಕೇಳುತ್ತಾ ಹಿಂದೂಗಳು ಎನ್ನುವುದರ ಬಗ್ಗೆ ಬೈರೇಗೌಡರು ಸರಿಯಾಗಿ ಅರ್ಥಮಾಡಿಕೊಂಡಿಲ್ಲ ಎಂದು ಹೇಳಬೇಕಾಗಿದೆ. ನಾನು ಬಹಳ ಹೆಮ್ಮೆಯಿಂದ ಹಿಂದೂ ಎಂದು ಹೇಳಿಕೊಳ್ಳುತ್ತೇನೆಂದು ಹೇಳಿದರು. ಆದರೆ ಹಿಂದೂಧರ್ಮ ಎಂದು ಏನಿದೆ, ಏನು ಕರೆಯುತ್ತೇವೆ, ಅದರ ಬಗ್ಗೆ ಹೇಳಬೇಕಾದರೆ ಬೈರೇಗೌಡರು ಶೂದ್ರ ಎಂದು ಹೇಳುತ್ತಾರೆ. ಹುಟ್ಟುತ್ತಲೇ ಬೈರೇಗೌಡರು ಕೀಳು ಎಂದು ಹೇಳುತ್ತಾರೆ. ಆ ವಿಚಾರಕ್ಕೆ ಧರ್ಮದ ಅಂತಸ್ತು ಕೊಡುತ್ತೀರಾ ಎಂದು ಬೈರೇಗೌಡರಿಗೆ ನಾನು ಕೇಳುತ್ತಿದ್ದೇನೆ. ಹರಿಜನರು ಎಷ್ಟನೇ ಸ್ಥಾನಕ್ಕೆ ಬರುತ್ತಾರೆಂದು ಗೊತ್ತಿಲ್ಲ. ಪಂಚಮರು ಎಂದು ಕರೆಯುತ್ತಾರೆ. ಐದನೇ ಸ್ಥಾನ ಅವರದು. ಅನಂತರ ನಮ್ಮ ಮಹಿಳೆಯರು ಅವರು ಆರನೇ ಸ್ಥಾನ. ಮಹಿಳೆಯರು ಶೂದ್ರಾತಿ ಶೂದ್ರರು. ಈ ವಿಚಾರಕ್ಕೆ ಧರ್ಮದ ಅಂತಸ್ತು ಕೊಟ್ಟು ನಾವು ಮಾತನಾಡುತ್ತಿದ್ದೇವೆ. ಅದು ಧರ್ಮವೇ ಅಲ್ಲ. ಧರ್ಮದ ಅಂತಸ್ತು ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ ನಾನು ಹಿಂದೂ ಎಂದು ಕರೆದು ಕೊಳ್ಳುವುದಿಲ್ಲ. ನಾನು ಹಿಂದೂ ಅಲ್ಲ. ನಾವು ಮತೀಯ ಗಲಭೆಗಳನ್ನು ಕೊನೆಗೊಳಿಸಬೇಕೆಂದು ಆಸೆ ಇದ್ದರೆ, ಈ ದೇಶದಲ್ಲಿ ಬಹುಸಂಖ್ಯಾತರು ಏನಿದ್ದಾರೆ, ಇವರು ಕೆಟ್ಟ ವಿಚಾರವನ್ನು ಹೊಂದಿರುವಂಥ ಹಿಂದೂ ಧರ್ಮ ಎಂದು ನಾವು ಏನು ಕರೆಯುತ್ತೇವೆ ಅದನ್ನು

ತಿರಸ್ಕರಿಸುವಂಥ ಒಂದು ಚಳುವಳಿಯನ್ನು ಪಕ್ಷಾತೀತವಾಗಿ ನಾವು ಕೈಗೊಳ್ಳಬೇಕು; ಆಗ ಇದು ನಿಲ್ಲುತ್ತದೆ.

ಶ್ರೀ ಕೆ. ಎಸ್. ಈಶ್ವರಪ್ಪ.—ಅಧ್ಯಕ್ಷರೆ, ಅವರು ಹಿಂದೂ ಧರ್ಮದ ಬಗ್ಗೆ, ಅವರು ಅವಹೇಳನ ಮಾತು ಹೇಳುವುದು ನಾನು ಸಹಿಸುವುದಿಲ್ಲ. ಇಲ್ಲಿ ಯಾವ ವಿಷಯದ ಬಗ್ಗೆ ಚರ್ಚೆ ನಡೆಯಬೇಕು. ಹಿಂದೂ ಧರ್ಮದ ಬಗ್ಗೆ ಹೇಳುವ ಅವಶ್ಯಕತೆ ಇಲ್ಲ. ಮಾನ್ಯ ಯಡಿಯೂರಪ್ಪನವರು ಮಾತನಾಡುವಾಗ ಕೋಮು ಗಲಭೆ ಬಗ್ಗೆ ಮಾತ್ರ ಮಾತನಾಡಬೇಕೆಂದು ಹೇಳಿದರು. ಈಗ ಅವರು ಹಿರಿಯ ಸದಸ್ಯರಿದ್ದಾರೆ. ಅವರು ಹಿಂದೂ ಧರ್ಮದ ಬಗ್ಗೆ ಅವಹೇಳನಮಾತು ಹೇಳುವುದು ನಾನು ಸಹಿಸುವುದಿಲ್ಲ. ಮಾನ್ಯ ಅಧ್ಯಕ್ಷರು, ದಯಮಾಡಿ ಕೋಮುಗಲಭೆ ಬಗ್ಗೆ ಮಾತ್ರ ಮಾತನಾಡಲಿಕ್ಕೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ನಂಜುಂಡಸ್ವಾಮಿ ಅವರಿಗೆ ಮಾತನಾಡುವಂಥ ಪೂರ್ಣ ಸ್ವಾತಂತ್ರ್ಯ ಇದೆ; ತಾವು ಅವರಿಗೆ ಅನುಮತಿಯನ್ನು ಕೊಟ್ಟಿದ್ದೀರಿ. ಅವರು ತಮ್ಮ ಅಭಿಪ್ರಾಯವನ್ನು ಹೇಳಿದ್ದಾರೆ. ಈಗ ನಾನು ಹೇಳುವಂತಹದ್ದು, ಮಾನ್ಯ ಸದಸ್ಯರಾದ ಈಶ್ವರಪ್ಪನವರ ಮನಸ್ಸಿನ ಭಾವನೆ ಏನಿದೆ ಅಂದರೆ ತಾವು ಪ್ರಾರಂಭದಲ್ಲಿ ಆದೇಶ ಕೊಟ್ಟಂತೆ ಇದರ ಉದ್ದೇಶ ಏನಿದೆ, ಆದರಂತೆ ಮಾತನಾಡಿ ಎಂದು ಹೇಳಿದಿರಿ. ಅನೇಕ ಸಂದರ್ಭದಲ್ಲಿ ನಾನು ಮಾತನಾಡಿದ್ದೇನೆ. ಅವರು ಮಾತನಾಡಿದ್ದಾರೆ. ಆದರೆ ಮಾತನಾಡುವಾಗ ನಾವೆಲ್ಲಾ ಹಿಂದೂಗಳಲ್ಲಾ, ಹಿಂದೂ ಧರ್ಮದ ವಿರುದ್ಧ ಹೋರಾಟ ಮಾಡಬೇಕಾಗುತ್ತದೆ ಎಂದು ಹೇಳಿ ಈ ರೀತಿಯಲ್ಲಿ ಜನರನ್ನು ಕೆರಳಿಸುವಂಥ ಮಾತನಾಡುವುದರಿಂದ, ನಾಳೆ ಶಾಂತಿ ಸುವ್ಯವಸ್ಥೆ ಕಾಪಾಡಲಿಕ್ಕೆ ಆಗುವುದಿಲ್ಲ. ಅದರಿಂದಾಗುವಂಥ ಪರಿಣಾಮಕ್ಕೆ ಈ ಸದನ ಜವಾಬ್ದಾರಿಯಾಗುತ್ತದೆ. ಮಾನ್ಯ ನಂಜುಂಡಸ್ವಾಮಿಯವರು ಹಿರಿಯರು ಇದ್ದಾರೆ. ಸಾಕಷ್ಟು ವಿಚಾರಗಳನ್ನು ತಿಳಿದುಕೊಂಡಿದ್ದಾರೆ. ಅವರು ತಮ್ಮ ಅಭಿಪ್ರಾಯವನ್ನು ಹೇಳುವುದಕ್ಕೆ ಸ್ವಾತಂತ್ರ್ಯ ಇದೆ. ಆದರೆ ಈ ಸಂದರ್ಭದಲ್ಲಿ ಹಿಂದೂಗಳನ್ನು ಕೆಣಕುವಂಥ ಮಾತನಾಡಿದರೆ ಸಹಜವಾಗಿ ರಾಜ್ಯದಲ್ಲಿ ಶಾಂತಿ–ಸುವ್ಯವಸ್ಥೆ ಕಾಪಾಡುವುದಕ್ಕೆ ಆಗುವುದಿಲ್ಲ. ಒಂದು ವೇಳೆ ಇದರ ಬಗ್ಗೆಯೇ ಚರ್ಚೆಯಾಗಬೇಕು ಅಂದರೆ ನಾವು ಸಹಾ ಚರ್ಚೆಮಾಡುತ್ತೇವೆ.

ಪ್ರೊ. ಎಂ. ಡಿ. ನಂಜುಂಡಸ್ವಾಮಿ.—ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರಾದ ಬೈರೇಗೌಡರು ಸ್ವಲ್ಪ ಕಾಲಾವಕಾಶವನ್ನು ಕೊಟ್ಟರೆ ಸವಿಸ್ತಾರವಾಗಿ ಮಾತನಾಡಬಹುದು. ನನಗೆ ಮಾತನಾಡುವ ಇಚ್ಛೆ ಇರಲಿಲ್ಲ. ಅಲ್ಲದೆ ನಾನು ನನ್ನ ಹೆಸರನ್ನೂ ಕೂಡ ಕಳುಹಿಸಿಲ್ಲ. ರೂಲ್ಸ್ ನಿಯಮದ ಪ್ರಕಾರ ಯಾರು ತಮ್ಮ ಹೆಸರನ್ನು ಕಳುಹಿಸಿಕೊಡುತ್ತಾರೆ, ಅವರು ಮಾತ್ರ ಮಾತನಾಡಲು ಅವಕಾಶ ಇದೆ. ಆದರೆ ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳಲೇಬೇಕಾಗಿದೆ. ನಾವು ಧರ್ಮ ಅಂದರೆ ಏನು ಅರ್ಥ ಮಾಡಿಕೊಂಡಿದ್ದೇವೆ, ಅಲ್ಲಿ ಒಂದು ಮೂಲ ದೋಷ ಇದೆ. ನಮ್ಮ ಜನಜೀವನದಲ್ಲಿ ಧರ್ಮವನ್ನು ನಾವು ಎರಡು ರೀತಿಯಲ್ಲಿ ನೋಡಬೇಕು. ಮೊದಲನೆಯದು ಧರ್ಮವನ್ನು ಒಂದು ವೈಯಕ್ತಿಕ ಚಟುವಟಿಕೆಯಾಗಿ ಮತ್ತು ಧರ್ಮ ಒಂದು ಗುಂಪು ಚಟುವಟಿಕೆಯಾಗಿ, —religion as an individual activity, and religion as a group activity. ಇಂದಿನ ಕೋಮು ಗಲಭೆಗೆ ಕಾರಣ ನಾವು ಈ ಧರ್ಮವನ್ನು ಎರಡನೆಯ ರೀತಿಯಾಗಿ ಅಭ್ಯಾಸ ಮಾಡುವುದಕ್ಕೆ ಪ್ರಾರಂಭ ಮಾಡಿದಾಗಿನಿಂದ ಪ್ರಾರಂಭವಾಗಿದೆ. ಆ ಧರ್ಮವನ್ನು ನಾನು ವಿಶ್ಲೇಷಣೆ ಮಾಡುತ್ತಾ ಬಂದಿರುವುದು. ನನಗಿಂತಲೂ ಮುಂಚಿತವಾಗಿ ಮಾತನಾಡಿದಂಥ ಹಲವಾರು ಮಾನ್ಯ ಸದಸ್ಯರು ವಿಶ್ಲೇಷಣೆ ಮಾಡಿದ್ದಾರೆ. Yesterday's religions are a part of yester day's politics and to-days politics is to-day's religion. ಇದನ್ನು ನಾವು ಒಪ್ಪಬೇಕು. ಇದನ್ನು ಒಪ್ಪಿ ನಾವು ನಮ್ಮ ನಡತೆಯನ್ನು ತಿದ್ದಿಕೊಂಡು ನಡೆದರೆ ಆಗ ಈ ಭಾರತದಲ್ಲಿ ಕೋಮು ಗಲಭೆಗೆ ಅವಕಾಶವೇ ಇರುವುದಿಲ್ಲ. ಇವತ್ತು ಭಾರತದಲ್ಲಿ Whatever we have accepted as to-day's politics, it should become to-day's religion. ಆಗ ಯಾವ ಗೊಂದಲವೂ ಬರುವುದಿಲ್ಲ. What is our religion to-day in India that gets the status of religion in to-day's politics in to-day's India? ನಾವು ಏನೇನು ಮೌಲ್ಯಗಳನ್ನು ನಂಬಿ ಒಂದು ಚೌಕಟ್ಟನ್ನು ಹಾಕಿಕೊಂಡಿದ್ದೇವೆ ಅದನ್ನು ನಾವುಸಂವಿಧಾನ ಎಂದು ಕರೆಯುತ್ತೇವೆ. Buddha's movement was a political movement at that time. The Jain movement was a political

movement. Buddha's movement was a political movement. But they were all group activities. But, religion does not contemplate religious activity. At the individual level, it is an effort of the individual to tie his religion with the creater as an individual one. ದೇವರಲ್ಲಿ ನಂಬಿಕೆ ಇದ್ದರೆ ಅದು ನನ್ನ ವೈಯುಕ್ತಿಕ ಪ್ರಯತ್ನ, ನನ್ನ ಸೃಷ್ಟಿಕರ್ತನ ಜೊತೆ ನನ್ನ ಸಂಬಂಧ ಏನಿದೆ ಎಂಬುದನ್ನು ಗುರ್ತಿಸಿಕೊಳ್ಳತಕ್ಕ ಒಂದು ಪ್ರಯತ್ನಕ್ಕೆ ನಾವು ಧರ್ಮ ಎಂದು ಕರೆಯುತ್ತೇವೆ, ಈ ರಥಯಾತ್ರೆ, ಇತ್ಯಾದಿಗಳು. There are religious activities. But, these are all stupid activities. ನಮ್ಮ ದೇಶದ ವಾತಾವರಣವನ್ನು ಕಲುಷಿತಗೊಳಿಸುವ ಒಂದು ಗುಂಪು ಚಟುವಟಿಕೆಗೆ ನಮ್ಮ ಸಂವಿಧಾನದಲ್ಲಿ ನಾವು ಅವಕಾಶವನ್ನು ಕೊಟ್ಟಿಲ್ಲ. We have freedom of religion. Yes, but it is an individual freedom, but not a group freedom ಈ ವಾದವನ್ನು ತಾವು ಒಪ್ಪುವುದಾದರೆ ಈ ಸದನ ಒಂದು ನಿರ್ಣಯವನ್ನು ಮಾಡಬೇಕು. ಯಾರು ಈ ಗುಂಪು ಚಟುವಟಿಕೆಯಲ್ಲಿ, ಧಾರ್ಮಿಕ ಚಟುವಟಿಕೆಯಲ್ಲಿ ತೊಡಗುತ್ತಾರೆ, ಆ ಮೂಲಕ ಈ ದೇಶದ ವಾತಾವರಣವನ್ನು ಕಲುಷಿತಗೊಳಿಸುತ್ತಿದ್ದಾರೆ ಅಂತಹ ಸಂಸ್ಥೆಗಳನ್ನು ಬಹಿಷ್ಕರಿಸಬೇಕು. ಅಂಥ ಒಂದು ನಿರ್ಣಯವನ್ನು ತಾವುಗಳು ಮಂಡಿಸಿದರೆ ನಮ್ಮ ಕರ್ನಾಟಕ ರಾಜ್ಯ ಬೇರೆ ರಾಜ್ಯಗಳಿಗೆ ಒಂದು ಮಾರ್ಗದರ್ಶನವನ್ನು ಮಾಡಿದಂತಾಗುತ್ತದೆ. ಇನ್ನೇನೂ ನಾನು ಹೆಚ್ಚಿಗೆ ಹೇಳುವುದಿಲ್ಲ; ನಮಸ್ಕಾರ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ, ಸ್ವಾಮಿ ವಿವೇಕಾನಂದರು ಒಂದು ಮಾತನ್ನು ಹೇಳಿದ್ದಾರೆ, ನಮ್ಮ ದೇಶದ ಜನರ ಒಗ್ಗಟ್ಟು ಇರತಕ್ಕದ್ದು ಸೈನಿಕ ಶಕ್ತಿಯಲ್ಲಿಲ್ಲ, ರಾಜಕೀಯ ಶಕ್ತಿಯಲ್ಲಿಲ್ಲ, ಕೇವಲ ಧರ್ಮದಲ್ಲಿ ಎಂದು ಹೇಳಿದ್ದಾರೆ. ಇವೊತ್ತು ಹಿಂದೂ ಧರ್ಮ ಎಂಬುದು ಕೇವಲ ಒಂದು ಜಾತಿ ಅಲ್ಲ, ಈ ದೇಶದಲ್ಲಿ ವಾಸಮಾಡತಕ್ಕ ಹಿಂದೂ, ಕ್ರಿಶ್ಚಿಯನ್, ಮುಸ್ಲಿಂ, ಎಲ್ಲರೂ ಸಹ ಈ ರೀತಿಯ ಭಾವನೆಯನ್ನು ಹೊಂದಬೇಕೆಂಬ ವಿಶಾಲ ಅರ್ಥದಲ್ಲಿ ಈ ಶಬ್ದ ಉಪಯೋಗವಾಗುತ್ತಿದೆಯೇ ಹೊರತು ಕೇವಲ ಸ್ವಾರ್ಥಕ್ಕೋಸ್ಕರ ಒಡೆದು ಒಡೆದು ಬೇರೆ ಅಪಾರ್ಥ ಮಾಡುವುದಕ್ಕೋಸ್ಕರ ಹೊರಟಿರತಕ್ಕದ್ದು ಈ ದೇಶದ ಒಂದು ದುರ್ದೈವ. ಯಾರು ವಿದ್ಯಾವಂತರಿದ್ದಾರೆ ಬುದ್ಧಿವಂತರಿದ್ದಾರೆ ಅವರು ಈ ರೀತಿಯ ವಿಶ್ಲೇಷಣೆಯನ್ನು ಮಾಡಿಕೊಂಡು ಹೋಗುತ್ತಿರುವುದರಿಂದಲೇ ಇವತ್ತು ಈ ದೇಶ ವಿನಾಶದತ್ತ ತಿರುಗಿ ಈ ಪರಿಸ್ಥಿತಿಗೆ ನಾವು ಬಂದು ತಲುಪಿರತಕ್ಕದ್ದು: ಈಗ ನಾವು ಹೇಳುತ್ತಿರುವುದರಲ್ಲಿ ಯಾವುದು ಸರಿ, ಯಾವುದು ತಪ್ಪು ಎಂಬುದನ್ನು ಜನರೇ ತೀರ್ಮಾನ ಮಾಡುತ್ತಾರೆ. ಈಗಾಗಲೇ ಜನ ತೀರ್ಮಾನ ಮಾಡುತ್ತಿದ್ದಾರೆ.

ಒಬ್ಬರು ಮಾನ್ಯ ಸದಸ್ಯರು.—ಇದೇ ವಿಚಾರದಲ್ಲಿ ಡಾ. ರಾಧಾಕೃಷ್ಣ ಅವರು ಏನು ಹೇಳಿದ್ದಾರೆ ?

ಶ್ರೀ ಕೆ. ಹೆಚ್. ಪಾಟೀಲ್,—ಆವರು ಹೇಳುವಾಗ ನೀವು ಇರಲಿಲ್ಲ. ಸ್ವಾಮಿ ವಿವೇಕಾನಂದ ಅವರು ಸಹೋದರ ಸಹೋದರಿಯರೇ ಎಂದು ಹೇಳಿ ಪ್ರಾರಂಭ ಮಾಡಿದಾಗ ಅವರು ಇತಿಹಾಸದಲ್ಲಿ ಬರೆಯುತ್ತಾರೆ. That is the day on which he became popular to the whole world......ಏತಕ್ಕೆಂದರೆ ಅವರು ಮಾನವಧರ್ಮವೆಂದು ಹೇಳಿದರೆ ಹೊರತು ಹಿಂದೂ ಧರ್ಮವೆಂದು ಹೇಳಲಿಲ್ಲ; That must be known to all.

ಶ್ರೀ ಬಿ. ಎಸ್. ಯಡಿಯೂರಪ್ಪ.—ಹಿಂದು ಧರ್ಮ ಉಳಿದಾಗ ಮಾತ್ರ ಈ ದೇಶ ಉಳಿಯುತ್ತದೆಂದು ಸ್ವಾಮಿ ವಿವೇಕಾನಂದರು ಸಾವಿರ ಸಲ ಹೇಳಿರುವಂಥ ಪುಸ್ತಕವನ್ನು ತಂದು ನಿಮ್ಮ ಹತ್ತಿರ ಇಡುತ್ತೇನೆ.

ಶ್ರೀ ಕೆ. ಎಸ್, ಈಶ್ವರಪ್ಪ.—ಪ್ರೊ. ನಂಜುಂಡಸ್ವಾಮಿಯವರು ಹೇಳಿದರು ಈ ಸಂಸ್ಥೆಯನ್ನು ಬಹಿಷ್ಕಾರ ಮಾಡಬೇಕೆಂದು, ನಮ್ಮ ಸಂಸ್ಥೆಯನ್ನು ಯಾರು ಯಾರು ಬಹಿಷ್ಕಾರ ಮಾಡಿದರೋ ಅವರೆಲ್ಲಾ ನಿರ್ನಾಮವಾಗಿ ಹೋಗಿದ್ದಾರೆ.

ಶ್ರೀ ಸಿ. ಬೈರೇಗೌಡ.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ನಂಜುಂಡಸ್ವಾಮಿಯವರು ಬಹಳ ಗಹನವಾದಂಥ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅವರು ಪ್ರೊಫೆಸರ್ ನಾನು ಸಾಮಾನ್ಯ ರೈತನ ಮಗ. ಅವರ ಮಟ್ಟಕ್ಕೆ ವಿಷಯಗಳನ್ನು ತಿಳಿದುಕೊಳ್ಳುವುದಕ್ಕೆ ಅವಕಾಶವೂ ನನಗೆ ಒದಗಲಿಲ್ಲ. ನಾನು ಹಳ್ಳಿಯಲ್ಲಿ ಹುಟ್ಟಿ ಬೆಳೆದಿರತಕ್ಕಂಥವನು. ಆಮೇಲೂ ಕೂಡ ಆ ರೀತಿ ಯೋಚನೆ ಮಾಡಲು ನನಗೆ ಅವಕಾಶ ದೊರಕಲಿಲ್ಲ. ಆದರೆ ವಾಸ್ತವವಾಗಿ ನನ್ನ ಅಕ್ಕಪಕ್ಕದಲ್ಲಿ ನನ್ನ ಪ್ರತಿನಿತ್ಯದ ಜೀವನದಲ್ಲಿ ಏನೇನು ನಾನು ಕಾಣುತ್ತಿದ್ದೇನೆ ಎನ್ನುವ ಚಿತ್ರವನ್ನು ಮಾತ್ರ ನನಗೆ ತಿಳಿದಮಟ್ಟಕ್ಕೆ ಹೇಳುವುದಕ್ಕೆ

ನಾನು ಪ್ರಯತ್ನ ಪಡುತ್ತೇನೆ. ನಾನು ಮಾನ್ಯ ಪ್ರೊಫೆಸರ್ ನಂಜುಂಡಸ್ವಾಮಿಯವರಿಗೆ ತಮ್ಮ ಮೂಲಕ ಧನ್ಯವಾದಗಳನ್ನರ್ಪಿಸುತ್ತೇನೆ. ಏತಕ್ಕೆಂದರೆ ಅವರು ಬಹಳ ಗಹನವಾದ ಹಾಗೂ ಮೂಲ ಭೂತವಾದ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಆದ್ದರಿಂದ ಮತ್ತೊಮ್ಮೆ ಅವರಿಗೆ ಧನ್ಯವಾದ ಗಳನ್ನರ್ಪಿಸುತ್ತೇನೆ. ಮಾನ್ಯ ಅಧ್ಯಕ್ಷರೇ, ನಾನು ಹಿಂದೂ ಎಂದು ವಿಷಯ ಹೇಳುವಾಗ......

ಅಧ್ಯಕ್ಷರು.—ಈಗ ಬೇಗ ಚರ್ಚೆ ಮುಗಿಸಬೇಕಾಗಿದೆ. ಏತಕ್ಕೆಂದರೆ ಬಹಳ ಜನ ಮಾನ್ಯ ಸದಸ್ಯರು ಈ ಚರ್ಚೆಯಲ್ಲಿ ಭಾಗವಹಿಸಬೇಕೆಂದು ಅವಕಾಶವನ್ನು ಕೇಳುತ್ತಿದ್ದಾರೆ. ಆದ್ದರಿಂದ ತಮ್ಮ ಭಾಷಣವನ್ನು ಬೇಗ ಮುಗಿಸಿ.

ಶ್ರೀ ಸಿ. ಬೈರೇಗೌಡ.—ನಾನು ಹಿಂದೂ ಎಂದು ಏತಕ್ಕೆ ಹೇಳಿದೆ ಎಂದರೆ......

ಅಧ್ಯಕ್ಷರು.—ಮಾನ್ಯ ಬೈರೇಗೌಡರೇ, ಹಿಂದೂ ಧರ್ಮದ ಬಗ್ಗೆ ವಿಶ್ಲೇಷಣೆ ಮಾಡುವುದಾದರೆ ಎರಡು ದಿವಸಗಳಲ್ಲಿ ಈ ಚರ್ಚೆಯನ್ನು ಮುಗಿಸುವುದಕ್ಕಾಗುವುದಿಲ್ಲ, ಏತಕ್ಕೆಂದರೆ ನಮ್ಮ ಪಾರ್ಲಿಮೆಂಟರಿ ಸ್ಟಡೀಸ್‌ನಲ್ಲಿ ಇದನ್ನು ಬೇಕಾದರೆ ಒಂದು ಸೆಮಿನಾರ್ ಮಾಡೋಣ.

ಶ್ರೀ ಸಿ. ಬೈರೇಗೌಡ.—ಪ್ರೊಫೆಸರ್ ನಂಜುಂಡಸ್ವಾಮಿಯವರು ಹೇಳಿದ್ದರಿಂದ ಹೇಳಬೇಕಾಗಿದೆ ನನ್ನ ಹೆಸರನ್ನು ಮಾನ್ಯ ಸದಸ್ಯರು ಹೇಳಿದ್ದರಿಂದ ಹೇಳಬೇಕಾಗಿದೆ. ನನ್ನ ತಂದೆತಾಯಿಗಳು ಹುಟ್ಟಿದಾಗ ನೋಡಪ್ಪ. ಈ ರೀತಿ ಮಾಡಬೇಕು. ಬೆಳಿಗ್ಗೆ ಎದ್ದರೆ ಮುಖ ತೊಳೆದುಕೊಳ್ಳಬೇಕು, ದೇವರಿಗೆ ನಮಸ್ಕಾರ ಮಾಡಬೇಕು; ಬಟ್ಟು ಇಡಬೇಕು, ವಿಭೂತಿ ಹಚ್ಚಿಕೊಳ್ಳಬೇಕು ಎಂದೆಲ್ಲ ಹೇಳಿದಾರೆ. ಅದಕ್ಕಿಂತ ಹೆಚ್ಚಿಗೆ ನಾನು ತಿಳಿದುಕೊಳ್ಳುವುದಕ್ಕೆ ಅವಕಾಶ ಸಿಗಲಿಲ್ಲ. ಆದರೆ ವಾಸ್ತವವಾಗಿ ಇವತ್ತಿನ ದಿವಸ ಆಸುಪಾಸಿನಲ್ಲಿ ಮತ್ತು ನನ್ನ ಸುತ್ತಮುತ್ತಲೂ ನಡೆಯುತ್ತಿರತಕ್ಕಂಥದ್ದು ಏನು? ಇವತ್ತಿನ ದಿವಸ ದೇವರ ಬಗ್ಗೆ ಹೇಳಬೇಕೆಂದರೆ ನಮ್ಮಲ್ಲಿ ಎಷ್ಟೋ ಸಂಖ್ಯೆಯಲ್ಲಿ ದೇವರುಗಳಿದ್ದಾರೆ. ಅದು ಎಷ್ಟು ಸಂಖ್ಯೆ ಎಂಬುದು ನನಗಂತೂ ಗೊತ್ತಿಲ್ಲ. ೩೩೦ ಕೋಟಿ ಇರಬಹುದು. ನಮ್ಮ ಜನಸಂಖ್ಯೆ ಎಷ್ಟಿದೆ ಎಂದರೆ ೭೦ ಕೋಟಿ. ಈ ಸಂಖ್ಯೆ ಬಗ್ಗೆ ಗೊಂದಲ ಆಗುವುದು ಬೇಡ. ಆದರೆ ನಾವು ನೋಡುತ್ತಿರುವು ದೇನೆಂದರೆ ಇವತ್ತಿನದಿವಸ ದೇವರುಗಳನ್ನು ಸೃಷ್ಟಿ ಮಾಡಿರತಕ್ಕಂಥದ್ದರಲ್ಲೂ ಕೂಡ ಈ ಜಾತಿವಾದ ಎಲ್ಲಿಯವರೆಗೆ ಹೋಗಿದೆ ಅಂದರೆ ದೇವರುಗಳಿಗೂ ಕೂಡ ಜಾತಿ ಪಟ್ಟಿಯನ್ನು ಅಂಟಿಸಿದ್ದಾರೆ. ಗಂಗಮ್ಮಾ ನೀನು ಕೋಳಿ ತಿನ್ನಬೇಕು, ಮಾರಮ್ಮ ನೀನು ಕೋಣವನ್ನು ತಿನ್ನಬೇಕು. ಚೌಡೇಶ್ವರಿ ನೀನು ಕುರಿಯನ್ನು ತಿನ್ನಬೇಕು; ಆದರೆ ಬೇರೆ ದೇವರುಗಳಲ್ಲಿ ನಮಗೆ ನಂಬಿಕೆ ಇದೆಯೋ ಇಲ್ಲವೋ ಎನ್ನುವುದಕ್ಕಿಂತ ಹೆಚ್ಚಿನ ಪ್ರಶ್ನೆ, ನಾವು ಇವತ್ತು ಏನು ವಾಸ್ತವವಾಗಿ ಕಾಣುತ್ತಿದ್ದೇವೆ ಎಂಬುದು ಮುಖ್ಯ. ಬೇರೆ ದೇವರುಗಳಿಗೆ ಕುರಿ, ಕೋಳಿಗಳನ್ನು ತಿನ್ನಿಸುವುದಿಲ್ಲ. ದೇವರಿಗೆ ತೆಂಗಿನಕಾಯಿ ಒಡೆಯುತ್ತಾರೆ. ಹಣ್ಣು ಹಂಪಲು ಅರ್ಪಿಸುತ್ತಾರೆ ಮತ್ತು ಹೂವು-ಹಾರ ಹಾಕುತ್ತಾರೆ. ಇದ ಇವತ್ತು ಕಾಣುತ್ತಿರತಕ್ಕ ಚಿತ್ರ. ಮನುಷ್ಯ ಮನುಷ್ಯರಲ್ಲಿ ಯಾವ ರೀತಿ ಭೇದವನ್ನು ಕಲ್ಪನೆ ಮಾಡಿ ಮಾಡಿದ್ದಾರೆ ಅದೇ ರೀತಿ ದೇವರುಗಳಲ್ಲಿ ಕೂಡ ಆ ಚಿತ್ರವನ್ನು ರೂಪಿಸಿ ನಮ್ಮ ಮುಂದೆ ಇಟ್ಟು ಹೋಗಿದ್ದಾರೆ. ಬಾಬರನ ಕಾಲದಲ್ಲಿ ಅಲ್ಲಿ ದೇವಸ್ಥಾನ ಇತ್ತು, ಅದನ್ನು ಅವನು ಒಡೆದು ಕಟ್ಟಿದ ಎಂದು ಹಳೆಯ ಚರಿತ್ರೆಯಲ್ಲಿ ಇರಬಹುದು. ಅದನ್ನು ನಾನು ತಿಳಿದುಕೊಳ್ಳುವುದಕ್ಕೆ ಹೋಗಿಲ್ಲ. ನಮ್ಮ ದೇಶಕ್ಕೆ ಇವತ್ತು ಚರಿತ್ರೆಯಲ್ಲಿ ಆಧಾರ ಇದೆ. ಈ ದೇಶ ದ್ರಾವಿಡರ ದೇಶ. ಪ್ರಪಂಚದಲ್ಲಿ ಅತ್ಯಂತ ಪುರಾತನವಾದ್ದಂಥ ಸಂಸ್ಕೃತಿಯಲ್ಲಿ ದ್ರಾವಿಡ ಸಂಸ್ಕೃತಿ ಸಹ ಒಂದು. ನಂತರ ಆರ್ಯರು ಬಂದಿರತಕ್ಕದ್ದು. ಮಧ್ಯ ಏಷ್ಯಾದಿಂದ ಮತ್ತು ಬೇರೆ ಕಡೆಯಿಂದ ಅವರು ಬಂದಿರುತ್ತಾರೆ. ಆ ರೀತಿ ಹೇಳುವುದಾದರೆ ಇವು ಯಾವುವೂ ಕೂಡ ಈ ದೇಶದ ದೇವರುಗಳಲ್ಲ. ಈ ದೇಶಕ್ಕೆ ಸಂಬಂಧಪಟ್ಟವ. ಇನ್ನೂ ಒಂದು ಮಾತು ಹೇಳುವುದಾದರೆ, ಮುಸ್ಲಿಮರು ಈ ದೇಶಕ್ಕೆ ಹೊರಗಡೆಯಿಂದ ಬಂದಿರುವವ ರಾದರೆ ಆರ್ಯರು ಕೂಡ ಹೊರಗಡೆಯಿಂದ ಬಂದಿರತಕ್ಕವರು. ಅವರು ಏನು ಬಿಟ್ಟು ಹೋಗಿದ್ದಾರೆ, ಅದು ಈ ದೇಶಕ್ಕೆ ಹೊರ ದೇಶದಿಂದ ಬಂದದ್ದು. ಎಂದು ಹೇಳಲೇಬೇಕಾದ ಪರಿಸ್ಥಿತಿ ಬಂದಿದೆ. ನಾನು ಮಾತನಾಡುತ್ತಿದ್ದರೆ ಅಜೀಜ್ ಸೇಠರು ತಲೆ ಅಲ್ಲಾಡಿಸುತ್ತಿದ್ದಾರೆ. ಅವರಲ್ಲಿ ಒಂದು ಮಾತು ಕೇಳಬೇಕಾಗಿದೆ. ನಾನು ಕಣ್ಣಾರೆ ಕಂಡಿರತಕ್ಕದ್ದನ್ನು ಹೇಳುವುದಾದರೆ, ಒಂದೂವರೆ ವರ್ಷದ ಕೆಳಗೆ ಕೋಲಾರದಲ್ಲಿ ಹೋಗುತ್ತಿದ್ದೆ. ಆಗ ಪಾಕಿಸ್ಥಾನ ಕ್ರಿಕೆಟ್ ಮ್ಯಾಚ್‌ನಲ್ಲಿ ಗೆದ್ದಿತು. ಆಟಪಾಠಗಳೆಂದರ ಯಾವ ದೇಶದವರಾಗಲಿ ನಾನು ಉತ್ತೇಜನ ಕೊಡತಕ್ಕವನು, ರಾಜ್ಯ ಮಟ್ಟದಲ್ಲಿ ಯಾರೇ ಗೆದ್ದರೂ ನನಗೆ ಸಂತೋಷವಾಗುತ್ತದೆ. ಆದರೆ ಇಂಡಿಯಾ ದೇಶಕ್ಕೂ ಪಾಕಿಸ್ಥಾನಕ್ಕೂ ಮ್ಯಾಚ್ ನಡೆದಾಗ ಪಾಕಿಸ್ಥಾನ ಗೆದ್ದಿತು ಎಂದು ಪಟಾಕಿ ಹಚ್ಚಿದ್ದನ್ನು ಕಣ್ಣಾರೆ ಕಂಡಿದ್ದೇನೆ; ಬೀಡಿ ಅಡ್ವರ್ಟೈಸ್‌ಮೆಂಟ್ ಮಾಡತಕ್ಕ ವ್ಯಾನ್‌ನಲ್ಲಿ ಮೈಕ್ ಹಾಕಿ ಪಾಕಿಸ್ಥಾನ್ ಜೀತ್‌ಗಯಾ ಎಂದು ಹೇಳಿ ಚಾಕಲೇಟ್ ಹಂಚಿದ್ದನ್ನು ಕೋಲಾರದಲ್ಲಿ ನಾನೇ ಕಣ್ಣಾರೆ ನೋಡಿದ್ದೇನೆ. ಎಲ್ಲಾ ಹಿಂದುಗಳೂ ಮತಾಂಧರು ಅಲ್ಲ, ಎಲ್ಲ

ಮುಸ್ಲಿಮರು ಮತಾಂಧರು ಅಲ್ಲ. ಕೆಲವು ಮಂದಿ ಇದ್ದಾರಿದ್ದಾರೆ, ಅವರು ಕಿರಾತಕರು, ಆ ಕಿರಾತಕರು ಮಾಡತಕ್ಕ ಕೆಲಸ ಇದು. ಆ ಕಿರಾತಕರಿಂದ ಪಾಡುಪಡತಕ್ಕವರು ಯಾರು ? ಕೋಳಿಮೊಟ್ಟೆ ಮಾರಾಟ ಮಾರತಕ್ಕ ಇಮಾಮ್‌ಸಾಬಿ. ಒಂದು ಕಡೆ ಚರ್ಮ ಇಟ್ಟಿದ್ದರೆ ಅದನ್ನು ಹೊತ್ತುಕೊಂಡು ಹೋಗುವುದು ಚರ್ಮದ ವ್ಯಾಪಾರ ಮಾಡತಕ್ಕ ಅಬ್ದುಲ್ಲ: ಗಾರೆಕೆಲಸ ಮಾಡುವ ಮುನಿಸ್ವಾಮಿ, ಕೋಲಾರದಲ್ಲಿ ಕೃಷ್ಣಪ್ಪ ಎಂಬ ಹುಡುಗ ಹೊಲದಿಂದ ಜೋಳದ ಕಡ್ಡಿಯನ್ನು ಹೊತ್ತುಕೊಂಡು ಬರುತ್ತಿದ್ದರೆ, ಹಿಂದುಗಡೆಯಿಂದ ಬಂದು ಅವನಿಗೆ ಚಾಕು ಹಾಕುತ್ತಾರೆ. ಒಬ್ಬ ವಿದ್ಯಾರ್ಥಿ ಊರಿಗೆ ಹೋಗಿರುತ್ತಾನೆ. ಅವನ ತಂದೆ–ತಾಯಿ ಅಡಿಗೆ ಮಾಡಿಕೊಂಡು ಜೀವನ ಮಾಡುತ್ತಿರುತ್ತಾರೆ ಅವನು ಬ್ರಾಹ್ಮಣ ಜಾತಿಯವನು, ಅವರಿಗೆ ಅಡಿಗೆಯಿಂದಲೇ ಜೀವನ. ಅವನು ಬಸ್ ಹಿಡಿದು ಸಂದಿಯಲ್ಲಿ ಸಂಜೆ ಮನೆಗೆ ಬರುತ್ತಿದ್ದರೆ ಒಂದೇ ಏಟಿಗೆ ಅವನನ್ನು ಸಾಯಿಸುತ್ತಾರೆ. ಅವನು ಮಾಡಿದ ತಪ್ಪು ಏನೆಂದರೆ, ಇವರು ಹೋಗಿ ಅವನ ಹತ್ತಿರ ಕ್ಯಾರೆ ಅಂದರು ಅವನು ಕ್ಯಾಬಿನ್ಸೈ ಅಂದ. ಕ್ಯಾಬಿನ್ಸೈ ಅಂದರೆ ಅಲ್ಲಿಗೆ ಮುಗಿಯಿತು. ಅದೇ ಕೊನೆಮಾತು. ಇದು ಇವತ್ತಿನ ದಿವಸ ಕಾಣತಕ್ಕ ವಿಚಿತ್ರ ಪರಿಸ್ಥಿತಿ.

ಮಾಡತಕ್ಕವರು ಎಲ್ಲೋ ಇದ್ದಾರೆ. ದೆಹಲಿಯಲ್ಲಿ ಕೆಲವರು ಹೇಳಿಕೆ ಕೊಟ್ಟರೆ, ಇಲ್ಲಿ ಕುಣಿಯುತಕ್ಕವರು ಕೂಡ ಇದ್ದಾರೆ. ಎಲ್ಲೋ ಏನೋ ಗಲಾಟೆ ನಡೆದರೆ ಹೈದರಾಬಾದ್‌ನಲ್ಲಿ ದಾರಿಯಲ್ಲಿ ಹೋಗುವವರಿಗೆಲ್ಲಾ ಚೂರಿ ಹಾಕಿದರಲ್ಲ ಏತಕ್ಕೆ ? ಧರ್ಮ ಸಂಸ್ಥೆಗಳ ಬಗ್ಗೆ ಎಲ್ಲರಿಗೂ ಗೌರವ ಇದೆ. ಹಿಂದೂ ಧರ್ಮಕ್ಕೆ ಸಂಬಂಧಪಟ್ಟ ಸಂಸ್ಥೆ ಇರಬಹುದು ಅಥವಾ ಮುಸ್ಲಿಂ ಧರ್ಮಕ್ಕೆ ಸಂಬಂಧಪಟ್ಟ ಸಂಸ್ಥೆ ಇರಬಹುದು ಧರ್ಮ ಸಂಸ್ಥೆಗಳು ಎಲ್ಲಿ ಹಾಳಾದರೂ ಕೂಡ ಎಲ್ಲರಿಗೂ ಅವಮಾನವಾಗುತ್ತದೆ. ಆದರೆ ಅಲ್ಲಿ ನಡೆಯತಕ್ಕ ಘಟನೆಗೆ ಹೈದರಾಬಾದ್‌ನಲ್ಲಿ ನೀವು ಚಾಕು ಹಾಕುತ್ತೀರಲ್ಲ, ಇದು ನಿಮಗೆ ಗೌರವ ತರುವ ವಿಚಾರವಾ ? ಇದರಿಂದ ಏನಾಗುತ್ತದೆ ? ಮಾನ್ಯ ಅಧ್ಯಕ್ಷರೆ, ನನ್ನ ಸ್ನೇಹಿತರಾದ ಮಾಜಿ ಮಂತ್ರಿಗಳಾದ ಜೀವಿಜಯ ಅವರು ಒಂದು ಮಾತನ್ನು ಹೇಳಿದರು. ಅವರ ಕ್ಷೇತ್ರದಲ್ಲಿ ನಡೆದ ಘಟನೆ ಬಗ್ಗೆ ಹೇಳಿದರು, ಯಾರೋ ಒಬ್ಬ ಮುಸ್ಲಿಂ ಜನಾಂಗಕ್ಕೆ ಸಂಬಂಧಪಟ್ಟವನು, ಒಂದೇ ಮನೆ ಅಲ್ಲಿ ಇರತಕ್ಕದ್ದು. ಒಂದೆರಡು ವರ್ಷದ ಹಿಂದೆ ಪಾಕೀಸ್ಥಾನ ಯಾವುದೋ ಮ್ಯಾಚ್‌ನಲ್ಲಿ ಗೆದ್ದಿದ್ದಕ್ಕೆ ಇಲ್ಲಿ ಪಟಾಕಿ ಅಂಟಿಸಿದ್ದ. ಇವತ್ತು ಅವನ ಮನೆ ಬೂದಿ ಕೂಡ ಅವನಿಗೆ ಸಿಗಲಿಲ್ಲ. ಈ ರೀತಿಯಾದ ಕುಚೇಷ್ಟೆ ಏನಿದೆ, ಅಲ್ಲಲ್ಲಿ ನಡೆಯತಕ್ಕ ಘಟನೆಗಳು ಏನಿವೆ. ಅದಕ್ಕೆ ತಕ್ಷಣ ಅಲ್ಲಿ ಪ್ರತಿಕ್ರಿಯೆ ಕಾಣುವುದಿಲ್ಲ. ಇದನ್ನು ಕಾಯುತ್ತಾ ಇರುತ್ತಾರೆ. ಈ ರೀತಿಯಾದ ಸಣ್ಣಪುಟ್ಟ ಘಟನೆಗಳು, ಕಿಡಿಗೇಡಿಗಳು ನಡೆಯುವ ರೀತಿನೀತಿ, ಕೆಲವು ಮತಾಂಧರ ತಲೆಯಲ್ಲಿ ಸೇರಿಕೊಂಡಿರುತ್ತದೆ. ಯಾವುದೋ ಒಂದು ಸಂದರ್ಭದಲ್ಲಿ ಅದು ಸ್ಫೋಟಗೊಳ್ಳುತ್ತದೆ. ಅದು ಸ್ಫೋಟಗೊಂಡಾಗ ಯಾರೋ ಅಪಾಯಕರು ಜೋಳದ ಕಡ್ಡಿ ಹೊತ್ತು ಹೋಗತಕ್ಕ ಕೃಷ್ಣಪ್ಪ, ಚರ್ಮದ ವ್ಯಾಪಾರ ಮಾಡುತ್ತಿರತಕ್ಕ ಇಮಾಮ್ ಸಾಬ್ ಬಲಿಯಾಗುತ್ತಾನೆ. ದೆಹಲಿಯಲ್ಲಿರುವವರಿಗೆ ಏನೂ ಆಗುವುದಿಲ್ಲ. ಇಲ್ಲಿ ಕುಳಿತಿರುವ ಅಜೀಜ್ ಸೇಠ್ ಅವರಿಗೆ ಏನೂ ಆಗುವುದಿಲ್ಲ. ಏಕೆಂದರೆ ಅವರು ಹಿಂದೆ ಮುಂದೆ ಪೋಲೀಸರನ್ನು ಈಗ ಇಟ್ಟುಕೊಂಡು ಹೋಗುತ್ತಾರೆ. ಆದರೆ ಅವರು ಹೇಳತಕ್ಕ ಮಾತಿಗೂ ಅಲ್ಲಿ ನಾಯಕರುಗಳು ಹೇಳತಕ್ಕ ಮಾತಿಗೂ......

SRI AZEEZ SAIT.—Mr. Speaker. Sir Iam just sitting and listening. He narrated some incidents which is shameful and nobody contributs to it. I don't know the reason why he is dragging my name. Do you want me to reply ?

SRI C. BYRE GOWDA.—You are my best friend. If you say, No I will withdraw......ಸನ್ಮಾನ್ಯ ಅಧ್ಯಕ್ಷರೆ, ಆದ್ದರಿಂದ ನಾನು ಎಲ್ಲರಲ್ಲೂ ವಿನಂತಿ ಮಾಡಿಕೊಳ್ಳುವುದೇನೆಂದರೆ ಈ ರೀತಿಯಾದ ಕುಚೇಷ್ಟೆಗೆ ಅವಕಾಶ ಕೊಡತಕ್ಕ ಘಟನೆಗಳು ಎಲ್ಲಿಂದಲೇ ನಡೆಯಲಿ ಈ ಕಿರಾತಕರ ಬಗ್ಗೆ ಅಯಾ ಮತಕ್ಕೆ ಸಂಬಂಧಪಟ್ಟಿರತಕ್ಕವರು ಅವರನ್ನು ವಿಚಾರಿಸಿಕೊಳ್ಳುವ ಕೆಲಸ ಮೊದಲಾಗಬೇಕು. ನಮ್ಮ ಹಳ್ಳಿಯಲ್ಲಿ ಯಾರು ಏನು ಎಂಬ ಬಗ್ಗೆ ಪ್ರತಿಯೊಬ್ಬನ ಜೀವನ ಚರಿತ್ರೆ ನಮಗೆ ಗೊತ್ತಿರುತ್ತದೆ. ಅವನ ಗುಣ ನನಗೆ ಗೊತ್ತಿರುತ್ತದೆ. ಆ ಹಳ್ಳಿಯಲ್ಲಿರತಕ್ಕವರು ಆ ಹಳ್ಳಿಯವರನ್ನು ತಹಬಂದಿಗೆ ತರತಕ್ಕ ರೀತಿಯಲ್ಲಿ ಕೆಲಸ ಮಾಡಿದರೆ, ಅದೇ ರೀತಿ ಪಟ್ಟಣ ಪ್ರದೇಶದಲ್ಲಿ ಇರತಕ್ಕವರು ಅವರ ಬೀದಿಯಲ್ಲಿ ಇರತಕ್ಕ ಮುಖಂಡರು, ಆ ವರ್ಗಕ್ಕೆ ಸೇರಿದವರು ಅವರನ್ನು ತಹಬಂದಿಗೆ ತಂದಿಟ್ಟರೆ ಯಾವ ಮತೀಯ ಗಲಭೆಯೂ ಕೂಡ ಆಗುವುದಿಲ್ಲ. ಆದರೆ ಅದಕ್ಕೆ ವಿರುದ್ಧವಾದ ದಿಕ್ಕಿನಲ್ಲಿ ನಾವು ಹೋಗುತ್ತಿದ್ದೇವೆ. ಇದಕ್ಕೆ ಪ್ರಚೋದನೆ ಕೊಡುವ ರೀತಿಯಲ್ಲಿ ನಾವು ಕಾರ್ಯಕ್ರಮಗಳನ್ನು ಹಾಕುತ್ತಿದ್ದೇವೆ. ಇದನ್ನು ಯಥೇಚ್ಛವಾಗಿ ಬೆಳೆಸತಕ್ಕ ಕೆಲಸ ನಡೆಯುತ್ತಿದೆ.

ಅದಕ್ಕಾಗಿ ಎಲ್ಲರಲ್ಲೂ ನಾನು ವಿನಂತಿ ಮಾಡುತ್ತೇನೆ. ಆ ಕೆಲಸ ನಾವು ಯಾರೂ ಸಹ ಮಾಡಬಾರದು. ಎಲ್ಲೋ ಯಾರೋ ಮ್ಯಾಚ್‌ನಲ್ಲಿ ಗೆದ್ದರೆ ನಮಗೇನು ಬರುತ್ತದೆ ? ನಮ್ಮ ದೇಶ ಗೆದ್ದಾಗ ನಮ್ಮ ಬಾವುಟ ಎತ್ತಿಹಿಡಿಯೋಣ ನಮ್ಮ ದೇಶ ಎಲ್ಲ ಕ್ರೀಡೆಗಳಲ್ಲಿ ಗೆಲ್ಲುವ ಪರಿಸ್ಥಿತಿ ಬಂದಾಗ ಎಲ್ಲರೂ ಆನಂದ ಪಡೋಣ. ಆದರೆ ಯಾರೋ ಎಲ್ಲೋ ಗೆದ್ದರೆ ಇಲ್ಲಿ ಏನೂ ಮಾಡಬಾರದು. ಕ್ರೀಡೆ ಗೋಪ್ಯರ ಕ್ರೀಡೆ. ಅಷ್ಟಕ್ಕೆ ಇರಲಿ. ಆದರೆ ಒಂದು ದೇಶ ಗೆದ್ದಾಗ ನಾವು ಅತೀ ಉತ್ಸಾಹ ತೋರಿಸತಕ್ಕದ್ದು ಕೂಡದು ಎಂಬ ಮಾತನ್ನು ಹೇಳುತ್ತಾ ನಮ್ಮ ಜಿಲ್ಲೆ ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ. ನಾನು ಬರುವ ವರ್ಷದೊಳಗೆ ಇಡಿ ನಮ್ಮ ಕೋಲಾರದಲ್ಲಿ ಎಲ್ಲಿ ನೋಡಿದರೂ ಬೆಂಕಿ ಉರಿಯುತ್ತಾ ಇರುವುದನ್ನು ನೋಡಿದ್ದೇನೆ. ಅನೇಕ ಕಡೆ ನಾನು ಹೋಗಿದ್ದೇನೆ. ಶೇಕಡ ೫೦ ಕ್ಕೂ ಮೇಲ್ಪಟ್ಟು ಮುಸ್ಲಿಮರ ಮನೆಗಳಿಗೆ ಹೋಗಿದ್ದೇನೆ. ಆಸ್ಪತ್ರೆಗೆ ಹೋಗಿ ಗಾಯಗೊಂಡವರನ್ನು ವಿಚಾರಿಸಿದ್ದೇನೆ. ಅವರೆಲ್ಲರಿಗೂ ಕೂಡಾ ಬುದ್ಧಿವಾದ ಹೇಳತಕ್ಕ, ನೊಂದವರಿಗೆ ಸಾಂತ್ವನ ಮಾಡತಕ್ಕ ಕೆಲಸವನ್ನು ನಾನು ಮಾಡಿದ್ದೇನೆ ನಾನು ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಅಲ್ಲಿದ್ದ ಕೆಲವು ಸಣ್ಣಪುಟ್ಟ ಅಧಿಕಾರಿಗಳನ್ನು ಬಿಟ್ಟರೆ ನಮ್ಮ ಜಿಲ್ಲೆಯಲ್ಲಿ ಇರತಕ್ಕ ಅಧಿಕಾರಿಗಳು ಅತ್ಯಂತ ಜವಾಬ್ದಾರಿಯಿಂದ ವರ್ತಿಸಿದ್ದಾರೆ. ಮಾನ್ಯ ವೆಂಕಟಪ್ಪನವರನ್ನು ನಾನು ಈ ಬಗ್ಗೆ ಕೇಳಿದೆ. ಮುಳಬಾಗಿಲಿನಲ್ಲಿ ಒಂದು ಕಡೆ ಬಿಟ್ಟರೆ ಎಲ್ಲಾ ಕೂಡಾ ನಮ್ಮ ಜಿಲ್ಲೆಯಲ್ಲಿ ಗೋಲೀಬಾರ್‌ನಿಂದ ಜನರು ಸತ್ತಿಲ್ಲ. ನಮ್ಮಲ್ಲಿ ಗೋಲೀಬಾರ್ ಮಾಡಲು ಸಾಕಷ್ಟು ಅವಕಾಶಗಳು ಸಂದರ್ಭಗಳು ಒದಗಿ ಬಂದಿದ್ದರೂ ಕೂಡಾ ಪೋಲೀಸ್ ಸೂಪರಿಂಟೆಂಡೆಂಟ್ ಗಾಯಗೊಂಡರೂ ಸಹಾ, ಬಂದೂಕನ್ನು ಅವರು ಉಪಯೋಗಿಸುವುದಕ್ಕೆ ಹೋಗಲಿಲ್ಲ. ಎಲ್ಲೇ ಗಲಾಟೆ ಆದರೂ ೫ ಅಥವಾ ೧೦ ನಿಮಿಷದಲ್ಲಿ ಸ್ಥಳಕ್ಕೆ ಜಿಲ್ಲಾಧಿಕಾರಿಗಳು ಹೋಗಿ ಅದನ್ನು ಶಮನ ಮಾಡುವ ಕೆಲಸ ಮಾಡಿದ್ದಾರೆಂದು ಅಲ್ಲಿನ ಜನರು ನನಗೆ ಹೇಳಿದರು. ಮುಖ್ಯಮಂತ್ರಿಗಳೂ ಸಹಾ ಒಂದು ಸಾರಿ ಕೋಲಾರಕ್ಕೆ ಬಂದಿದ್ದರು. ಅವರೂ ಇದೆಲ್ಲವನ್ನೂ ಪರಿಶೀಲಿಸಿದ್ದಾರೆ. ಅಲ್ಲಿ ಸಣ್ಣಪುಟ್ಟ ಅಧಿಕಾರಿಗಳಿಂದ ಸಣ್ಣಪುಟ್ಟ ಘಟನೆಗಳು ನಡೆದಿವೆ. ಆದರೆ ಒಟ್ಟಾರೆ ಹೇಳಬೇಕೆಂದರೆ ಅಲ್ಲಿರತಕ್ಕ ಅಧಿಕಾರಿಗಳು ಮತ್ತು ಎಸ್‌ಪಿಯವರು, ಡಿಸಿಯವರು ತಮ್ಮ ತಾಳ್ಮೆಯನ್ನು ಮೀರುವಂತಹ ಘಟನೆಗಳು ಅಲ್ಲಿ ವಿಪುಲವಾಗಿನಡೆದರೂ ಕೂಡಾ ಅವರು ತಾಳ್ಮೆ ಮೀರುವಂತಹ ವರ್ತನೆ ಮಾಡಿಲ್ಲ. ಅವರು ಯಾವತ್ತೂ ತಾಳ್ಮೆಯನ್ನು ಕಳೆದುಕೊಳ್ಳದೇ, ಯಾವ ರಾಗ ದ್ವೇಷಕ್ಕೂ ಒಳಪಡದೇ, ಹಿಂದೂಗಳಿರಲಿ ಮುಸ್ಲಿಮರಿರಲಿ ಅವರೂ ಮನುಷ್ಯರು ಎಂದು ಅವರನ್ನು ಕಾಪಾಡುವುದು ನಮ್ಮ ಕರ್ತವ್ಯವೆಂದು ತಿಳಿದು, ಸರ್ಕಾರ ಅದಕ್ಕೇ ನಮ್ಮನ್ನು ನೇಮಿಸಿರುವುದು ಎಂಬ ಧ್ಯೇಯದಿಂದ ಅವರು ಕೆಲಸ ಮಾಡಿದ್ದಾರೆ, ಇದೂ ಸಹಾ ಸರ್ಕಾರದ ಗಮನಕ್ಕೆ ಬಂದಿದೆ ; ಮುಖ್ಯಮಂತ್ರಿಗಳ ಗಮನಕ್ಕೂ ಬಂದಿದೆ. ಅಂತಹ ಅಧಿಕಾರಿಗಳನ್ನು ಗೌರವಿಸ ಬೇಕಾದುದು ಸರ್ಕಾರದ ಕರ್ತವ್ಯ, ಯಾರಾದರು ಒಳ್ಳೆಯ ಕೆಲಸ ಮಾಡಿದರೆ ಅವರ ಬೆನ್ನು ತಟ್ಟ ತಕ್ಕದ್ದು ಸರ್ಕಾರದ ಕರ್ತವ್ಯ. ಅದನು ಮಾಡಬೇಕೆಂದು ಈ ಸಮಯದಲ್ಲಿ ನಾನು ವಿನಂತಿಸುತ್ತೇನೆ. ಇನ್ನು ಕೆಲವು ಕಡೆ ಪರಿಹಾರ ಕೊಡುವ ಸಂದರ್ಭದಲ್ಲಿ ಏನು ನಡೆದಿದೆ ಎಂದು ಮಾನ್ಯ ಯಡಿಯೂರಪ್ಪ ನವರು ಉಲ್ಲೇಖ ಮಾಡಿದ್ದಾರೆ. ಇದು ಬಹಳ ಕಡೆ ನಡೆಯುತ್ತಿದೆ. ತಪ್ಪು ತಪ್ಪಾಗಿ ರೆಕಾರ್ಡ್ಸ್ ಸೃಷ್ಟಿ ಮಾಡತಕ್ಕದ್ದು ನಡೆಯುತ್ತಿದೆ. ಎಲ್ಲಾ ಕಡೆ ಏನು ಅನ್ಯಾಯ ಆಗಿದೆ ಅನ್ಯಾಯಾ ಆಗಿದೆ ಎಂದು ಹೇಳುವ ಒಂದು ಅನುಕಂಪ ಏನಿದೆ ಅದನ್ನು ದುರುಪಯೋಗಪಡಿಸಿಕೊಳ್ಳತಕ್ಕ ಪರಿಸ್ಥಿತಿ ನಡೆಯುತ್ತಿದೆ. ಅದಕ್ಕೆ ಅವಕಾಶವನ್ನು ಕೊಡಕೂಡದು.ಮತ್ತೆ ಶ್ರೀನಿವಾಸಪುರದಲ್ಲಿ ಸಾರಾಸಗಟಾಗಿ ಅನುಕಂಪದ ಪರಿಹಾರ ಧನವನ್ನು ಕೊಡುತ್ತಿದ್ದಾರೆ. ೫ ಸಾವಿರ ನಷ್ಟ ಆದವರಿಗೂ ೫ ಸಾವಿರ, ೫೦ ಸಾವಿರ ನಷ್ಟ ಆದವರಿಗೂ ೫ ಸಾವಿರ ಪರಿಹಾರ ಕೊಡುವುದು ಆಗುವುದು ಬೇಡ. ಎಷ್ಟು ನಷ್ಟ ಆಗಿದೆ ಎಂಬುದನ್ನು ನೋಡಿ ಪರಿಹಾರ ಕೊಡುವುದು ಆಗಬೇಕು. ಮಾವಿನ ತೋಪಿನ ಬಗ್ಗೆ ಎಷ್ಟು ನಷ್ಟ ಆಗಿದೆ ಎಂಬುದನ್ನು ನೋಡಿ ಅದಕ್ಕೆ ಸರಿಯಾದ ಪರಿಹಾರ ಧನ ಕೊಡಬೇಕೆಂದು ಸರ್ಕಾರದಲ್ಲಿ ನಾನು ಒತ್ತಾಯ ಮಾಡು ತ್ತೇನೆ. ಮಾನ್ಯ ಯಡಿಯೂರಪ್ಪನವರು ಕೆಲವು ವಿಚಾರಗಳನ್ನು ಹೇಳಿದ್ದಾರೆ. ಈ ಸದನದ ಒಂದು ಸಮಿತಿ ರಚನೆ ಆಗಬೇಕೆಂದು ಹೇಳಿದ್ದಾರೆ. ಅದು ನಿಜ ಇದೆ. ಅದು ಆಗಬೇಕು. ಏಕೆಂದರೆ ನಾನು ಅನೇಕರಿಂದ ಕೇಳಿದ್ದೇನೆ. ಇದಕ್ಕೆ ರಾಜಕೀಯದ ಕಾರಣ ಕೂಡಾ ಉಂಟು ಎನ್ನತಕ್ಕ ಅಭಿಪ್ರಾಯಕ್ಕೆ ಮುಸ್ಲಿಂ ಬಾಂಧವರೂ ಬಂದಿದ್ದಾರೆ. ಚನ್ನಪಟ್ಟಣದಲ್ಲಿ ಗಲಾಟೆ ನಡೆಯುವುದಕ್ಕಿಂತಾ ಮುಂಚೆ ಒಬ್ಬರು ಲೋಕಸಭಾ ಸದಸ್ಯರು ಅಲ್ಲಿಗೆ ಹೋಗಿದ್ದರು ಎಂದು ಚನ್ನಪಟ್ಟಣದಲ್ಲಿ ಇರುವ ಹಿಂದೂ ಮತ್ತು ಮುಸಲ್ಮಾನ್ ಸ್ನೇಹಿತರು ಹೇಳಿದ್ದಾರೆಂಬುದನ್ನು ನಾನು ಇಲ್ಲಿ ಹೇಳುತ್ತಿದ್ದೇನೆ.

ಶ್ರೀ ಅಜೀಜ್ ಸೇಟ್.—ಇದು ಸರಿಯಲ್ಲ. You are a seasoned politician. You cannot simply say like that.......ಯಾರೋ ಹೇಳಿದರು ಎಂದು ಜವಾಬ್ದಾರಿ ಸ್ಥಾನದಲ್ಲಿ ಇರುವವರು ಹೇಳುವುದು ಸರಿಯಲ್ಲ.

ಶ್ರೀ ಸಿ. ಬೈರೇಗೌಡ.—ಆ ಅನುಮಾನ ನನಗೆ ಇದೆ. ಅದನ್ನು ಬಗೆಹರಿಸಬೇಕಾದ್ದು ಮತ್ತು ಅದು ನಿಜವೇ ಸುಳ್ಳೇ ಎಂದು ಹೇಳಬೇಕಾದ್ದು ಅಧಿಕಾರದಲ್ಲಿ ಇರುವ ನಿಮಗೆ ಸೇರಿದ್ದು. ಇಲ್ಲ ಎಂದೂ ಬೇಕಾದರೆ ಹೇಳಿ. ಆದರೆ ನೀವು ಒಬ್ಬರೇ ಹೇಳಿದರೆ ಆಗುವುದಿಲ್ಲ.

ಶ್ರೀ ಅಜೀಜ್ ಸೇಠ್.—ಇಲ್ಲ.

ಶ್ರೀ ಸಿ. ಬೈರೇಗೌಡ.—ಹೀಗೆ ಇಲ್ಲ ಎಂದರೆ ಹೇಗೆ ? ಅದಕ್ಕೆ ವಿಚಾರಣೆ ಆಗಬೇಕು. ವಿಚಾರಣೆ ಆದಮೇಲೆ ಅದು ಬಗೆಹರಿಯುತ್ತದೆ. ಅದೇ ರೀತಿ ಬೇರೆ ಕಡೆ ಕೂಡಾ ಗುಮಾನಿ ಇದೆ. ಅದ ಕ್ಕೋಸ್ಕರ ಸದನದ ಸಮಿತಿಯನ್ನು ರಚನೆ ಮಾಡವುದು ಅವಶ್ಯಕ ಇದೆ. ನ್ಯಾಯಾಂಗ ತನಿಖೆಯನ್ನು ನಾನು ಕೇಳುವುದಕ್ಕೆ ಹೋಗುವುದಿಲ್ಲ. ಅದೊಂದು ಪರಿಪಾಠ ಆಗಿದೆ. ಎಲ್ಲಿ ಏನೇ ನಡೆದರೂ ನ್ಯಾಯಾಂಗ ತನಿಖೆ ಆಗಬೇಕೆಂದು ಹೇಳುತ್ತಾರೆ. ಅದರಿಂದ ಏನೂ ಪ್ರಯೋಜನ ಆಗುವುದಿಲ್ಲ.

೫-೦೦ ಪಿ. ಎಂ.

ಆದರೆ ಸದನ ಸಮಿತಿಯನ್ನು ರಚನೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ನಮ್ಮ ಸ್ನೇಹಿತರಾದ ಮಾನ್ಯ ಖಮರುಲ್ ಇಸ್ಲಾಂರವರು ಕೆಲವು ಮಾತನ್ನು ಹೇಳಿದ್ದಾರೆ ಅದರ ಬಗ್ಗೆ ಎಚ್ಚರಿಕೆಯನ್ನು ವಹಿಸಬೇಕಾಗಿರುವುದು ಅವಶ್ಯಕತೆ ಇದೆ ಕಾಶ್ಮೀರದಲ್ಲಿ ಮುಸ್ಲಿಮರು ಏಕೆ ಟೆರರಿಸ್ಟ್ ಆಗುತ್ತಿದ್ದಾರೆನ್ನುವುದನ್ನು ಅವರು ಹೇಳಿದರು. ಮತ್ತು ಇಲ್ಲಿಯೂ ಕೂಡ ಅದೇ ಪರಿಸ್ಥಿತಿಗೆ ಬರತಕ್ಕಂಥಾದ್ದು ಕೂಡ ಇದೆ ಎಂದು ಉಲ್ಲೇಖ ಮಾಡಿ ಹೇಳಿದ್ದಾರೆ. ಅದಕ್ಕೆ ಸರಿಯಾದಂತಹ ಉತ್ತರವನ್ನು ಸರಕಾರ ಹೇಳಬೇಕಾಗುತ್ತದೆ. ಕರ್ನಾಟಕವನ್ನು ಪಂಜಾಬ್ ಮತ್ತು ಕಾಶ್ಮೀರ ಆಗುವುದಕ್ಕೆ ಬಿಡುವುದಕ್ಕೆ ಸಾಧ್ಯವಿಲ್ಲ. ಆ ಶಕ್ತಿಗಳು ಯಾರೇ ಇರಲಿ ಹಿಂದೂಗಳಾಗಲೀ ಅಥವಾ ಮುಸಲ್ಮಾನರಾಗಲೀ...

ಶ್ರೀ ಅಜೀಜ್ ಸೇಠ್.—ಅವರನ್ನು ಆ ದಾರಿಗೆ ಎಳೆದರೆ ಏನು ಮಾಡುವುದು ?

ಶ್ರೀ ಸಿ. ಬೈರೇಗೌಡ.—ಅವರನ್ನು ಆ ದಾರಿಗೆ ಎಳೆದರೆ ಏನಾಗುತ್ತದೆಯೆಂಬುದು ಗೊತ್ತಾಗುತ್ತದೆ. ಎಳೆದು ನೋಡಿ ಗೊತ್ತಾಗುತ್ತದೆ. ಅವರು ಜವಾಬ್ದಾರಿ ಸ್ಥಾನದಲ್ಲಿ ಮಂತ್ರಿಯಾಗಿ ಕೂತಿದ್ದಾರೆ. ಅವರು ಹೀಗೆ ಹೇಳಬಾರದು, ಹೀಗೆ ಹೇಳುವುದರ ಅರ್ಥವಾದರೂ ಏನು ? ತಾವು ನನ್ನ ರಕ್ಷಣೆಗೆ ಬರಬೇಕು. ಮಾನ್ಯ ಮುಖ್ಯಮಂತ್ರಿಗಳು ಯಾರೊಂದಿಗೋ ಮಾತನಾಡುತ್ತಿದ್ದಾರೆ ಅವರು ದಯಮಾಡಿ ಗಮನಿಸಬೇಕು, ಮಾನ್ಯ ಖಮರುಲ್ ಇಸ್ಲಾಂರವರು ಕಾಶ್ಮೀರದಲ್ಲಿ ಮುಸಲ್ಮಾನರು ಟೆರರಿಸ್ಟ್ ಆಗುವುದಕ್ಕೆ ಏನು ಕಾರಣವೆಂಬುದನ್ನು ಹೇಳುತ್ತಾ ಅದಕ್ಕೆ ಅವರದ್ದೇ ಆದಂತಹ ವ್ಯಾಖ್ಯಾನವನ್ನು ಕೊಟ್ಟಿದ್ದಾರೆ. ಆ ರೀತಿಯಾಗಿ ಇಲ್ಲೂ ಕೂಡಾ ಆಗಬಹುದು, ಅಂತಹ ಪರಿಸ್ಥಿತಿ ಬರಬಹುದು ಎಂಬ ಅರ್ಥ ಬರತಕ್ಕಂತಹ ರೀತಿಯಲ್ಲಿ ಮಾತನಾಡಿದ್ದಾರೆ. ಮಾನ್ಯ ಅಜೀಜ್ ಸೇಠ್‌ರವರು ಹೇಳುತ್ತಿದ್ದಾರೆ. ಆ ದಾರಿಗೆ ಜನರನ್ನು ಎಳೆದರೆ ಅಂದರೆ ಇದರ ಮಾತಿನ ಅರ್ಥ ಏನು ? ಇಲ್ಲೂ ಕೂಡ ನೀವು ಟೆರರಿಸಂ ಅನ್ನು ಮಾಡುವುದಕ್ಕೆ ತಯಾರಿದ್ದೀರಿ.

ಶ್ರೀ ಅಜೀಜ್ ಸೇಠ್.—ನೀವು ಬೆಕ್ಕನ್ನು ನೋಡಿದ್ದೀರಲ್ಲವೇ, ನೀವು ಬಾಗಿಲು ಕಿಟಕಿ ಮುಚ್ಚಿಕೊಂಡು ಅದಕ್ಕೆ ಹೊಡೆದರೆ ಅದು ಕೊನೆಗೆ ಬಂದು ಕುತ್ತಿಗೆ ಹಿಡಿಯುತ್ತದೆ. ಅದು ಬೆಕು. ಇದು ಮನುಷ್ಯ.

ಶ್ರೀ ಸಿ. ಬೈರೇಗೌಡ.—ಆ ಪರಿಸ್ಥಿತಿಗೆ ನಾನಾಗಲೀ ನೀವಾಗಲೀ ಹೋಗುವುದು ಬೇಡ. ನಮ್ಮ ರಕ್ತದ ಕೊನೆಯ ತೊಟ್ಟು ಇರುವವರೆಗೂ ನಾವೆಲ್ಲರೂ ಆ ಪರಿಸ್ಥಿತಿಗೆ ನಮ್ಮ ರಾಜ್ಯ ಹೋಗುವುದಕ್ಕೆ ಯಾರನ್ನೇ ಆಗಲೀ ಬಿಡುವುದಿಲ್ಲ ಎಂಬ ಶಪಥವನ್ನು ಮಾಡೋಣ. ಅದಕ್ಕೆ ನಾವೆಲ್ಲರೂ ಭಾಗಿಯಾದ ಬೇಕಾಗತಕ್ಕಂಥಾದ್ದು ನಮ್ಮ ಕರ್ತವ್ಯವಾಗಿದೆ. ಪ್ರಥಮವಾಗಿ ನಾವು ಮನುಷ್ಯರು ಮನುಷ್ಯರಾಗ ಮೇಲೆ ಈ ದೇಶದಲ್ಲಿ ಹುಟ್ಟಿದ ಮೇಲೆ ನಾವು ಇದನ್ನು ತಡೆಗಟ್ಟಬೇಕಾದದ್ದು ನಮ್ಮ ಕರ್ತವ್ಯವೆಂದು ಹೇಳುತ್ತಾ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಡಾ. ಎನ್. ಬಿ. ನಂಜಪ್ಪ (ಶ್ರವಣ ಬೆಳಗೊಳ).—ಮಾನ್ಯ ಅಧ್ಯಕ್ಷರೇ, ನಾವು ಈಗ ಕೋಮುವಾರು ಗಲಭೆಗಳ ಬಗ್ಗೆ ಮಾತನಾಡುತ್ತಿದ್ದೇವೆ. ಇಂತಹ ವಿಶೇಷವಾದ ಸಂದರ್ಭದಲ್ಲಿ ಮಾತನಾಡುವಾಗ ಚನ್ನರಾಯಪಟ್ಟಣದಲ್ಲಿ ನಡೆದ ಕೋಮುವಾರು ಗಲಭೆ ಬಗ್ಗೆ ಕೆಲವು ಮಾತನ್ನು ಹೇಳುತ್ತೇನೆ ದಿನಾಂಕ ೨೪ರಂದು ಏನು ಅಲ್ಲಿ ಗಲಭೆ ನಡೆಯಿತು ಎಂದು ಹೇಳಬಯಸುತ್ತೇನೆ. ಈ ಹಿಂದುತ್ವ ಮತ್ತು ರಾಜ್ಯಾಂಗದ ಬಗ್ಗೆ ಮಾತನಾಡುವುದಕ್ಕಿಂತ ಮುಂಚೆ ನಮ್ಮ ಊರಿನಲ್ಲಿ ಏನು ನಡೆಯಿತು, ಹೇಗೆ ನಡೆಯಿತು ಯಾರು ಇದಕ್ಕೆ ಕಾರಣ ಕರ್ತರು ಎಂಬ ಬಗ್ಗೆ ಹೇಳುತ್ತೇನೆ. ಕರ್ನಾಟಕ

ರಾಜ್ಯದಲ್ಲೆಲ್ಲಾ ಇದು ಆಗುವುದಕ್ಕೆ ಅಂದರೆ ಈ ಗಲಭೆಯಾಗುವುದಕ್ಕೆ ಇವರುಗಳೇ ಕಾರಣವೇ ಇಲ್ಲವೇ ಎನ್ನುವುದರ ಬಗ್ಗೆ ನಾವು ಯೋಚನೆ ಮಾಡತಕ್ಕಂಥಾದ್ದು ನಮ್ಮೆಲ್ಲರ ಕರ್ತವ್ಯವೆಂದು ನಾನು ತಿಳಿದುಕೊಂಡಿದ್ದೇನೆ. ಅದನ್ನು ಯೋಚನೆ ಮಾಡಿದಾಗ ಇದು ಒಂದೇ ಕಾಲದಲ್ಲಿ ಕೇವಲ ಎರಡು ತಿಂಗಳುಗಳಲ್ಲಿ ಶಾಂತರೀತಿಯಿಂದ ಇದ್ದ ಕರ್ನಾಟಕ ರಾಜ್ಯದಲ್ಲಿ ಅನೇಕ ಕಡೆ ಈ ಕೋಮು ಗಲಭೆಗಳು ನಡೆದಿದೆ. ಇದು ನಡೆಯತಕ್ಕ ಸಂದರ್ಭದಲ್ಲಿ ಯಾರು ನೊಂದಿದ್ದಾರೆ. ಹಾಗೂ ಒಂದೇ ಕೋಮಿನ ಜನ ಇದಕ್ಕೆ ತುತ್ತಾಗಲೂ ಕಾರಣವೇನು ಎಂದು ನಾವು ಯೋಚನೆ ಮಾಡುವುದು ಬಹಳ ಒಳ್ಳೆಯದೆಂದು ನನಗನ್ನಿಸುತ್ತದೆ. ಇದನ್ನು ಯೋಚನೆ ಮಾಡಿದಾಗ ರಾಮಜ್ಯೋತಿ ಅರಸೀಕೆರೆಯಿಂದ ಚನ್ನರಾಯಪಟ್ಟಣಕ್ಕೆ ಬರುತ್ತದೆ ಎಂದು ಗೊತ್ತಾದಾಗ ನಾನು ಸದ್ಭಾವನ ಯಾತ್ರೆಯನ್ನು ಮಾಡಿ ಮಸೀದಿಗಳಿಗೆ ಭೇಟಿ ಕೊಟ್ಟು ನಾವು ಸುಮಾರು ೫೦೦ ಜನ ಮಸೀದಿಗಳಿಗೆ ಹೋಗಿ, ಮುಸ್ಲಿಂ ಬಾಂಧವರನ್ನು ಕರೆದು ಒಂದು ಸಭೆಯನ್ನು ನಡೆಸಿದ್ದೇವೆ. ಸಭೆ ನಡೆಸಿದ ಸಂದರ್ಭದಲ್ಲಿ ಕರ್ನಾಟಕ ರಾಜ್ಯದಲ್ಲಿ ಈಗಾಗಲೇ ೧೪೪ನೇ ಸೆಕ್ಷನ್ ಜಾರಿಯಲ್ಲಿದೆ, ಜ್ಯೋತಿಯನ್ನು ಸಕಲೇಶಪುರದ ಹತ್ತಿರ ನಿಲ್ಲಿಸಿದ್ದಾರೆ. ಅದನ್ನು ಅರಸೀಕೆರೆಗೆ ತೆಗೆದುಕೊಂಡು ಬರತಕ್ಕ ಸಂದರ್ಭದಲ್ಲಿ ಗೊಂದಲಮಯ ವಾತಾವರಣ ಇದೆ. ಅಲ್ಲಿಂದ ಜ್ಯೋತಿ ಚನ್ನರಾಯಪಟ್ಟಣಕ್ಕೆ ಬರಬೇಕಿಂದಿರುವುದರಿಂದ ಅದಕ್ಕೆ ನೀವೆಲ್ಲರೂ ಸಹಕರಿಸಬೇಕು. ನಮ್ಮ ಟೌನಿನ ಮತ್ತು ನಮ್ಮ ತಾಲ್ಲೂಕಿನಲ್ಲಿ ಯಾವುದೇ ಸಂದರ್ಭದಲ್ಲಿ ಗಲಾಟೆಗಳು ಆಗಬಾರದು, ಜ್ಯೋತಿಯನ್ನು ನಾವು ರಿಸೀವ್ ಮಾಡಿ ಅದನ್ನು ಮರ್ಯಾದೆಯಿಂದ ಹೊರಗಡೆ ಕಳುಹಿಸಿಕೊಡತಕ್ಕ ಸಂದರ್ಭದಲ್ಲಿ ನೀವೆಲ್ಲರೂ ಶಾಂತಿ ರೀತಿಯಿಂದ ಇರಬೇಕು ಹಾಗೂ ನಮ್ಮ ಜೊತೆ ಭಾಗಿಗಳಾಗಬೇಕೆಂದು ಕೇಳಿಕೊಂಡಾಗ ಅದಕ್ಕೆ ಅವರು ಒಪ್ಪಿಕೊಂಡಿದ್ದರು. ಜ್ಯೋತಿ ಬಂದ ದಿವಸ ಸುಮಾರು ಆರೇಳು ಸಾವಿರ ಜನ ಸೇರಿ ಮುಸ್ಲಿಂ ಬಾಂಧವರು ಅದಕ್ಕೆ ಮುಂದೆ ಬಂದು ಮಾಲೆಗಳನ್ನು ಹಾಕಿ ಪೂಜೆ ಮಾಡಿ ಜ್ಯೋತಿಯನ್ನು ಚನ್ನರಾಯಪಟ್ಟಣದಿಂದ ಕಳುಹಿಸಿಕೊಟ್ಟಿದ್ದೇವೆ. ಹೀಗೆ ಶಾಂತರೀತಿಯಿಂದ ಇದ್ದ ಚನ್ನರಾಯಪಟ್ಟಣದಲ್ಲಿ ೨೩ನೇ ತಾರೀಖು ಬಂದ್ ನಡೆಸಿದರು. ೨೩ನೇ ತಾರೀಖು ಲಾಲ್‌ಕೃಷ್ಣ ಅಡ್ವಾನಿಯವರನ್ನು ಅರೆಸ್ಟ್ ಮಾಡಿದರೆಂದು ಚನ್ನರಾಯಪಟ್ಟಣದಲ್ಲಿ ಬಂದ್ ಆಚರಿಸಿದರು. ಆಗ ನಾನು ಬೆಂಗಳೂರಿನಲ್ಲಿದ್ದೆ. ಆವೊತ್ತು ಶಾಂತ ರೀತಿಯಿಂದ ಶಾಪ್‌ಗಳನ್ನು ಮುಚ್ಚಿದರು. ಗಲಾಟೆ ಮಾಡುತ್ತಾರೆಂದು ಆವೊತ್ತು ಕೂಡ ಏನೂ ಆಗಲಿಲ್ಲ. ೨೪ನೇ ತಾರೀಖು ಭಾರತ ಬಂದ್ ಮಾಡುತ್ತೇವೆಂದು ಹೇಳಿ ತಹಸೀಲ್ದಾರ್ ಮತ್ತು ಪೋಲೀಸ್ ಅಧಿಕಾರಿಗಳನ್ನು ಕೆಲವೇ ಮುಖಂಡರು ಕೇಳಿದರು. ನಾವು ಪ್ರೊಸೆಸನ್ ತರುತ್ತೇವೆ ಶ್ರೀರಾಮನ ಪೋಟೋ ತೆಗೆದುಕೊಂಡು ಬೀದಿಯಲ್ಲಿ ಹೋಗುತ್ತೇವೆಂದು ಹೇಳಿದರು. ಅಧಿಕಾರಿಗಳು ಹೇಳಿದರು, ೧೪೪ನೇ ಸೆಕ್ಷನ್ ಜಾರಿಯಲ್ಲಿರುವುದರಿಂದ ಮೆರವಣಿಗೆ ಮಾಡುವುದಕ್ಕೆ ಸಾಧ್ಯವಿಲ್ಲ, ಅದಕ್ಕೆ ನಾವು ಅವಕಾಶ ಕೊಡುವುದಿಲ್ಲವೆನ್ನುವ ಮಾತನ್ನು ಅವರು ಹೇಳಿದರು. ನೀವು ಏನು ಬೇಕಾದರೂ ಮಾಡಿಕೊಳ್ಳಿ, ಪ್ರೊಸೆಸನ್ ತೆಗೆದುಕೊಂಡು ಹೋಗುತ್ತೇವೆಂದು ೨೦ ಜನ ಮುಖಂಡರು ಹಠ ಮಾಡಿದರು. ಅವರನ್ನು ಅಧಿಕಾರಿಗಳು ಎಷ್ಟೇ ರಿಕ್ವೆಸ್ಟ್ ಮಾಡಿಕೊಂಡರೂ ಕೇಳದೆ ಪ್ರೊಸೆಸನ್ ಹೊರಟರು ೨೦ ಜನ ಇದ್ದ ಕಡೆ ೫೦-೬೦ ಜನ ಹೆಚ್ಚಾದರು. ಆವೊತ್ತು ಭಾರತ್ ಬಂದ್ ಇದೆ. ಅದರ ಹಿಂದಿನ ದಿವಸ ಸಹ ಬಂದ್ ಆಗಿದೆ. ಆದರೂ ಕೂಡ ಅವರು ಸುಸಜ್ಜಿತರಾಗಿ ಆಣಿ ಮಾಡಿಕೊಂಡ ಕಾರಣ ೫೦-೬೦ ಜನ ಇದ್ದ ಕಡೆ ಸುಮಾರು ೩ ಸಾವಿರ ಜನ ಎಲ್ಲಾ ಕಡೆ ಇದ್ದವರು ಬಂದು ಸೇರಿಕೊಂಡರು ಒಂದು ಭಾಗ ಮಸೀದಿಯ ಹಿಂಭಾಗದಲ್ಲಿ ಹೋಯಿತು ಇನ್ನೊಂದು ಭಾಗ ಮೇನ್ ಬೀದಿಗಳಲ್ಲಿ ಹೋಯಿತು. ಪೋಲೀಸರು ಅದಕ್ಕೆ ಸನ್ನದ್ಧರಾಗಿರಲಿಲ್ಲ. ಇಬ್ಬರು ಆಫೀಸರ್ ೧೦-೧೨ ಜನ ಪೋಲೀಸ್ ಕಾನ್ಸ್‌ಟೇಬಲ್‌ಗಳು ಇದ್ದರು. ಇವರು ಅವರನ್ನು ಫಾಲೋ ಮಾಡಿದರು. ವಿಧಿಯಿಲ್ಲದೆ ಹೋಗಬೇಕಾಯಿತು. ಹಾಗೆ ಪ್ರೊಸೆಸನ್ ಹೊರಟ ಒಂದು ಗುಂಪು ರಾಮನ ಪೋಟೋ ಹಿಡಿದುಕೊಂಡು ಒಂದು ಕಡೆ ಉಳಿದುಕೊಂಡರು, ಇನ್ನೊಂದು ಗುಂಪಿನವರು ಮಸೀದಿ ಕಡೆ ಹೋಗಿ ಕಲ್ಲು ಎಸೆದರು, ಆಗ ಮುಸ್ಲಿಂ ಬಾಂಧವರು ಬಂದರು ಇನ್ನೊಂದು ಕಡೆ ಮಧ್ಯೆ ಪೋಲೀಸ್‌ನವರು ಸಿಕ್ಕಿಹಾಕಿಕೊಂಡರು, ಹಿಂದುಗಡೆ ರಸ್ತೆಯನ್ನು ಅಡ್ಡಗಟ್ಟಿದ್ದರಿಂದ ಪೋಲೀಸ್‌ನವರು ಈ ಕಡೆ ಬರುವುದಕ್ಕೆ ಆಗಲಿಲ್ಲ. ಒಂದು ಗಂಟೆಯಲ್ಲಿ ೬೫ ಶಾಪ್‌ಗಳನ್ನು ಸುಟ್ಟಿಹಾಕಿದರು. ಅಂದಾಜು ಮೌಲ್ಯ ೬೦-೭೦ಲಕ್ಷ ಇರಬಹುದು. ರೆವಿನ್ಯೂ ಇಲಾಖೆಯವರ ಎಸ್ಟಿಮೇಟ್ ಪ್ರಕಾರ ೪೭ ಲಕ್ಷ ರೂಪಾಯಿ ಲಾಸ್ ಆಗಿದೆಯೆಂದು ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರು ಎಸ್ಟಿಮೇಟ್ ಮಾಡಿದ್ದಾರೆ. ಅದರಲ್ಲಿ ದೋಚಿಕೊಂಡು ಹೋಗಿರುವುದು ಬೇಕಾದಷ್ಟು ಇದೆ. ಸುಮಾರು ೬೫ ಶಾಖೆಗಳನ್ನು ಲೂಟಿಮಾಡಿ ಬೆಂಕಿ ಹಾಕಿರುವುದರಿಂದ, ಸುಟ್ಟು ಭಸ್ಮವಾಗಿದೆ. ನಾವು ಈಚೆಗೆ ಮಾಹಿತಿಯನ್ನು ಕಲೆಕ್ಟ್ ಮಾಡಿದ್ದಾರೆ. ಇದರ ಜವಾಬ್ದಾರಿಯನ್ನು ಆರ್‌ಎಸ್‌ಎಸ್ ಮತ್ತು ಬಿಜೆಪಿಯವರು ಹೊತ್ತಿಕೊಳ್ಳಬೇಕಾಗುತ್ತದೆ. ಇದು ನೇರವಾದ ಮತ್ತು ಸತ್ಯವಾದ ಮಾತು, ಎಂದು ಚನ್ನರಾಯಪಟ್ಟಣದಲ್ಲಿ ನಡೆದಿರಬಹುದು ಅಥವಾ ಕರ್ನಾಟಕ ರಾಜ್ಯದ

ಯಾವುದೇ ಊರಿನಲ್ಲಿ ನಡೆದಿದ್ದರೂ ಕೂಡ ಅದಕ್ಕೆ ಅವರೇ ಜವಾಬ್ದಾರರು. ಅವರು ಈ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇದು ಸತ್ಯವಾದ ಮಾತು. ಈ ಮಾತನ್ನು ಈ ಸದನದಲ್ಲಿ ಆಡುವುದರಿಂದ ಏನೂ ಪ್ರಯೋಜನವಿಲ್ಲವೆಂದು ನಾನಾದರೂ ತಿಳಿದುಕೊಂಡಿದ್ದೇನೆ. ಇದನ್ನು ಪಿತಕ್ಕೋಸ್ಕರ ಮಾಡಿದ್ದಾರೆ ಏನು ಮಾಡಿದ್ದಾರೆನ್ನುವುದನ್ನು ವಿಷಾದದಿಂದ ಅನೇಕ ಜನ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ನಾನು ಅದರ ಬಗ್ಗೆ ಬಾಬರಿ ಮಸೀದಿ ಬಗ್ಗೆ ಅವರು ಮಾಡಿರತಕ್ಕ ಮೆರವಣಿಗೆಯ ಬಗ್ಗೆ ರಾಮನ ಫೋಟೊ, ಲಕ್ಷ್ಮಣನ ಫೋಟೊ ಮಧ್ಯೆ ದಶರಥನ ಫೋಟೊ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಇಲ್ಲಿ ಸಂಸಜ್ಜಿತವಾಗಿ ಅಣಿಮಾಡಿಕೊಂಡು ಚನ್ನರಾಯಪಟ್ಟಣದಲ್ಲಿ ನಡೆಸಿದಂತಹ ಒಂದು ಕೃತ್ಯವೆಂದು ಕರೆಯುತ್ತೇನೆ. ಇದಕ್ಕೆ ರೆಸ್ಪಾನ್ಸಿಬಲ್ ಆರ್‌ಎಸ್‌ಎಸ್ ಮತ್ತು ಬಿಜೆಪಿ ಮುಖಂಡರು ಅದರಲ್ಲಿ ಭಾಗವಹಿಸಿದ್ದಾರೆ.

(ಶ್ರೀ ಶಿವಾನಂದ ಎಚ್. ಕೌಜಲಗಿ ಅವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು)

ಇವರುಗಳು ಎಲ್ಲರೂ ಕೂಡ ಗಲಾಟೆ ಶುರು ಮಾಡಿಸಿ ನಂತರ ಎಲ್ಲರೂ ಕೂಡ ಹೊರಟು ಹೋದರು. ಅದು ಯಾವ ರೀತಿ ನಡೆಸಿದ್ದಾರೆ ? ಅದಕ್ಕೆ ಮೊದಲೇ ಹ್ಯಾಮರ್ಸ್ ಹೊಂಚಿಕೊಂಡಿದ್ದಾರೆ. ಕೋಬಾರ್ಸ್ ಅನ್ನು ಹೊಂಚಿಕೊಂಡಿದ್ದಾರೆ. ಪೆಟ್ರೋಲ್ ಬಾಟಲ್‌ಗಳನ್ನು ಹೊಂಚಿಕೊಂಡಿದ್ದಾರೆ. ಇದೆಲ್ಲ ಮಾಡಬೇಕಾದರೆ ಇದು ಹೇಗೆ ಅಣಿ ಮಾಡದೆ ನಡೆಯುವುದಕ್ಕೆ ಸಾಧ್ಯ? ನಮ್ಮ ಜಿಲ್ಲೆಯಲ್ಲಿ ಶುಕ್ರವಾರ ಸಂತೆಗೆ ಹೋಗಿ ನೋಡಿದರೆ ಹಾಸನದಲ್ಲಿರತಕ್ಕಂಥ ಸುಮಾರು 100 ಜನ ಹೆಂಗಸರು ಮಕ್ಕಳು, ಮುಸ್ಲೀಮರು ನೂರಾರು ವರ್ಷಗಳಿಂದ ಇದ್ದು ಬಂದಂತಹವರು ಇವತ್ತು ಅಲ್ಲಿ ನಿರಾಶ್ರಿತರಾಗಿ ವಾಸ ಮಾಡಬೇಕಾಗಿದೆ. ಎಲ್ಲಿ ಹೋದರೂ ಕೂಡ ಇದೇ ಕತೆ ನಡೆದಿದೆ. ನಮ್ಮಲ್ಲಿ ಗೋಲಿಬಾರ್‌ನಲ್ಲಿ ಒಬ್ಬರು ಸತ್ತರು, ನನ್ನ ಮಾಹಿತಿ ಪ್ರಕಾರ ಅವನು ಆರ್. ಎಸ್. ಎಸ್. ಮೆಂಬರ್ ಆ ಹುಡುಗ ಗಲಾಟೆ ಆದ ತಕ್ಷಣ ಓಡಿ ಹೋಗಿದ್ದಾನೆ, ಮಹಡಿ ಮೇಲೆ ಹೋಗಿ ನಿಂತು ಕೊಂಡಿದ್ದಾನೆ. ಪೋಲೀಸರು ಗಾಳಿಯಲ್ಲಿ 62 ರೌಂಡ್ಸ್ ಚನ್ನರಾಯಪಟ್ಟಣದಲ್ಲಿ ಗೋಲಿಬಾರ್ ಮಾಡಿದ್ದಾರೆ. ಅವತ್ತು ಪೋಲೀಸರು ಏನಾದರೂ ಸರಿಯಾದ ರೀತಿಯಲ್ಲಿ ಕ್ರಮ ತೆಗೆದುಕೊಳ್ಳದೇ ಹೋಗಿದ್ದರೆ ನೂರಾರು ಜನ ಗೋಲಿಬಾರ್‌ನಲ್ಲಿ ಅಥವಾ ಒಬ್ಬರಿಗೊಬ್ಬರು ಕ್ಲಾಷ್ ಆಗಿ ಸಾಯಬೇಕಾಗಿತ್ತು. ಆದರೆ ಎಲ್ಲವನ್ನೂ ಕೂಡ ಏರ್‌ಗೆ ಶೂಟ್ ಮಾಡಿದ್ದರಿಂದ, ಆಕಸ್ಮಾತ್ತಾಗಿ ಮಹಡಿಯಲ್ಲಿ ನಿಂತಿದ್ದ ಒಬ್ಬ ಹುಡುಗನಿಗೆ ಮಾತ್ರ ತಗುಲಿ ಅವನು ಒಬ್ಬನು ಮಾತ್ರ ಅಸುನೀಗಬೇಕಾಯಿತು. ಹೀಗೆ ಕೋಲಾರ, ರಾಮನಗರದಲ್ಲಿ ನಡೆದಿದೆ ಒಂದು ಕಡೆ ಒಂದೇ ಕೋಮಿನವರಿಗೆ ಸೇರಿದ 40 ಎಕರೆಯಷ್ಟು ಮಾವಿನ ಮರಗಳನ್ನು ಕಡಿಯುತ್ತಾರೆ ಎಂದರೆ ಇದು ಕೋಮು ಗಲಭೆ ಅಲ್ಲದೆ ಇನ್ನೇನು ? ಇದರ ಅರ್ಥ ಏನು? ಒಂದೇ ಕೋಮಿನವರ ಪ್ರಾಪರ್ಟಿ ಲಾಸ್ ಮಾಡುತ್ತಾರೆ ಎಂದರೆ ಇದರ ಅರ್ಥ ಏನು ? ಇದಕ್ಕೆ ಎಷ್ಟು ಹಿನ್ನೆಲೆ ಇರಬಹುದು ? ಎಷ್ಟು ದ್ವೇಷಭಾವನೆಯನ್ನು ಉಂಟು ಮಾಡಿರಬಹುದು ? ನಾವು ಹಿಂದೂಗಳ ಬಗ್ಗೆ ಮಾತನಾಡುತ್ತೇವೆ ನಾಲ್ಕು ಸಾವಿರ ವರ್ಷಗಳ ಇತಿಹಾಸ ಇರತಕ್ಕಂಥ ಈ ಹಿಂದೂ ಧರ್ಮಕ್ಕೆ ಇವತ್ತು ಮಸಿ ಬಳಿದಿದ್ದೇವೆ. ತಲೆತಗಿಸತಕ್ಕಂಥ ಕೆಲಸ ಮಾಡಿದ್ದೇವೆ. ರಾಮನ ಹೆಸರು ಹೇಳಿಕೊಂಡು ಹೇಯಕೃತ್ಯ ಮಾಡಿದ್ದೇವೆ. ಇಂತಹ ಒಂದು ಸ್ಥಿತಿಯನ್ನು ನಾವು ಮುಟ್ಟಿದರೆ, ನಾವು ಇಷ್ಟು ಕಷ್ಟಪಟ್ಟು ಸಂಪಾದನೆ ಮಾಡಿದಂಥ ಈ ಸ್ವಾತಂತ್ರ್ಯದ ಗತಿ ಏನಾಗಬೇಕು ? ಇದನ್ನು ಉಳಿಸಿಕೊಳ್ಳುವುದಕ್ಕೆ ಸಾಧ್ಯವೆ ? ಇವತ್ತು ಹೀಗೆ ವಿಷಬೀಜವನ್ನು ಬಿತ್ತುವ ಪ್ರಯತ್ನ ಎಲ್ಲ ಕಡೆ ನಡೆಯುತ್ತಿರುವುದನ್ನು ನೋಡಿದರೆ, ಇಂತಹ ಕೃತ್ಯಗಳನ್ನು ಒಂದೊಂದಾಗಿ ವಿಶದವಾಗಿ ಯೋಚನೆ ಮಾಡಿದರೆ, ಈ ಸ್ವಾತಂತ್ರ್ಯವನ್ನು ನಾವು ಉಳಿಸಿಕೊಳ್ಳುವುದಕ್ಕೆ ಸಾಧ್ಯವೇ ? ಈ ದೇಶದ ಇಂಟೆಗ್ರಿಟಿ ಬೌಂಡರಿಯನ್ನು ಬಹಳಷ್ಟು ಕಷ್ಟಪಟ್ಟು ನೂರಾರು ವರ್ಷಗಳ ಕಾಲ ಶ್ರಮಿಸಿ ಏನು ಸಂಪಾದನೆ ಮಾಡಿದ್ದೇವೆ. ಇದನ್ನು ಉಳಿಸಿಕೊಳ್ಳುವುದಕ್ಕೆ ಸಾಧ್ಯವೇ ಎಂದು ನಾವೆಲ್ಲರೂ ಯೋಚನೆ ಮಾಡಬೇಕಾಗಿದೆ. ಅಲ್ಲದೆ ಇವರಲ್ಲಿ ನಾನು ಪಾರ್ಟಿ, ಪಕ್ಷಗಳ ಮಾತನ್ನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಯಾರು ಈ ಕೃತ್ಯಗಳಿಗೆ ಪ್ರಚೋದನೆ ಮಾಡಿದ್ದಾರೆ ಅಂಥಾ ಪಾರ್ಟಿ ಕಟ್ಟುವುದಕ್ಕೆ. ಪಾರ್ಟಿಯನ್ನು ಬೆಳೆಸುವುದಕ್ಕೆ, ಅಥವಾ ಗುಂಪುಗಾರಿಕೆಯನ್ನು ಮಾಡುವುದಕ್ಕೆ ಅಥವಾ ಹೀಗೆ ಗಲಾಟೆ ಮಾಡುವುದಕ್ಕೆ ಯಾರು ಪ್ರಚೋದನೆ ಮಾಡುತ್ತಿದ್ದಾರೆ. ಯಾರು ಯಾವ್ಯಾವುದೋ ಹೆಸರಿನಲ್ಲಿ ಈ ದೇಶವನ್ನು ಅಲ್ಲೋಲ–ಕಲ್ಲೋಲ ಮಾಡುವಂಥ ಸ್ಥಿತಿಯನ್ನು ತಂದಿದ್ದಾರೆ ಅವರ ಬಗ್ಗೆ ಎಲ್ಲರೂ ಜಾಗೃತರಾಗಿರಬೇಕಾಗುತ್ತದೆ ನಮ್ಮ ದೇಶ ಒಗ್ಗಟ್ಟಾಗಿ ಇರಬೇಕು ಎನ್ನುವುದಾದರೆ, ಇದರ ಸರ್ವತೋಮುಖ ಅಭಿವೃದ್ಧಿ ಆಗಬೇಕು ಎನ್ನುವುದಾದರೆ, ಈ ದೇಶದಲ್ಲಿ ನಾವು ಬಹಳಷ್ಟು ಕಷ್ಟಪಟ್ಟು ಸಂಪಾದನೆ ಮಾಡಿದ ಈ ಇಂಟೆಗ್ರಿಟಿ ಅನ್ನು ಉಳಿಸಿಕೊಳ್ಳಬೇಕು ಎಂದರೆ ನಾವೆಲ್ಲರೂ ಕೂಡ ಒಂದುಗೂಡಬೇಕು. ಈ ದುಷ್ಕೃತ್ಯಗಳನ್ನು ಪ್ರತ್ಯೇಕವಾಗಿ ಒಂದು ಗುಂಪಿಗೆ ಸೇರಿಸಿ ಒಂದು ಕ್ರಮವನ್ನು ನಾವು ತೆಗೆದುಕೊಳ್ಳಬೇಕಾಗುತ್ತದೆ ಎಂಬ

ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಏತಕ್ಕೆ ನಾನು ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ. ಇದರಲ್ಲಿ ಮುಚ್ಚಿ ಮಾತನಾಡಿ ಪ್ರಯೋಜನ ಇಲ್ಲ. ನಮಗೆಲ್ಲರಿಗೂ ಕೂಡ ಇದು ಗೊತ್ತಿರತಕ್ಕಂಥ ವಿಷಯ. ಪ್ರತಿಯೊಬ್ಬರಿಗೂ ಕೂಡ ಇದು ಗೊತ್ತಿದೆ. ಆದ್ದರಿಂದ ನಮ್ಮ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವುದಕ್ಕೋಸ್ಕರ, ಈ ದೇಶವನ್ನು ಉಳಿಸಿಕೊಳ್ಳುವುದಕ್ಕೋಸ್ಕರ ಈ ನಮ್ಮ ಜಾತ್ಯಾತೀತ ರಾಷ್ಟ್ರವೆಂದು ಸಂವಿಧಾನದಲ್ಲಿ ಏನು ಕರೆದಿದ್ದೇವೋ ಅದನ್ನು ಉಳಿಸಿಕೊಳ್ಳುವುದಕ್ಕೋಸ್ಕರವಾದರೂ ಕೂಡ ನಾವು ಒಂದುಗೂಡಿ ಈ ಕೆಲಸವನ್ನು ಮಾಡಬೇಕಾಗುತ್ತದೆ ಎಂಬ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ ಇದನ್ನು ಹೇಳತಕ್ಕಂಥ ಸಂದರ್ಭದಲ್ಲಿ ಅನೇಕ ಊಹಾಪೋಹಗಳು ಈ ಹಿಂದೂತ್ವದ ಮೇಲೆ ನಾವು ಕೇಳಿದ್ದೇವೆ. ನಾನು ಎರಡು ನಿಮಿಷಗಳಲ್ಲಿ 'ಹಿಂದೂ ಜೀವನ ದೃಷ್ಟಿ' ಪುಸ್ತಕದಲ್ಲಿ ಡಾ. ಎಸ್. ರಾಧಾಕೃಷ್ಣನ್ ಅವರು ಹೇಳಿದ ಒಂದು ಮಾತನ್ನು ಇಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

"ಹಿಂದೂತ್ವ ಎಂದರೇನು ಎಂಬುದನ್ನು ನಿರ್ವಚಿಸುವ ಕಷ್ಟವನ್ನು ನಾವು ಪ್ರಾರಂಭದಲ್ಲಿಯೇ ಎದುರಿಸಬೇಕಾಗುತ್ತದೆ. ಬಹು ಜನರಿಗೆ ಹಿಂದೂತ್ವದ ಯಾವುದೇ ತತ್ವದ ತಿರುಳಿಲ್ಲದ ಬರೀ ಒಂದು ಹೆಸರಾಗಿ ತೋರುತ್ತದೆ. ಅದು ನಿಷ್ಠೆ ನಂಬುಗೆಗಳ ವಸ್ತು ಸಂಗ್ರಹಾಲಯವೇ ? ಆಚಾರಗಳ ಕಲಸು ಮೇಲೋಗರವೇ ? ಇಲ್ಲವೆ ಅದೊಂದು ಬರೀ ಭೂಪಟ ಭೌಗೋಲಿಕ ಅಭಿವ್ಯಕ್ತಿಯೇ ? ಅದರ ತತ್ವ ಏನಾದರೂ ಇದು ದಾದರೆ, ಕಾಲಕಾಲಕ್ಕೆ ಜನ ಸಮುದಾಯದಿಂದ ಜನ ಸಮುದಾಯಕ್ಕೆ ವ್ಯತ್ಯಾಸವಾಗಿ ಹೋಗಿದೆ ಹಿಂದೂತ್ವ ತಾನು ಯಾವ ಜನರೊಡನೆ ಸಂಪರ್ಕ ಪಡೆಯಿತೋ ಅವರ ಆಚಾರ ವಿಚಾರ ರೂಢಿ, ಮತ್ತು ಅಭಿಪ್ರಾಯಗಳನ್ನು ಕ್ರಮೇಣ ತನ್ನಲ್ಲಿ ಎಷ್ಟು ನಿರಾಯಾಸವಾಗಿ ಜೀರ್ಣಿಸಿಕೊಂಡಿತೋ ಅದರ ವಿವಿಧ ರೂಪಗಳನ್ನು ಒಂದುಗೂಡಿಸಿ ಬಂಧಿಸಿರುವ ಸಮಾನ ಲಕ್ಷಣಗಳನ್ನು ಕಂಡುಕೊಳ್ಳುವುದು ಅಷ್ಟೇ ಕಷ್ಟದಾಯಕವಾಗಿದೆ. ಆದರೆ, ಅದರ ವಿವಿಧ ಮುಖಗಳನ್ನು ಒಂದು ಗೂಡಿಸಿ, ಬಂಧಿಸುವ ಹಾಗೂ ಅದರ ಇತಿಹಾಸದ ವಿವಿಧ ಕಾಲಾವಧಿಗಳನ್ನು ಜೋಡಿಸಿ ಅಂದೊಂದು ಸುಸಂಗತ ಅಖಂಡವನ್ನಾಗಿಸುವ ಐಕ್ಯಕಾರಕ ಮನೋಭಾವ ಅದರಲ್ಲಿ ಇಲ್ಲದೇ ಹೋದರೆ, ಹಿಂದೂತ್ವದ ಮಹತ್ಸಾಧನೆ ಸಿದ್ಧಿಗಳಿಗೆ ಸಕಾರಣಗಳನ್ನು ಕಾಣುವುದು ಅಸಾಧ್ಯ. ಪ್ರಕೃತಿಯು ಅಂಥ ಶಕ್ತಿಗಳನ್ನು ಬದಿಗಿಟ್ಟು ಹೊರತು ಪಡಿಸಿದರೆ, ಗ್ರೀಕರಿಂದ ಮೊದಲಾದ ಯಾವುದೋ ಒಂದರಿಂದಲೇ ಈ ಜಗತ್ತು ಮುಂದುವರಿದಿದೆ ಎಂಬುದೇ ನಮ್ಮಲ್ಲಿ ಸಾರ್ವತ್ರಿಕ ನಂಬುಗೆಯಾಗಿದೆ. ಆದರೆ ಅದು ಸಂಪೂರ್ಣ ಸತ್ಯವಲ್ಲ. ಹಿಂದೂತ್ವ ಹಾಕಿದ ಸ್ವತಂತ್ರ ಬುನಾದಿಯ ಮೇಲೆಯೇ ಅರ್ಧಕ್ಕರ್ಧ ಜಗತ್ತು ಮುಂದುವರಿದಿದೆ. ಚೈನಾ ಮತ್ತು ಜಪಾನ್, ಟಿಬೆಟ್ ಹಾಗೂ ಸ್ಯಿಯಾಮ್, ಬರ್ಮಾ ಮತ್ತು ಶ್ರೀಲಂಕಾ ದೇಶಗಳು ಭಾರತವನ್ನು ತಮ್ಮ ಆಧ್ಯಾತ್ಮಿಕ ತೌರಾಗಿ ಅಂಗೀಕರಿಸಿದೆವು ಭಾರತದ ನಾಗರೀಕತೆಯ ಇತಿಹಾಸ ನಿನ್ನೆ ಮೊನ್ನೆಯದಲ್ಲ. ಅದರ ಐತಿಹಾಸಿಕ ದಾಖಲೆ ನಾಲ್ಕು ಸಹಸ್ರ ವರ್ಷಗಳಷ್ಟು ಪುರಾತನವಾದದ್ದು. ಆದಾಗ್ಯೂ ಅದರ ನಾಗರೀಕತೆ ಇಲ್ಲಿಯತನಕ ಅವಿಚ್ಛಿನ್ನವಾಗಿ ಮುಂದುವರಿಯುತ್ತ ಬಂದಿದೆ. ಆಗಾಗ ಅದು ನಿಂತೇ ಹೋಯಿತೆಂಬಷ್ಟು ನಿಧಾನವಾಗಿ ಚಲಿಸಿದ್ದರೂ ಸಹಿತ. ಅದು ನಾಲ್ಕೈದು ಸಹಸ್ರ ವರ್ಷಗಳ ಆಧ್ಯಾತ್ಮಿಕ ಅನುಭವ ಮತ್ತು ಅಭಿಪ್ರಾಯಗಳ ತಾಡನ ಮತ್ತು ತಿಕ್ಕಾಟಗಳನ್ನು ತಾಳಿಕೊಂಡು ಬಂದಿದೆ. ಇತಿಹಾಸದ ಅರುಣೋದಯದಿಂದಲೂ ಭಿನ್ನ ಭಿನ್ನ ಜನಾಂಗಗಳೂ ಸಂಸ್ಕೃತಿಗಳೂ ಭಾರತದೊಳಕ್ಕೆ ನುಗ್ಗಿ, ಹರಿದು ಬಂದಿದ್ದರೂ ಹಿಂದೂತ್ವ ತನ್ನ ಪರಮಾಧಿಕಾರವನ್ನು ಕಾಪಾಡಿಕೊಂಡಿದೆ. ರಾಜಕೀಯ ಶಕ್ತಿಯ ಪ್ರಬಲ ಸಹಾಯ ಪಡೆದಿದ್ದ ಮತಾಂತರ ಪ್ರವೃತ್ತಿಯ ಮತಗಳೂ ಕೂಡ ಬಹುಸಂಖ್ಯಾತ ಭಾರತೀಯರನ್ನು ತಮ್ಮ ಮತಕ್ಕೆ ಮತಾಂತರಗೊಳಿಸಲು ಒತ್ತಾಯ ತರುವಲ್ಲಿ ಅಸಮರ್ಥವಾಗಿವೆ. ಇತರ ಕೆಲವು ಪ್ರಬಲ ಶಕ್ತಿ ಪ್ರವಾಹಗಳುಳ್ಳ ಸಂಸ್ಕೃತಿಗಳಿಗೂ ಇಲ್ಲದಿರುವ ಯಾವುದೋ ಒಂದು ವೀರ್ಯ ಹಿಂದೂ ಸಂಸ್ಕೃತಿಯಲ್ಲಿರುವಂತೆ ಕಾಣುತ್ತದೆ. ಹಿಂದೂತ್ವದಲ್ಲಿ ಏನಾದರೂ ಜೀವರಸ ಇದೆಯೇ ಎಂಬುದನ್ನು ನೋಡಲು ಅದನ್ನು ಛಿದ್ರಾನ್ವೇಷಣೆ ಮಾಡುವ ಅಗತ್ಯ ಇನ್ನು ಉಳಿದಿಲ್ಲ. ಆ ಮಹಾವೃಕ್ಷವನ್ನು ಕಣ್ತೆರೆದು ನೋಡಿದರೆ ಸಾಕು.''

ಇನ್ನು ಮುಂದೆ ಇದಕ್ಕೋಸ್ಕರ ನಾನು ಹೇಳುತ್ತೇನೆ. ಇಂತಹ ಒಂದು ಸಂಸ್ಕೃತಿಯನ್ನು ಪಡೆದಂತಹ ಹಿಂದೂತ್ವವನ್ನು ಕೇವಲ ಓಟಿಗಾಗಿ ಅಥವಾ ಒಂದು ಗುಂಪುಗಾರಿಕೆಗಾಗಿ ಅಥವಾ ರಾಜಕೀಯಕ್ಕಾಗಿ ಉಪಯೋಗಿಸಿ, ಈ ದೇಶವನ್ನು ಛಿದ್ರ ವಿಚಿದ್ರ ಮಾಡುವುದು ಬೇಡ, ಈಗಾಗಲೇ ವಿಚಿದ್ರಕಾರಕ ಶಕ್ತಿಗಳು ಇಂಡಿಯಾ ದೇಶದಲ್ಲಿ ಕೆಲಸ ಮಾಡುತ್ತಿವೆ. ತಮಗೂ ಗೊತ್ತಿದೆ. ಕಾಶ್ಮೀರ,

ಅಸ್ಸಾಂ. ಇಂತಹ ಸಮಸ್ಯೆಗಳನ್ನು ಒಳಗೊಂಡಿರತಕ್ಕ ಈ ಸಂದರ್ಭದಲ್ಲಿ, ಕೇವಲ ರಾಮನ ಹೆಸರನ್ನು ಹೇಳಿಕೊಂಡು, ನಮ್ಮ ದೇಶ ಛಿದ್ರ ವಿಚ್ಛಿದ್ರ ಮಾಡತಕ್ಕಂಥ, ಈ ವಿಚ್ಛಿದ್ರ ಶಕ್ತಿಗಳನ್ನು ತಡೆಯದೇ ಹೋದರೆ, ನಾವು ಕಷ್ಟಪಟ್ಟು ಸಂಪಾದನೆ ಮಾಡಿದ ಸ್ವಾತಂತ್ರ್ಯಕ್ಕೆ ಮತ್ತು ನಮ್ಮ ದೇಶಕ್ಕೆ ಧಕ್ಕೆ ಬರುವುದರಲ್ಲಿ ಯಾವ ಸಂಶಯವೂ ಇಲ್ಲ ಎನ್ನುವುದನ್ನು ನಾವು ತಿಳಿದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳಿ, ಇಂದಿರಾಗಾಂಧಿಯವರು ಹೇಳಿದಂತೆ ಈಗ ಇಂಡಿಯಾ ದೇಶದಲ್ಲಿರತಕ್ಕ ಸಮಸ್ಯೆಗಳನ್ನು ನೋಡಿದರೆ, ನಮ್ಮ ದೇಶ ಒಂದು ಫೆಡರಲ್ ಸ್ಟ್ರಕ್ಚರ್‌ಗೆ ನಾವು ಹೋದರೆ ಬಹಳ ಒಳ್ಳೆಯದು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಏತಕ್ಕೆಂದರೆ, ಅಮೇರಿಕಾ ದೇಶದಲ್ಲಿ ಇದ್ದಂಥ ವಿಚ್ಛಿದ್ರಕಾರಕ ಶಕ್ತಿಗಳನ್ನು ಅಡಗಿಸುವುದಕ್ಕೋಸ್ಕರ ಅಲ್ಲಿ ಫೆಡರಲ್ ಸ್ಟ್ರಕ್ಚರ್ ಆಯಿತು. ಇಂದಿರಾಗಾಂಧಿಯವರು ಇದನ್ನು, she mooted the idea. ಬಹಳ ಬುದ್ಧಿವಂತರು, ಮೇಧಾವಿಗಳು ಇರತಕ್ಕವರು. ಅದರ ಬಗ್ಗೆ ಯೋಚನೆ ಮಾಡಿ, ವಿಚ್ಛಿದ್ರಕಾರಕ ಶಕ್ತಿಗಳು ಕೆಲಸ ಮಾಡುತ್ತಿವೆ. ದೇಶದ ಹೊರಗಡೆ ಕೆಲಸ ಮಾಡುತ್ತಿವೆ, ದೇಶದ ಒಳಗಡೆ ಕೆಲಸ ಮಾಡುತ್ತಿವೆ ಇದು ಈ ದೇಶವನ್ನು ತುಂಡು ತುಂಡು ಮಾಡತಕ್ಕ ಸಂದರ್ಭಗಳು ನನಗೆ ಕಾಣುತ್ತಾ ಇದೆ. ಆದ್ದರಿಂದ ನೀವು ಬುದ್ಧಿಜೀವಿಗಳು ಇದರ ಬಗ್ಗೆ ಚಿಂತನೆ ಮಾಡಿ, ಎಂದು ಇಂದಿರಾಗಾಂಧಿಯವರು ಹೇಳಿದಾಗ, ಅನೇಕ ವಿರೋಧಪಕ್ಷದ ಮೇಧಾವಿಗಳು ಹೇಳಿದರು ಇಂದಿರಾಗಾಂಧಿಯವರು ಡಿಕ್ಟೇಟರ್ ಆಗುವುದಕ್ಕೋಸ್ಕರ. presidential type of Government ಅನ್ನು ಇಂಡಿಯಾದೇಶಕ್ಕೆ ತರುವುದಕ್ಕೆ ಪ್ರಯತ್ನವನ್ನು ನಡೆಸುತ್ತಿದ್ದಾರೆ ಎನ್ನುವ ಮಾತನ್ನು ನಾನು ಓದಿದೆ ಮತ್ತು ಕೇಳಿದೆ. ಇವತ್ತಿನ ದಿವಸ ನನಗನ್ನಿಸುತ್ತದೆ, ನಮ್ಮ ದೇಶದಲ್ಲಿ ಈಗಿರತಕ್ಕ ಈ ಸಮಸ್ಯೆಗಳನ್ನು ನೋಡಿದರೆ ನಾವು ನಮ್ಮ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸುವುದಕ್ಕೆ ನಮಗಿರತಕ್ಕ ಸಮಸ್ಯೆಗಳನ್ನು ಬಗೆಹರಿಸುವುದನ್ನು ಬಿಟ್ಟು, ಜಾತಿಯ ಹೆಸರಿನಲ್ಲಿ ದೇವರ ಹೆಸರಿನಲ್ಲಿ, ಈ ದೇಶವನ್ನು ಅಲ್ಲೋಲಕಲ್ಲೋಲ ಮಾಡುವಂತಹ ಪರಿಸ್ಥಿತಿ ಬಂದೊಗಿದೆ. ಆದುದರಿಂದ ನಾವೆಲ್ಲರೂ ಒಗ್ಗಟ್ಟಾಗಿ ದೇಶದ ಚಿಂತನೆಗೋಸ್ಕರ ಈ ದೇಶವನ್ನು ಕಾಪಾಡುವುದಕ್ಕೋಸ್ಕರ, ಸ್ವಾತಂತ್ರ್ಯವನ್ನು ಕಾಪಾಡುವುದಕ್ಕೋಸ್ಕರ ನಮ್ಮ ಹಿಂದೂತ್ವವನ್ನು ನಮ್ಮ ಧರ್ಮವನ್ನು ಕಾಪಾಡುವುದಕ್ಕೋಸ್ಕರ ನಾವೆಲ್ಲರೂ ಸತತವಾಗಿ ಪ್ರಯತ್ನ ಮಾಡಬೇಕು ಮತ್ತು ನಾವೆಲ್ಲರೂ ಒಂದಾಗಬೇಕೆಂದು ಈ ಸಂದರ್ಭದಲ್ಲಿ ಹೇಳಿ, ನನಗೆ ಗೊತ್ತಿರುವ ಹಾಗೆ ಪೋಲೀಸ್ ಅಧಿಕಾರಿಗಳು ಬಹಳಷ್ಟು ಚೆನ್ನಾಗಿ ಕೆಲಸ ಮಾಡಿದ್ದಾರೆ.

ನಮ್ಮ ಜಿಲ್ಲೆಯಲ್ಲಿ ಡಿ.ಸಿ., ಎಸ್.ಪಿ. ಲೋಕಲ್ ಪೋಲೀಸ್ ಅಧಿಕಾರಿಗಳು ಬಹಳ ಚೆನ್ನಾಗಿ ಕೆಲಸ ಮಾಡಿದ್ದಾರೆ. ಅವರು ಬಿಗಿ ರೀತಿಯಲ್ಲಿ ಕೆಲಸ ಮಾಡದಿದ್ದರೆ ಈ ವಿಚ್ಛಿದ್ರಕಾರಕ ಶಕ್ತಿಗಳು ಇನ್ನೂ ಕೂಡಾ ಅನೇಕ ತೊಂದರೆಗಳನ್ನು ಕೊಡುತ್ತಿದ್ದರು ಅನೇಕ ಶಾಪ್‌ಗಳನ್ನು, ಜನಗಳನ್ನು ಸುಡುತ್ತಿದ್ದರು. ಈ ಸಂದರ್ಭದಲ್ಲಿ ನಾನು ಒಂದು ಮಾತು ಹೇಳುತ್ತೇನೆ. ಶ್ರೀ ಅಜೀಜ್ ಸೇಟ್ ಅವರು ಬಂದಾಗ ನಾನು ಚನ್ನರಾಯಪಟ್ಟಣದ ಬೀದಿಗಳಲ್ಲಿ ನಮ್ಮ ಡಿಸ್ಟ್ರಿಕ್ಟ್ ಮಿನಿಸ್ಟರ್ ಪುಟ್ಟಸ್ವಾಮಿ ಗೌಡರು, ಲೋಕಸಭಾ ಸದಸ್ಯರಾದ ಶ್ರೀಕಂಠಯ್ಯನವರನ್ನು ಕರೆದುಕೊಂಡು ಹೋದಂಥ ಸಂದರ್ಭದಲ್ಲಿ ಒಂದು ಚಿತ್ರವನ್ನು ನೋಡಿದೆ. ಒಂದೇ ಒಂದು ಕಟ್ಟಡದಲ್ಲಿ ಭಾಗ ಮಾಡಿ ಆರು ಗುಡಿಸಲುಗಳನ್ನು ಹಾಕಿದ್ದಾರೆ, ಅಲ್ಲಿರತಕ್ಕಂಥಾದ್ದು ಕೆಲವು ಅಲ್ಯೂಮಿನಿಯಂನ ಪಾತ್ರೆಗಳು, ಅವರು ಕೂಲಿ ಮಾಡಿ, ಹಳೇ ಸಾಮಾನುಗಳನ್ನು ಎಲ್ಲಿಂದಲಾದರೂ ಹೊತ್ತುಕೊಂಡು ಬಂದು ಮಾರಿ ಜೀವನ ಮಾಡತಕ್ಕಂಥವರು. ಆ ಆರು ಗುಡಿಸಲುಗಳಲ್ಲಿ ೩೦–೪೦ ಜನ ವಾಸ ಇದ್ದರೆ ಅಂತಹ ಗುಡಿಸಲುಗಳನ್ನು ಬೆಂಕಿಹಾಕಿ ಪೆಟ್ರೋಲ್ ಹಾಕಿ ಸುಟ್ಟುಹಾಕಿದರು. ಅವರೆಲ್ಲರೂ ಹೊರಗೆ ನಿಂತು. ಗುಡಿಸಲುಗಳು ಸುಟ್ಟುಹೋದಂಥ ಸಂದರ್ಭದಲ್ಲಿ ನೋಡಿದರೆ ಅವರಿಗೆ ಇರುವುದಕ್ಕೆ ಬೇರೆ ಜಾಗ ಇಲ್ಲ. ತಹಸೀಲ್ದಾರರು ನಾವುಗಳು ಸೇರಿಕೊಂಡು ಅವರಿಗೆ ಎಂಟು ಹತ್ತು ದಿವಸ ಊಟ ಬಟ್ಟೆ ಕೊಡಬೇಕಾದ ಸ್ಥಿತಿ ಇತ್ತು. ಇಂತಹವರ ಗುಡಿಸಲುಗಳನ್ನು ಸುಡುವುದಕ್ಕೆ ಅವರು ಯಾವ ರೀತಿ ಕಾರಣರು? ಇವರಿಗೂ ರಾಮಜನ್ಮ ಭೂಮಿಗೂ, ಅದ್ವಾನಿಯವರ ಅರೆಸ್ಟ್‌ಗೂ ಏನು ಸಂಬಂಧ? ಯಾವ ರೀತಿ ಇವರು ಅದಕ್ಕೆ ಕಾರಣರಾಗುತ್ತಾರೆ? ತೆಂಗಿನ ತೋಟಗಳನ್ನು ನಾಶ ಮಾಡಿದ್ದಾರೆ, ಸಾವಿರಾರು ತೇಗಿನ ಮರಗಳಲ್ಲಿ ತೆಂಗಿನ ಕಾಯಿ ಕೆಡುವುದಲ್ಲದೆ, ಮನೆಯಲ್ಲಿ ಇದ್ದಂಥ ೧೦–೧೫ ಸಾವಿರ ಕೊಬರಿಗಳನ್ನು ತುಂಬಿಕೊಂಡು ಹೊರಟು ಹೋದರು. ಕಾರಣ ಇಷ್ಟೇ. ಪ್ರಚೋದನೆ ಮಾಡತಕ್ಕವರು ಇದ್ದಾಗ, ಅವರಿಗೆ ಹಣ ಸಿಗುತ್ತದೆ ಮತ್ತು ಪ್ರಾಪರ್ಟಿ ಸಿಗುತ್ತದೆ ಎಂದು ಗೊತ್ತಾದಾಗ ಎಲ್ಲರೂ ಪ್ರಚೋದನೆಗೆ ಒಳಗಾಗುತ್ತಾರೆ. ಆದರೆ ಅವರೆಲ್ಲರೂ ಬಿಜೆಪಿ ಜೊತೆ, ಆರ್ ಎಸ್.ಎಸ್. ಜೊತೆ ಇದ್ದಾರೆ ಎಂದು ತಿಳಿದುಕೊಂಡಿದ್ದರೆ ಅದು ತಪ್ಪು ಭಾವನೆಯೆಂದು ನಾನಾದರೂ ತಿಳಿದುಕೊಂಡಿದ್ದೇನೆ. ಅವರೆಲ್ಲರೂ ಲೂಟಿಯಲ್ಲಿ, ಸಿಕ್ಕಿದ್ದನ್ನು ಬಾಚಿಕೊಂಡು ಹೋಗುವುದರಲ್ಲಿ ಅವರು ಭಾಗಿಗಳಾಗಿರಬಹುದು, ಆದರೆ ಅವರೆಲ್ಲರೂ ಕೂಡಾ ಇವರ ಜೊತೆ ಇದ್ದಾರೆ, ರಾಮನ ಹೆಸರು ಹೇಳಿದರೆ ಹಿಂದೆ ಬರುತ್ತಾರೆ ಎಂಬುದು ಸುಳ್ಳು.

ರಾಮನ ದೇವಸ್ಥಾನವನ್ನು ಅಯೋಧ್ಯೆಯಲ್ಲಿ ಕಟ್ಟುವುದಾದರೆ ಅಯೋಧ್ಯೆಯಲ್ಲಿ ಕಟ್ಟಿಕೊಳ್ಳುತ್ತಾರೆ. ನಮಗೆ ಏನಾಗಬೇಕು? ನಮ್ಮ ಊರಿನಲ್ಲಿ ಬೇರೆ ಊರಿನವರು ಬಂದು ದೇವಸ್ಥಾನ ಕಟ್ಟುವುದಕ್ಕೆ ಬಂದರೆ ನಾನು ಸುಮ್ಮನೆ ಬಿಡುತ್ತೇನೆಯೇ? ನಿಮ್ಮ ಊರಿನಲ್ಲಿ ದೇವಸ್ಥಾನ ಹಾಳು ಬಿದ್ದು ಹೋಗಿದ್ದರೆ, ಯಾರೋ ಬಂದು ಕಟ್ಟುವುದಕ್ಕೆ ಬಂದರೆ ನೀವು ಬಿಡುತ್ತೀರಾ? ಅಯೋಧ್ಯೆಯಲ್ಲಿ ಮುನಿಸಿಪಾಲಿಟಿ ಇದೆ, ಅವರು ಮಾಡಿಕೊಳ್ಳುತ್ತಾರೆ. Let the Ayodhya Municipality do whatever they like. Let that Government do whatever they want. Moreover, the issue is in the Court. It is judiciary. Let them decide what they want to do. Who are these people to go with some people and ransack and enter into that Masjid. Let them demolish or shift it. Why these people should go there for a simple thing? ಒಂದು ಕಡೆ ಲಾ ವಯಲೇಟ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ, ಇನ್ನೊಂದು ಕಡೆ ಪ್ರಚೋದನೆ ಮಾಡುತ್ತಾರೆ. ಇನ್ನೊಂದು ಕಡೆ ಡಿಮಾಲಿಷನ್ ಮಾಡಬೇಕೆಂದು ಹೇಳುತ್ತಾರೆ, ಇನ್ನೊಂದು ಕಡೆ ಅದನ್ನು ಷಿಫ್ಟ್ ಮಾಡಬೇಕೆಂದು ಹೇಳುತ್ತಾರೆ. ಹೀಗೆ ಒಂದು ರಾಜಕಾರಣಕ್ಕೋಸ್ಕರ ಒಂದು ಪಾರ್ಟಿ ಬೆಳೆಸುವುದಕ್ಕೋಸ್ಕರ, ದೇಶವನ್ನು ಅಲ್ಲೋಲಕಲ್ಲೋಲ ಮಾಡುವಂತಹ ಈ ದುಶ್ಯಕ್ತಿಗಳನ್ನು ತಡೆಯದೇ ಹೋದರೆ ಯಾವ ಸ್ಥಿತಿಯನ್ನು ನಾವು ಉತ್ತರ ಇಂಡಿಯಾದಲ್ಲಿ ನೋಡುತ್ತಿದ್ದೇವೆಯೋ ಅದನ್ನೇ ದಕ್ಷಿಣ ಇಂಡಿಯಾದಲ್ಲೂ ನೋಡಬೇಕಾಗುತ್ತದೆ, ನಮ್ಮ ಸಂಸ್ಕೃತಿಯೇನೂ ಕಡಿಮೆ ಇಲ್ಲ, ನಾವು ದ್ರಾವಿಡರು, ಆರ್ಯರಿಗಿಂತ ಮೊದಲು ಇದ್ದಂಥ ದೊಡ್ಡ ಸಂಸ್ಕೃತಿಯನ್ನು ಹೊಂದಿದ್ದವರು ದಕ್ಷಿಣದವರು. ಸಂಸ್ಕೃತಿಯ ಬಗ್ಗೆ ಮಾತನಾಡುವುದಾದರೆ ಇವತ್ತು ಆರ್ಯರೂ ಇಲ್ಲ, ದ್ರಾವಿಡರೂ ಇಲ್ಲ. ಎಲ್ಲಾ ಕನ್‌ವರ್ಟೆಡ್ ಪೀಪಲ್ ಇವರು ಹಿಂದೂ, ಇವರು ಮುಸ್ಲಿಂ, ಇವರು ಕ್ರಿಶ್ಚಿಯನ್ ಎಂದು ಹೇಳುತ್ತಾರೆ. ಅವರೆಲ್ಲರೂ ಕನ್‌ವರ್ಟೆಡ್ ಪೀಪಲ್. ಈ ಕನ್‌ವರ್ಷನ್ ಏತಕ್ಕೆ ಆಯಿತು. ಏತಕ್ಕೆ ಮತಾಂತರ ಹೊಂದಿದರು ಎಂದರೆ ಅದಕ್ಕೆ ಹಿಂದೂ ಧರ್ಮದ ಗೋಡ್‌ಗಳೇ ಕಾರಣ. ದೇವಸ್ಥಾನ ಕಟ್ಟತಕ್ಕಂಥ ಸಂದರ್ಭದಲ್ಲಿ ಎಲ್ಲರೂ ಸೇರಿ ಕಟ್ಟುತ್ತಾರೆ. ವಿಗ್ರಹ ಎಲ್ಲರೂ ಸೇರಿ ತೆಗೆದುಕೊಂಡು ಹೋಗಿ ಅಲ್ಲಿ ಇಡುತ್ತಾರೆ. ದೇವಸ್ಥಾನ ಕಟ್ಟಿ ಮಾವಿನ ಸೊಪ್ಪಿನ ನೀರನ್ನು ಹಾಕಿದ ತಕ್ಷಣ ಒಬ್ಬ ಒಳಗಡೆ ಸೇರುತ್ತಾನೆ, ಒಬ್ಬ ಮಧ್ಯ ಸೇರುತ್ತಾನೆ, ಯಾರು ಕಲ್ಲನ್ನು ಹೊತ್ತುಕೊಂಡು ಬಂದು ಹಾಕಿದ್ದ ಅವನು ಹೊರಗಡೆ ಉಳಿದುಕೊಳ್ಳುತ್ತಾನೆ. ಇದು ಎಂತಹ ಧರ್ಮ. ಇದು ಹಿಂದೂ ಧರ್ಮವೇ? ಹಿಂದೂ ಧರ್ಮಕ್ಕೆ ಇತಿಹಾಸ ಇದೆ. ಧರ್ಮ ಸ್ಥಾಪನೆ ಮಾಡಿದ್ದು ಹೇಗೆ? ವರ್ಣಭೇದ ಏತಕ್ಕೆ ಬಂತು? ಯಾರು ಬ್ರಹ್ಮತ್ವ ಪಡೆದಿದ್ದರು ಅವರು ಬ್ರಾಹ್ಮಣರು ಎಂದು ಕರೆದರು. ಯಾರು ವ್ಯಾಪಾರ ಮಾಡುತ್ತಾರೆ ಅವರು ವೈಶ್ಯರು ಎಂದು ಕರೆದರು. ಇವತ್ತು ಎಲ್ಲರೂ ವ್ಯಾಪಾರ ಮಾಡುತ್ತಾರೆ, ಎಲ್ಲರೂ ಹೊಲ ಉಳುತ್ತಾರೆ, ಎಲ್ಲರೂ ಆಳುವುದಕ್ಕೆ ಇಲ್ಲಿ ಬಂದು ಕುಳಿತಿದ್ದಾರೆ. ಇವರನ್ನು ಏನೆಂದು ಕರೆಯೋಣ? ನಾವು ಹಾಕಿಕೊಳ್ಳತಕ್ಕಂಥ ಬಟ್ಟೆ, ನಮ್ಮ ಊಟ ನಮ್ಮ ಹ್ಯಾಬಿಟ್ಸ್ ಇದೆಲ್ಲಾ ತೆಗೆದುಕೊಂಡರೆ ಎಲ್ಲಿದೆ, ಜಾತಿ, ಎಲ್ಲಿದೆ ಧರ್ಮ? ದುರ್ಬೀನು ಹಾಕಿಕೊಂಡು ಹುಡುಕಬೇಕಾಗುತ್ತದೆ. ಇಂತಹ ಕ್ಷುಲ್ಲಕ ಕಾರಣಗಳಿಗೋಸ್ಕರ ಪ್ರಚೋದನೆ ಮಾಡಿ, ದೇಶವನ್ನು ಅಲ್ಲೋಲಕಲ್ಲೋಲ ಮಾಡಿ, ಈ ದೇಶವನ್ನು ಒಂದು ಧಾರುಣ ಸ್ಥಿತಿಗೆ ತರತಕ್ಕಂಥ ವ್ಯವಸ್ಥೆ ಏನಿದೆ ಇದಕ್ಕೆ ಕಾರಣರು ಯಾರಿದ್ದಾರೆ ಇವರನ್ನು ನಾವು ಸರಿ ಮಾಡದೇ ಹೋದರೆ, ರಾಜಕೀಯ ಸರಿ ಹೋಗುವುದಿಲ್ಲ. ದೇಶ ಸರಿ ಹೋಗುವುದಿಲ್ಲ, ಸಮಾಜ ಸರಿ ಹೋಗುವುದಿಲ್ಲ ಎಂಬ ಮಾತನ್ನು ಹೇಳಿ ನನಗೆ ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ....

ಶ್ರೀ ಪಿ.ಜಿ.ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ ಈಗ ೫-೩೦ ಗಂಟೆಯಾಗುತ್ತಿದೆ, ಮಾತನಾಡುವವರು ಇನ್ನು ಬಹಳ ಜನ ಇದ್ದಾರೆ. ಇದು ಬಹಳ ಮುಖ್ಯವಾದ ವಿಷಯ ಇದೆ. ಕನಿಷ್ಟ ಪಕ್ಷ ಒಬ್ಬೊಬ್ಬರು ಅರ್ಧ ಗಂಟೆ ಮಾತನಾಡಿದರೂ ಸಾಕಷ್ಟು ಸಮಯ ಬೇಕಾಗುತ್ತದೆ. ನಾವು ಸಹ ಮಾತನಾಡುವವರಿದ್ದೇವೆ. ಆದ್ದರಿಂದ ನಾಳೆ ಸಹ ನಾವು ಚರ್ಚೆ ಮುಂದುವರಿಸೋಣ. ನಾವು ಸರ್ಕಾರಕ್ಕೆ ಒಳ್ಳೆಯ ಸಲಹೆಗಳನ್ನು ಕೊಡಬೇಕಾಗಿದೆ. ಇಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಇದ್ದಾರೆ...

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ಚರ್ಚೆ ಮೊಟಕು ಮಾಡಬೇಕೆನ್ನುವ ಉದ್ದೇಶ ಸರ್ಕಾರಕ್ಕೆ ಇಲ್ಲ, ನಾವು ಬಿ.ಎ.ಸಿ. ಯಲ್ಲಿ ತೀರ್ಮಾನ ಮಾಡಿದಂತೆ ಇವತ್ತು ಚರ್ಚೆ ಮುಗಿಯಬೇಕು. ನಾಳೆ ನಾನು ಉತ್ತರ ಕೊಡಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯಾ.—ನಾವು ಟಾಡಾ ಬಗ್ಗೆ ಮಾತನಾಡಿ ಅನೇಕ ಸಲಹೆಗಳನ್ನು ಸರ್ಕಾರಕ್ಕೆ ಕೊಡಬೇಕಾಗುತ್ತದೆ. ಈಗಾಗಲೇ ಸಾಕಷ್ಟು ಸಮಯ ಆಗಿದೆ. ಪತ್ರಿಕರ್ತರಿಗೂ ತೊಂದರೆ ಆಗಿದೆ.

ಶ್ರೀ ಎಸ್. ಬಂಗಾರಪ್ಪ.—ನಾವು ಇವತ್ತು ಇನ್ನು ಸ್ವಲ್ಪ ಹೊತ್ತು ಕುಳಿತುಕೊಂಡು ಮಾತನಾಡುವವರು ಮಾತನಾಡಲಿ. ನಾಳೆ ಬೆಳಿಗ್ಗೆ ಸ್ವಲ್ಪ ಬೇಗ ಸಭೆ ಸೇರೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯಾ.—ನಾಳೆ ೧೦ ಗಂಟೆಗೆ ಸಭೆ ಸೇರೋಣ. ಮೊದಲು ಪ್ರಶ್ನೋತ್ತರ ವೇಳೆ ಆಮೇಲೆ ಉಳಿದ ಕಾರ್ಯಕಲಾಪಗಳು. ಈ ವಿಷಯಕ್ಕೆ ಎರಡು ಗಂಟೆಗಳ ಕಾಲ ಚರ್ಚೆಗೆ ಅವಕಾಶ ಕೊಡಿ. ಆಮೇಲೆ ನೀವು ಉತ್ತರ ಕೊಡಿ.

ಶ್ರೀ ಬಿ ಎಸ್. ಯಡಿಯೂರಪ್ಪ.—ಇನು ಅನೇಕ ಜನ ಮಾತನಾಡುವ ಸದಸ್ಯರು ಇದ್ದಾರೆ. ಆದ್ದರಿಂದ ನಾಳೆ ಬೆಳಿಗ್ಗೆ ಸಭೆ ಸೇರಿ ಪ್ರಶ್ನೋತ್ತರ ಇತರೆ ಕಾರ್ಯಕಲಾಪಗಳನ್ನು ಮುಗಿಸಿ ಈ ವಿಷಯದ ಬಗ್ಗೆ ಚರ್ಚೆ ಮಾಡೋಣ. ಮಧ್ಯಾಹ್ನ ಊಟದ ಸಮಯದ ನಂತರ ಸೇರಿದ ತಕ್ಷಣ ತಾವು ಉತ್ತರ ಕೊಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ.—ಈ ವಿಷಯದ ಚರ್ಚೆಗೆ ೨ ಗಂಟೆ ಅವಕಾಶ ಕೊಟ್ಟರೆ ಒಳ್ಳೆಯದು.

೫–೪೦ ಪಿ.ಎಂ.

† ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಅಧ್ಯಕ್ಷರೇ, ಎರಡು ತಿಂಗಳಿಂದ ಕರ್ನಾಟಕ ರಾಜ್ಯದಲ್ಲಿ ನಡೆದ ಕೋಮು ಗಲಭೆಯ ವಿಚಾರದಲ್ಲಿ ಅತ್ಯಂತ ದುಃಖದಿಂದ ಕೆಲವು ವಿಚಾರಗಳನ್ನು ನಾನು ಹೇಳಲಿಕ್ಕೆ ಅಪೇಕ್ಷೆ ಪಡುತ್ತೇನೆ. ಭಾರತ ದೇಶದಲ್ಲಿ ಕರ್ನಾಟಕ ರಾಜ್ಯದ ಕೋಮು ಸಾಮರಸ್ಯಕ್ಕೆ ಬಹಳ ಅನುಕೂಲವಾದಂಥ ರಾಜ್ಯವೆಂದು ಹೇಳಿ ಒಳ್ಳೆಯ ಕೀರ್ತಿ ಪಡೆದಿದೆ. ಕರ್ನಾಟಕ ರಾಜ್ಯ ಚಿನ್ನದ ನಾಡು, ಗಂಧದ ನಾಡು, ತೆಂಗಿನ ಕಂಗಿನ ಬಾಳೆಯ ಹೊನ್ನಿನ ನಾಡು ಎಂದೆಲ್ಲಾ ನಾವು ಹೊಗಳುತ್ತಿದ್ದೇವೆ. ಈ ಕರ್ನಾಟಕದ ಇದೀಗ ಎರಡು ತಿಂಗಳಿನಿಂದ ನಡೆದಿರತಕ್ಕಂಥ ಈ ಕೋಮು ಘರ್ಷಣೆ ಈ ಕೋಮು ಕಲಹ ಇದರಿಂದ ನಮ್ಮ ಕರ್ನಾಟಕಕ್ಕೆ ಅತ್ಯಂತ ಅಪಕೀರ್ತಿ ಬಂದಿದೆಯೆಂದು ನಾನಾದರೂ ಹೇಳಲಿಕ್ಕೆ ಅಪೇಕ್ಷೆಪಡುತ್ತೇನೆ. ನಿಜವಾಗಿ ನೋಡಿದರೆ ಮೊನ್ನೆ ಯಾವುದೋ ಒಂದು ಪತ್ರಿಕೆಯಲ್ಲಿ ವಾಷಿಂಗ್‌ಟನ್‌ನವರೊಬ್ಬರು ಹೇಳಿದ್ದಾರೆ, ಇವತ್ತು ಬದುಕಬೇಕಾದರೆ ಕರ್ನಾಟಕದಲ್ಲಿ ಹೋಗಬಹುದು, ಬೆಂಗಳೂರಿನಲ್ಲಿ ಉಳಿಯಬಹುದೆಂದು, ಅಷ್ಟು ಮೇಲ್ಮೈಯಲ್ಲಿ ಅಷ್ಟು ಗೌರವದಲ್ಲಿ ಈ ಬೆಂಗಳೂರು ಬಗ್ಗೆ ಅಮೇರಿಕಾದ ವಾಷಿಂಗ್‌ಟನ್‌ನಲ್ಲಿರತಕ್ಕಂಥ ಜನ ಹೇಳುತ್ತಾರೆಂದರೆ, ಇಲ್ಲಿ ಅಂಥಾ ಒಂದು ವಾತಾವರಣ, ಅಂಥಾ ಒಂದು ಪರಿಸ್ಥಿತಿ ಇರತಕ್ಕಂಥ ಒಂದು ಸುಂದರವಾದ ನಾಡು. ಆದರೆ ಈ ಎರಡು ತಿಂಗಳಲ್ಲಿ ನಡೆದಂಥ ಕಲಹ, ಅದು ಚನ್ನಪಟ್ಟಣದಲ್ಲಾಗಲೀ, ಅದು ರಾಮನಗರದಲ್ಲಾಗಲೀ, ಅದು ಕೋಲಾರದಲ್ಲಾಗಲಿ, ಅದು ಶ್ರೀನಿವಾಸಪುರದಲ್ಲಾಗಲೀ, ಅದು ದಾವಣಗೆರೆಯಲ್ಲಾಗಲೀ, ಅದು ಹೊಸದುರ್ಗದಲ್ಲಾಗಲೀ ಅಥವಾ ತುಮಕೂರಿನಲ್ಲಾಗಲೀ, ಕುಣಿಗಲ್‌ನಲ್ಲಾಗಲೀ, ಅದು ಚೆನ್ನರಾಯಪಟ್ಟಣದಲ್ಲಾಗಲೀ, ಅಥವಾ ಚಾಮರಾಜನಗರದಲ್ಲಾಗಲೀ ಅಥವಾ ಮಡಕೇರಿಯಲ್ಲಾಗಲೀ, ಸೋಮವಾರಪೇಟೆಯಲ್ಲಾಗಲೀ ಅಥವಾ ಎಲ್ಲೇ ಆಗಲೀ, ಇಷ್ಟೆಲ್ಲಾ ಘಟನೆಗಳಲ್ಲಿ ಆದಂಥ ಕೋಮು ಘರ್ಷಣೆಯಲ್ಲಿ ನಿರಪರಾಧಿ ಜನಗಳು ಅದರಲ್ಲಿ ಕಷ್ಟಪಟ್ಟಿದ್ದಾರೆ; ಜೀವವನ್ನು ತೆತ್ತಿದ್ದಾರೆ; ಆಸ್ತಿ ನಾಶವಾಗಿದೆ. ಇದು ನಾವು ಗ್ರಹಿಸಬೇಕಾದ ವಿಚಾರ. ಯಾವ ವಿಷಯವೂ ಗೊತ್ತಿಲ್ಲದಿದ್ದಂಥ ಜನ, ನಿರಪರಾಧಿ ಜನಗಳು. ಗಲ್ಲಿಗೆ ಗಲ್ಲಿಯೇ ಸುಡತಕ್ಕಂಥ ಒಂದು ವ್ಯವಸ್ಥೆ, ಈ ರೀತಿಯಲ್ಲಿ ಒಂದು ಪೂರ್ವಾಗ್ರಹವಾಗಿ ಯಾವುದೋ ಒಂದು ಚಿತ್ರಣ ಮಾಡಿ ಆ ರೀತಿಯಲ್ಲಿ ಕೆಲವು ಕಡೆ ಘರ್ಷಣೆ ಮಾಡಿದಂಥ ವಿಚಾರ ತಮಗೆ ಗೊತ್ತಿದೆ. ಚನ್ನರಾಯಪಟ್ಟಣದಲ್ಲಿ ನಾವು ಕೇಳಿದ ಹಾಗೆ ಒಂದು ಗಲ್ಲಿಗೆ ಗಲ್ಲಿಯೇ, ರಾತ್ರೋ ರಾತ್ರಿ ಬೇಕಾದಷ್ಟು ಜನ ಬಂದು ಸುಟ್ಟುಬಿಟ್ಟರು. ಅದರಲ್ಲಿ ಮುಸ್ಲಿಮರು ಹೆಚ್ಚಿಗೆ ಇರಬಹುದು ಅಥವಾ ಹಿಂದೂಗಳು ಕಡಿಮೆ ಇರಬಹುದು. ಅಥವಾ ಹಿಂದುಗಳು ಹೆಚ್ಚು ಇರಬಹುದು, ಮುಸ್ಲಿಮರುಗಳು ಕಮ್ಮಿ ಇರಬಹುದು. ಆ ಪ್ರಶ್ನೆ ಅಲ್ಲ. ನಿರಪರಾಧಿ ಜನಗಳ ಕೊಲೆಯಾಗಿದೆ. ಆ ಹಕ್ಕು ನಮಗ್ಯಾರಿಗೂ ಇಲ್ಲ. ಒಂದು ವನಸ್ಪತಿಯನ್ನು ಉಂಟು ಮಾಡಲಿಕ್ಕೆ ಸಾಧ್ಯವಿಲ್ಲದಂಥ ನಾವು ಒಂದು ಚಿಗುರನ್ನು ಸ್ಥಾಪನೆ ಮಾಡಲಿಕ್ಕೆ ಸಾಧ್ಯವಿಲ್ಲದಂಥ ನಾವು, ಕವಿ ಪುಟ್ಟಪ್ಪನವರು ಹೇಳುತ್ತಾರೆ.—ಒಂದು ಹೂವನ್ನು ಕಿತ್ತುಕೊಳ್ಳುವುದಕ್ಕೆ ಅಧಿಕಾರವಿಲ್ಲ. "ಅಲ್ಲಿರಲಿಹ ಹೂವು ನೀನು ಸೃಷ್ಟಿಸಲಾರದ ಚಲುವಿಗೆ ನಿನ್ನಿಂದ ಏತಕ್ಕೆ ಸಾವು" ಎಂದು ; ಹೀಗಿದ್ದೂ ನಿರ್ದಯವಾಗಿ ಕೆಲವರನ್ನು ಕೊಲ್ಲತಕ್ಕಂಥ ಒಂದು ಪರಿಸ್ಥಿತಿಯು ಕರ್ನಾಟಕ ರಾಜ್ಯದಲ್ಲಿ ನಡೆದು ಹೋಯಿತಲ್ಲ ? ಎಂದು ನನಗೆ ಬಹಳ ದುಃಖವಾಗುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನನ್ನ ಕ್ಷೇತ್ರದಲ್ಲಿ ಕೂಡ ಎರಡು ಭಾರಿ ಗಲಭೆಗಳು ನಡೆದಿವೆ. ದೇವರ ದಯೆಯಿಂದ ನಾವು

ಸಕಾಲಿಕವಾಗಿ ಶಾಂತಿ ಸಮಿತಿಯನ್ನು ರಚಿಸಿ, ನಾವುಗಳು ಕವನ, ಭಾಷಣಗಳನ್ನು ಸಾರ್ವಜನಿಕರಿಗೆ ಏರ್ಪಡಿಸಿ, ನಾವುಗಳೆಲ್ಲರೂ ಒಗ್ಗಟ್ಟಿನಿಂದ ಇರಬೇಕು, ನಾವುಗಳೆಲ್ಲರೂ ಅಣ್ಣತಮ್ಮಂದಿರಂತೆ ಬಾಳಬೇಕೆಂದು ಸಾರಿದ್ದೇವೆ. ನಾವೆಲ್ಲರೂ ಭಾರತೀಯರು. ಭಾರತೀಯರಾಗಿ ಉಳಿಯಬೇಕೆಂದು ಬೇಡಿಕೊಂಡಿದ್ದೇವೆ. ದೇಶವನ್ನು ಒಂದಾಗಿ, ಪುಷ್ಟಿಕರವಾಗಿ ಬೆಳೆಸತಕ್ಕಂಥ ಒಂದು ಹೊಣೆಗಾರಿಕೆಯನ್ನು ನಾವು ಹೊತ್ತಿದ್ದೇವೆ ಎಂದು ಮನದಟ್ಟು ಮಾಡಿಕೊಡುವಲ್ಲಿ ನಾವು ಶ್ರಮ ಪಟ್ಟಿದ್ದೇವೆ. ಶಾಂತಿ ಸಮಿತಿಯ ಮೂಲಕ ಎಷ್ಟೋ ಉತ್ತಮ ಕಾರ್ಯವನ್ನು ಸಂದಿಗ್ಧ ಕಾಲದಲ್ಲಿ ನಾವುಗಳು ಮಾಡಿದ್ದೇವೆ. ಉಲ್ಲಾಳದಲ್ಲಿ ನಡೆದ ಗಲಭೆಯಿಂದ ೭–೮ ಜನರಿಗೆ ಚಾಕು ಇರಿತದ ಗಾಯಗಳು ಆಗಿರಬಹುದು, ಅವರು ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ, ಕೆಲವೊಂದು ಜನರಿಗೆ ಸಂಬಂಧಪಟ್ಟ ಸ್ವತ್ತು ಕೂಡ ನಷ್ಟವಾಗಿರಬಹುದು. ಆದರೆ ದೇವರ ದಯೆಯಿಂದ ಜೀವಹಾನಿ ಮಾತ್ರ ಆಗಲಿಲ್ಲ. ಅದಕ್ಕೆ ಮುಖ್ಯವಾಗಿ ಅಲ್ಲಿನ ಪೋಲೀಸ್ ಅಧಿಕಾರಿಗಳ ಕರ್ತವ್ಯನಿಷ್ಠೆ ಕೂಡ ಕಾರಣವಾಗಿದೆ ಎಂದು ಹೇಳಬಯಸುತ್ತೇನೆ. ಅವರು ಒಳ್ಳೆಯ ರೀತಿಯಿಂದ ನಮಗೆ ಸಹಕಾರ ಕೊಟ್ಟಿದ್ದರಿಂದ ಉಳ್ಳಾಲದಲ್ಲಿ ಹೆಚ್ಚು ಗಲಭೆ ಆಗದಿರುವಂತಹ ಒಂದು ಪರಿಸ್ಥಿತಿ ನಿರ್ಮಾಣ ಮಾಡಲು ಸಹಾಯವಾಯಿತು. ಅಲ್ಲಿಯ ಹಿಂದೂಗಳು, ಮುಸಲ್ಮಾನರು ಎಲ್ಲರೂ ಈ ಕುರಿತು ತಮ್ಮ ಸಹಕಾರ ಹಸ್ತವನ್ನು ನೀಡಿದ್ದಾರೆ. ಹೀಗೆ ಎಲ್ಲೇ ಆಗಲಿ, ಯಾರೇ ಆಗಲಿ ಗಲಾಟೆ ಮಾಡಿ ನಷ್ಟ ಉಂಟು ಮಾಡಿದರೆ ಯಾರಿಗೆ ಅದರಿಂದ ನಷ್ಟ? ಅದು ಭಾರತೀಯರಿಗೆ ಉಂಟಾದ ನಷ್ಟ ಎಂದು ನಾವು ಭಾವಿಸುವುದು ಬೇಡವೆ? ಇವೊತ್ತು ಭಾರತ ದೇಶದ ಸ್ವಾತಂತ್ರ್ಯ ಪೂರ್ವದಲ್ಲಿ ಮತ್ತು ಈ ದೇಶಕ್ಕೆ ಸ್ವಾತಂತ್ರ್ಯ ಗಳಿಸಿಕೊಳ್ಳಲಿಕ್ಕೆ ದೇಶವಾಸಿಗಳೆಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡಿದ್ದಾರೆ ಎಂಬುದನ್ನು ನಾವು ತಿಳಿದಿಲ್ಲವೇ? ಹಿಂದೂಗಳು, ಮುಸಲ್ಮಾನರು, ಜೈನರು ಸಿಖ್ಖರು, ಪಾರ್ಸಿಗಳು ಹೀಗೆ ಎಲ್ಲರೂ ಸೇರಿ ಒಗ್ಗಟ್ಟಿನಿಂದ ಕೆಲಸ ಮಾಡಿದ್ದರಿಂದ ನಮಗೆ ಸ್ವಾತಂತ್ರ್ಯ ಬಂತು. ಸರ್ದಾರ್ ಪಟೇಲ್, ಮೌಲಾನ ಅಜಾದ್, ಮಹಮದ್ ಅಲಿ ಶೌಕತ್, ಜವಾಹರಲಾಲ್ ನೆಹರೂ, ಬಾಬು ರಾಜೇಂದ್ರ ಪ್ರಸಾದ್, ಜಯಪ್ರಕಾಶ್ ನಾರಾಯಣ್, ಮುಂತಾದವರುಗಳು ಯಾವ ಉದ್ದೇಶವನ್ನು ಇಟ್ಟುಕೊಂಡು ಸ್ವಾತಂತ್ರ್ಯ ಹೋರಾಟ ಮಾಡಿದರು? ಆಗ ಎಲ್ಲಾ ಜಾತಿ, ಧರ್ಮದವರು ಒಗ್ಗಟ್ಟಾಗಿ ಕೆಲಸ ಮಾಡಿದ್ದರಿಂದ ಸ್ವಾತಂತ್ರ್ಯವನ್ನು ನಾವು ಪಡೆದುಕೊಂಡಿದ್ದೇವೆ, ಹೀಗೆ ಬಂದಿರತಕ್ಕಂಥ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳತಕ್ಕಂಥ ದಿಸೆಯಲ್ಲಿ ನಾವೆಲ್ಲರೂ ಒಂದಾಗಿ ದುಡಿಯ ಬೇಕಾಗಿದೆ. ನಮ್ಮ ದೇಶದ ರಕ್ಷಣೆಯ ಬಗ್ಗೆ ನಾವು ಶ್ರಮಿಸಬೇಕಾಗಿದೆ. ನಮ್ಮ ನಮ್ಮಲ್ಲಿ ಜಗಳ ಮಾಡಿಕೊಂಡು ನಿರಪರಾಧಿಗಳನ್ನು ಕೊಂದು ಅವರ ಸ್ವತ್ತುಗಳನ್ನು ನಾಶ ಮಾಡಿ ಅನ್ಯಾಯ ಮಾಡುವುದು ಸರಿಯಲ್ಲ. ಇದು ನಮ್ಮ ಭಾರತೀಯ ಸಂಸ್ಕೃತಿಯಲ್ಲ. ಇದು ನಮ್ಮ ಸಂಸ್ಕೃತಿಗೆ ಅಪಕೀರ್ತಿ ತರುತ್ತದೆ. ಇದರಿಂದ ನಮಗೆ ಬೇರೆ ದೇಶಗಳಿಂದ ಒಳ್ಳೆಯ ಹೆಸರೂ ಕೂಡ ಬರುವುದಿಲ್ಲ. ಇದರಿಂದ ನಮಗೆ ಅಪಕೀರ್ತಿ ಬರುತ್ತದೆ. ನಾವೆಲ್ಲರೂ ಅಣ್ಣತಮ್ಮಂದಿರಂತೆ ಬಾಳಬೇಕಾದುದು ನಮ್ಮ ಸಂಸ್ಕೃತಿಯ ಲಕ್ಷಣ. ಅದನ್ನು ಮುಂದುವರಿಸಿಕೊಂಡು ಹೋಗೋಣ. ಈ ಭೂಮಿ, ಗಾಳಿ, ಬೆಳಕು ಯಾರದ್ದು? ನಾವೆಲ್ಲರೂ ದೇವರ ಸೃಷ್ಟಿ. ಸೂರ್ಯ ಚಂದ್ರರ ಬೆಳಕಿನಲ್ಲಿ ಜಾತಿ, ಮತ, ಬೇಧಗಳು ಇವೆಯೋ? ಬಡವ–ಬಲ್ಲಿದ, ಮೇಲು, ಕೀಳು ಎಂಬ ಬೇಧ ಇದೆಯೋ? ಎಲ್ಲರಿಗೂ ಸರಿಸಮಾನವಾದ ಸೃಷ್ಟಿ ಇರುವುದರಿಂದ ನಮ್ಮಲ್ಲಿ ಸಮಾನತೆಯು ಇರಬೇಡವೇ? ನಾವು ಮೂಗಿನಲ್ಲಿ ತೆಗೆದುಕೊಳ್ಳತಕ್ಕಂಥ ಗಾಳಿ ಬಡವರಿಗೆ, ಕೋಟ್ಯಾಧೀಶರಿಗೆ, ಹರಿಜನರಿಗೆ, ಭಿಕ್ಷುಕರಿಗೆ, ಮುಸಲ್ಮಾನರಿಗೆ ಸನಾತನಿಗಳಿಗೆ ಎಂದು ಬೇರೆ ಬೇರೆ ಇದೆಯೋ? ಇಲ್ಲವೇ ಇಲ್ಲ; ದೇವರ ಈ ಸೃಷ್ಟಿಯಲ್ಲಿ ಸಮಾನತೆ ಎದ್ದು ಕಾಣುತ್ತದೆ. ಮನುಷ್ಯ ಕುಲಕ್ಕೆ ಈ ವಿಶಿಷ್ಟ ಸೃಷ್ಟಿಯನ್ನು ಕೊಟ್ಟಿದ್ದಾನೆ. ಇಲ್ಲಿರತಕ್ಕಂಥ ನಾವುಗಳೆಲ್ಲರೂ ಒಂದೇ. ನಮ್ಮಲ್ಲಿ ಯಾವ ಭೇದ ಭಾವ—ಮೇಲು/ಕೀಳು ಇರಲೇಬಾರದು—ನಮ್ಮಲ್ಲಿ ನಾವು ಜಗಳ ಮಾಡಿಕೊಂಡು ಹಾನಿ ಮಾಡಿಕೊಳ್ಳುವುದನ್ನು ಈ ಒಂದು ಹಿನ್ನೆಲೆಯಲ್ಲಿ ನೋಡಿದರೆ ಮತ್ತು ಈ ಜಗಳಕ್ಕೆ ಕಾರಣವನ್ನು ನೋಡಿದರೆ ಇದೊಂದು ಅಚ್ಚರಿಪಡುವಂಥ ವಿಚಾರವಾಗಿದೆ ಎಂದು ನನಗಾದರೂ ಅನ್ನಿಸುತ್ತಿದೆ. ಇವೊತ್ತು ನಡೆಯತಕ್ಕಂಥ ಅನೇಕ ಘರ್ಷಣೆಗಳನ್ನು ಕೆಲವೇ ಕೆಲವು ಕಿಡಿಗೇಡಿಗಳು, ಕುಹಕರು ಸೃಷ್ಟಿ ಮಾಡಿರತಕ್ಕಂಥಾದ್ದು ಆಗಿರುತ್ತದೆ. ವಿನಾ ಕಾರಣಕ್ಕಾಗಿ ಜಗಳವಾಡುತ್ತಾರೆ. ಒಂದು ಹೆಣ್ಣು ಮಕ್ಕಳ ವಿಚಾರವಾಗಿ ಕೆಲವೊಮ್ಮೆ ವಿನಾಕಾರಣವಾಗಿ ಜಗಳ ಪ್ರಾರಂಭವಾಗುತ್ತದೆ. ಹೀಗೆ ಜಗಳವಾಗಿ ಹೊಡೆದುಕೊಂಡು ರಕ್ತ ಬರಿಸಿಕೊಂಡವರು ಹೋಗಿ ತಮ್ಮ ಕೋಮಿನವರಿಗೆ ಹೋಗಿ ಹೇಳುತ್ತಾರೆ. ಹೀಗೆ ಇಬ್ಬರೂ ತಮ್ಮ ಕೋಮಿನವರಿಗೆ ಹೇಳಿಕೊಂಡಾಕ್ಷಣ ಅವರವರ ಜನರು ಸೇರಿಕೊಳ್ಳುತ್ತಾರೆ. ಆ ಸಂದರ್ಭದಲ್ಲಿ ಬುದ್ಧಿವಂತರು, ವಕೀಲರು, ಡಾಕ್ಟರು, ಎಲ್ಲರೂ ಒಗ್ಗಟ್ಟಾಗಿ ಒಂದು ದೊಡ್ಡ ಸಮೂಹವೇ ಕೂಡಿದಂತಾಗುತ್ತದೆ. ಇದರಲ್ಲಿ ಎಲ್ಲ ವರ್ಗದ

ಜನರೂ ಇರುತ್ತಾರೆ. ಇದಕ್ಕೆ ಯಾವ ಅರ್ಥವೂ ಇಲ್ಲ. ಯಾವ ಕಾರಣಕ್ಕಾಗಿ ಜಗಳವಾಯಿತು ಯಾರದ್ದು ತಪ್ಪು ? ಯಾರದ್ದು ಒಪ್ಪು ಎಂದು ನೋಡುವುದನ್ನು ಎಲ್ಲರೂ ಮರೆಯುವ ಸಂದರ್ಭವೇ ಹೆಚ್ಚು. ಈ ಕುರಿತು ಡಾ॥ ನಂಜಪ್ಪನವರು ಕೆಲವು ವಿಚಾರಗಳನ್ನು ಹೇಳಿದರು. ನಾವೆಲ್ಲರೂ ಒಂದೇ ಎಂಬ ಭಾವನೆಯನ್ನು ನಾವು ರೂಪಿಸಿಕೊಳ್ಳಬೇಕು. ಈ ರೀತಿಯಲ್ಲಿ ಪರಸ್ಪರ ಘರ್ಷಣೆ ಮಾಡಿಕೊಂಡು ನಾವು ಹಿಂದೆ ಬೀಳುವುದಕ್ಕೆ ಕಾರಣ ಏನು ಎಂದು ಕೂಡ ನಾವು ತಿಳಿದುಕೊಳ್ಳಬೇಕಾಗಿದೆ. ನಾವುಗಳು ಬುದ್ಧಿವಂತರು, ವಿದ್ಯಾವಂತರು. ವಿಜ್ಞಾನಿಗಳು, ನಾವು ಅಟಂಬಾಂಬ್ ತಯಾರಿಸುತ್ತೇವೆ, ಸ್ಪುಟ್ನಿಕ್ ತಯಾರಿಸುತ್ತೇವೆ, ಮುಂತಾಗಿ ಹಲವಾರು ಮಾನವನ ಸಾಧನೆಗಳನ್ನು ಸಾಧಿಸಿಕೊಂಡು ಬಂದಿದ್ದೇವೆ ಎಂದು ಹೇಳುವಂತಾದ್ದು ನಮ್ಮ ಹಿರಿಮೆ ಇರುವಾಗ ಈಗ ಇಂಥ ಜಗಳದಲ್ಲಿ ತೊಡಗಿ ಪರಸ್ಪರ ಭೇದಭಾವವನ್ನು ಹುಟ್ಟಿಸುವುದು ಸರಿಯಲ್ಲ.

ನಾವು ಈ ರೀತಿ ಜಗಳ ಮಾಡುವ ಬದಲು ಆ ಕೋಮಿನಲ್ಲಿ ಉಪದ್ರವ ಮಾಡುವ ಮನುಷ್ಯರನ್ನು ಅವರು, ಈ ಕೊಮಿನಲ್ಲಿ ಅನ್ಯಾಯ ಮಾಡುವ ಮನುಷ್ಯರನ್ನು ಇವರು ಹಿಡಿದು ಅವರೆಲ್ಲರನ್ನೂ ಪೋಲಿಸ್ ಸ್ಟೇಷನ್‌ಗೆ ಕರೆದುಕೊಂಡು ಹೋಗಿ ಉಗ್ರವಾದ ಶಿಕ್ಷೆ ಕೊಡಿ ಎಂದು ಹೇಳುವ ಬದಲು ನಾವು ಜಗಳವಾಡಿ ಘರ್ಷಣೆ ಮಾಡಿ ಕೊಳಗೇರಿಗಳನ್ನು ಸುಟ್ಟು ನಿರ್ಭಾಗ್ಯರನ್ನು ಕೊಂದು ಸ್ತ್ರೀಯರಮೇಲೆ ಹಲ್ಲೆ ಮಾಡುವುದನ್ನು ನಿಲ್ಲಿಸುವುದು ಬಹಳ ಪ್ರಾಮುಖ್ಯ. ಇವತ್ತು ಯಾರಿಗೆ ಯಾದೂ ಇಲ್ಲ. ನಾನು ದಂಡಿಯಬೇಕು ನಾನು ತಿನ್ನಬೇಕು. ಇನ್ನೊಬ್ಬ ನನಗೆ ಕೊಡುವುದಿಲ್ಲ ನಾನು ಯಾರಿಗೂ ಕೊಡುವುದಿಲ್ಲ; ಇಂತಹ ಕಾಲದಲ್ಲಿ ನಾವು ಜಗಳ ಮಾಡಲಿಕ್ಕೆ ದ್ವೇಷಿಗಳಾಗುವುದಕ್ಕೆ ಯಾವ ಕಾರಣವೂ ಇಲ್ಲ. ಆದ್ದರಿಂದ ಈ ದೇಶ ಉಳಿಯಬೇಕಾದರೆ ಸ್ವಾತಂತ್ರ್ಯ ಪೂರ್ವದಲ್ಲಿ ನಾವು ಯಾವ ರೀತಿ ಐಕಮತ್ಯ ಒಗ್ಗಟ್ಟಿನಿಂದ ಕೂಡಿ ಅಣ್ಣತಮ್ಮಂದಿರೆಂಬಭಾವನೆಯಿಂದ ಕೆಲಸ ಮಾಡಿದೆವೋ ಈಗಲೂ ಅದೇಭಾವನೆ ಬರಬೇಕು. ನಮ್ಮ ರಾಜ್ಯದಲ್ಲಿ ವಿಶ್ವೇಶ್ವರಯ್ಯನವರು, ಮಿರ್ಜಾ ಇಸ್ಮಾಯಿಲ್‌ರವರು ಇಂತಹ ಮಹಾನುಭಾವರು ಒಳ್ಳೆಯ ಹೆಸರನ್ನು ನಮ್ಮ ದೇಶಕ್ಕೆ ತಂದಿದ್ದಾರೆ. ಇಂತಹ ಒಳ್ಳೆಯ ರಾಜ್ಯ ಇವತ್ತು ಕೋಮು ಘರ್ಷಣೆಗೆ ಸಿಲುಕಿ ಅರ್ಧ ಪತನವಾಗುತ್ತದೆಂದು ಹೇಳಿದರೆ, ಅದಕ್ಕಿಂತ ನಾಚಿಕೆ ಬೇರೆ ಇಲ್ಲ. ಆದ್ದರಿಂದ ಕೋಮು ಸಾಮರಸ್ಯಕ್ಕಾಗಿ ಏಕತಾಸಮಿತಿಯನ್ನು ನಮ್ಮ ಮುಖ್ಯಮಂತ್ರಿಗಳು ಮಾಡಿದ್ದಾರೆ. ಇದು ಬಹಳ ಸಂತೋಷದ ವಿಚಾರ. ಅದೇ ರೀತಿ ಜಿಲ್ಲೆಗಳಲ್ಲಿ ಮತ್ತೆ ತಾಲೂಕುಗಳಲ್ಲಿ ಇವನ್ನು ಮಾಡಬೇಕು. ಇನ್ನೂ ಯಾರನ್ನಾದರೂ ಬಿಟ್ಟಿದ್ದರೆ ಅವರನ್ನು ಸೇರಿಸಿ ತಿಂಗಳಿಗೊಮ್ಮೆ ಇಲ್ಲವೇ ಎರಡು ತಿಂಗಳಿಗೊಮ್ಮೆಯಾದರೂ ಈ ಸಭೆ ಸೇರಿಸಿ ಒಳ್ಳೆಯ ವಿಚಾರಗಳನ್ನು ಜನರಿಗೆ ಭೋಧನೆ ಮಾಡಬೇಕು. ನನಗೆ ಸಂತೋಷದ ಸಂಗತಿಯೇನೆಂದರೆ, ಅನೇಕ ಕಡೆಗಳಲ್ಲಿ ಈ ಘರ್ಷಣೆ ಆದಾಗ ನಮ್ಮ ಮುಖ್ಯಮಂತ್ರಿಗಳಾದ ಮಾನ್ಯ ಬಂಗಾರಪ್ಪನವರು ಎಡಬಿಡದೆ ಅದು ಚನ್ನಪಟ್ಟಣ ಇರಬಹುದು, ರಾಮನಗರ ಇರಬಹುದು ದಾವಣಗೆರೆ, ತುಮಕೂರು ಸಕಲೇಶಪುರ ಯಾವುದೇ ಇರಬಹುದು ಎಲ್ಲ ಕಡೆಗೂ ಹೋಗಿ ಎಲ್ಲರಿಗೂ ಸಾಂತ್ವನ ಹೇಳಿ ಅವರಿಗೆ ಕೊಡಬೇಕಾದ ಪರಿಹಾರವನ್ನು ಅಲ್ಲೇ ಘೋಷಣೆ ಮಾಡಿದ್ದು ಈ ಘರ್ಷಣೆಗಳು ಹೆಚ್ಚು ವಿಕೋಪಕ್ಕೆ ಹೋಗುವುದನ್ನು ತಡೆಯಲು ಸಾಧ್ಯವಾಯಿತು. ಪರಿಹಾರ ಹಣ ಕೂಡ ೫೦ಸಾವಿರ ಎಂದು ಹೇಳಿದ್ದಾರೆ. ನಾನು ಹೇಳುತ್ತೇನೆ ಒಂದು ಲಕ್ಷ ಮಾಡುವುದು ಒಳ್ಳೆಯದು ಏಕೆಂದರೆ ಅನೇಕರು ಬಡವರು ನಿರಪರಾಧಿಗಳು ಸಂತ್ರಸ್ತರಾಗಿದ್ದಾರೆ. ಇಂದು ೪೦೦ ಎಕರೆ ಮಾವಿನ ಮರಗಳು ಏನಾಗಿವೆ ? ಫಲಕೊಡುವ ಮಾವು ತೆಂಗಿನ ಸಸಿಗಳನ್ನು ಕಡಿದುಹಾಕಿದ್ದಾರೆ. ಒಬ್ಬ ಸೂಫಿ ಪಂಥದವ ಹೇಳುವನು ಫಲ ಕೊಡುವ ಮರಗಳನ್ನು ಯಾರು ನಾಶ ಮಾಡುತ್ತಾರೆ ಅಂಥವರು ಅದೇ ವೇಗದಲ್ಲಿ ನಾಶವಾಗುತ್ತಾರೆಂದು. ಇದು ಆಲೋಚನೆ ಮಾಡುವ ವಿಚಾರ. ಆದ್ದರಿಂದ ಮರಗಳನ್ನು ಕಳೆದುಕೊಂಡವರಿಗೆ ಪರಿಹಾರ ಕೊಡುವಾಗ ಪ್ರತಿ ಮರಕ್ಕೂ ತೋಟಗಾರಿಕೆ ಇಲಾಖೆಯವರನ್ನು ಕೇಳಿ ಎರಡು ಸಾವಿರ ಮೂರು ಸಾವಿರ ಎಷ್ಟು ಬರುತ್ತದೋ ಅಷ್ಟು ಕೊಟ್ಟರೆ ಬಹಳ ಒಳ್ಳೆಯದೆಂದು ಹೇಳುತ್ತೇನೆ.

ಮತ್ತೊಂದು ಬಹಳ ಪ್ರಾಮುಖ್ಯವಾದುದೆಂದರೆ ಈ ಎಲ್ಲ ಘರ್ಷಣೆಗಳಿಗೂ ಮೂಲ ಕಾರಣ ಸುಳ್ಳು ವದಂತಿಗಳನ್ನು ಹಬ್ಬಿಸಿದ್ದು. ಈ ಕಿಡಿಗೇಡಿಗಳಿಂದ ಅನೇಕರಿಗೆ ಅನಾಹುತವಾಗಿದೆ ಇಂಥಹವರನ್ನು ಅದಷ್ಟು ಬೇಗ ಕಂಡುಹಿಡಿದು ಒಳಕ್ಕೆ ಹಾಕಬೇಕು. ಕೆಲವರು ಟಾಡಾ ಬೇಡ ಎನ್ನುತ್ತಾರೆ. ಆದರೆ ಟಾಡಾ ಇವತ್ತು ಬೇಕಾಗಿದೆ. ಯಾರು ಶೋಷಣೆಗೊಳಗಾಗಿದ್ದಾರೆ ಯಾರು ಅನ್ಯಾಯಕ್ಕೊಳಗಾಗಿದ್ದಾರೆ ಯಾರು ಸತ್ತಿದ್ದಾರೆ ಅವರು ಟಾಡಾ ಬೇಕೆನ್ನುತ್ತಾರೆ. ಇದಕ್ಕೆ ಪ್ರಚೋದನೆ ಕೊಡುವವರು ಟಾಡಾ ಬೇಡವೆನ್ನುತ್ತಾರೆ. ಹಾಗಿದ್ದರೆ ಕಿಡಿಗೇಡಿಗಳನ್ನು ಹಿಡಿಯುವುದು ಹೇಗೆ? ರಾಜ್ಯವನ್ನು ಹಾಳು ಮಾಡುವ ಜನರನ್ನು ಕಂಡುಹಿಡಿದು ಅವರಿಗೆ ಉಗ್ರ ಹೆದರಿಕೆ ಆಗುವಂತಹ ಪರಿಸ್ಥಿತಿ ಇವತ್ತು ಬೇಕಾಗಿದೆ, ಇದು ಬಹಳ ಮುಖ್ಯ. ಕಡೆಯದಾಗಿ ಮತ್ತೊಂದು ಮಾತು. ಸ್ವಾತಂತ್ರ್ಯ ಸಿಗುವ ಮುನ್ನ ನಾವು

ಒಂದಾಗಿ ಕೆಲಸ ಮಾಡಿದ್ದೇವೆ. ಅದು ಸಿಕ್ಕಿದ ಮೇಲೆ ನಾವು ಸುಖವಾಗಿದ್ದೇವೆಂದು ಭಾವಿಸುವುದು ಬೇಡ. ಮೂರು ಬಾರಿ ಈ ದೇಶದ ಮೇಲೆ ಯುದ್ಧವಾಗಿದೆ, ಸ್ವಾತಂತ್ರ್ಯ ಸಿಕ್ಕಿದ ಮೇಲೆ ೬೨ನೇ ಇಸವಿಯಲ್ಲಿ ಚೈನಾದೇಶ ನಮ್ಮ ದೇಶದ ಮೇಲೆ ಯುದ್ಧ ಮಾಡಿತು; ಆಮೇಲೆ ಪಾಕಿಸ್ತಾನ ಯುದ್ಧ ಮಾಡಿದಾಗ ಪಂಡಿತ್ ನೆಹರೂ ಅವರು ನಮ್ಮ ಪ್ರಧಾನಮಂತ್ರಿಗಳಾಗಿದ್ದರು. ಆಗ ಅವರು ಹೇಳಿದರು: ಏನೆಂದರೆ.........

ಶ್ರೀ ಬಿ. ಎಸ್. ಯಡಿಯೂರಪ್ಪ.—ಸನ್ಮಾನ್ಯ ಅಧ್ಯಕ್ಷರೆ, ಈ ಟಾಡಾದ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಎಲ್ಲಾ ವಿರೋಧ ಪಕ್ಷದ ನಾಯಕರ ಸಭೆಯನ್ನು ಕರೆದಂಥ ಸಂದರ್ಭದಲ್ಲಿ ಎಲ್ಲ ಮುಖಂಡರುಗಳು ಈಗ ಇರುವಂಥ ಕಾನೂನುಗಳೇ ಸಾಕಷ್ಟು ಬಿಗಿಯಾಗಿರುವಂಥದ್ದು ಇದೆ. ಎಂದು ಹೇಳಿದ್ದಾರೆ. ಬಾಂಬೆಯಲ್ಲಿ ಟಾಡಾದ ಒಂದು ಕಾನೂನನ್ನು ತರುವಂಥ ಪ್ರಯತ್ನವನ್ನು ಮಾಡಿದಾಗ ಅಲ್ಲಿ ಒಂದೆರಡು ತಿಂಗಳು ಬಿಗಿಯಾದ ವಾತಾವರಣ ಇತ್ತು. ಈಗ ಅಲ್ಲಿ ಸಲೀಸಾಗಿದೆ. ಎಲ್ಲರೂ ಅಲ್ಲಿ ಈಗ ಅಡ್ಜಸ್ಟ್ ಮಾಡಿಕೊಂಡು ಹೋಗುತ್ತಿದ್ದಾರೆ. ಆದರೆ ಎಫೆಕ್ಟ್ ಏನೂ ಕಾಣುತ್ತಿಲ್ಲ. ಇರುವಂಥ ಒಂದು ಕಾನೂನನ್ನೇ ಎಫೆಕ್ಟೀವ್ ಆಗಿ ಮಾಡಬೇಕೇ ಹೊರತು ಈ ರೀತಿ ಟಾಡಾ ಅನ್ನುವಂಥ ಕಾನೂನನ್ನು ತಂದು ಬೇರೆ ಯಾವುದೇ ಒಂದು ಈಗ ಇರುವಂಥ ಒಂದು ಕಾನೂನಿನ ಬೆಲೆಯನ್ನು ತೆಗೆದಾಗ ಅಧಿಕಾರಿಗಳ ಪ್ರವೃತ್ತಿ ಏನು ಇದೆ, ಸಾಮಾನ್ಯ ಕಾನೂನುಗಳ ಉಪಯೋಗವನ್ನು ಮಾಡಿಕೊಳ್ಳತಕ್ಕಂಥ ಪ್ರಯತ್ನವನ್ನು ಮಾಡುವುದಿಲ್ಲ ಎಲ್ಲದಕ್ಕೂ ಇದೇ ಒಂದು ಬ್ರಹ್ಮಾಸ್ತ್ರವನ್ನು ಉಪಯೋಗಿಸುವಂಥ ಪ್ರಯತ್ನವನ್ನು ಮಾಡಬಹುದು. ಮತ್ತು ಅಧಿಕಾರಿಗಳು ದುರುಪಯೋಗ ಮಾಡಿಕೊಳ್ಳಬಹುದು. ಇದರಿಂದ ಶ್ರೀ ಸಾಮಾನ್ಯರಿಗೆ ತೊಂದರೆ ಆಗಬಹುದು. ಆದುದರಿಂದ ಇರುವಂಥ ಕಾನೂನನ್ನು ಬಿಗಿ ಮಾಡಿ ಅದಕ್ಕೆ ಬೇಕಾದಷ್ಟು ಶಕ್ತಿಯನ್ನು ತುಂಬಿ ನಮ್ಮ ರಾಜ್ಯದಲ್ಲಿ ಈ ರೀತಿ ಟಾಡಾವನ್ನು ತಂದು ಒಂದು ವಿಚಿತ್ರವಾದಂಥ ಪರಿಸ್ಥಿತಿ ನಮ್ಮ ರಾಜ್ಯದಲ್ಲಿದೆ ಅಂತಹ ವಾತಾವರಣವನ್ನು ಕಡಿಮೆ ಮಾಡಬೇಕು ಎನ್ನುವ ಉದ್ದೇಶವೇ ಹೊರತು, ಟಾಡಾವನ್ನು ತರುವುದರಿಂದ ಏನೋ ತೊಂದರೆಯಾಗುತ್ತದೆ ಎನ್ನುವ ದೃಷ್ಟಿಯಿಂದ ಅಲ್ಲ. ಆದರೆ ಇದಲ್ಲ. ಇರುವಂಥ ಕಾನೂನನ್ನೇ ಬಿಗಿ ಮಾಡಿ. ಇದರ ಅಗತ್ಯವಿಲ್ಲ ಎನ್ನತಕ್ಕಂಥ ಮಾತನ್ನು ಎಲ್ಲ ಮುಖಂಡರುಗಳು ಹೇಳಿದ್ದಾರೆ. ಇದನ್ನೂ ತಮ್ಮ ಗಮನಕ್ಕೆ ಮತ್ತೆ ಅಧ್ಯಕ್ಷರ ಮುಖಾಂತರ ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರುವಂಥ ಪ್ರಯತ್ನವನ್ನು ಮಾಡುತ್ತಿದ್ದೇನೆ.

ಶ್ರೀ ಬಿ. ಎಂ. ಇದಿನಬ್ಬ.—ನಮ್ಮ ಹಿರಿಯರಾದಂಥ ಶ್ರೀಮಾನ್ ಕೆ.ಹೆಚ್. ರಂಗನಾಥ್‌ರವರು ಹೇಳಿದರು, ಈ ಕಾನೂನನ್ನು ನಮ್ಮ ಹಿಂದಿನ ಸರ್ಕಾರಗಳು ೧೯೮೮ನೇ ಇಸವಿಯಲ್ಲೇ ತಂದಿದೆ ಎಂದು ಇದಕ್ಕೆ ನ್ಯಾಯಾಧೀಶರನ್ನು ಕೂಡಾ ನೇಮಕ ಮಾಡಿದ್ದಾರೆ. ಇದೇ ಕಾನೂನು ಏನಾದರೂ ಇವತ್ತು ಮುಂದುವರಿಯುವುದು ಇದಯೇ ಹೊರತು ಇದು ಬೇರೆ ಹೊಸದಲ್ಲ ಎನ್ನತಕ್ಕಂಥ ಮಾತನ್ನು ಅವರು ಹೇಳಿದ್ದಾರೆ. ಇದನ್ನು ಹೊಸದಾಗಿ ಏನೂ ತಂದಿಲ್ಲ ಎಂದು ಈ ರೀತಿ ಮಾನ್ಯ ಮುಖ್ಯ ಮಂತ್ರಿಗಳು ಕೂಡಾ ಹೇಳುತ್ತಾರೆ. ಆದುದರಿಂದ ಇವತ್ತು ಕಡೆಯದಾಗಿ ಹೇಳುವಂಥದ್ದು ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದಮೇಲೆ ಸುಖವಾಗಿ ಇರಬಹುದು ಎಂದು ನಾವು ಭಾವಿಸಿದ್ದರೂ ಕೂಡಾ ೧೯೬೨ನೇ ಇಸವಿಯಲ್ಲಿ ಚೈನಾ ದೇಶದವರು ನಮ್ಮ ಮೇಲೆ ಯುದ್ಧ ಮಾಡಿದಾಗ ನಮ್ಮ ಅಖಂಡ ಮುಖಂಡರಾದಂಥ ೧೭ ವರ್ಷಗಳ ಕಾಲ ಈ ದೇಶವನ್ನು ಆಳಿದಂಥ ಪಂಡಿತ ಜವಹರಲಾಲ್ ನೆಹರೂರವರು ಹೇಳಿದರು, ಇಲ್ಲಿ ಇರತಕ್ಕಂಥ ಹಿಂದೂಗಳು, ಮುಸಲ್ಮಾನರು, ಕ್ರೈಸ್ತರು, ಸಿಖ್ಖರು, ಪಾರ್ಶಿಗಳು ಕನ್ಯಾಕುಮಾರಿಯಿಂದ ಹಿಮಾಲಯದವರೆಗೆ ಇರತಕ್ಕಂಥ ಎಲ್ಲಾ ಜನರು ಒಂದಾಗಬೇಕು, ಐಕ್ಯಮತ್ಯದಿಂದ ಕೂಡಿ ಕೆಲಸವನ್ನು ಮಾಡಬೇಕು ಎಂದು ಹೇಳಿದರು, ಅದೇ ರೀತಿಯಲ್ಲಿ ನಾವುಗಳೆಲ್ಲರೂ ಒಂದಾಗಿ ಹಿಂದೂಗಳು, ಮುಸಲ್ಮಾನರು, ಕ್ರೈಸ್ತರು, ಸಿಖ್ಖರು, ಒಗಟ್ಟಿನಿಂದ ಕೆಲಸವನ್ನು ಮಾಡಿದ್ದರಿಂದ ಅಂಥ ಚೈನಾದೇಶವನ್ನು ಓಡಿಸಿ ಜಯವನ್ನು ಗಳಿಸಿದ್ದೇವೆ. ಇದನ್ನು ನಾವು ನೆನೆಪಿನಲ್ಲಿಟ್ಟುಕೊಳ್ಳಬೇಕು. ಮುಸಲ್ಮಾನರು ಈ ದೇಶಕ್ಕೆ ಬದ್ಧರಾಗಿದ್ದಾರೆ, ಮುಸಲ್ಮಾನರು ಭಾರತೀಯರಾಗಿದ್ದರೆ, ಅಣ್ಣತಮ್ಮರಿಂದಾಗಿ ಬಾಳಬೇಕು ಎಂದು ಯೋಚನೆವುಳ್ಳವರಾಗಿದ್ದಾರೆ. ಎರಡನೇ ಯುದ್ಧ ಪುನಃ ೬೫ನೇ ಇಸವಿಯಲ್ಲಿ ಪಾಕಿಸ್ತಾನ ಮತ್ತು ಚೈನಾ ದೇಶದವರು ಒಟ್ಟಾಗಿ ಕೂಡಿ ನಮ್ಮ ಮೇಲೆ ಯುದ್ಧ ಮಾಡಿದಾಗ ಆಗ ನೇಹರೂರವರು ಇರಲ್ಲಿಲ್ಲ. ಲಾಲ್‌ಬಹದೂರ್ ಶಾಸ್ತ್ರಿಯವರು ಇದ್ದರು; ಅವರು ಹೇಳಿದರು. ಕನ್ಯಾಕುಮಾರಿಯಿಂದ ಹಿಮಾಲಯದವರೆಗೆ ಇರತಕ್ಕಂಥ ಎಲ್ಲರೂ ಒಂದಾಗಿ ೬೨ರಲ್ಲಿ ಯಾವ ರೀತಿಯಲ್ಲಿ ಒಗ್ಗಟ್ಟಾಗಿ ಕೆಲಸವನ್ನು ಮಾಡಿದ್ದೇವೆಯೋ ಅದೇ ರೀತಿಯಲ್ಲಿ ಈ ಬಾರಿಯು ಕೆಲಸವನ್ನು ಮಾಡಬೇಕು ಅದೇ ರೀತಿಯಲ್ಲಿ ಯೋಧರು, ಅದೇ ರೀತಿಯಲ್ಲಿ ಸೈನ್ಯದಲ್ಲಿವವರೂ ಸಹಾ ಒಳ್ಳೆಯ ರೀತಿಯಲ್ಲಿ ಯುದ್ಧವನ್ನು ಮಾಡಬೇಕು ಎಂದು ಹೇಳಿದಾಗ ಇಡೀ ದೇಶದ ಜ ಒಂದಾಗಿ ಐಕ್ಯಮತ್ಯದಿಂದ ಕೆಲಸವನ್ನು

ಮಾಡಿದ್ದರಿಂದ ಎಂಟು-ಒಂಭತ್ತು ದಿವಸಗಳ ಒಳಗೆ ಇಲ್ಲಿಗೆ ಬಂದಿರತಕ್ಕಂಥ ಚೈನಾ ದೇಶದವರನ್ನು ಪಾಕಿಸ್ತಾನವನ್ನು ಮಣ್ಣು ಮುಕ್ಕಿಸಿ ಅವರನ್ನು ಕಳುಹಿಸಿದ್ದೇವೆ, ಜಯವನ್ನು ಗಳಿಸಿದ್ದೇವೆ. ಅಲ್ಲಿ ಕೂಡಾ ಒಗ್ಗಟ್ಟಾಗಿ ದುಡಿದಿದ್ದೇವೆ. ಅಲ್ಲಿಗೆ ಮುಗಿಯಲಿಲ್ಲ ಮೂರನೇ ಮತ್ತೊಂದು ಯುದ್ಧ ೭೧ನೇ ಇಸವಿಯಲ್ಲಿ ಶ್ರೀಮತಿ ಇಂದಿರಾಗಾಂಧಿಯವರು ಪ್ರಧಾನಿಯಾಗಿದ್ದಾಗ ಪಾಕಿಸ್ತಾನದವರು ಹೇಳದೇ ಕೇಳದೇ ನಮ್ಮ ದೇಶದ ಮೇಲೆ ಬಂಬಾರ್ಡ್‌ಮೆಂಟ್ ಮಾಡಿದಾಗ ಇಂದಿರಾಗಾಂಧಿಯವರು ಹೇಳಿದರು, ದೇಶದ ಜನಕ್ಕೆ ಆಪತ್ತು ಬಂದಿದೆ, ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ ಇರತಕ್ಕಂಥ ಹಿಂದೂಗಳು ಮುಸಲ್ಮಾನರು, ಸಿಖ್‌ರು, ಪಾರ್ಶಿಗಳು ಎಲ್ಲರೂ ಒಂದಾಗಿ ಈ ದೇಶದಮೇಲೆ ಬಂದಿರತಕ್ಕಂಥ ಯುದ್ಧವನ್ನು ಎದುರಿಸಬೇಕು ಎಂದು ಹೇಳಿದಾಗ ಅದೇ ರೀತಿಯಲ್ಲಿ ಮುಸಲ್ಮಾನರು, ಹಿಂದುಗಳು ಸಿಖ್‌ರು, ಕ್ರೈಸ್ತರು ಒಗ್ಗಟ್ಟಾಗಿ ಕೆಲಸವನ್ನು ಮಾಡಿ ಆ ರೀತಿಯಲ್ಲಿ ನಮ್ಮ ಯೋಧರು ಒಳ್ಳೆಯ ರೀತಿಯಲ್ಲಿ ಯುದ್ಧವನ್ನು ಮಾಡಿ ನಮ್ಮ ರೈತರು ಒಳ್ಳೆಯ ರೀತಿಯಲ್ಲಿ ಗೋಧಿಯನ್ನು, ಅಕ್ಕಿಯನ್ನು, ರಾಗಿಯನ್ನು ಬೆಳಸಿ ಆ ಆಹಾರವನ್ನು ಯೋಧರಿಗೆ ಕಳುಹಿಸಿಕೊಟ್ಟು ಆ ರೀತಿಯಲ್ಲಿ ಕೆಲಸವನ್ನು ಮಾಡಿದ್ದರಿಂದ ೭೧ನೇ ಇಸವಿಯಲ್ಲಿ ಪಾಕಿಸ್ತಾನವನ್ನು ಮಣ್ಣು ಮುಕ್ಕಿಸಿ ನಮ್ಮ ದೇಶಕ್ಕೆ ಜಯ ಬಂದಿತ್ತು. ಇವು ನಮ್ಮ ಕಣ್ಣ ಮುಂದೆ ಇರತಕ್ಕಂಥ ಮೂರು ಚಿತ್ರಗಳು. ಇದನ್ನು ನಾನು ಕಾಲ್ಪನಿಕವಾಗಿ ಹೇಳತಕ್ಕಂಥದ್ದಲ್ಲ. ಆ ಕಾಲದಲ್ಲಿ ನಾವು ತುದಿಗಾಲಲ್ಲಿ ಏನಾಗುತ್ತದೆ, ಏನಾಗುತ್ತದೆ ಎಂದು ರೇಡಿಯೋ ಮುಂದೆ ತುದಿಗಾಲಲ್ಲಿ ನಮ್ಮ ರೋಮ ರೋಮಗಳು ರೋಮಾಂಚವಾಗಿರತಕ್ಕಂಥ ಕಾಲ ಅದು. ಆದರೂ ಜಯವನ್ನು ಗಳಿಸಿದ್ದೇವೆ, ಯಾರಿಂದ ಜಯವನ್ನು ಗಳಿಸಿದ್ದೇವೆ ಒಗ್ಗಟ್ಟಿನಿಂದ ಐಕ್ಯಮತ್ಯದಿಂದ ಈ ದೇಶದಲ್ಲಿರತಕ್ಕಂಥ ಮಹಮದೀಯರ ಮೇಲೆ ಮುಸಲ್ಮಾನರ ಮೇಲೆ ಎರಡು ಅಭಿಪ್ರಾಯ ಇರುವಂಥದ್ದು ಸಂಶಯಗ್ರಹಿಸುವಂಥ ಒಂದು ಹುಚ್ಚು ಭಾವನೆಯನ್ನು ಬಿಟ್ಟುಬಿಡಬೇಕು. ಕರ್ನಲ್ ಹಮೀದ್ ಎಂದು ಹೇಳತಕ್ಕಂಥ ಮನುಷ್ಯ ಯುದ್ಧದಲ್ಲಿ ತನ್ನ ಜೀವವನ್ನೇ ಕೊಟ್ಟ. ಅಲ್ಲಿ ಇರತಕ್ಕಂಥ ಪಾಕಿಸ್ತಾನದ ಅಧ್ಯಕ್ಷ ಅಯೂಬ್ ಎದುರಾಗಿ ಇಲ್ಲಿಯ ಯೋಧ ಅಯೂಬ್ ತನ್ನ ಜೀವವನ್ನು ಕೊಟ್ಟ ಕೆಲಸವನ್ನು ಮಾಡಿದ ಇಂಥ ನೂರಾರು ನಿದರ್ಶನಗಳನ್ನು ನಾವು ಕಂಡಿದ್ದೇವೆ. ಆದುದರಿಂದ ಕಿಡಿಗೇಡಿಗಳು ಮಾಡತಕ್ಕಂಥ ಮೋಸ ಸುಳ್ಳುಸುದ್ದಿ ಹಬ್ಬಿಸತಕ್ಕಂಥ, ಅವರು ಮಾಡತಕ್ಕಂಥ ಮೋಸ ಅನಾವಶ್ಯಕವಾಗಿ ಸುಳ್ಳು ಪ್ರಚಾರ ಮಾಡಿ ಏನಾದರೂ ಅನ್ಯಾಯ ಮಾಡಬೇಕು ಎಂದು ಹೇಳತಕ್ಕಂಥ ಜನಗಳು ಈ ಒಂದು ಮೋಸದಿಂದ ಇವತ್ತು ಹಿಂದೂಗಳು, ಮುಸಲ್ಮಾನರು ಬೇರೆ ಆಗಬಾರದು. ಅವರು ಬೇರೆ, ಇವರು ಬೇರೆ ಎಂದು ಹೇಳತಕ್ಕಂಥ ಭಾವನೇ ಬರಬಾರದು. ನಾವು ಮೂರು ಯುದ್ಧಗಳಲ್ಲಿಯೂ ಗೆದ್ದಿದ್ದೇವೆ. ಇನ್ನು ಮುಂದೆ ಕೂಡಾ ನಮಗೆ ಯುದ್ಧ ಇಲ್ಲ ಎಂದು ನಾವು ಯಾರೂ ಸಹ ಭಾವಿಸುವುದು ಬೇಡ.

ನಮ್ಮ ಗಡಿಯಲ್ಲಿರತಕ್ಕ ಜನ ಕಾಯುತ್ತಿದ್ದಾರೆ. ಇವೊತ್ತು ಕಾಶ್ಮೀರದಲ್ಲಿ ಏನು ಆಗುತ್ತಿದೆ ? ಪಂಜಾಬಿನಲ್ಲಿ ಏನು ಆಗುತ್ತಿದೆ, ಅಸ್ಸಾಂನಲ್ಲಿ ಏನು ಆಗುತ್ತಿದೆ ? ಬೇರೆ ರಾಜ್ಯ ಕೊಡಬೇಕು, ಬೇರೆ ದೇಶ ಕೊಡಬೇಕು ಎಂದು ಹೇಳುತ್ತಿದ್ದಾರೆ. ಮತ್ತೊಮ್ಮೆ ನಮ್ಮ ದೇಶ ಛಿನ್ನ-ವಿಚ್ಛಿನ್ನವಾಗಿ, ತುಂಡರು-ತುಂಡಾಗಿ, ಹೋಳು-ಹೋಳಾಗಿ ಹೋದರೆ ಈ ದೇಶದ ಭವಿಷ್ಯತ್ತು ಮುಗಿಯಿತು ಎಂದು ನಾವು ತಿಳಿಯಬೇಕು. ಈ ಬಗ್ಗೆ ಕವಿ ಹೇಳುತ್ತಾನೆ.—

,,ಐಕ್ಯದಮೃತದ ರಸಕ್ಕೆ ಹಿಂದೂಗಳು, ಮುಸ್ಲೀಮರು, ಕ್ರೈಸ್ತರು, ಸಿಖ್ಖರು ಈ ಜೀವ
ಜೀವದ ಬೆಸುಗೆ ಕೂಡಿ ಬರೆ ಭೀಮ ಬಲ ನಮ್ಮೊಳುಂಟು, ಹದಿನಾಲ್ಕು ಲೋಕವನ್ನು
ಸಪ್ತ ಸಾಗರವನ್ನು ಗೆದ್ದು ದಾಂಟುವ ಶಕ್ತಿ ವೇಗವುಂಟು ''

ಎಂದು ಕವಿ ಮತ್ತೆ ಹೇಳುತ್ತಾನೆ.

,ಭಾರತದ ಬಿಡುಗಡೆಗೆ ಹೋರಾಡಿರುವ ನಮಗೆ ಯಾರ ಭಯ, ನಾವಿಂದು
ಒಂದಾಗಿರುವೆವು, ತೇಲುವೆವೋ ಮುಳುಗುವೆವೋ ಏಳುವೆವೋ, ಬೀಳುವೆವೋ ಎಲ್ಲರೂ
ಒಮ್ಮೆಗೇ ಒಂದಾಗಿರಿ''

ಅಂದರೆ ಎಲ್ಲರೂ ಒಂದಾಗಿರಿ ಎಂದು ಹೇಳುತ್ತಾನೆ. ತೇಲುವುದಿದ್ದರೂ ಮುಳುಗುವುದಿದ್ದರೂ ಇಲ್ಲವೇ ಬೀಳುವುದಿದ್ದರೂ ಎಲ್ಲರೂ ಒಗಟ್ಟಿನಿಂದ ಒಂದಾಗಿ ಸಾಯಬೇಕು ಎಂದು ಕವಿ ಹೇಳುತ್ತಾನೆ. ಅದೇ ಕವಿ ಮತ್ತೆ ಹೇಳುತ್ತಾನೆ'

,,ಹರಿಜನರೆ, ಬ್ರಾಹ್ಮಣರೆ, ಮುಸ್ಲಿಮರೆ, ಕ್ರೈಸ್ತರೆ, ಎಲ್ಲರೂ ನಮ್ಮವರೆ
ರಾಷ್ಟ್ರವೊಂದೇ ಜೀವ, ಯಾವ ರಕ್ಕಸರು ಇದಿರಿಲ್ಲ ನಾವ್ ಕಡುಗಲಿ''

ಎಲ್ಲ ಕೋಮಿನವರೂ ಅನ್ಯೋನ್ಯವಾಗಿ ಬಾಳಬೇಕು. ಭಾರತ ದೇಶ ಒಂದೇ. ಆದ್ದರಿಂದ

"ಐಕ್ಯ ಒಂದೇ ಮಂತ್ರ, ಐಕ್ಯ ಒಂದೇ ಸ್ವತಂತ್ರ. ಐಕ್ಯ ಗಾನದಿ ರಾಷ್ಟ್ರ ತೇಲುತಿರಲಿ"

ಎಂದು ಹೇಳಿ ನಮ್ಮ ಕರ್ನಾಟಕದಲ್ಲಿ ಇನ್ನು ಮುಂದೆ ಯಾವುದೇ ಒಂದು ಕೋಮು ಗಲಭೆ ಆಗದೆ ಬಂಗಾರಪ್ಪನವರ ಕಾಲದಲ್ಲಿ ಬಂಗಾರ ಹರಡಿತು ಎಂಬ ಅನ್ಯೋನ್ಯ ಪ್ರೇಮದಿಂದ ಈ ನಾಡಿನ ಜನ ಬದುಕಲಿ ಎಂದು ಭಗವಂತನಲ್ಲಿ ಪ್ರಾರ್ಥಿಸಿ ನನಗೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ,

† ಶ್ರೀ ಎ. ಎಂ. ಬೆಳ್ಳಿಯಪ್ಪ (ಸೋಮವಾರಪೇಟೆ).—ಮಾನ್ಯ ಸಭಾಧ್ಯಕ್ಷರೇ, ನನಗೆ ಮುಂಚೆ ಮಾತನಾಡಿದ ನಮ್ಮ ಶಾಸಕ ಮಿತ್ರರುಗಳು ಹಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಮಾತ್ರ ನನ್ನ ಕ್ಷೇತ್ರಕ್ಕೆ ಸೀಮಿತವಾಗಿ ಮಾತನಾಡುತ್ತೇನೆ. ನನ್ನ ಕ್ಷೇತ್ರ ಸೋಮವಾರಪೇಟೆ ತಾಲ್ಲೂಕು, ಕೊಡಗು ಜಿಲ್ಲೆ. ಈ ಒಂದು ತಾಲ್ಲೂಕಿಗೆ ಸೀಮಿತವಾಗಿ ಅಲ್ಲಿ ನಡೆದಂತಹ ದುಷ್ಕೃತ್ಯಗಳು, ಅನಾಹುತಗಳನ್ನು ಮಾತ್ರ ಈ ಸದನದ ಮುಂದೆ ತಮ್ಮ ಮೂಲಕ ನಾನು ಹೇಳಲಿಕ್ಕೆ ಪ್ರಯತ್ನ ಮಾಡುತ್ತೇನೆ. ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕು ಬಹಳ ವರ್ಷದಿಂದ ಕೋಮುವಾರು ಗಲಭೆಗಳನ್ನು ಕಂಡಿದ್ದಿಲ್ಲ. ಅಲ್ಲಿನ ಮುಸ್ಲಿಮರು, ಕ್ರೈಸ್ತರು, ಹಿಂದೂಗಳು. ಯಾವುದೇ ಜಾತಿಗಳವರು ಇರಲಿ ನಾವೆಲ್ಲಾ ಅನ್ಯೋನ್ಯದಿಂದ ಪ್ರೀತಿಯಿಂದ ಪ್ರೇಮದಿಂದ, ವಿಶ್ವಾಸದಿಂದ ಬಾಳಿ ಬದುಕಿಕೊಂಡು ಬಂದಿದ್ದೇವೆ, ಉದಾಹರಣೆಗೆ ಹೇಳುವುದಾದರೆ ಹಳೇ ರಾಜರುಗಳ ಕಾಲದಿಂದ ಸುಮಾರು ಮುನ್ನೂರು–ನಾನ್ನೂರು, ಐನೂರು ವರ್ಷಗಳಿಂದ ಮುಸ್ಲಿಮರು ಹಿಂದೂಗಳು, ಕ್ರೈಸ್ತರು ಬಹಳ ಚೆನ್ನಾಗಿ ಪ್ರೀತಿಯಿಂದ, ವಿಶ್ವಾಸದಿಂದ ನಡೆದುಕೊಂಡು ಬಂದಿದ್ದೇವೆ, ಕೊಡಗಿನ ಮೂಲ ನಿವಾಸಿಗಳಿಗೆ ಭೂಮಿಗಳನ್ನು ರಾಜರುಗಳು ದಾನವಾಗಿ ಕೊಟ್ಟಿದ್ದಾರೆ. ರಾಜರುಗಳು ಮುಸ್ಲಿಮರಿಗೂ ನಿವೇಶನಗಳನ್ನು ಕೊಟ್ಟಿದ್ದಾರೆ ಹಾಗೆಯೇ ಹಿಂದೂಗಳಿಗೂ ಕೊಟ್ಟಿದ್ದಾರೆ. ಉದಾಹರಣೆಗೆ ಹೇಳುವುದಾದರೆ ಮಾಜಿ ಮಂತ್ರಿಯಾದ ಮಾನ್ಯ ಯಾಹ್ಯರವರು ಪೂರ್ವಿಕರು ಕೊಡಗಿನಲ್ಲಿಯೇ ಸುಮಾರು ೨೦೦ ವರ್ಷಗಳಿಂದ ವಾಸ ಮಾಡುತ್ತಿದ್ದಾರೆ. ಯಾವ ಗಲಾಟೆ ಅಥವಾ ಕೋಮುವಾರು ಗಲಭೆಯನ್ನು ಅವರು ಅನುಭವಿಸಿಲ್ಲ. ಸುಮಾರು ವರ್ಷಗಳಿಂದ ಅಲ್ಲಿಯೇ ಇದ್ದಾರೆ, ಆದರೆ ಸೋಮವಾರ ಪೇಟೆ ತಾಲ್ಲೂಕು ಅಥವಾ ಕೊಡಗು ಜಿಲ್ಲೆಯಲ್ಲಿ ಅಕ್ಟೋಬರ್ ೯–೧೦ರಂದು ಹಾನಿಯಾಗಿದೆ, ಶಾಂತಿ ಪ್ರಿಯರಾದಂತಹ ಕೊಡಗಿನ ಜನರಲ್ಲಿ ರೈತರು ಮುಸ್ಲಿಮರ ಮನೆಯನ್ನು ಸುಟ್ಟರೆ, ಅವರ ಪಕ್ಕದಲ್ಲಿನ ಅಂಗಡಿಗಳನ್ನೆಲ್ಲ ಲೂಟಿ ಮಾಡಿದ್ದಾರೆ. ಅವರ ಪಕ್ಕದ ಮನೆಗೆ ಗುಂಡು ಹೊಡೆದಿದ್ದಾರೆ. ಮಾಡಬಾರದಂತಹ ಹೀನವಾದ ಕೃತ್ಯಗಳನ್ನೆಲ್ಲ ಮಾಡಿದ್ದಾರೆ. ಅಕ್ಟೋಬರ್ ೯ ಮತ್ತು ೧೦ನೇ ತಾರೀಖು ನಾನು ಬೆಂಗಳೂರಿನಲ್ಲಿದೆ. ಆವತ್ತಿನ ಸರ್ಕಾರದ ಪರಿಸ್ಥಿತಿ ಎಲ್ಲರಿಗೂ ಗೊತ್ತಿತ್ತು. ಯಾವ ರೀತಿಯಲ್ಲಿ ಕಾಂಗ್ರೆಸ್ ಪಕ್ಷ ಆವತ್ತಿನ ದಿವಸ ಕಷ್ಟವನ್ನು ಅನುಭವಿಸುತ್ತಿತ್ತು. ಆ ಒಂದು ಸಂದರ್ಭದಲ್ಲಿ ನಾವು ಶಾಸಕರಾಗಿ ಬೆಂಗಳೂರಿನಲ್ಲಿದ್ದೆ, ಆ ಸಂದರ್ಭದಲ್ಲಿ ಬಹಳ ದೊಡ್ಡದಾದ ಅನಾಹುತ ನಡೆದು ಹೋಯಿತು. ಏತಕ್ಕೋಸ್ಕರ ನಡೆಯಿತು, ನಡೆಯುವುದಕ್ಕೆ ಕಾರಣವೇನು, ಕಾರಣರು ಯಾರು ? ಎಂಬ ಪ್ರಶ್ನೆಯನ್ನು ನಾವು ಹಾಕಿಕೊಳ್ಳಬೇಕಾಗುತ್ತದೆ ನಮ್ಮ ಅಭಿಪ್ರಾಯದಲ್ಲಿ ನಮಗೆ ಸಿಕ್ಕಿದ ರುಜುವಾತು ಪ್ರಕಾರ ವಿಧಾನ ಸಭೆ ವಿಸರ್ಜನೆ ಆಗಿ ಬಿಡುತ್ತಿತ್ತು, ಮಾಜಿ ಮುಖ್ಯಮಂತ್ರಿಗಳಾದ ಶ್ರೀ ವೀರೇಂದ್ರ ಪಾಟೀಲರು ಈ ವಿಧಾನ ಸಭೆಯನ್ನು ವಿಸರ್ಜನೆ ಮಾಡಬೇಕೆಂದು ಶಿಫಾರಸ್ಸು ಮಾಡಿದ್ದಾರೆ. ನವೆಂಬರ್ ೧೯೮೯ರ ಚುನಾವಣೆಯಲ್ಲಿ ಸೋತ ರಾಜಕೀಯ ಪಕ್ಷಗಳು ಪುನಃ ಆ ಸೀಟನ್ನು ಕಬಳಿಸಬಹುದೆಂದು ಒಂದು ಕೋಮಿನ ಜನರನ್ನು ಓಡಿಸಿಬಿಟ್ಟರೆ ಸುಲಭ ಆಗುವುದೆಂದು ಈ ತಂತ್ರವನ್ನು ಹೂಡಿದರು.

ಶ್ರೀ ಬಸವರಾಜ ರಾಯರೆಡ್ಡಿ.—ಕೋಮುಗಲಬೆಗೂ ವಿಧಾನ ಸಭೆಯ ವಿಸರ್ಜನೆಗೂ ಏನು ಕಾರಣ ? ಕೋಮುಗಲಭೆಯ ಬಗ್ಗೆ ಮಾತನಾಡಲಿ, ಇನ್ನು ೭–೮ ಜನ ಮಾತನಾಡುವವರು ಇದ್ದಾರೆ.

SRI A. M. BELLIYAPPA.—My friend should know that I have much concern as he has to Sri Veerendra Patil. He belongs to my party and I also belong to his party. Now I am Just telling by way of preamble, how a political party conspired, who is responsible and what was the motive ? This I want to explain to the H use. ವಿಧಾನಸಭೆ ವಿಸರ್ಜನೆ ಮಾಡಬೇಕೆಂದು ರೆಕಮಂಡ್ ಮಾಡಿದ್ದಾರೆ. ವಿರೋಧ ಪಕ್ಷದ ನಾಯಕರಾದ ಚಂದ್ರೇಗೌಡರು ಮಾತನಾಡುವಾಗ ನವೆಂಬರ್ ೧೯೮೯ರ ತಿಂಗಳು ಚುನಾವಣೆ ಆಯಿತು. ಆದರೆ

ಪ್ರತಿಧ್ವನಿ ಈ ವರ್ಷದ ಅಕ್ಟೋಬರ್ ತಿಂಗಳಲ್ಲಿ ಆಯಿತು ಎಂದು ಹೇಳಿದ್ದಾರೆ. ಅದೇ ಪ್ರತಿಧ್ವನಿ ನಾವು ನವೆಂಬರ್ ತಿಂಗಳ ಚುನಾವಣೆಯಲ್ಲಿ ೨೦ ಸಾವಿರ ಮತದ ಅಂತರದಿಂದ ಸೋಮವಾರಪೇಟೆ ತಾಲ್ಲೂಕಿನಲ್ಲಿ ಸೋತಿದ್ದೇವೆ. ಮಡಿಕೇರಿ ತಾಲ್ಲೂಕಿನಲ್ಲಿ ಸುಮಾರು ೭ ಸಾವಿರ ಮತದಿಂದ ಸೋತಿದ್ದೇವೆ. ಈ ಒಂದು ಮುಸ್ಲಿಂರನ್ನು ಇಲ್ಲಿಂದ ಓಡಿಸಿಬಿಟ್ಟರೆ ಬಹುಶಃ ಇನ್ನೊಂದು ಚುನಾವಣೆಯಲ್ಲಿ ನಾವು ಗೆಲ್ಲುವುದಕ್ಕೆ ಸಾಧ್ಯ ಅನ್ನುವ ಅಭಿಪ್ರಾಯದಿಂದ ರಾಜಕೀಯ ಲಾಭ ಪಡೆಯುವುದಕ್ಕೋಸ್ಕರ, ರಾಜಕೀಯ ದುರ್ಲಾಭ ಪಡೆಯುವುದಕ್ಕೋಸ್ಕರ, ಈ ಒಂದು ಪಕ್ಷದವರು ಈ ರೀತಿ ಗಲಭೆಗಳನ್ನು ಉಂಟು ಮಾಡಿದ್ದಾರೆ. I must say the BJP and RSS should own the responsibility, With authority and with facts I am submitted before this House ಆಗಬಾರದು ಆಗಿಹೋಗಿದೆ. ಇವತ್ತು ಇರುವ ಪ್ರಶ್ನೆ ಏನೆಂದರೆ ಯಾವ ರೀತಿಯಾದರೂ ಪುನಃ ಶಾಂತಿಯನ್ನು ಸೋಮವಾರಪೇಟೆ ತಾಲ್ಲೂಕಿನಲ್ಲಿ ಅಥವಾ ಕೊಡಗಿನಲ್ಲಿ ತರಬೇಕೆನ್ನುವುದು ಇದೆ. ಇವತ್ತು ಬಿಜೆಪಿಯ ನಾಯಕರಾದ ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಮಾತನಾಡುವಾಗ ಕಾಂಗ್ರೆಸ್ ಪಕ್ಷವೇ ಇದಕ್ಕೆ ಜವಾಬ್ದಾರಿಯೆಂದು ಹೇಳುವ ರೀತಿಯಲ್ಲಿ ಮಾತನಾಡಿದರು.

೬–೧೦ ಪಿ. ಎಂ.

ಮಾನ್ಯ ಡಿ. ಬಿ. ಚಂದ್ರೇಗೌಡರು ಮಾತನಾಡುವಾಗಲೂ ಕೂಡ ಈ ಎಲ್ಲಾ ಜವಾಬ್ದಾರಿ, ಎಲ್ಲಾ ಆರೋಪಗಳು ಕಾಂಗ್ರೆಸ್ ಐ ಪಕ್ಷದಿಂದ ಆಗಿದೆ ಎಂದು ಹೇಳಿದರು, ಕಾಂಗ್ರೆಸ್ ಪಕ್ಷ ಏತಕ್ಕೋಸ್ಕರ ಈ ದುಷ್ಕೃತ್ಯಗಳನ್ನು ಮಾಡಬೇಕು ಸೋಮವಾರಪೇಟೆಯಲ್ಲಿ ಕಾಂಗ್ರೆಸ್ ಪಕ್ಷದವರು ಯಾರು ಈ ಗಲಾಟೆಯಲ್ಲಿ ಈ ಸೇರಿದ್ದರು ಎನ್ನುವುದನ್ನು ದಯಮಾಡಿ ಹೇಳಿ. ಬಿ.ಜೆ.ಪಿ. ಅಥವಾ ಆರ್.ಎಸ್.ಎಸ್. ಜನ ಮಾತ್ರ ಗಲಾಟೆಯಲ್ಲಿ ಸೇರಿ ಏನು ಮಾಡಿದ್ದಾರೆ ಸ್ವಾಮಿ. ಅವರು ಮಾಡಿರುವುದು ಇಷ್ಟೆ ; ಮನೆಗಳನ್ನು ಸುಟ್ಟಿದ್ದಾರೆ. ಯಾರ ಮನೆಗಳನ್ನು ಸುಟ್ಟಿದ್ದಾರೆಂದರೆ, ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಕೆಲಸಮಾಡಿ ಕಷ್ಟದಲ್ಲಿ ಬಂದು ಅಡುಗೆ ಮಾಡಿ ಊಟ ಮಾಡಿ ಮಲಗಿದಂಥ ಮನೆಗಳ ಮೇಲೆ ೨೦೦–೩೦೦ ಜನರು ಹೋಗಿ ಮನೆಯ ಮೇಲೆ ಹತ್ತಿ ಸೀಮೆಎಣ್ಣೆ ಹಾಕಿ ಕೆಳಗಡೆ ಬೆಂಕಿಕೊಟ್ಟು ಗುಂಡು ಹೊಡೆದಿದ್ದಾರೆ. ೮-೧೦ ಗುಂಡುಗಳನ್ನು ಒಂದೊಂದು ಮನೆಯಲ್ಲಿ ಹಾಕಿದ ಪ್ರದರ್ಶನಗಳು ಇವೆ. ಯಾರು ಹಿಂದೂಗಳ ತೋಟಗಳಲ್ಲಿ ಹೋಗಿ ಕೆಲಸಮಾಡಿ ಅವರಿಗೆ ಲಾಭವನ್ನು ಮಾಡಿಕೊಟ್ಟಿದ್ದರೋ ಅಂತಹ ಜನಗಳ ಮೇಲೆ ಹಲ್ಲೆ ಮಾಡಿದ್ದಾರೆ. It was a planned and calculated attack on Muslim population in my taluk. ಯಾವ ಗ್ರಾಮಗಳಲ್ಲಿ ಮೂರು ಮನೆಗಳು ಇವೆ, ಆ ಮೂರು ಮನೆಗಳಿಗೆ ಮಾತ್ರ ಹೋಗಿ ಜಖಂ ಮಾಡಿದ್ದಾರೆ. ಅದರ ಪಕ್ಕದ ಹಿಂದೂಗಳ ಮನೆಗಳನ್ನು ಹಾಗೆಯೇ ಬಿಟ್ಟಿದ್ದಾರೆ. On 9th and 10th, such incidents have occured. Afterwards, here and there some stray incidents have taken place. ಓಟರ್ಸ್ ಲಿಸ್ಟ್ ಇಟ್ಟುಕೊಂಡು ಪ್ಲ್ಯಾನ್ ಮಾಡಿ ಎಲ್ಲೆಲ್ಲಿ ಮುಸಲ್ಮಾನರು ಇದ್ದಾರೆ, ಯಾವ ಯಾವ ಗ್ರಾಮಗಳಲ್ಲಿ ಮುಸಲ್ಮಾನರು ಇದ್ದಾರೆ ಅಲ್ಲಿ ಈ ಕೆಲಸ ಮಾಡಿದ್ದಾರೆ From different directions people have gone. Otherwise, it is impossible to enter Muslim population and commit arson, looting and all these offences. This is one proof to show that these people had the intention to finish only the Muslim population. ಮುಸಲ್ಮಾನರ ಮನೆಗಳಿಗೆ ಗುಂಡು ಹಾಕಿ ಅವರ ಮನೆಯನ್ನು ಬೆಂಕಿಯಲ್ಲಿ ಸುಟ್ಟು ಅವರ ಮನೆಗಳ ಸಾಮಾನುಗಳನ್ನು ಲೂಟಿ ಮಾಡಿ ಅವರ ಮಸೀದಿಗಳನ್ನು ಒಡೆದಿದ್ದಾರೆ. ಬೇರೆ ಯಾವುದೇ ಮನೆಗಳಿಗೂ ಈ ರೀತಿಯಾಗಿಲ್ಲ ಬರೀ ಮುಸಲ್ಮಾನರನ್ನು ಮಾತ್ರ ಸೋಮವಾರ ಪೇಟೆ ತಾಲ್ಲೂಕಿನಿಂದ ಓಡಿಸಬೇಕು ಎನ್ನುವ ದೃಷ್ಟಿಯಿಂದ ಈ ರೀತಿಯಾಗಿ ಒಂದು ಅಟ್ಯಾಕ್ ಮಾಡಿದ್ದಾರೆ. ನಾನು ಇಲ್ಲಿಯೇ ಇದ್ದೆನು. ನಾನು ಸೋಮವಾರಪೇಟೆ ತಾಲ್ಲೂಕು ಶಾಸಕನಾಗಿ ಇಲ್ಲಿಯೇ ಇದ್ದೆ, ಸುಮಾರು ೮–೯ ದಿವಸಗಳ ಕಾಲ ಅಲ್ಲಿಗೆ ಹೋಗಲಿಕ್ಕೆ ಆಗಲಿಲ್ಲ. ಅಂತಹ ಪರಿಸ್ಥಿತಿ ಅವೊತ್ತಿನದಿವಸ ಇತ್ತು. ಆ ಸಂದರ್ಭದಲ್ಲಿ ಬಿ.ಜೆ.ಪಿ. ನಾಯಕರು ಅಲ್ಲಿಗೆ ಹೋದರು. ಅಲ್ಲಿ ಪೀಸ್ ಕಮಿಟಿ ಮೀಟಿಂಗ್ ಎಂದು ಮಾಡಿ ನಿಮ್ಮ ಶಾಸಕರು ಎಲ್ಲಿ ಹೋಗಿದ್ದಾರೆ ನಿಮ್ಮ ಶಾಸಕರು ಎಲ್ಲಿ ಓಡಿ ಹೋಗಿದ್ದಾರೆ, ಆ ಶಾಸಕನಿಗೆ ಅವೊತ್ತು ಏತಕ್ಕೆ ಓಟು ಕೊಟ್ಟಿರಿ. ಆ ಶಾಸಕ ಎಲ್ಲಿ ಎಂದು ಮೊಸಳೆ ಕಣ್ಣೀರು ಸುರಿಸಿದರು ಈ ಬಿ.ಜೆ.ಪಿ. ನಾಯಕರು. ಅವೊತ್ತಿನ ದಿವಸ ರಾಜಕೀಯ ಪರಿಸ್ಥಿತಿ ಬೆಂಗಳೂರಿನಲ್ಲಿ ಯಾವರೀತಿ ಇತ್ತು. ಕಾಂಗ್ರೆಸ್ ಯಾವ ಸ್ಥಿತಿಯಲ್ಲಿತ್ತು. ಎಂದು

ಅವರು ಯೋಚನೆ ಮಾಡಬೇಕಾಗಿತ್ತು. ೧೧ ಮತ್ತು ೧೨ನೇ ತಾರೀಖು ಸೋಮವಾರಪೇಟೆಯಲ್ಲಿ ಮೀಟಿಂಗ್ ಮಾಡಿ ನಿಮ್ಮ ಶಾಸಕ ಎಲ್ಲಿ ಓಡಿ ಹೋಗಿದ್ದಾನೆ ಎಂದು ಏತಕ್ಕೋಸ್ಕರ ಕೇಳಿದರು. ಚುನಾವಣೆಯಲ್ಲಿ ನಿಂತು ೨೦ ಸಾವಿರ ಓಟುಗಳಿಂದ ಸೋತಂತ ಬಿ.ಜೆ.ಪಿ, ನಾಯಕತ್ವದಲ್ಲಿ ಅವೊತ್ತು ಮೀಟಿಂಗ್ ನಡೆದಿದೆ. ಅದಕ್ಕೋಸ್ಕರ ನಾನು ಕೇಳುತ್ತಿದ್ದೇನೆ. ಮಾನ್ಯ ಯಡಿಯೂರಪ್ಪನವರು ತಮ್ಮ ಅಭಿಪ್ರಾಯದಲ್ಲಿ ಕಾಂಗ್ರೆಸ್‌ನವರು ಮಾಡಿದ್ದು ಎಂದು ಹೇಳುವಂಥ ಅಭಿಪ್ರಾಯವನ್ನು ಏನು ವ್ಯಕ್ತಪಡಿಸಿದಿರಿ ಅದಕ್ಕೋಸ್ಕರ ಹೇಳುತ್ತೇನೆ. ಸೋಮವಾರಪೇಟೆ ತಾಲ್ಲೂಕು ಬಿಟ್ಟು ಬೇರೆ ತಾಲ್ಲೂಕಿನ ವಿಚಾರ ನನಗೆ ಗೊತ್ತಿಲ್ಲ.

ಶ್ರೀ ಬಿ. ಎಸ್ ಯಡಿಯೂರಪ್ಪ .—ನಾನು ಏನು ಸ್ಪಷ್ಟವಾಗಿ ಹೇಳುತ್ತಿದ್ದೇನೆಂದರೆ, ನೇರವಾಗಿ ನಾವು ಮಾಡಿದ್ದೇವೆ ಎನ್ನುವ ಮಾತನ್ನು ನೀವು ಹೇಳುತ್ತಿದ್ದೀರಿ, ನಾವು ನೇರವಾಗಿ ನೀವು ಮಾಡಿದ್ದೀರಿ ಎನ್ನುವ ಮಾತನ್ನು ಹೇಳುತ್ತಿದ್ದೇವೆ. ನಿಮ್ಮ ಕೈವಾಡ ಇದೆ ಎನ್ನುವ ಆರೋಪ ಮಾಡಿದ್ದೇವೆ. ನಾನು ಕೊಟ್ಟಂಥ ಸಲಹೆ ಬಗ್ಗೆ ತಾವು ಒತ್ತಾಯ ಮಾಡಿ. ಈ ಸದನದಲ್ಲಿ ತಮ್ಮ ಅಭಿಪ್ರಾಯ ಹೇಳುವುದಕ್ಕೆ ತಮಗೆ ಸ್ವಾತಂತ್ರ್ಯ ಇದೆ, ನಮ್ಮ ಅಭಿಪ್ರಾಯ ಹೇಳುವುದಕ್ಕೆ ನಮಗೆ ಸ್ವಾತಂತ್ರ್ಯ ಇದೆ. ಆದ್ದರಿಂದ, ಒಂದು ಸದನದ ಸಮಿತಿಯನ್ನು ಮಾಡಿ, ನಾವು ಜನರ ಹತ್ತಿರ ಹೋಗೋಣ, ಹಿರಿಯ ಪತ್ರಕರ್ತರು ಜೊತೆಗಿದ್ದಾಗ ಏನು ಸತ್ಯಸಂಗತಿ ನಡೆದಿದೆ ಎನ್ನುವುದು ಹೊರಗಡೆ ಬರುತ್ತದೆ. ಯಾರು ತಪ್ಪು ಮಾಡಿದ್ದಾರೆ ಅವರ ಮೇಲೆ ತೀವ್ರ ಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆ, ಆದಕ್ಕೋಸ್ಕರ ಈ ರೀತಿಯ ಆರೋಪಗಳು ಇರಬೇಕಾದರೆ ಸತ್ಯ ಹೊರಗಡೆ ಬರಬೇಕು. ನೀವು ನಿಮ್ಮ ಪಕ್ಷ ಬಿಟ್ಟುಕೊಟ್ಟು ಮಾತನಾಡುವುದಿಲ್ಲ, ಅಥವಾ ನಾನು ನನ್ನ ಪಕ್ಷದ ಕೆಲವು ತಪ್ಪುಗಳನ್ನು ಬಿಟ್ಟು ಕೊಡಲಿಕ್ಕೆ ಹಿಂದೆ ಮುಂದೆ ನೋಡಬಹುದು. ರಾಜ್ಯದ ಜನತೆಗೆ ಸತ್ಯ ಹೊರಗಡೆ ಬಂದು ತಿಳಿಯ ಬೇಕೆಂದರೆ ನಾವು ಎಲ್ಲರೂ ಬಿಚ್ಚು ಮನಸ್ಸಿನಿಂದ ಜನರ ಹತ್ತಿರ ಹೋಗೋಣ. ಹೋಮ್ ಮಿನಿಸ್ಟರ್ ಅಧ್ಯಕ್ಷತೆಯಲ್ಲಿ ಒಂದು ಸದನದ ಸಮಿತಿ ಆಗಲಿ, ಜನರ ಮುಂದೆ ಹೋಗೋಣ. ತಾವು ಕೊಡಗಿನ ಬಗ್ಗೆ ಮಾತ್ರ ಮಾತನಾಡುತ್ತಿದ್ದೀರಿ. ಆದರೆ ಏತಕ್ಕೆ ಪ್ರಾರಂಭವಾಯಿತು. ನಾನು ಪ್ರಾರಂಭದಲ್ಲೇ ಹೇಳಿದಂತೆ ಲಕ್ಷಾಂತರ ಜನ ಹಿಂದೂಗಳ ಭಾವನೆಗಳಿಗೆ ವಿರೋಧವಾಗಿ ಅಲ್ಲಿ ಒಂದು ಜ್ಯೋತಿ ಮೆರವಣಿಗೆ ಮಾಡಲಿಕ್ಕೆ ಆಗಲಿಲ್ಲ ಅಂದರೆ ಕೊಡಗ ಜಿಲ್ಲೆ ಪಾಕಿಸ್ಥಾನ ಏನು ? ಏತಕ್ಕೆ ಅವಕಾಶವನ್ನು ಕೊಡಲಿಲ್ಲ. ಈ ರೀತಿ ಆದುದರಿಂದ ಜನರಲ್ಲಿ ಒಂದು ಆಕ್ರೋಶ ಉಂಟಾಗಿದೆ. ಅದಕ್ಕೆ ತಾವು ಅವಕಾಶವನ್ನು ಕೊಡದಂತೆ ಅಲ್ಲಿ ಶಾಂತಿ ಸಂಪ್ರದಾಯವನ್ನು ಮುಂದುವರಿಸುವುದಕ್ಕೆ ನಾವೂ, ನೀವೂ ಕೂತು ಯೋಚನೆ ಮಾಡೋಣ ಎಂದು ಇಷ್ಟು ಮಾತ್ರ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎ. ಎಂ ಬೆಳ್ಳಿಯಪ್ಪ .—ಸನ್ಮಾನ್ಯ ಅಧ್ಯಕ್ಷರೆ, ನಾನು ಸೋಮವಾರಪೇಟೆ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿ ಮಾತನಾಡುತ್ತಿದ್ದೇನೆ, ನನ್ನ ಅನಿಸಿಕೆಯಲ್ಲಿ ಹೇಳುವುದಾದರೆ, ಸೋಮವಾರಪೇಟೆಯಲ್ಲಿ ಅಥವಾ ಮಡಿಕೇರಿ ತಾಲ್ಲೂಕಿನಲ್ಲಿ ಇದಕ್ಕೆ ಪೂರ್ಣ ಕೈವಾಡ ಇರುವುದು ಎಂದರೆ ಬಿ.ಜೆ.ಪಿ. ಮತ್ತು ವಿಶ್ವ ಹಿಂದೂ ಪರಿಷತ್‌ನವರದ್ದು ಎಂದು ನಾನು ಹೇಳುತ್ತೇನೆ. ಅವರು ಯಾವರೀತಿ ಹಿಂದೂಗಳ ಮನಸನ್ನು ಕೆಡಿಸಿದ್ದಾರೆಂದರೆ ನನ್ನ ತಾಲ್ಲೂಕಿನ ಹಲವಾರುಕಡೆ ಅವರ ಮನಸ್ಸನ್ನು ಉದ್ರೇಕಗೊಳಿಸುವ ಬ್ಯಾನರ್ಸ್‌ನ್ನು ಹಾಕಿದ್ದಾರೆ ರಾಮನ ಮಕ್ಕಳು ನಾವೆಲ್ಲಾ, ಬಾಬರ ಮಕ್ಕಳು ಬೇಕಿಲ್ಲ, ಎಂದು. ಈ ವಿಷಯದಲ್ಲಿ ನಾನು ಸರ್ಕಾರದವರನ್ನೂ ಕೂಡ ಸ್ವಲ್ಪಮಟ್ಟಿಗೆ ಟೀಕೆ ಮಾಡಬೇಕಾಗುತ್ತದೆ. ಕಾರಣ ಏನೆಂದರೆ, ಅವತ್ತಿನ ಸರ್ಕಾರ ಇದ್ದಾಗ ನಾನು ಈ ವಿಷಯದಲ್ಲಿ ಎಸ್.ಪಿ ಯವರಿಗೆ ಒಂದು ಅರ್ಜಿಯನ್ನು ಕೊಟ್ಟೆ. ಅವರ ಕೈ ಕೆಳಗಿರತಕ್ಕ ಅಧಿಕಾರಿಗಳಿಗೆ ನಾನು ಏನು ಹೇಳಿದೆನೆಂದರೆ, ಜನರ ಮನಸ್ಸನ್ನು ಉದ್ವೇಗಗೊಳಿಸುವಂಥ ಇಂಥ ಬ್ಯಾನರ್‌ಗಳನ್ನು ತೆಗೆಸಿ ಎಂದು ಆದರೆ ನಮ್ಮ ದುರಾದೃಷ್ಟವೆಂದು ಕಾಣಿಸುತ್ತದೆ, ಅವರು ಆ ಬ್ಯಾನರ್ಸ್‌ನ್ನು ತೆಗೆಸಲಿಲ್ಲ. ಇವತ್ತೂ ಕೂಡ ನನ್ನ ತಾಲ್ಲೂಕಿನಲ್ಲಿ ಮಾದಾಪುರ ಎಂಬ ಊರಿಗೆ ಹೋಗಿ ನೀವು ನೋಡಬಹುದು. ಇವತ್ತೂ ಕೂಡ ಅಲ್ಲಿ ಬ್ಯಾನರ್ಸ್ ತೂಗಾಡುತ್ತಿವೆ. No police constable or police officer is coming forward to remove the banners. ಆದ್ದರಿಂದ ನಾನು ಮಾನ್ಯ ಗೃಹಮಂತ್ರಿಗಳಲ್ಲಿ ಕೇಳಿಕೊಳ್ಳುವುದಾದರೂ ಇಷ್ಟೆ, ಇಂಥ ಪ್ರಚೋದನೆ ಮಾಡತಕ್ಕ ಬ್ಯಾನರ್ಸ್ ಎಲ್ಲಿವೆ, ಅದನ್ನು ತೆಗೆಸಿ ಎಂದು ಹೇಳುತ್ತೇನೆ. ನಾನು ಇನ್ನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗದೆ I have a word of appreciation for the officers of the district of Coorg. The Dy. Commissioner of Coorg did a yeoman service to the people of the taluk ಯಾವ ಗಳಿಗೆಯಲ್ಲಿ ಏನು ಒಂದು ಸುದ್ದಿ ಬಂದರೂ ಕೂಡ ಆ ಸ್ಥಳಕ್ಕೆ ಕೇವಲ ಅರ್ಧ ಗಂಟೆಯಲ್ಲಿ ಮುಕ್ಕಾಲು ಗಂಟೆಯಲ್ಲಿ ಹೋಗುತ್ತಿದ್ದರು. Even the Superintendent of Police Dr. Umapathy. ಸಕಾಲದಲ್ಲಿ ಸ್ಥಳಕ್ಕೆ ಹೋಗದೇ ಇದ್ದಿದ್ದರೆ ಬಹುಶಃ ಅಲ್ಲಿ ೨೫–೩೦

ಹೆಣಗಳು ಬೀಳುತ್ತಿದ್ದುವು. ಆ ಇಬ್ಬರು ಅಧಿಕಾರಿಗಳು ಕೊಡಗಿನಲ್ಲಿ ಸಕಾಲದಲ್ಲಿ ಕೈಗೊಂಡ ಕ್ರಮದ ಪರಿಣಾಮವಾಗಿ ಇವತ್ತು ಕೊಡಗಿನ ಮುಸ್ಲಿಂ ಪಾಪುಲೇಷನ್ ಜೀವಂತ ಉಳಿದಿದ್ದಾರೆ. ಅವರ ಆಸ್ತಿಪಾಸ್ತಿಗಳು ಉಳಿದಿವೆ. ಅಂಥ ಅಧಿಕಾರಿಗಳನ್ನು ಕೆಲವು ಪ್ರಚೋದನಕಾರಿ ಶಕ್ತಿಗಳು ಅಲ್ಲಿಂದ ಟ್ರಾನ್ಸ್‌ಫರ್ ಮಾಡಿಸಬೇಕೆಂದು ಹೊರಟಿದ್ದಾರೆ. ಅದು ಪತ್ರಿಕೆಗಳಲ್ಲೂ ಬರುತ್ತಿದೆ. ಇದಕ್ಕೆ ಸರ್ಕಾರ ಅವಕಾಶವನ್ನು ಕೊಡಬಾರದು. ಆ ಅಧಿಕಾರಿಗಳನ್ನು ಅಲ್ಲಿಯೇ ಇರಿಸಿಕೊಳ್ಳಲು ಪ್ರಯತ್ನ ಮಾಡಬೇಕೆಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ನಮ್ಮ ಜಿಲ್ಲಾಧಿಕಾರಿಯವರು 144ನೇ ಸೆಕ್ಷನ್‌ನ್ನು ಪ್ರೊಮಾಲ್ಗೇಟ್ ಮಾಡಿದರು. ಡಿಸ್ಟ್ರಿಕ್ಟ್ ಜಡ್ಜ್‌ರವರು ಆ ಆರ್ಡರ್‌ನ್ನು ಸ್ಟೇ ಮಾಡಿದರು. ನಂತರ ಅದರಮೇಲೆ ಜಿಲ್ಲಾಧಿಕಾರಿಯವರು ಹೈಕೋರ್ಟಿಗೆ ಹೋಗಿ ಆ ಸ್ಟೇ ಆರ್ಡರ್‌ನ್ನು ರಿವೋಕ್ ಮಾಡಿಸಿಕೊಂಡು ಬಂದರು ಎನ್ನತಕ್ಕ ಮಾತನ್ನು ಶ್ರೀಮಾನ್ ಯಡಿಯೂರಪ್ಪನವರು ಹೇಳಿದರು. ಹೌದು, ಅವತ್ತು ಡೆಪ್ಯುಟಿ ಕಮಿಷನರ್‌ರವರು 144ನೇ ಸೆಕ್ಷನ್‌ನ್ನು ಪ್ರೊಮಾಲ್ಗೇಟ್ ಮಾಡದೇ ಇದ್ದಿದ್ದರೆ, ಅಥವಾ ಹೈಕೋರ್ಟಿನಿಂದ ಅದನ್ನು ರಿವೋಕ್ ಮಾಡಿಸಿಕೊಳ್ಳದೇ ಹೋಗಿದ್ದಿದ್ದರೆ ಈ ವಿಷಯ ಅಲ್ಲಿಗೆ ನಿಲ್ಲುತ್ತಿರಲಿಲ್ಲ. ದುಷ್ಕೃತ್ಯಗಳು, ಜನರನ್ನು ಕೊಲ್ಲುವುದು, ಲೂಟಿ ಮಾಡುವುದು ಇನ್ನೂ ಮುಂತಾದ್ದು ನಿಲ್ಲುತ್ತಿರಲಿಲ್ಲ. ಬಹುಶಃ ನನ್ನ ಅಭಿಪ್ರಾಯದಲ್ಲಿ ಸೋಮವಾರಪೇಟೆ ತಾಲ್ಲೂಕು, ಮಡಿಕೇರಿ ತಾಲ್ಲೂಕು ಅಥವಾ ಇಡೀ ಕೊಡಗು ಜಿಲ್ಲೆ ಬೆಂಕಿಯಿಂದ ಹತ್ತಿಕೊಂಡು ಉರಿಯುತ್ತಿತ್ತು.

ಅದಕ್ಕೋಸ್ಕರವಾಗಿ ನಾನು ಕೇಳಿಕೊಳ್ಳುವುದಿಷ್ಟೇ, ಆ ಡೆಪ್ಯುಟಿ ಕಮಿಷನರ್‌ನ್ನು ದೂರುವುದು ಸರಿಯಲ್ಲ. ನಾನು ಆ ಒಂದು ಕ್ಷೇತ್ರದ, ಆ ಒಂದು ಜಿಲ್ಲೆಯ ಶಾಸಕನಾಗಿ ನಾನು ಹೇಳುತ್ತಿದ್ದೇನೆ ದಯವಿಟ್ಟು ಅದು ಒಂದು ಸತ್ಯಕ್ಕೆ ದೂರವಾದ ಸಂಗತಿ ಎಂದು. ಕಡೆಯದಾಗಿ ಇಷ್ಟು ನಾನು ಹೇಳಿಕೊಳ್ಳುವುದು ಇವತ್ತು ಶಾಂತಿ ಸಮಿತಿಗಳನ್ನು ಮಾಡಿದ್ದೇವೆ. ಡಿಸ್ಟ್ರಿಕ್ಟ್ ಲೆವೆಲ್‌ನಲ್ಲಿ, ಪ್ರತಿ ಮಂಡಲ್‌ಗಳಲ್ಲಿಯೂ ಕೂಡ ತಾಲ್ಲೂಕು ಲೆವೆಲ್‌ನಲ್ಲಿಯೂ ಕೂಡ ಮಾಡಿದ್ದೇವೆ. ನಾವು ಆ ಶಾಂತಿ ಸಮಿತಿಯ ಮೀಟಿಂಗ್‌ಗಳಿಗೆ ಹೋಗಿದ್ದೇವೆ. ಕಡೆಗೆ ಮಾನ್ಯ ಯಡಿಯೂರಪ್ಪನವರು ಅವರು ಭಾಷಣ ಮಾಡುತ್ತಾ ಒಂದು ಒಳ್ಳೆಯ ಮಾತನ್ನು ಹೇಳಿದ್ದಾರೆ, ಒಂದು ಪ್ರಾರ್ಥನೆಯನ್ನು ಮಾಡಿಕೊಂಡಿರುತ್ತಾರೆ, ಎಲ್ಲ ರಾಜಕೀಯ ಪಕ್ಷಗಳ ಪರವಾಗಿ ಅದಕ್ಕೆ ನಮಗೆ ಬಹಳ ಸಂತೋಷವಾಗಿದೆ. ಅದೇನೆಂದರೆ ಎಲ್ಲರೂ ಸೇರಿ ಈ ದೇಶದಲ್ಲಿ ಶಾಂತಿ ನೆಲಸಲಿಕ್ಕೆ ಪ್ರಯತ್ನ ಪಡೋಣ. ಅದಕ್ಕೆ ನಿಮ್ಮ ಎಲ್ಲರ ಒಂದು ಸಹಕಾರ ಬೇಕು ಎಂದು ಅವರು ಪ್ರಾರ್ಥನೆ ಮಾಡಿಕೊಂಡಿರುವುದು ಬಹಳ ಸಂತೋಷ. ಅದಕ್ಕೆ ನಾವೂ ಕೂಡ ತಯಾರಾಗಿದ್ದೇವೆಂದು ಹೇಳುತ್ತೇನೆ. ಆದರೆ ಒಂದು ಪ್ರಶ್ನೆ ಮಾನ್ಯ ಯಡಿಯೂರಪ್ಪನವರನ್ನು ಕೇಳುತ್ತಿದ್ದೇನೆ. ಬಹುಶಃ ಮಾನ್ಯ ಬಸವಲಿಂಗಪ್ಪನವರು ಏನೋ ಒಂದು ಮಾತನ್ನು ಹೇಳಿರಬಹುದು, ಅವರು ಅದನ್ನು ಯಾವ ಕಾರಣಕ್ಕೋಸ್ಕರವಾಗಿ ಹೇಳಿದರೋ ನನಗೆ ಗೊತ್ತಿಲ್ಲ. ಆದರೆ ಡಿಸ್ಟ್ರಿಕ್ಟ್ ಲೆವಲ್‌ನಲ್ಲಿ ಶಾಂತಿ ಸಮಿತಿ ಮಾಡಿದರೂ ತಾಲ್ಲೂಕು ಮಟ್ಟದಲ್ಲಿ ಶಾಂತಿ ಸಮಿತಿಯನ್ನು ಮಾಡಿದರು, ಮಂಡಲ್ ಲೆವಲ್‌ನಲ್ಲಿ ಶಾಂತಿ ಸಮಿತಿಯನ್ನು ಮಾಡಿದರು; ಆದರೆ ನಿಮ್ಮ ವಿಶ್ವಹಿಂದೂ ಪರಿಷತ್‌ನವರು ಹಾಗೂ ಬಿ.ಜೆ.ಪಿ.ಯವರು ಈ ಎಲ್ಲ ಮೀಟಿಂಗ್‌ಗಳನ್ನು ಬಾಯ್‌ಕಾಟ್ ಮಾಡಿದರು. ನಿಮಗೆ ಶಾಂತಿ ತರಬೇಕು ಎನ್ನತಕ್ಕಂಥ ಕಾಳಜಿ ಇಲ್ಲವೆಂದು ಈ ಕಾರಣದಿಂದ ಹೇಳಬೇಕಾಗುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಒಂದು ನಿಮಿಷ ಮಾನ್ಯ ಸದಸ್ಯರು ಈಗಲೂ ಆದನ್ನು ಹೇಳುತ್ತೇನೆ. ಏನೆಂದರೆ. ಯಾವ ಜಿಲ್ಲೆಯಲ್ಲಿ ರಾಮಜ್ಯೋತಿ ಮೆರವಣಿಗೆಯನ್ನು ಮಾಡಲಿಕ್ಕೆ ಅವಕಾಶ ಕೊಡದೆ ನಿಮ್ಮ ಅಧಿಕಾರಿಗಳು ಮನಬಂದಂತೆ ವರ್ತನೆ ಮಾಡಿದರೋ ಅಂಥ ಶಾಂತಿ ಸಮಿತಿಗಳಿಂದ ನಮಗೆ ಶಾಂತಿ ಸಿಗುವುದಿಲ್ಲ. ಅಂತಹ ಶಾಂತಿ ನಮಗೆ ಬೇಡವೆಂದು ಬಾಯ್‌ಕಾಟ್ ಮಾಡಬೇಕಾಗುತ್ತದೆಂದು ನಾನು ಸೂಚನೆ ಕೊಟ್ಟಿದ್ದೆ. ನಿಮ್ಮ ಅಧಿಕಾರಿಗಳು ಹಿಂದುಗಳ ಭಾವನೆಗಳಿಗೆ ಧಕ್ಕೆ ಬರುವಂಥ ಕೆಲಸ ಮಾಡಿದ್ದಾರೆ. ಮೆರವಣಿಗೆ ಮಾಡಲು ಧಕ್ಕೆ ಉಂಟುಮಾಡಿದ್ದಾರೆ. ಅಂಥ ಶಾಂತಿ ಸಮಿತಿ ನಮಗೆ ಬೇಕಾಗಿಲ್ಲವೆಂದು ಆ ಮಾತನ್ನು ಆಗಲೂ ಹೇಳಿದ್ದೇನೆ ಈಗಲೂ ಇಲ್ಲಿ ಹೇಳುತ್ತೇನೆ. ಅಂಥ ಸಮಿತಿಗಳಲ್ಲಿ ನಾವು ಭಾಗವಹಿಸುವುದಿಲ್ಲ.

ಶ್ರೀ ಎ. ಎಂ. ಬೆಳ್ಳಿಯಪ್ಪ.—ನಿಮ್ಮ ಈ ಒಂದು ಭಾವನೆಯ ಅರ್ಥವೇನು, ನೀವು ನಾವು ಎಲ್ಲರೂ ಒಟ್ಟುಗೂಡಿ ಶಾಂತಿಯನ್ನು ಸ್ಥಾಪನೆ ಮಾಡಬೇಕೆಂದು ಹೇಳಿದರಲ್ಲಿ, ಹಾಗೆ ಹೇಳಿ ನೀವು ಒಂದು ಪಕ್ಷದ ಅಧ್ಯಕ್ಷರಾಗಿ ಈ ರೀತಿ ಒಂದು ಆದೇಶವನ್ನು ಕಳುಹಿಸಬೇಕಾದರೆ ನಿಮ್ಮ ಒಂದು ಪ್ರಾರ್ಥನೆಯ ಅರ್ಥವಾದರೂ ಏನು ಎಂದು ಕೇಳುತ್ತಿದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಈ ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವ ದೃಷ್ಟಿಯಿಂದ ನಾವು ಎಲ್ಲರೂ ಸೇರಿ ಒಂದಾಗಿ ಕೆಲಸ ಮಾಡಬೇಕೆಂದು ಹೇಳುವಾಗ ಕೊಡಗಿನಲ್ಲಿ ನಡೆದಂಥ

ಶಾಂತಿ ಸಮಿತಿಯ ಸಭೆಯಲ್ಲಿ. ಆ ಜಿಲ್ಲೆಯಲ್ಲಿ ನಮ್ಮ ವಿರುದ್ಧವಾಗಿ ಕೆಲಸ ಮಾಡಿದ್ದರಿಂದ ಅಲ್ಲಿಯ ಲಕ್ಷಾಂತರ ಹಿಂದುಗಳ ಭಾವನೆಗೆ ವಿರುದ್ಧವಾಗಿ ಕೆಲಸ ಮಾಡಿದ್ದರಿಂದ ಅಲ್ಲಿ ಶಾಂತಿನೆಲೆಸಲು ಸಾಧ್ಯವಿಲ್ಲ.

(ಗೊಂದಲ)

ಶ್ರೀ ಎ. ಎಂ. ಬೆಳ್ಳಿಯಪ್ಪ—ಆದರಿಂದ ಇಷ್ಟೊಂದು ಹೇಳಿ. ಇವತ್ತು ಕೊಡಗಿನಲ್ಲಿ ಈ ಸಂದರ್ಭದಲ್ಲಿ ಗಲಾಟೆ ನಡೆದ ಸಂದರ್ಭದಲ್ಲಿ ಬಹಳ ದೊಡ್ಡ ತಾಪತ್ರಯವಾಯಿತು. ಇದಕ್ಕೆ ಕಾರಣವನ್ನು ಹಲವಾರು ಜನ ನಮ್ಮ ಸ್ನೇಹಿತರು ಕೂಡ ಹೇಳಿದ್ದಾರೆ. ಅದೇನೆಂದರೆ ಅಲ್ಲಿ ಪೋಲೀಸ್ ಫೋರ್ಸ್ ಎಷ್ಟು ಸಂಖ್ಯೆಯಲ್ಲಿರಬೇಕೋ ಅಷ್ಟು ಸಂಖ್ಯೆಯಲ್ಲಿಲ್ಲವೆಂದು. ಎಷ್ಟೋ ವರ್ಷಗಳಿಂದ ಡೆವಲಪ್‌ಮೆಂಟ್ ಆಕ್ಟಿವಿಟೀಸ್‌ಗೋಸ್ಕರ ಹಣವನ್ನು ಕೂಡ ಕೊಟ್ಟಿರುತ್ತೇವೆ. ಡವಲಪ್‌ಮೆಂಟ್ ವರ್ಕ್ಸ್‌ಗೆ ಲಕ್ಷಗಟ್ಟಲೇ ಕೋಟಿಗಟ್ಟಲೆ ಹಣವನ್ನು ವಿನಿಯೋಗವಾದರೂ ಪೋಲೀಸ್ ಡಿಪಾರ್ಟ್‌ಮೆಂಟ್‌ಗೆ ಬಸ್‌ಗಳನ್ನು ಕೊಟ್ಟಿಲ್ಲ. ಒಂದು ವಹಿಕಲ್ ಬೇಕಾದರೆ ಮಡಕೇರಿಗೆ ಬರಬೇಕಾಗಿರುತ್ತದೆ. ಹೊಸ ವೆಹಿಕಲ್ಸ್ ಪೋಲೀಸ್ ಇಲಾಖೆಗೆ ಕೊಟ್ಟಿಲ್ಲ. ನಾನು ಎಷ್ಟೋ ಸಲ ಡೈರೆಕ್ಟರ್ ಜನರಲ್ ಹತ್ತಿರ ಮಾತನಾಡಿದ್ದೇನೆ. ಮುಖ್ಯಮಂತ್ರಿಗಳ ಹತ್ತಿರ ಮಾತನಾಡಿದ್ದೇನೆ ದಯವಿಟ್ಟು ಸ್ವಲ್ಪ ಪೋಲೀಸ್ ಸಿಬ್ಬಂದಿಯನ್ನು ಕಳುಹಿಸಿಕೊಡಿ ಎಂದು. ಆದರೆ ಅವರಿಗೆ ಪೋಲೀಸ್ ಕಾನ್‌ಸ್ಟೇಬಲ್‌ಗಳನ್ನೂ ಕೂಡ ಕಳುಹಿಸಿಕೊಡಲು ಸಾಧ್ಯವಾಗಿಲ್ಲ. ಎಷ್ಟೋ ಕಷ್ಟಪಟ್ಟು ಅಲ್ಲಿಂದ ಇಲ್ಲಿಂದ ಡಿ ಐ ಜಿ.ಯವರು, ಪೋಲೀಸ್ ಸೂಪರಿಂಟೆಂಡೆಂಟ್ ಅವರು ಕಾನ್‌ಸ್ಟೇಬಲ್‌ಗಳನ್ನು ಕರೆದುಕೊಂಡುಬಂದು ಕೂರಿಸಿದ್ದಾರೆ. ಅದಕ್ಕೋಸ್ಕರವಾಗಿ ದಯವಿಟ್ಟು ಸರ್ಕಾರದ ಮಾನ್ಯ ಗೃಹ ಮಂತ್ರಿಗಳನ್ನು ಒತ್ತಾಯ ಮಾಡುತ್ತೇನೆ. ನೀವು ಕೂಡಲೇ ಮಾಡಬೇಕಾದ ಕೆಲಸ ಅಂದರೆ ಹೊಸ ಹೊಸ ವಹಿಕಲ್‌ಗಳನ್ನು ಕೊಡಬೇಕು. ನನ್ನ ಕೊಡಗು ಜಿಲ್ಲೆಯ ಸೋಮವಾರ ಪೇಟೆಯಲ್ಲಿ ಉಪ ಪೊಲೀಸ್ ಠಾಣೆಯನ್ನು ಪ್ರಾರಂಭಮಾಡಬೇಕಾಗಿದೆ ಕಳೆದ ಸಾರಿ ಮುಖ್ಯ ಮಂತ್ರಿಗಳು ಅಲ್ಲಿಗ ಬಂದಿದ್ದರು. ಅವರು ಜನರ ಕಷ್ಟಗಳನ್ನು ನೋಡಿದರು ; ಜನರ ಕಣ್ಣೀರು ಒರೆಸಿದರು. ಜನಗಳಿಗೆ ಧೈರ್ಯ ಕೊಟ್ಟರು. ಜನಗಳಿಗೆ ಕೊಡಬೇಕಾದ ಸೌಲಭ್ಯಗಳನ್ನು ಕೊಟ್ಟಿದ್ದಾರೆ. ಆಗ ಗಲಾಟೆಯಾದ ಸ್ಥಳಗಳಿಗೆ ಮುಖ್ಯ ಮಂತ್ರಿಗಳು ಹೋದಾಗ ಕೆಲವರು ನೊಂದು ಹೇಳಿದರು, ಸೋಮವಾರಪೇಟೆ ಟೌನಿಗೆ ಒಂದು ಕಿಲೋಮೀಟರ್ ದೂರದಲ್ಲಿ ಮುಸ್ಲಿಂ ಕಾಲೋನಿ ಏನಿದೆ, ಅಲ್ಲಿ ೩೦೦–೪೦೦ ಜನರಿದ್ದಾರೆ. ಅಲ್ಲಿ ಗಲಾಟೆ ಆಯಿತು. ಮನೆಗಳಿಗೆ ಬೆಂಕಿ ಇಡುವುದಕ್ಕೆ ಶುರು ಮಾಡಿದರು. ಆ ಸಂದರ್ಭದಲ್ಲಿ ಅವರು ಹೇಳಿದರು, ನಮಗೆ ಉಪ ಆರಕ್ಷಕ ಠಾಣೆ ಬೇಕು ಎಂದು. ಆದ್ದರಿಂದ ಅಲ್ಲಿಯೂ ಕೂಡ ಒಂದು ಉಪ ಆರಕ್ಷಕ ಠಾಣೆಯನ್ನು ಮಾಡಬೇಕಾಗುತ್ತದೆ. ಯಾವ ಯಾವ ಸ್ಥಳಗಳಲ್ಲಿ ಆರಕ್ಷಕರಠಾಣೆಗಳನ್ನು ಮತ್ತು ಉಪ ಆರಕ್ಷಕ ಠಾಣೆಗಳನ್ನು ಮಾಡಬೇಕಾಗುತ್ತದೆಂಬ ಬಗ್ಗೆ ಒಂದು ಪಟ್ಟಿಯನ್ನು ಕೊಡುತ್ತಿದ್ದೇನೆ. ಅದೇ ರೀತಿಯಲ್ಲಿ ಆರಕ್ಷಕ ಠಾಣೆಗಳನ್ನು ಸೋಮವಾರ ಪೇಟೆಯಲ್ಲಿ ಜಾಸ್ತಿ ಮಾಡಬೇಕೆಂದು ಹೇಳುತ್ತಾ, ಕೊಡಗು ಜಿಲ್ಲೆಯಲ್ಲಿ ಶಾಂತ ಪರಿಸ್ಥಿತಿಯನ್ನು ತರುವುದಕ್ಕೆ ಮತ್ತು ಜನರು ಶಾಂತಿಯಿಂದ ಬಾಳಬೇಕಾದರೆ ಪೊಲೀಸ್ ಕಾನ್‌ಸ್ಟೇಬಲ್ ಸಂಖ್ಯೆಯನ್ನು ಜಾಸ್ತಿ ಮಾಡಿ ಪ್ರತಿಯೊಂದು ಪೊಲೀಸ್ ಸ್ಟೇಷನ್‌ಗೂ ಒಂದೊಂದು ವೆಹಿಕಲ್ ಅನ್ನು ಕೊಟ್ಟು ಆರಕ್ಷಕ ಮತ್ತು ಉಪ ಆರಕ್ಷಕ ಠಾಣೆಗಳನ್ನು ಹೆಚ್ಚು ಹೆಚ್ಚು ಮಾಡಿ ಜನರ ಒಳತಿಗೆ ನೀವು ಪ್ರಯತ್ನ ಮಾಡಬೇಕೆಂದು ಪ್ರಾರ್ಥಿಸಿಕೊಂಡು ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ವಾಟಾಳ್ ನಾಗರಾಜ್.—(ಚಾಮರಾಜನಗರ).—ಮಾನ್ಯ ಅಧ್ಯಕ್ಷರೆ, ನಾನು ಬಹಳ ಹೊತ್ತಿನಿಂದ ಭಾಷಣ ಮಾಡಬೇಕೆಂದು ಕುಳಿತಿದ್ದೆ. ನನ್ನ ಬಲಗಡೆ ಮುಸ್ಲಿಂ ಲೀಗ್‌ನವರ ಹೊಡೆತ, ಎಡಗಡೆ ಬಿಜೆಪಿ.ಯವರ ಹೊಡೆತ, ಇವರಿಬ್ಬರ ಮಧ್ಯೆ ಸಿಕ್ಕಿರುವಾಗ ನನ ರಕ್ಷಣೆಗೆ ನೀವೇ ಬರಬೇಕಾಗುತ್ತದೆ. ನಾನು ಬೆಳಗಿನಿಂದ ನೋಡುತ್ತಿದ್ದೇನೆ. ಇವರನ್ನು ಬಿಡಿಸಿಕೊಂಡು ಬೇರೆ ಕಡೆ ಹೋಗೋಣವೆಂದರೆ ಬೇರೆ ಆಸನ ಇಲ್ಲದಿರುವುದರಿಂದ ನಾನು ಇಲ್ಲೇ ಕುಳಿತುಕೊಳ್ಳಬೇಕಾಗಿದೆ. ನಾವು ಈ ಸದನ ಸೇರುವುದಕ್ಕೆ ಮುಂಚಿತವಾಗಿ ನಮ್ಮ ಮುಖ್ಯ ಮಂತ್ರಿ ಬಂಗಾರಪ್ಪನವರು ಎಲ್ಲಾ ವಿರೋಧ ಪಕ್ಷದ ಮುಖಂಡರುಗಳನ್ನು ಭೇಟಿ ಮಾಡಿ ಈ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಯ ಬಗ್ಗೆ ಸಮಗ್ರವಾಗಿ ಚರ್ಚಿಸಿ ರಾಜ್ಯ ಸರ್ಕಾರ ಕೈಗೊಂಡಿರತಕ್ಕ ಕಾರ್ಯಕ್ರಮಗಳ ಬಗ್ಗೆ ವಿಚಾರ ವಿನಿಮಯ ಮಾಡಿಕೊಂಡರು. ನಾವು ಈ ಸಭೆಯಲ್ಲಿ ಕಾನೂನು ಪರಿಸ್ಥಿತಿಯ ಬಗ್ಗೆ, ರಾಜ್ಯದಲ್ಲಿ ನಡೆದಿರತಕ್ಕ ಅಶಾಂತ ವಾತಾವರಣದ ಬಗ್ಗೆ ಪರಿಣಾಮ ಕಾರಿಯಾಗಿ ಚರ್ಚೆ ನಡೆಸಬೇಕೆಂಬುದು ನಮ್ಮ ಮೂಲ ಭೂತವಾದಂಥ ಉದ್ದೇಶ. ಈಗ ಅನೇಕ ನಮ್ಮ ಮಾನ್ಯ ಮಿತ್ರರು ಮಾತನಾಡ ವಾಗ ಈ ಸಭೆಯಲ್ಲಿ ಕಾನೂನು ಸುವ್ಯವಸ್ಥೆಯ ಜೊತೆಗೆ ಸಮಗ್ರ ಧರ್ಮ, ಕೋಮು, ದೇವರು ಎಲ್ಲವನ್ನೂ ಈ ಸಭೆಯಲ್ಲಿ ತಂದಿದ್ದಾರೆ. ಬಹುಶಃ ಆದು ಈ ಸಂದರ್ಭದಲ್ಲಿ ರಾಮನನ್ನು ವಿಶ್ಲೇಷಣೆ ಮಾಡುವುದಾಗಲಿ,

ಕೃಷ್ಣನನ್ನು ವಿಶ್ಲೇಷಣೆ ಮಾಡುವುದಾಗಲಿ, ಬೇರೆ ಬೇರೆ ಧರ್ಮಗಳನ್ನು ವಿಶ್ಲೇಷಣೆ ಮಾಡುವುದಾಗಲಿ ಪ್ರಾರಂಭ ಮಾಡಿದರೆ ನಮಗೆ ಸಮಯವೂ ಸಾಕಾಗುವುದಿಲ್ಲ, ಅದಕ್ಕೆ ಬೇರೆ ಒಂದು ಸಂದರ್ಭ ಬೇಕಾಗುತ್ತದೆ, ಇವತ್ತಿನ ದಿವಸ ರಾಜ್ಯದಲ್ಲಿ ಏನು ಕೋಮು ಗಲಭೆ ಪ್ರಾರಂಭವಾಯಿತು, ಆ ಕೋಮು ಗಲಭೆಯಿಂದ ಕರ್ನಾಟಕದಲ್ಲಿ ಉದ್ಭವವಾಗಿರತಕ್ಕ ಪರಿಸ್ಥಿತಿ ಏನು ಎಂಬುದು ಬಹಳ ಪ್ರಮುಖವಾದ ವಿಚಾರ. ಸುಮಾರು ೬೯ ಜನ ದುರ್ದೈವಿಗಳು ಸತ್ತಿದ್ದಾರೆ. ರಾಜ್ಯದ ಅನೇಕ ಮೂಲೆಗಳಲ್ಲಿ ಭಯಭೀತಿಯ ವಾತಾವರಣ ಸೃಷ್ಟಿಯಾಗಿ ಒಂದು ರೀತಿಯ ಗಂಭೀರವಾದ ಪರಿಸ್ಥಿತಿ ರಾಜ್ಯದಲ್ಲಿ ಉದ್ಭವವಾಗಿದೆ. ಈ ಪರಿಸ್ಥಿತಿಗೆ, ಇದರ ಹಿನ್ನೆಲೆಗೆ ಕಾರಣ ಏನು ಎನ್ನತಕ್ಕದ್ದು ಮುಖ್ಯ. ಈ ಮನೆಯಲ್ಲಿ ನಾವು ಇದನ್ನು ವಿಚಾರಮಾಡಬೇಕಕಗಿದೆ. ರಾಜ್ಯದಲ್ಲಿ ನಡೆದ ಅಶಾಂತಿ ವಾತಾವರಣಕ್ಕೆ, ಕೋಮು ಗಲಭೆಗೆ ಕಾರಣಗಳು ಏನು ಎಂಬುದರ ಬಗ್ಗೆ ಈ ಸಭೆಯಲ್ಲಿ ನಾವು ಚರ್ಚೆ ನಡೆಸಬೇಕಾಗಿದೆ ಹಾಗೂ ಸತ್ಯ ಶೋಧನೆಯನ್ನು ನಡೆಸಬೇಕಾಗಿದೆ. ಈ ಸತ್ಯಶೋಧನೆಯಲ್ಲಿ ಯಾವುದೇ ಕೋಮಿನವರಾಗಿರಲಿ, ರಾಜ್ಯದಲ್ಲಿ ಏನೇನು ನಡೆದಿದೆ ಈ ಒಂದು ಕೋಮು ಗಲಭೆಗೆ ಪ್ರಚೋದನೆ ಏನು, ಕಾರಣ ಏನು ಎಂಬುದನ್ನು ನೋಡಬೇಕು. ಕರ್ನಾಟಕ ರಾಜ್ಯ ಶಾಂತಿಗೆ, ಕೋಮು ಸೌಹಾರ್ದಕ್ಕೆ ಅತೀ ಸಮೀಪವಾದಂಥ, ಹರತ್ತಿವಾದಂಥ ಉತ್ತಮವಾದ ರಾಜ್ಯ. ಈ ರಾಜ್ಯದಲ್ಲಿ ಕೋಮು ದಳ್ಳುರಿ ಹಾಗೂ ಈ ಪರಸ್ಥಿತಿ ಬರುತ್ತದೆಂದು ನಾವು ಯಾರೂ ನಂಬಿರಲಿಲ್ಲ, ೬೯ ಜನ ಇಷ್ಟು ದಿನದಲ್ಲಿ ಸಾವನ್ನು ಅಪ್ಪಬೇಕಾದರೆ, ಸಾವಿಗೆ ಸಿಗಬೇಕಾದರೆ ಕಾರಣ ಏನು, ಇದರ ಹಿನ್ನೆಲೆ ಏನು ಎಂಬ ಪ್ರಶ್ನೆಯನ್ನು ನಾವು ಚರ್ಚಿಸಿ......

ಛೇರ್ಮನ್.—ತಾವು ನಾಳೆ ಚರ್ಚೆಯನ್ನು ಮುಂದುವರೆಸಬಹುದು,

ಶ್ರೀ ವಾಟಾಳ್ ನಾಗರಾಜ್.—ಆಗಬಹುದು ಸ್ವಾಮಿ, ವಂದನೆಗಳು ಸ್ವಾಮಿ.

ಛೇರ್ಮನ್.—ಈ ಸಭೆಯು ಇಂದು ಮುಕ್ತಾಯವಾಗುತ್ತದೆ. ನಾಳೆ ಬೆಳಗ್ಗೆ ೧೧ ಘಂಟೆಗೆ ಮತ್ತೆ ಸೇರುತ್ತದೆ.

(ಸದನವು ಆರು ಘಂಟೆ ಮೂವತ್ತೆರಡು ನಿಮಿಷಗಳಿಗೆ ಮುಕ್ತಾಯವಾಗಿ ಪುನಃ ೨೨ನೇ ನವೆಂಬರ್ ಮಾಹೆ ೧೯೯೦ರ ಗುರುವಾರ ದಂದು ಬೆಳಿಗ್ಗೆ ೧೦ ಘಂಟೆಗೆ ಸೇರಲು ನಿಶ್ಚಯಿಸಲಾಯಿತು)